ಡಾ. ರಾಜಶೇಖರ ಮಠಪತಿ (ರಾಗಂ)

ಗಾಂಧಿ ಅಂತಿಮ ದಿನಗಳು





ಮಗನಂತೆ ಮೋಹಿಸಿ, ಮೆಚ್ಚಿ,
ಪ್ರೀತಿ ಧಾರೆ ಎರೆದ
ಹಿರಿಯ ಪಂಜಾಬಿ ನಾಟಕಕಾರ,
ಸಹೃದಯಿ ಆತ್ಮಜಿತ್ ಸಿಂಗ್ ಅವರಿಗೆ

–ರಾಗಂ

ಗಾಂಧಿ : ತುರ್ತು-ಅನಿವಾರ್ಯ

ಸ್ವಾತಂತ್ರ ಹೋರಾಟದ ನೇತಾರನಾಗಿ, ರಾಜಕಾರಣಿಯಾಗಿ, ಗಾಂಧಿಯನ್ನು ಚಿತ್ರಿಸಿದ ಅಪಾರ ಸಾಹಿತ್ಯದೊಂದಿಗೆ, ಅವರನ್ನು ಧರ್ಮನಿಷ್ಠ, ಸಾತ್ವಿಕ, ಸಂತನಾಗಿ ಕಾಣುವ ಹಲವು ಕೃತಿಗಳು ಸಾಹಿತ್ಯದಲ್ಲಿ ದೊರಕುತ್ತವೆ. ಕನ್ನಡದಲ್ಲಿಯೂ ಒಂದಿಷ್ಟು ಇವೆ. ಆದರೆ ಈ ಎರಡೂ ನೆಲೆಗಳನ್ನು ಸಮನ್ವಿಯಿಸಿಕೊಳ್ಳುವ ಮಹಾತ್ಮನನ್ನು ಅಪ್ಪಟ ಮಾನವನನ್ನಾಗಿ ಚಿತ್ರಿಸುವ ಕೃತಿಗಳು ಅಪರೂಪ. ಮೊದಲಿನ ಎರಡು ನೆಲೆಗಳು ಬೌದ್ಧಿಕ ಜಿಜ್ಞಾಸೆಯಿಂದ, ಸಿದ್ಧಾಂತಗಳ ಭಿತ್ತಿಯಲ್ಲಿ ರೂಪುಗೊಳ್ಳುತ್ತವೆ. ಅವುಗಳ ಓದು ನಮ್ಮ ಬುದ್ಧಿಯನ್ನು ಪ್ರವೇಶಿಸುತ್ತವೆ, ಅಷ್ಟೇ. ನಮ್ಮ ಗಾಂಧಿಯನ್ನು ನಮ್ಮವನ್ನಾಗಿಸುವುದು, ಹೃದಯವೇ ಮುಖ್ಯವಾದ ಬರವಣಿಗೆ. ಅಂತಹ ಬರವಣಿಗೆ ಡಾ.ರಾಜಶೇಖರ ಮಠಪತಿ(ರಾಗಂ)ಯವರದು. ಆದುದರಿಂದ ಇದು ಮಹತ್ವದ ಕೃತಿಯಾಗಿದೆ.

ಇಂದಿನ ಚಿಂತನಶೀಲ ಲೇಖಕ ಗಾಂಧಿಯನ್ನು ಹೇಗೆ ನೋಡುತ್ತಾನೆ ಎನ್ನುವುದರ ದೃಷ್ಟಾಂತವಾಗಿಯೂ ಈ ಕೃತಿ ಗಮನಾರ್ಹವಾದುದು. ಹಲವು ಆಕರಗಳ ನೆರವಿನಿಂದ 'ಗಾಂಧಿಯ ಅಂತಿಮ ದಿನ'ಗಳನ್ನು ವಿವರವಾಗಿ ಆಕರ್ಷಕವಾಗಿ ಕಟ್ಟಿಕೊಡುವ ಮಠಪತಿಯವರು ತೋರಿಕೆಯ ಗಾಂಧಿವಾದಿಗಳಂತೆ ಗಾಂಧಿಯನ್ನು ಸುಮ್ಮನೆ ಒಪ್ಪಿಕೊಳ್ಳುವುದಿಲ್ಲ. ಪ್ರಸಿದ್ಧವಾದ 'ಭಾನುವಾರ'ದಲ್ಲಿ ಧಾರಾವಾಹಿಯಾಗಿ, ಪತ್ರಿಕೆಯ ಓದುಗರನ್ನೇ ಮೂಲ ಗುರಿಯಾಗಿಸಿಕೊಂಡು ಬರೆದಿದ್ದರೂ ತಮ್ಮ ವಿಮರ್ಶಕ ಮನೋಧರ್ಮಕ್ಕೆ ಚ್ಯುತಿ ಬರದಂತೆ ಎಚ್ಚರ ವಹಿಸಿದ್ದಾರೆ. ಎಲ್ಲರನ್ನು ಮುಟ್ಟುವ ಉಮೇದಿನಲ್ಲಿ ಬರೆಹ ಸರಳ ಮತ್ತು ನೇರ ಭಾಷೆಯಲ್ಲಿ ಮಾಡಿದ್ದರೂ ಮಠಪತಿಯವರ ಅಪಾರ ಸಾಹಿತ್ಯಾಧ್ಯಯನ ತನ್ನ ಕುರುಹುಗಳನ್ನು ಸ್ಪಷ್ಟವಾಗಿ ಹೊರಹೊಮ್ಮಿಸಿದೆ. ಹಾಗಾ-ಗಿಯೇ ಮಠಪತಿ ಚಿತ್ರಿಸುವ ಗಾಂಧಿ ನನಗೆ ಆಪ್ತವಾಗುತ್ತಾನೆ, ಆತ್ಮಿಯರಾಗುತ್ತಾನೆ.

ಈ ಆತ್ಮೀಯತೆ ಮತ್ತು ಆಪ್ತತೆ ಅವರ ಬರೆಹಕ್ಕೆ ದಕ್ಕಿರುವುದು, ಈ ಗುಣಗಳು ಮಠಪತಿಯವರದೇ ಆಗಿರುವುದರಿಂದ. ಎಲ್ಲರೊಂದಿಗೂ ಹೃದಯವಂತಿಕೆಯಿಂದ ನಡೆದುಕೊಳ್ಳುವ ಮಠಪತಿ, ಎಲ್ಲರ ಚಿಂತನೆಗಳನ್ನು ತಮ್ಮದಾಗಿಸಿಕೊಳ್ಳುತ್ತಾ, ತಮ್ಮದೇ ಚಿಂತನಧಾರೆಯೊಂದನ್ನು ರೂಪಿಸಿಕೊಳ್ಳುತ್ತಾ ಬೆಳೆಯುತ್ತಿರುವ ನಮ್ಮ ನಡುವಿನ ಮಹತ್ವದ ಲೇಖಕರಲ್ಲಿ ಒಬ್ಬರಾಗಿದ್ದಾರೆ. 'ಗಾಂಧಿಯ ಅಂತಿಮ ದಿನ'ಗಳ ಚಿತ್ರಣದ ಈ ಕೃತಿ ನಮಗೆ ನೀಡುವ ಸಂದೇಶವೂ ಅದೇ ಆಗಿದೆ. ಗಾಂಧಿಯನ್ನು ಮನ ತುಂಬಿಸಿಕೊಂಡು ನಮ್ಮದೇ ಹಾದಿಯನ್ನು ರೂಪಿಸಿಕೊಳ್ಳಬೇಕಾದ ತುರ್ತನ್ನು, ಅನಿವಾರ್ಯತೆಯನ್ನು ಈ ಕೃತಿ ಎತ್ತಿಹಿಡಿಯುತ್ತದೆ.

ಮೈಸೂರು **ಎಚ್.ಎಸ್.ಉಮೇಶ್**

12-12-2011

ಗಾಂಧಿ: ಮಹಾತ್ಮನೊಳಗೊಬ್ಬ ಮನುಷ್ಯ

ನಾನು ಗಾಂಧೀಯುಗದಲ್ಲಿಯೇ ಹುಟ್ಟಿ ಬೆಳೆದವನಾದರೂ ತೀರ ಇತ್ತೀಚಿನ ವರೆಗೆ ಗಾಂಧಿಯ ವಿಚಾರಗಳು ನನ್ನನ್ನು ಗಾಢವಾಗಿ ಪ್ರಭಾವಿಸಿರಲಿಲ್ಲ. ಇದಕ್ಕೆ ಒಂದು ಮುಖ್ಯ ಕಾರಣ ನಲವತ್ತರ ದಶಕದಲ್ಲಿ ನನ್ನನ್ನು ತೀವ್ರವಾಗಿ ಆವರಿಸಿಕೊಂಡಿದ್ದ ರಾಯ್ ವಿಚಾರಧಾರೆ. ರಾಜಕೀಯವನ್ನು ಕೂಡ ವೈಜ್ಞಾನಿಕ ದೃಷ್ಟಿಯಿಂದಲೇ ನೋಡಬೇಕು ಎನ್ನುವ ಹಟದಿಂದಾಗಿ ಧರ್ಮ-ರಾಜಕೀಯಗಳ ಸಮೀಕರಣವನ್ನು ಪ್ರತಿಪಾದಿಸಿದ ಗಾಂಧಿ ನನಗೆ ಪ್ರಸ್ತುತವೆನಿಸಲಿಲ್ಲ. ದೇಶಕ್ಕಾಗಿ ಅವನು ಮಾಡಿದ ಅಪಾರ ತ್ಯಾಗ ಹಾಗೂ ಸ್ವಾತಂತ್ರ ಸಾಧನೆಯ ಸಂದರ್ಭದಲ್ಲಿ ಅವನು ನೀಡಿದ ಮಾರ್ಗದರ್ಶನ ಇವು ಆ ಮಹಾತ್ಮನ ವೈಯಕ್ತಿಕ ಸಾಧನೆಗಳೆಂದೇ ನನಗೆ ಕಂಡು ಬಂದವು. ಆಧುನಿಕತೆಯನ್ನು ಆರಾಧಿಸುತ್ತಿದ್ದ ಆ ದಿನಗಳಲ್ಲಿ ಅವನ ಘೋಷಿತ ಸನಾತನತ್ವ, ಪಾಶ್ಚಿಮಾತ್ಯ ನಾಗರೀಕತೆಯ ಕಟ್ಟಾ ವಿರೋಧ, ನಮಗೆ ಸುಲಭವಾಗಿ ಅರ್ಥವಾಗುವಂತಿರಲಿಲ್ಲ.

ಆದರೆ, ಈಗ ಪರಿಸ್ಥಿತಿ ಸಂಪೂರ್ಣವಾಗಿ ಬದಲಾಗಿದೆ. ಸ್ವಾತಂತ್ರ್ಯ ದೊರೆತು ಆರು ದಶಕಗಳೇ ಕಳೆದು ಹೋದರೂ ಬ್ರಿಟಿಷರು ಬಿಟ್ಟು ಹೋದ ಸಂಸ್ಥೆಗಳೇ ನಮ್ಮ ದೇಶದಲ್ಲಿ ಮುಂದುವರಿದು ಕರಾಳ ರೂಪದಲ್ಲಿ ಕಾಣಿಸಿಕೊಳ್ಳುತ್ತಿವೆ. ಆಧುನಿಕತೆಯ ದುಷ್ಪರಿಣಾಮಗಳನ್ನು ಜಗತ್ತೇ ಕಂಡುಕೊಂಡಿದೆ. ನೈತಿಕ ಮೌಲ್ಯಗಳನ್ನು ಕಳೆದುಕೊಂಡು ರಾಜಕೀಯ ಭ್ರಷ್ಟವಾಗಿದೆ. ಯೋಗ್ಯ ನಾಯಕರಿಲ್ಲದೆ ನಮ್ಮ ಪ್ರಜಾಪ್ರಭುತ್ವ ದಿಶಾಹೀನವಾಗಿದೆ. ಜಾಗತೀಕರಣದ ಓಘದಲ್ಲಿ ದೇಶೀಯ ಸಂಸ್ಕೃತಿ ಕೊಚ್ಚಿಕೊಂಡು ಹೋಗುತ್ತಿದೆ. ಗಾಂಧಿ ಮತ್ತೆ ಪ್ರಸ್ತುತವಾಗುತ್ತಿದ್ದಾನೆ. ರಾಜಶೇಖರ ಮಠಪತಿ(ರಾಗಂ) ಅವರಂಥ ಪ್ರಜ್ಞಾವಂತ ತರುಣರು ಗಾಂಧಿಯ ವ್ಯಕ್ತಿತ್ವ ಹಾಗೂ ಸಾಧನೆಗಳತ್ತ ಆಕರ್ಷಿತರಾಗುತ್ತಿದ್ದುದು ಆಕಸ್ಮಿಕವಲ್ಲ.

ತಮ್ಮ ಈ ಪುಸ್ತಕದಲ್ಲಿ ಮಠಪತಿಯವರು ಗಾಂಧಿಯ ಜೀವನದ ಕೊನೆಯ ವರ್ಷಗಳ ಮೇಲೆ ಲಕ್ಷ್ಯವನ್ನು ಕೇಂದ್ರೀಕರಿಸಿದ್ದರೂ ಅವರೆದುರು ಅವನ ಇಡಿಯ ಬದುಕೇ ಇದೆ ಎನ್ನುವದು ಸ್ಪಷ್ಟವಿದೆ. ಅವನಲ್ಲಿ ಅವರು ಮೆಚ್ಚಿಕೊಳ್ಳುವ ಗುಣಗಳೆಂದರೆ ಅವನ ಪ್ರಾಮಾಣಿಕತೆ ಹಾಗೂ ಪ್ರಯೋಗಶೀಲತೆ. ಅವನೊಬ್ಬ ಮಹಾತ್ಮನಾಗಿದ್ದ ಎನ್ನುವುದರಲ್ಲಿ ಮಠಪತಿ ಅವರಿಗೆ ಯಾವ ಸಂಶಯವೂ ಇಲ್ಲ. ಆದರೆ ಮಹಾತ್ಮನಾಗಿದ್ದೂ ಅವನೊಬ್ಬ ಮನುಷ್ಯನೇ ಆಗಿದ್ದ ಎನ್ನುವದನ್ನು ಅವರು ಒತ್ತಿ ಹೇಳುತ್ತಾರೆ. "ಈ ಕಾಲದ ದೀರ್ಘ ಅಂತರದಲ್ಲಿ ಕುಳಿತುಕೊಂಡು ನಾವೀಗ ಪ್ರಶ್ನಿಸಿಕೊಳ್ಳಬೇಕಿದೆ. ಗಾಂಧಿ ಒಬ್ಬ ಮನುಷ್ಯ ತಾನೇ?"

ಇದು ಅವರ ಮುಖ್ಯ ಪ್ರಶ್ನೆ. "ಆತ ಮನುಷ್ಯ, ಮನುಷ್ಯರ ಮಧ್ಯದ ಆತನ ಪರಿಗಣನೆಗೆ ಅಯ್ಯೋ, ಅರವತ್ತು ವರ್ಷ ಬೇಕಾಗಿತ್ತೇ?" ಎಂದು ಅವರು ಪರಿತಪಿಸುತ್ತಾರೆ. ಮಹಾತ್ಮ ಎನ್ನುವ ಬಿರುದು ತನಗೆ ನೋವಿನ ವಿಷಯವಾಗಿತ್ತು ಎನ್ನುವದನ್ನು ಸ್ವತಃ ಗಾಂಧಿಯೇ ಬರೆದಿದ್ದಾನೆ. ತನ್ನ ಸಾಧನೆ ಅಸಾಮಾನ್ಯವಾಗಿತ್ತು ಎನ್ನುವುದರಲ್ಲಿ ಅವನ ನಂಬಿಗೆ ಇರಲಿಲ್ಲ.

ತನಗೊಬ್ಬನಿಗೆ ಸಾಧ್ಯವಾದುದು ಎಲ್ಲರಿಗೂ ಸಾಧ್ಯವಾಗಬೇಕು ಎಂದು ಗಾಂಧಿ ತನ್ನ ಆತ್ಮಚರಿತ್ರೆಯ ಪ್ರಸ್ತಾವನೆಯಲ್ಲಿಯೇ ಹೇಳಿದ್ದಾನೆ. ಒಬ್ಬ ಸಾಮಾನ್ಯ ಮನುಷ್ಯನೂ ಕೂಡ ಶ್ರೇಷ್ಠ ಆದರ್ಶಗಳಿಗೆ ತನ್ನನ್ನು ಸಂಪೂರ್ಣವಾಗಿ ಒಪ್ಪಿಸಿಕೊಂಡು ಪ್ರಾಮಾಣಿಕ ಹಾಗೂ ಪಾರದರ್ಶಕ ಜೀವನವನ್ನು ನಡೆಸಿದಾಗ ಮಹತ್ತು ತನ್ನಷ್ಟಕ್ಕೆ ತಾನೇ ಪ್ರಾಪ್ತವಾಗುತ್ತದೆ ಎನ್ನುವುದನ್ನು ಗಾಂಧಿ ತನ್ನ ಬದುಕಾವಧಿಯಲ್ಲಿಯೇ ತೋರಿಸಿಕೊಟ್ಟ. ಅವನು ತಪ್ಪು ಮಾಡಲಿಲ್ಲವೆಂದಲ್ಲ, ತನ್ನ ಕೆಲ ತಪ್ಪುಗಳನ್ನು Himalayan Blunders ಎಂದು ಕರೆದು ಅವನೇ ಸತ್ಯವನ್ನು ತೆರೆದಿಟ್ಟಿದ್ದಾನೆ.

ವಿಶೇಷವಾಗಿ ಗಮನಿಸಬೇಕಾದ ಸಂಗತಿಯೆಂದರೆ ಗಾಂಧಿಯ ಆದರ್ಶಗಳು ಭಾರತೀಯ ಸಂಸ್ಕೃತಿಯಲ್ಲಿ ಆಳವಾಗಿ ಬೇರು ಬಿಟ್ಟಿದ್ದ ಆದರ್ಶಗಳಾಗಿದ್ದವು ಎನ್ನುವುದು. ಗಾಂಧಿ ತನ್ನನ್ನು 'ಸನಾತನಿ' ಎಂದು ಗುರುತಿಸಿಕೊಂಡುದುದರ ರಹಸ್ಯವೇ ಇಲ್ಲಿದೆ. ಈ ಮಾತನ್ನು ಅವನೇ ಸ್ಪಷ್ಟಗೊಳಿಸಿದ್ದಾನೆ. ``I have nothing new to teach the world. Truth and non-violence are as old as the hills!" ಮಹಾಭಾರತ ಒಂದರಲ್ಲಿಯೇ ಇದರ ಅನೇಕ ನಿದರ್ಶನಗಳು ದೊರೆಯುತ್ತವೆ. "ಅಹಿಂಸೆ ಹಾಗೂ ಸತ್ಯ ಎಲ್ಲ ಪ್ರಾಣಿಗಳಿಗೂ ಹಿತವನ್ನು ಬಯಸುವಂಥವು. ಅಹಿಂಸೆಯೇ ಪರಮಧರ್ಮ. ಅದು ಸತ್ಯದಲ್ಲಿ ಪ್ರತಿಷ್ಠಿತವಾಗಿದೆ. ಸತ್ಯದಲ್ಲಿ ಸ್ಥಿತವಾಗಿಯೇ ಎಲ್ಲ ಪ್ರವೃತ್ತಿಗಳೂ ಕಾರ್ಯಗತವಾಗುತ್ತವೆ," ಎಂದು ಧರ್ಮವ್ಯಾಧ ತನ್ನನ್ನರಸಿಕೊಂಡು ಬಂದ ಬ್ರಾಹ್ಮಣನಿಗೆ ಹೇಳುವದನ್ನು ಗಮನಿಸಬೇಕು. ಅವನ ಮೌಲ್ಯಗಳ ಸಂದರ್ಭದಲ್ಲಿ ಗಾಂಧಿಯ ಅಂತಿಮ ದಿನಗಳು ಅಗ್ನಿಪರೀಕ್ಷೆಯ ದಿನಗಳಾಗಿದ್ದವು. ಆದರೆ ಅವುಗಳಿಂದ ಅವನು ಎಂದೂ ವಿಚಲಿತನಾಗಲಿಲ್ಲ. ಯಾಕೆಂದರೆ ಆ ಮೌಲ್ಯಗಳಲ್ಲಿಯೇ ಗಾಂಧಿ ದೇವರನ್ನು ಕಂಡಿದ್ದ. ಇದು ಅವನ ಹಿರಿಮೆ. ಈ ಹಿರಿಮೆಯಿಂದಲೇ ಅವನು 'ಮಹಾತ್ಮ' ನಾದದ್ದು.

ಇತಿಹಾಸದಲ್ಲಿ ಗಾಂಧಿಯ ಹೆಸರು ರಾಷ್ಟ್ರಪಿತನೆಂದೇ ದಾಖಲಾಗಿದೆ. ಆದರೆ ಅವನು ತನ್ನ ಕೊನೆಯ ದಿನಗಳನ್ನು ದುಃಖದಲ್ಲಿಯೇ ಕಳೆದ. ಬದುಕಿನುದ್ದಕ್ಕೂ ಅವನು ನಂಬಿಕೊಂಡು ಬಂದಿದ್ದ ಆದರ್ಶಗಳು ತನ್ನೆದುರಿಗೇ ನಷ್ಟವಾಗುತ್ತಿದ್ದುದ್ದನ್ನು ನೋಡುವ ದುರ್ಭಾಗ್ಯ ಅವನದಾಯಿತು. ಅವನ ಕಣ್ಣೆದುರೇ ದೇಶದ ವಿಭಜನೆಯಾಯಿತು. ತನ್ನ ಸರ್ವಸ್ವವನ್ನೂ ಪಣಕ್ಕಿಟ್ಟು ಸಾಧಿಸಲು ಹೋರಾಡಿದ ಹಿಂದೂ-ಮುಸ್ಲಿಂ ಐಕ್ಯ ಕನಸಿನಂತೆ ಕರಗಿಹೋಯಿತು. ಅಹಿಂಸೆಯಲ್ಲಿಯೇ ಸತ್ಯವನ್ನು ಕಂಡ ದಾರ್ಶನಿಕನನ್ನು, ಹಿಂದೆಂದೂ ನೋಡದ ಹಿಂಸೆಯ ಕೃತ್ಯಗಳು ಕಂಗೆಡಿಸಿದವು. ಕಲ್ಕತ್ತಾ, ನೌಖಾಲಿ, ದೆಹಲಿ... ಹೀಗೆ ಅಲೆಮಾರಿಯಾಗಿ ಜನರಿಗೆ ಸಾಂತ್ವನ ತರಲು ಗಾಂಧಿ ಹೋರಾಡಬೇಕಾಯಿತು. 'ಬಾಪೂ' ಎಂಬ ಹೆಸರಿನಿಂದ ಜನಮಾನಸದಲ್ಲಿ ನೆಲೆಯೂರಿದವ ಈಗ ಏಕಾಕಿಯಾದ. ಇದೊಂದು 'ದುರಂತ ನಾಟಕ'ವಲ್ಲದೇ ಮತ್ತೇನೇನು? ಮತಪತಿಯವರು ಈ ದುರಂತ ನಾಟಕವನ್ನು ದೃಶ್ಯ, ದೃಶ್ಯವಾಗಿ ನಮ್ಮೆದುರು ತೆರೆದಿಟ್ಟಿದ್ದಾರೆ.

ರಾಜಶೇಖರ ಮಠಪತಿಯವರದು ವಿಶಿಷ್ಟ ಪ್ರತಿಭೆ. ಮೂಲತಃ ಸಾಹಿತ್ಯದ ಅಭ್ಯಾಸಿಯಾದರೂ ಅವರಿಗೆ ಸಂಸ್ಕೃತಿಯ ಎಲ್ಲ ಕ್ಷೇತ್ರಗಳಲ್ಲಿಯೂ ಆಸಕ್ತಿಯಿದೆ, ಮುಕ್ತವಾದ ಸಂವೇದನೆಯಿದೆ, ವಿವೇಚನಾಪೂರ್ಣ ದೃಷ್ಟಿಯಿದೆ, ಆಕರ್ಷಕ ಶೈಲಿಯಿದೆ, ತಮಗನಿಸಿದ್ದನ್ನು ಸ್ಪಷ್ಟವಾಗಿ ಹೇಳುವ ಧೈರ್ಯವಿದೆ. ಈ ಪುಸ್ತಕದ ಹಿಂದಿನ ಸಿದ್ಧತೆ, ಚಿಂತನೆ, ಜರೂರು-ಗಳನ್ನು ಯಾರೂ ಗುರುತಿಸಬಹುದು. ತರುಣರಾದ ಮಠಪತಿ ಅವರಿಂದ ಬಹಳಷ್ಟನ್ನು ಅಪೇಕ್ಷಿಸುವವರಲ್ಲಿ ನಾನೂ ಒಬ್ಬ.

ಧಾರವಾಡ **ಜಿ.ಎಸ್.ಆಮೂರ**

21–11–2011

ಗಾಂಧಿವಾದವನ್ನಲ್ಲ, ಗಾಂಧಿಯನ್ನು ಓದಿ...

ಇದು ಕಥೆಯಲ್ಲ. ಗಾಂಧಿಯ ಹತ್ಯೆಯನ್ನು ಗುರಿಯಾಗಿಸಿಕೊಂಡು, ನಿಮ್ಮ ರೋಚಕತೆಯನ್ನು ಕೆದಕಲು ಹೊಸೆದ ಸಾಲುಗಳಲ್ಲ. ಇದೊಂದು ನಿತಾಂತ ಓದು. 1996ರಲ್ಲಿ ನಾನು ಸಂಶೋಧನಾ ವಿದ್ಯಾರ್ಥಿಯಾಗಿ ಭಾರತದ ಹೆಸರಾಂತ ಸಾಹಿತಿ, ಚಿತ್ರ ನಿರ್ದೇಶಕ ಖ್ವಾಜಾ ಅಹಮ್ಮದ್ ಅಬ್ಬಾಸರ ಸಾಹಿತ್ಯವನ್ನು ಓದಿಗಾಗಿ ಎತ್ತಿಕೊಂಡಂದಿನಿಂದ ಗಾಂಧಿ ಕುರಿತಾದ ಓದು ನನಗೆ ಅನಿವಾರ್ಯವಾಯಿತು. ಕಾರಣವಿಷ್ಟೇ, ದೇಶ ಸ್ವಾತಂತ್ರದ ಆಚೆ ಈಚೆ ಇದ್ದ ಒಟ್ಟು ಭಾರತೀಯ ಆಂಗ್ಲ ಸಾಹಿತ್ಯದ, ಸಾಹಿತಿಗಳ ಆಶಯಗಳು, ಬರಹದ ಉದ್ದೇಶಗಳು ರೂಪುಗೊಂಡಿದ್ದೇ ಈ ಗಾಂಧಿ ಯುಗದಲ್ಲಿ. ಆತನ ಪ್ರಭಾವವಿಲ್ಲದ ಯಾವುದೇ ಬರಹಗಾರನನ್ನು, ಕೃತಿಯನ್ನು ಆ ಸಂದರ್ಭದಲ್ಲಿ ನಾವು ನೋಡುವುದೇ ಕಷ್ಟ. ಸೃಜನಶೀಲನಾಗಿ ಬದುಕಿದ್ದ ಗಾಂಧಿ, ಸೃಜನಶೀಲ ಸಾಹಿತ್ಯವನ್ನೇನೂ ಬರೆಯಲಿಲ್ಲ. ಆದರೆ ಆ ಕಾಲದ ಇಡೀ ಸೃಜನಶೀಲ ಸಾಹಿತ್ಯವನ್ನೆಲ್ಲಾ ಆತ ವ್ಯಾಪಿಸಿಬಿಟ್ಟ. ಹಾಗೆಯೇ ಕೆ.ಎ. ಅಬ್ಬಾಸರನ್ನು.

ಸಂಸಾರದೊಳಗೊಂದು ಸನ್ಯಾಸ, ಸನ್ಯಾಸಿಯಾಗಿ ರಾಷ್ಟ್ರ ರಾಜಕಾರಣದ ಒಂದು ಅಮಿತ ಸಂಸಾರ, ಇವುಗಳನ್ನು ನಿಭಾಯಿಸಲು ಪ್ರಾರ್ಥನೆ, ಯೋಗ, ಯಾತ್ರೆ, ಇವನದೆಲ್ಲವೂ ಸದ್ದಿಲ್ಲದ ದಾರಿ, ಸಾವಿಲ್ಲದ ಯೋಜನೆ, ಯೋಚನೆ. ಈತ ಸರಳ ಮನಸ್ಸಿನ ಸಾಮಾನ್ಯರಿಗೆ ಸುಲಿದ ಬಾಳೆಹಣ್ಣಿನಷ್ಟೇ ಸರಳ, ಕೂದಲು ಸೀಳುವವರಿಗೆ ಇವನೊಂದು ಬಿಡಿಸಲಾಗದ ಕಗ್ಗ. ಒಂದು ಹಂತಕ್ಕೆ ನನಗನ್ನಿಸಿದೆ, ಮನಸ್ಸು ಮಾಗದವನಿಗೆ ಒಗ್ಗುವ ಮಾತಲ್ಲ ಗಾಂಧಿ. ಹ್ಞಾಂ, ಅಂದ ಹಾಗೆ ಗಾಂಧಿ ಮಾತೂ ಅಲ್ಲ ಬಿಡಿ. ಪ್ರಪಂಚದಲ್ಲಿ ಯಾವುದೇ ರೆಫರೆನ್ಸ್‌ಗಳನ್ನಿಟ್ಟುಕೊಳ್ಳದೇ ಓದಬಹುದಾದ ಒಬ್ಬ ಸರಳ ಮನುಷ್ಯ ಗಾಂಧಿ. ಆದರೆ ಗಾಂಧಿ ವಾದವನ್ನೋದುವವರಿಗೆ ಗಾಂಧಿ ಅರ್ಥವಾಗುವುದಿಲ್ಲ.

ನಟಲ್‌ನಿಂದ ನೌಖಾಲಿಯವರೆಗೆ ಸಾಗಿದ ಗಾಂಧಿಯನ್ನೊಬ್ಬ ಮಹಾತ್ಮನನ್ನಾಗಿಯೋ, ರಾಜಕಾರಣಿಯನ್ನಾಗಿಯೋ ಓದಿದ ನಾವು, ಈ ದೇಶದ ಸಾಮಾನ್ಯರು ಅರ್ಥೈಸಿಕೊಂಡ ಗಾಂಧಿಯನ್ನು ಅರಿಯಲಿಲ್ಲವೇನೊ. ಒಂದು ಸಂಗತಿ ಕೇಳಿ– ಅಬ್ಬಾಸರ ಅಜ್ಜಿಯ ಹೆಸರು ಹಕ್ಕೊ. ಬರೀ ಗಾಂಧಿ ಎಂಬ ಪದ ಮಾತ್ರದಿಂದ ಈಕೆ ವೈರಾಗ್ಯ ಮೂರ್ತಿಯಾದವಳು. ತನ್ನ ಅಮೂಲ್ಯ ಆಭರಣಗಳನ್ನೆಲ್ಲಾ ದೇಶೋದ್ಧಾರಕ್ಕಾಗಿ ಈ ಗಾಂಧಿಯ ಜೋಳಿಗೆಗೆ ಸುರಿದು ಚರಕದ ದೀಕ್ಷೆ ಪಡೆದವಳು. ನಡು ಯೌವ್ವನದಲ್ಲಿ ನೂಲುತ್ತಾ ಮೀರಾಳಂತೆ ಗಾಂಧಿ ಒಬ್ಬ 'ಫರಿಸ್ತಾ' ಎಂದು ಪೂಜಿಸುತ್ತಾ, ಖಾದಿಯ ಖಫನ್‌ದಲ್ಲಿಯೇ ಇಹವನ್ನು ತ್ಯಜಿಸಿದವಳು. ಇದೆಲ್ಲಾ ಓದಿದಾಗ ತಟ್ಟನೆ ನನಗೆ ನೆನಪಾದದ್ದು ಟಾಲ್‌ಸ್ಟಾಯ್‌ನ ಮಾತು– "ಶ್ರದ್ಧೆಯಿಂದಲೇ ಜೀವನ, ಶ್ರದ್ಧೆಯೇ ಜೀವನ."

ಗಾಂಧಿ ಕುರಿತಾದ ನನ್ನ ಓದಿನ ಮಿತಿಯೊಳಗೇ ಹೇಳಬೇಕೆಂದರೆ ಗಾಂಧಿ ಓದಿದ್ದು ಕಡಿಮೆ. ಆದರೆ ಅರ್ಥೈಸಿಕೊಂಡದ್ದು ಹೆಚ್ಚು. ಮತ್ತೊಂದಷ್ಟು ಓದಿದ್ದರೂ ಅದು ಆತನ

ಆಗಾಗಿನ ಅವಶ್ಯಕತೆಗಳ ಹಿನ್ನಲೆಯಲ್ಲಿ. ಹಾಗೆಯೇ ಓದಿದೆಲ್ಲವನ್ನು ಆತ ಹಂಚಿಯೂ ಬಿಟ್ಟ. ಬರಹದ ವಿಚಾರದಲ್ಲಿಯೂ ಅಷ್ಟೇ, ಕಾಲಾತೀತವಾಗಿ ಹಲವು ತಲೆಮಾರುಗಳಿಂದ ಬರಹದ ಒರೆಗೆ ತುತ್ತಾದ ಗಾಂಧಿ ಸಾಹಿತ್ಯ ಬರೆಯಲಿಲ್ಲ. ಆದರೆ ಆತ ಬರೆದದ್ದೆಲ್ಲವೂ ಶತಮಾನಗಳು ಮೆಲಕು ಹಾಕಬೇಕಾದ ಸಾಹಿತ್ಯವಾಯಿತು. ಬಹುತೇಕ ಗಾಂಧಿಯಷ್ಟು ಕಡಿಮೆ ಓದಿದ ರಾಜಕೀಯ ನೇತಾರರು ವಿರಳ. ಹಾಗೆಯೇ ಗಾಂಧಿಯಂಥ ಮನುಷ್ಯನೂ ವಿರಳ.

ಈ ಗಾಂಧಿ ನಮಗೆ ಏನು ಹೇಳುತ್ತಾನೆ? ಎಂಬ ಒಂದು ಸಣ್ಣ ಕುತೂಹಲ ನನ್ನನ್ನು ಹದಿನಾಲ್ಕು ವರುಷ ಆತನ ಬೆನ್ನು ಬೀಳುವಂತೆ ಮಾಡಿತು. ಇದೊಂದು ರೀತಿ ಗಾಂಧಿಯೊಂದಿಗಿನ ನನ್ನ ವನವಾಸ ಅಥವಾ ಗಾಂಧಿವಾಸ. ಅಂತಿಮವಾಗಿ ತಿಳಿದಿದ್ದಿಷ್ಟೇ, ಜನಮುಖಿಯಾಗಬೇಕಾದ ಬಾಳಿಗೆ ಪಾಂಡಿತ್ಯದ ಅವಶ್ಯಕತೆಯಿಲ್ಲ. ಮನುಷ್ಯನ ಕ್ರಿಯಾಸರಳತೆ ಮಾತನಾಡಿದಷ್ಟು ಸ್ಪುಟವಾಗಿ ಪಾಂಡಿತ್ಯ ಮಾತನಾಡುವುದಿಲ್ಲ. ಸಂತಸದ ಸಂಗತಿಯೇ ಇದು. ಈ ಗಾಂಧಿ ಪಂಡಿತನಾಗಿರಲಿಲ್ಲ, ಹಟಮಾರಿ ಮನುಷ್ಯನಾಗಿದ್ದ. ಕಸ ಗುಡಿಸುತ್ತಾ, ಜಗಳಾಡುತ್ತಾ, ಉಪವಾಸ ಬೀಳುತ್ತಾ ಆತ ತನ್ನೊಳಗಿನದನ್ನು ಸ್ವಚ್ಛಗೊಳಿಸಿಕೊಳ್ಳಲು ಪ್ರಯತ್ನಿಸಿದಷ್ಟೂ ಹೊರಗಣವರಿಗೆ ಮಹಾತ್ಮನಾದ. ಸೃಷ್ಠಿಯ ವೈಚಿತ್ರವೇ ಇದಲ್ಲವೇ? ಮರದ ಬೇರು ನೆಲದೊಳಗಿಳಿದಷ್ಟೂ ಅದರ ಹೊರಗಣ ಸೊಬಗು ಹೆಚ್ಚಾಗುತ್ತದೆ. ಹೀಗೆ ಹೆಮ್ಮರದ ಬೇರುಗಳಂತೆ ಇಳಿದ ಈ ಗಾಂಧಿ ಪ್ರಪಂಚದ ಸಂವೇದನೆಗಳೊಂದಿಗೆ.

ಗಾಂಧಿ ಕುರಿತಾದ ನನ್ನ ಓದನ್ನು ಅವನ ಬದುಕಿನ ಒಂದು ಘಟ್ಟಕ್ಕೆ ಸೀಮಿತಗೊಳಿಸಿಕೊಂಡಿರುವುದರಿಂದ ಈ ಕೃತಿಗೆ, "ಗಾಂಧಿ: ಅಂತಿಮ ದಿನಗಳು" ಎಂದು ಕರೆದಿದ್ದೇನೆ. ಈ ದೇಶದ ರಾಜಕೀಯ ಪರ್ವ, ಗಾಂಧಿಯ ಬದುಕಿನ ಪರ್ವವಾಗಿರುವುದು ಒಂದು ಆಕಸ್ಮಿಕ ಮತ್ತು ಆಶ್ಚರ್ಯಕರ ಬೆಳವಣಿಗೆ. ಗಾಂಧಿ ಕೊಲೆಗೆ ಕೆಲವೇ ಅವಧಿ ಮುನ್ನ ರಾಜಕೀಯವಾಗಿ ಸ್ವತಂತ್ರವಾಗುವ ಈ ದೇಶ ಗಾಂಧಿಯ ಕೊಲೆಯೊಂದಿಗೆ ಇನ್ನೊಂದು ರೀತಿಯ ಪರಾಧೀನತೆಗೆ ಒಳಗಾಗುತ್ತದೆ. ಸರಿ, ಇದೆಲ್ಲವೂ ಸಾಕಷ್ಟು ಚರ್ಚಿಸಿಯಾಗಿದೆ. ನಿಮ್ಮೊಂದಿಗೆ ಹಂಚಿಕೊಳ್ಳಬೇಕಾದುದಿಷ್ಟೇ, ಬಾಳಿನ ಮುಸ್ಸಂಜೆಯಲ್ಲಿ, ಮಾಗಿದ ಮನಸ್ಸೊಂದು ಕ್ರಿಯಾಶೀಲವಾಗಿದ್ದ ರೀತಿಯನ್ನು ತಿಳಿಯುವದಷ್ಟೇ ನನ್ನ ಬರಹದ ಕುತೂಹಲ ಮತ್ತು ಗುರಿ. ಈ ಕುತೂಹಲದ ಮೊದಲ ಭಾಗ ಈಗ ನಿಮ್ಮ ಕೈಯಲ್ಲಿದೆ.

ಇನ್ನೊಂದು ಮಾತು ನಿಮ್ಮೊಂದಿಗೆ, ಇಷ್ಟೆಲ್ಲ ಬರೆದೂ ಈ ಗಾಂಧಿಯ ಕುರಿತು ನನಗೆ ಏನನ್ನೂ ಹೇಳಲಾಗಿಲ್ಲ. ತಾನೇನೂ ಹೊಸದನ್ನು ಹೇಳಲಿಲ್ಲ ಎಂದು ಪ್ರಾಮಾಣಿಕವಾಗಿ ಹೇಳಿದ ಈ ದೊಡ್ಡ ಮನುಷ್ಯನ ಬಗ್ಗೆ ನಾನೇನೊ ಬರೆದು ತೀರಿಸಿದೆ ಎನ್ನುವುದೊಂದು ಸಲುಗೆಯ ಮಾತಷ್ಟೆ. ಹತ್ತಾರು ವರ್ಷಗಳ ಹಿಂದಿನ ಓದು ವಿ.ರಾಮಮೂರ್ತಿಯವರ 'ಮಹಾತ್ಮ ಗಾಂಧಿ' ನನ್ನನ್ನು ಬಹಳ ಕಾಡಿತ್ತು. ಅದು ನನ್ನ ಈ ಬರಹಕ್ಕೆ ಕಾರಣವಾಯಿತು. ಇದು ನಿಮಗೆ ಇಷ್ಟವಾದರೆ ಇದರ ಮುಂದಿನ ಎರಡನೆಯ ಭಾಗ ಮತ್ತೆ ನಿಮ್ಮ ಕೈಯಲ್ಲಿ.

–ರಾಗಂ

ಋಣಿಯಾಗಿದ್ದೇನೆ

ಬೇಲೂರಿಗೆ ಬಂದ ಮೇಲೆ ಬರೀ ಭಾಷಣಗಳೇ ಆದವು. ಆ ಕುರಿತು ನನಗೆ ಬೇಸರವಿತ್ತು. ಈ ಮಲೆನಾಡಿನ ಘನ–ಗಾಂಭೀರ್ಯಕ್ಕೆ ಒಗ್ಗದ ಒಂದು ಕ್ರಿಯೆ ಮಾತು. ಮೌನವನ್ನೇ ನಂಬಿ ಈ ಊರೊಳಗೆ ಇದೇ ಬರಹ ಮಾಡಬೇಕೆಂದುಕೊಂಡಿದ್ದೆ. ಈಗ ಶುರುವಾಗಿದೆ.

ಕೆಲಸಗಳೆಲ್ಲವೂ ವಿಳಂಬವಾಗುತ್ತವೆ ಎನ್ನುತ್ತಲೇ ಎಲ್ಲ ಪ್ರೀತಿ, ಸಿಟ್ಟು, ಬೇಸರಗಳೊಂದಿಗೆ ಗೆಳೆಯ ಎಮ್.ಆರ್.ಗಿರಿರಾಜು ಹಾಗೂ ಕಣ್ವದ ಸಮಗ್ರ ಸಿಬ್ಬಂದಿ ನನ್ನೊಂದಿಗಿದೆ. ಹಿರಿಯ ಪರ್ತಕರ್ತರು, ಈ ಭಾನುವಾರದ ಸಂಪಾದಕರೂ ಆದ ಶ್ರೀ ಮಹಾದೇವ ಪ್ರಕಾಶ ಹಾಗೂ ಉಪಸಂಪಾದಕರಾದ ಶ್ರೀ ಜಿ.ವಿ.ರಮೇಶ ಈ ಮಸ್ತಕವನ್ನು 34 ಕಂತುಗಳಲ್ಲಿ, ತಮ್ಮ ಪತ್ರಿಕೆಯಲ್ಲಿ 'ಗಾಂಧಿಯ ಕೊನೆಯ ದಿನಗಳು' ಎನ್ನುವ ಶೀರ್ಷಿಕೆಯಡಿ ಮುದ್ರಿಸಿ ಪ್ರೋತ್ಸಾಹಿಸಿದ್ದಾರೆ. ಈ ಕೃತಿಗೊಂದು ವಿಶಿಷ್ಟ ಮುಖಪುಟ ಕೊಟ್ಟಿದ್ದಾರೆ. ಕಲಾವಿದ ಚಂದ್ರಕಾಂತ ಪಟ್ಟನ್, ಓದುತ್ತಾ ಓದುತ್ತಾ ಹಿರಿಯ ಸಾಹಿತಿಗಳಾದ ಕುಷ್ಟಗಿಯವರು ಹಾಗೂ ಮೈಸೂರಿನ ಪ್ರೊ.ಉಮೇಶ, ಗೆಳೆಯ ಪ್ರಕಾಶ ಖಾಡೆ, ಅಶೋಕ ನರೋಡೆ, ಬರಗೂರು ರಾಮಚಂದ್ರಪ್ಪ ಹಾಗೂ ಇನ್ನೂ ಅನೇಕ ಹಿತೈಷಿಗಳು ಖುಷಿಪಟ್ಟಿದ್ದಾರೆ. ಕನ್ನಡದ ಹಿರಿಯಜೀವ ಪ್ರೊ.ಜಿ.ಎಸ್.ಆಮೂರರು ಮುನ್ನುಡಿ ಬರೆದಿದ್ದಾರೆ. ಎಳೆಯ ಗೆಳೆಯ ಹರೀಶ ಹಾಗೂ ಇನ್ನೂ ಅನೇಕರು ಸಹಕರಿಸಿದ್ದಾರೆ. ಅವರೆಲ್ಲರಿಗೂ ನಾನು ಋಣಿಯಾಗಿದ್ದೇನೆ.

–ರಾಗಂ

ಪ್ರಕಾಶಕರ ಮಾತು

'ಕಣ್ವ' ಎನ್ನುವ ಅತ್ಯಂತ ಪವಿತ್ರ ನದಿಯ ಹೆಸರನ್ನಿಟ್ಟುಕೊಂಡು ಪ್ರಕಾಶನ ಕ್ಷೇತ್ರಕ್ಕೆ ಇಳಿದಿದ್ದೇವೆ. ಆ ನದಿ ಲಕ್ಷಾಂತರ ಸಂಸಾರಗಳಿಗೆ, ಗದ್ದೆ–ಊರುಗಳಿಗೆ ಒಂದು ಬದುಕನ್ನು ನೀಡಿದಂತೆ, ನಮ್ಮ ಪ್ರಕಾಶನವು ಸಾವಿರಾರು ಅಪರಿಚಿತ ಲೇಖಕರನ್ನು ಪರಿಚಯಿಸಬೇಕು, ಹಿರಿಯ ಲೇಖಕರನ್ನು ಗೌರವಿಸಬೇಕು ಎಂದುಕೊಂಡಿದೆ. ನಮ್ಮೊಂದಿಗೆ ಅನೇಕ ಗೆಳೆಯರಿದ್ದಾರೆ. ಹಿತೈಷಿಗಳು, ಗುರುಗಳು, ಮಾರ್ಗದರ್ಶಕರಿದ್ದಾರೆ. ಎಲ್ಲಕ್ಕೂ ಮಿಗಿಲಾಗಿ ಪುಸ್ತಕಗಳನ್ನು ಗೌರವಿಸುವ ನೀವಿದ್ದೀರಿ.

ನೂರು ವರ್ಷದ ವಯಸ್ಸಿನ ಲೇಖಕರಿಂದ ಹತ್ತೊಂಬತ್ತು ವರ್ಷದ ಲೇಖಕರಿಗೂ ಇಲ್ಲಿ ಸಮಾನ ಗೌರವವಿದೆ. ಜಾತಿ–ಪ್ರದೇಶಗಳ ಯಾವುದೇ ತಾರತಮ್ಯ ಮಾಡದೇ, ಲೇಖಕರುಗಳನ್ನು ಆದರಿಸುತ್ತಿದ್ದೇವೆ. ಕನ್ನಡದ ಅಪರೂಪದ ಮತ್ತು ಮರೆತುಹೋದ ಮಹನೀಯರನ್ನು ಕುರಿತು ಪುಸ್ತಕಗಳನ್ನು ತರುವ ಆಲೋಚನೆಯಲ್ಲಿದ್ದೇವೆ. ಹೀಗೆ, ಬಂಧುಗಳೇ, ನಾವು ಸಾಗಬೇಕಾದ ದಾರಿ ತುಂಬಾ ದೀರ್ಘವಾಗಿದೆ.

ಇದೀಗ ಕನ್ನಡದ ಅಪರೂಪದ ಮತ್ತು ಹೆಸರಾಂತ ಲೇಖಕರಾದ ಡಾ. ರಾಜಶೇಖರ ಮಠಪತಿ (ರಾಗಂ) ಅವರು ತಮ್ಮ "ಗಾಂಧಿ : ಅಂತಿಮ ದಿನಗಳು" ಈ ಅಮೂಲ್ಯ ಕೃತಿಯನ್ನು ಅತ್ಯಂತ ವಿಶ್ವಾಸದಿಂದ ನಮ್ಮ ಪ್ರಕಾಶನ ಸಂಸ್ಥೆಯಿಂದ ಮುದ್ರಿಸಲು ಅನುಮತಿಸಿದ್ದಾರೆ. ಅವರು ತೋರಿಸಿದ ಈ ಔದಾರ್ಯಕ್ಕೆ ಋಣಿಯಾಗಿದ್ದೇವೆ.

ಎಂ.ಆರ್. ಗಿರಿರಾಜು

ಪ್ರಕಾಶಕರು

ಡಾ॥ ರಾಜಶೇಖರ ಮಠಪತಿ (ರಾಗಂ) ಕನ್ನಡ ಸೃಜನಶೀಲ ಲೋಕಕ್ಕೆ ಚಿರಪರಿಚಿತ ಹೆಸರು. ಬೆಳಗಾವಿ ಜಿಲ್ಲೆಯ ತೆಲಸಂಗದಲ್ಲಿ 1971ರಲ್ಲಿ ಜನನ, ಕರ್ನಾಟಕದ ಗಡಿಯ ಊರಾದ ಚಡಚಣದಲ್ಲಿ ಪ್ರಾಥಮಿಕದಿಂದ ಪದವಿಪೂರ್ವದ ವರೆಗಿನ ಶಿಕ್ಷಣ, ನಂತರ ಬಿಜಾಪೂರ ಮತ್ತು ಸೋಲ್ಲಾಪುರಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಶಿಕ್ಷಣ. ಕ.ವಿ.ವಿ. ಧಾರವಾಡದಿಂದ ಭಾರತದ ಶ್ರೇಷ್ಠ ಆಂಗ್ಲ ಸಾಹಿತಿ, ಸಿನಿಮಾ ನಿರ್ದೇಶಕ, ಪತ್ರಕರ್ತ ಕೆ.ಎ.ಅಬ್ಬಾಸರನ್ನು ಕುರಿತು ಪಿಹೆಚ್.ಡಿ.- ಇವು ರಾಗಂ ಶೈಕ್ಷಣಿಕ ಬದುಕಿನ ಕೆಲವು ಹಂತಗಳು.

ಉಪನ್ಯಾಸಕ ವೃತ್ತಿಯನ್ನು ಮಾಡುತ್ತ ಡಾ॥ ರಾಜಶೇಖರ ಮಠಪತಿ ಲಿಂಗರಾಜ ಕಾಲೇಜು ಬೆಳಗಾಂ, ಜೆ.ಜೆ.ಕಾಲೇಜ ಆಫ್ ಕಾಮರ್ಸ್ ಹುಬ್ಬಳ್ಳಿ, ರಾಠಿ ಕಾಲೇಜ ಗುಳೇದಗುಡ್ಡ, ಗುರುಸುಧೀಂದ್ರ ಕಾಲೇಜ ಭಟ್ಕಳ ಹೀಗೆ ನಿರಂತರ ಅಲೆಮಾರಿಯಾಗಿದ್ದಾರೆ. ಈ ಮಧ್ಯೆ ಮೈಸೂರಿನ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಲ್ಯಾಂಗ್ವೆಜಿಸ್ (CIIL)ದಲ್ಲಿ ಎರಡು ವರ್ಷ ಸಹಾಯಕ ಸಂಶೋಧಕರಾಗಿ, ಆನಂತರ ಬಾಗಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಸಂಘದ ಇಂಗ್ಲಿಷ್ ಸ್ನಾತಕೋತ್ತರ ವಿಭಾಗದಲ್ಲಿ ಆರು ವರ್ಷಗಳ ದೀರ್ಘ ಅಧ್ಯಾಪನ ಅವಧಿಯನ್ನು ಕಳೆದಿದ್ದಾರೆ. ಸಧ್ಯ ಹಾಸನ ಜಿಲ್ಲೆಯ ಇತಿಹಾಸ ಪ್ರಸಿದ್ಧ ಬೇಲೂರಿನ ವಾಯ್. ಡಿ.ಡಿ.ಕಾಲೇಜಿನಲ್ಲಿ ಇಂಗ್ಲಿಷ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕನ್ನಡ, ಇಂಗ್ಲಿಷ್ ಹೀಗೆ ಎರಡೂ ಭಾಷೆಗಳಲ್ಲಿ ರಾಗಂ ಬರೆದ ಕೃತಿಗಳ ಸಂಖ್ಯೆ ನಲವತ್ತನ್ನು ಮೀರುತ್ತದೆ. ಪ್ರಚಾರ-ಪ್ರಶಸ್ತಿಗಳ ಆಮಿಶಕ್ಕೆ ಬೀಳದೆ, ಕಾವ್ಯ, ಕತೆ, ನಾಟಕ, ಪ್ರಬಂಧ, ಅಂಕಣ, ಸಂಶೋಧನೆ, ಭಾಷಾ ಅಧ್ಯಯನ, ಭಾಷಾಂತರ, ಸಿನಿಮಾ ಹೀಗೆ ಹಂಗಿಲ್ಲದ, ಎಗ್ಗಿಲ್ಲದ ದಾರಿ ಕ್ರಮಿಸಿದ ಈ ಬರಹಗಾರ ನಡೆದಷ್ಟು ದಾರಿ, ಪಡೆದಷ್ಟು ವರ ಎಂದುಕೊಂಡವರು. ಅವರ ಕೃತಿಗಳಲ್ಲಿ ಗಾಂಧೀ ಮತ್ತು ಗೂಂಡಾ, ಎರಡು ದಡಗಳ ನಡುವೆ, ಒಂದಿಷ್ಟು ಕರುಣೆ ಮತ್ತಷ್ಟು ನೀರು, ಫಕೀರನ ಫಿಲ್ಮೀ ದುನಿಯಾ, ನನ್ನೊಳಗಿನ ನಾನು, ಓಶೋಃ ನ ಭೂತೋ ನ ಭವಿಷ್ಯತಿ, ಶಬ್ದಸೂತಕದಿಂದ, ನಿಶಾಗಾನ, ವಿಬಂಧ, ಜಗತ್ಪ್ರಸಿದ್ಧ ಭಾಷಣಗಳು, ಗಾಂಧಿ: ಅಂತಿಮ ದಿನಗಳು ಅತ್ಯಂತ ಮಹತ್ವದ ಕೃತಿಗಳು.

ಗಾಂಧಿಯ ಆ ದಿನಗಳಲ್ಲಿ



ಸಮಾಧಿ ಮತ್ತು ಗುಲಾಬಿ

೧

ಡೆಹರಾಡೂನ್‌ಗೆ ಸಮೀಪವಾಗುವ ಮೀರತ್‌ನಲ್ಲಿ ಮಿತಿಮೀರಿದ ಛಳಿ. ಇನ್ನೆರಡು ದಿನ ನಿಲ್ಲುವ ಆಸೆ ಮನಸ್ಸಿಗಿದ್ದರೂ ಕೂಡಾ ದೇಹಕ್ಕೂ ಭಾರವಾದ ಬೇಸರ. ಯಾರೋ ಹೇಳಿದರು ದೆಹಲಿಗೆ ಹೋದರೆ ಛಳಿ ಸ್ವಲ್ಪ ಕಡಿಮೆ ಎಂದು. ಮುಂಜಾನೆ 7 ಗಂಟೆಗೆ ಮೀರತ್‌ನಿಂದ ದೆಹಲಿಗೆ, ಹೊರಟಾಗ ಮನಸ್ಸು ಏನನ್ನೋ ಕಳೆದುಕೊಂಡು ಕದಡಿದ ಕೊಳದಂತಾಗಿತ್ತು. ನನ್ನ ಕರ್ಮಕ್ಕೆ ಇದೇ ದಿನ ಸ್ವಾತಂತ್ರ್ಯ ವೀರ, ಹುತಾತ್ಮ 'ಮಂಗಲ್ ಪಾಂಡೆ'ಯ ಈ ನಗರದಲ್ಲಿ ಪ್ರಸಿದ್ಧ ವೈದ್ಯನೊಬ್ಬನ ಕೊಲೆಯಾಗಿ, ಹಿಂದೂ-ಮುಸ್ಲಿಂ ಗಲಾಟೆ ಯಾವುದೇ ಸಂದರ್ಭದಲ್ಲಿಯೂ ಭುಗಿಲೇಳುವ ಸಂದರ್ಭವಿತ್ತು. ಸರಿ ಅಲ್ಲಿಂದ ಹೊರಡುವುದೇ ವಾಸಿ ಎಂದುಕೊಂಡು ಮೀರತ್‌ನಿಂದ ದೆಹಲಿಗೆ ಹೊರಟರೆ ರಸ್ತೆ ತುಂಬಾ ಟ್ರಾಫಿಕ್. ಸಾವನ್ನು ಹೆಗಲ ಮೇಲೆಯೇ ಹೊತ್ತು ತಿರುಗುವ ಆಧುನಿಕ ಮಾನವ ಗಂಡಾಂತರಗಳಿಂದ ಪಾರಾಗುವುದೇ ಒಂದು ಹುಚ್ಚು ಕಲ್ಪನೆ.

ದೆಹಲಿಗೆ ಬಂದರೆ ರೈತರ ರ್‍ಯಾಲಿ. ರೇಲ್ವೆ ನಿಲ್ದಾಣದ ತುಂಬಾ ರೈತರು. ಇವರ ನಾಯಕನೊಬ್ಬ, ದೂರದ ಕರ್ನಾಟಕದಲ್ಲಿ ಸಾವಿನ ಕೊನೆಯ ಕ್ಷಣಗಳನ್ನು ಎದುರಿಸುತ್ತಿದ್ದ. ಬಹುತೇಕ ಪ್ರೊ.ನಂಜುಂಡಸ್ವಾಮಿಯ ಆರೋಗ್ಯಕ್ಕಾಗಿ ಇಲ್ಲಿ, ದೆಹಲಿಯಲ್ಲಿ ಈ ರೈತರಿಂದ ತಲಾ ಇಪ್ಪತ್ತು ರೂಪಾಯಿ ಚಂದಾ ಸಂಗ್ರಹಿಸುತ್ತಿದ್ದ. ಊರು ಬಿಟ್ಟರೂ ಭೂತ ಬಿಡಲಿಲ್ಲ ಎನ್ನುವ ಹಾಗೆ ನಾಡು ಬಿಟ್ಟರೂ ಈ ರೈತರ ಶೋಷಣೆ ನಿಂತಿರಲಿಲ್ಲ.

ದೆಹಲಿ ಎಂದರೆ ಧಿಕ್ಕಾರವಿರುವ ದೇಹಗಳ ಜಾತ್ರೆ. 'ಭಾರತ ಪ್ರಕಾಶಿಸುತ್ತಿದೆ' ಎಂದು ಹಾಡುವ ನಮ್ಮ ರಾಷ್ಟ್ರನಾಯಕರು ಒಂದು ಘಂಟೆ ಇಲ್ಲಿಯ ರೈಲು ನಿಲ್ದಾಣ, ಬಸ್‌ಸ್ಟ್ಯಾಂಡ್, ಸದರ್ ಬಾಝಾರದ ಸಂಧಿಸಂಧಿಗಳಲ್ಲಿ ಸುತ್ತಾಡಬೇಕು. ಐದು ರೂಪಾಯಿಗೆ ಐದಾರು ಕಿಲೋಮೀಟರ್‌ಗಳವರೆಗೆ, ಮೈಕೊರೈಸುವ ಛಳಿಯಲ್ಲಿ ನಾಲ್ಕಾರು ಜನರನ್ನು ಕೂಡ್ರಿಸಿಕೊಂಡು ಸೈಕಲ್ ತುಳಿಯುವ ಕೂಲಿಗಳನ್ನು, ರಸ್ತೆಗಳ ಇಕ್ಕೆಲಗಳಲ್ಲಿ ಕನಿಷ್ಠ ಬಟ್ಟೆಯೂ ಇಲ್ಲದೆ ಬದುಕುವ ಭಿಕಾರಿಗಳನ್ನು, ಯಾರೋ ಸೇದಿ ಒಗೆಯುವ ಬೀಡಿಯ ತುಂಡುಗಳನ್ನು ಆಯ್ದುಕೊಳ್ಳಲು ಓಡಾಡುವ ಹೈದರನ್ನು, ರೈಲು ಹಳಿಗಳ ಮಧ್ಯ ಬೀಳುವ ಪ್ಲಾಸ್ಟಿಕ್‌ಗಾಗಿ ತಡಕಾಡುವ ಯುವತಿಯರನ್ನು ಕೇಳಬೇಕು ನಮ್ಮ ದೇಶ ಎತ್ತ ಪ್ರಕಾಶಿಸುತ್ತಿದೆ ಎಂದು. ಹಳೆ ದೆಹಲಿ ಎನ್ನುವುದು ದೇಹ ಉಸಿರುಗಟ್ಟಿಸುವ ಅನುಭವ ಹೊಂದುವ, ಆತ್ಮನಾಚಿಕೆ ಪಡುವ, ಮನುಷ್ಯತ್ವ ರೋಸಿ ಹೋಗುವ, ನರಕದ ನವೀನ ರೂಪ. ಮೀರತ್‌ನ ಛಳಿಗೆ ಅಂಜಿ ದೆಹಲಿಯ ಬಿಸುಪು ಬಯಸಿ ಬಂದಿದ್ದ ನನಗೆ ಇಲ್ಲಿಂದಲೂ ನಾನು ತಿಳಿದಂತೆ ಓಡಿಹೋಗಲು ದಾರಿಯಿರಲಿಲ್ಲ. ಸಮಯ ಕಳೆಯಬೇಕು. ದೀರ್ಘವಾದ ಮುಂದಿನ 42 ಗಂಟೆಗಳ ಸಮಯವನ್ನು ನಾನು ಕಳೆಯಬೇಕು. ಆಗ ನನ್ನ ಸಹಾಯಕ್ಕೆ ಬಂದದ್ದೇ ಈ ಗಾಂಧಿ ಸಮಾಧಿ.

ಸತ್ತ ಗಾಂಧಿ, ನಮ್ಮ ಸಂಸ್ಕೃತಿಯ ಜೀವಂತ ಸಮಾಧಿಯಾದ ರಾಜಘಾಟದಲ್ಲಿ ಆತ್ಮಾವಲೋಕನ ಮಾಡಿಕೊಳ್ಳುತ್ತಿದ್ದಾರೆ ಎಂಬುದು ಒಂದು ಕುತೂಹಲ. ವರ್ತಮಾನದ ಸಮಸ್ಯೆಗಳಿಗೆ, ಹಿಂಸೆಗಳಿಗೆ ಉತ್ತರ ಹುಡುಕುವ ನನ್ನಂತಹ ಅದೆಷ್ಟೋ ಯುವಕರಿಗೆ ಈ ಗಾಂಧಿಯ ಸಮಾಧಿ ಎನ್ನುವುದು ಸತ್ತ ಮೇಲೆ ಕಟ್ಟಿದ ಒಂದು ಕಲ್ಲುಮಣ್ಣುಗಳ ಗೋಡೆ ಆಗದಿರುವುದು ಒಂದು ಒಳ್ಳೆಯ ಬೆಳವಣಿಗೆಯೋ ಅಥವಾ ಕೆಟ್ಟ ಬೆಳವಣಿಗೆಯೋ ಅದು ನಿರ್ಧರಿಸಲಾಗದ ಮಾತು. ಯಾಕೆಂದರೆ ಸಮಾಧಿ ಎನ್ನುವುದು ಸಾವಿನ ಸಾಕ್ಷಿ ಎನ್ನುವುದಾದರೆ, ಸಾವು ಒಂದು ಪೂರ್ಣ ವಿರಾಮ. ಆದರೆ ಗಾಂಧಿ ಸಮಾಧಿಯ ಈ ರಾಜಘಾಟದಲ್ಲಿ ನಿತ್ಯ ನಡೆಯುವ ಪ್ರಾರ್ಥನೆ, ಉರಿಯುವ ದೀವಟಿಗೆ, ಬೆಳಗುವ ದೀಪ ಇಲ್ಲಿ ನಿತ್ಯ ಬರುವ ಜನರು, ಇದು ಪೂರ್ಣವಿರಾಮ ಅಲ್ಲ ಎಂದು ಮತ್ತೆ ಮತ್ತೆ ಸಾರುತ್ತವೆ. ಗಾಂಧಿ ಈಗ ಭಾರತದಲ್ಲಿ ಸತ್ತ ಮೌಲ್ಯಗಳ ಪ್ರತೀಕವಾಗಿದ್ದಾನೆ. ಆತನ ಸಮಾಧಿ, ಸಾಯುವವರಿಗೆ ಹೆಗಲು ನೀಡುವ ಆಸರೆಯಾಗಿದೆ.

ಸಮಾಧಿಯೆನ್ನುವುದು ಕಲ್ಲು ಮಣ್ಣುಗಳ ಗೋಡೆ ಎನ್ನುವುದಾದರೆ ಈ ಕಲ್ಲು ಎಷ್ಟೊಂದು ಅದ್ಭುತ ನೋಡಿ. ಅಂತೆಯೇ ದಾರ್ಶನಿಕರು, ವಿಚಾರವಾದಿಗಳು, ಸಮಾಜ

ಸುಧಾರಕರು, ಸಂತರು, ದೇವರ ಅನ್ವೇಷಣೆಯಲ್ಲಿದ್ದವರು ಸಮಾಜದಿಂದ ಓಡಿ ಹೋಗಿ ಕಲ್ಲುಗಳ ಮುಂದೆ ಕಣ್ಣೀರು ಸುರಿಸಿದರು. ಗಾಂಧಿಯ ಬದುಕೂ ಈ ಪ್ರಯತ್ನದಿಂದ ಹೊರತೇನೂ ಆಗಿರಲಿಲ್ಲ. ಅದು ದೇಶ ವಿಭಜನೆಯ ನಂತರದ ಅವಧಿ. ಗಾಂಧಿಯ ಐಕ್ಯತೆಯ ಕನಸು ಒಡೆದು ಹೋದ ಮಾತಾಗಿದ್ದು, ಆಗ ಗಾಂಧಿ ಮೊರೆ ಹೊಕ್ಕದ್ದು ಮತ್ತೆ ಈ ಕಲ್ಲನ್ನೆ.

ಈ ದೇಶದ ಸಂವೇದನೆಗಳ ಜೀವಂತ ಉದಾಹರಣೆಯಾಗಿದ್ದ ಗಾಂಧಿಯಂಥ ಜನಗಳು ಈಗ ಸಮಾಧಿಯಾಗಿದ್ದಾರೆ. ನಾವು ನಡೆಯುವ ದಾರಿ ಯಾವ ಗುರಿಯತ್ತಲೂ ಒಯ್ಯುತ್ತಿಲ್ಲ. ಬದುಕು ಎನ್ನುವುದು ಭೀಷಣ ಗಾಳಿಗೆ ಸಿಕ್ಕ ತರಗೆಲೆಯ ಕಥೆಯಾಗಿದೆ. ಇದು ಕಲ್ಲು ಕರಗುವ ಸಮಯ. ಮಾತು, ಸಮಾಧಿಗಳ ಮೌನವನ್ನೂ ಮೀರಿದ ಸತ್ಯವನ್ನು ಹೇಳುವ ಶಕ್ತಿಯನ್ನು ಕಳೆದುಕೊಂಡಿದೆ. ಸುತ್ತಲೂ ಬರೀ ಆಲಾಪದ ಧ್ವನಿ. ಹಬ್ಬಿದ ಮಂಜು, ಮೈ ಕೊರೈಯಿಸುವ ಚಳಿ, ಮರೆಯಾದ ಸೂರ್ಯ. ಮೈ ಬಿಚ್ಚದ ಹಗಲು–ಇದು ರಾಜ–ಘಾಟದ ಒಂದು ವರ್ಷದ ಹಿಂದಿನ ನನ್ನ ಅನುಭವ.

ಬದುಕಿನ ನಲವತ್ತು ವರ್ಷಗಳವರೆಗೂ ಮರೀಚಿಕೆಯಾಗಿದ್ದ ನನ್ನ ಪ್ರೀತಿಯ ಈ ಗಾಂಧಿ ಸಮಾಧಿ. ನಾನು ಮುಟ್ಟಿದ ಕೂಡಲೆ ತೃಷೆ ಇಂಗಿಸಿದ ನೀರಾಗಲಿಲ್ಲ. ಆತ್ಮವನ್ನು ಎಚ್ಚರವಾಗಿಟ್ಟುಕೊಂಡೇ ಗಾಂಧಿಯ ಸಮಾಧಿಗೆ ನಾವು ಹೋಗುವುದಾದರೆ ಇದು ಪ್ರತಿಯೊಬ್ಬ ಭಾರತೀಯನಿಗೂ ಆಗುವ ಅನುಭವವೇನೊ. ಮೌಲ್ಯಗಳು ದ್ರವೀಕರಣಗೊಂಡ ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ಗಾಂಧಿಯ ಸಮಾಧಿಗೆ ಹೋಗುವಾಗ ತನ್ನೊಳಗೊಬ್ಬ ಗಾಂಧಿಯ ದೇಹ ಹೊತ್ತುಕೊಂಡೇ ಹೋಗುತ್ತಿದ್ದೇನೆ ಎಂಬ ಅನುಭವವಾಗುತ್ತದೆ ಅಲ್ವೆ?

ಇಂತಹ ಸಂದರ್ಭದಲ್ಲಿ ಮತ್ತೆ ಮರುಜೀವದ ಮಾತನಾಡುವುದು ಒಂದು ನಾಟಕವಲ್ಲವೇ? ಗಾಂಧಿ, ಗಾಂಧಿ, ಗಾಂಧಿ. ಬದುಕಿನಲ್ಲಿ ಎಷ್ಟೊಂದು ಸರಳವಾಗಿದ್ದನೋ ಗಾಂಧೀ ಸಾವಿನ ನಂತರವೂ ಅಷ್ಟೇ ಸಂಕೀರ್ಣವಾದ. ಎಷ್ಟು ಎಷ್ಟು ಸರಳತೆಯನ್ನು ಹೊರಗೆ ತೋರಿಸಿದನೋ ಅಷ್ಟೇ ತನ್ನೊಳಗೆ ತಾನು ನಿಗೂಢನಾದ. ಈಗ ಆತನ ಸಮಾಧಿಯ ಸುತ್ತಲೂ ಇರುವುದು ಒಂದು ನಿಗೂಢ ಮೌನ.

ನಾನು ಸಮಾಧಿಯ ಸುತ್ತಲೂ ತಿರುಗುತ್ತಲೇ ಇದ್ದೆ. ಅವು ಉದ್ದೇಶರಹಿತವಾದ ಸುತ್ತುಗಳು ಅಥವಾ ನನ್ನನ್ನೇ ನಾನು ಬಚ್ಚಿಟ್ಟುಕೊಳ್ಳಲು ಮಾಡುತ್ತಿದ್ದ ಪ್ರಯತ್ನಗಳು. ಕತ್ತಲಾಗುತ್ತ ಬಂತು. ರಾಜಘಾಟದ ಗೇಟುಗಳು ಮುಚ್ಚುವ ಸಮಯ, ಪೋಲಿಸರ ಎಚ್ಚರಿಕೆ, ಸುಮ್ಮನೆ ಒಂದು ಕ್ಷಣ ನಿಂತು ಸಮಾಧಿಗೆ ಒಂದು ಹೂವನ್ನೂ ಕೊಡಲಾಗದ ಕೈಗಳಿಂದ ಮೆಲ್ಲಗೆ ಸಮಾಧಿಯ ಮೇಲೆ ಬಿದ್ದಿದ್ದ ಒಂದು ಗುಲಾಬಿಯನ್ನು ಎತ್ತುಕೊಂಡೆ. ಅಂದು ಗುಲಾಬಿಯನ್ನು ತಂದು ದಿನಚರಿಯ ಪುಟಗಳಲ್ಲಿ ಅಂಟಿಸಿದ್ದೇನೆ. ಇವೆಲ್ಲ 2000ನೇ ಇಸ್ವಿಯ ಸುತ್ತಲಿನ ಅನುಭವಗಳು. ಹೂ ಈಗ ಕಪ್ಪಿಟ್ಟಿದೆ, ಆದರೆ ದಿನಚರಿಯ ಪುಟಗಳನ್ನು ತಿರುವಿದಾಗ ಇಂದಿಗೂ ವಾಸನೆ ಮಾತ್ರ ಮಾತನಾಡುತ್ತದೆ, ಬಹುತೇಕ ಹೀಗೆಯೇ ನಮ್ಮ ಗಾಂಧೀ ನಮ್ಮ ಚರಿತ್ರೆಯ ಪುಟಗಳಲ್ಲಿ ಅಲ್ಲವೇ?

ನಾನು ಹುಟ್ಟಿದಾಗ ಗಾಂಧೀಜಿ ಗತಿಸಿ 24 ವರ್ಷಗಳು ಗತಿಸಿರಬಹುದೇನೊ. ನನಗೆ ಅರಿವಿಲ್ಲದ ಆ ಬಾಲ್ಯದ ಕಿವಿಗಳ ಮೇಲೆ ಈ ಮಹಾರಾಯನ ಹೆಸರು ಅದೆಷ್ಟು ಬಾರಿ ಬಿದ್ದಿತ್ತೋ ಏನೋ. ಅವಿನ್ನೂ 'ಗಾಂಧಿ ಚರಕ' ನಮ್ಮ ಬಾವುಟದಲ್ಲಿ ಅಲ್ಲಲ್ಲಿ ರಾರಾಜಿಸುತ್ತಿದ್ದ ಘಳಿಗೆಗಳು. ನಾವು ಪ್ರಾಥಮಿಕ ಶಾಲೆಗಳ ಸ್ವತಂತ್ರ ದಿನೋತ್ಸವಗಳಲ್ಲಿ ಭಾಗವಹಿಸುವುದರೊಳಗಾಗಿ ಗಾಂಧಿಯ ಫೋಟೋ ಈ ದೇಶದ ಕೋಟಿ-ಕೋಟಿ ದೇವರುಗಳ ಸಾಲಿನಲ್ಲಿ ಸೇರಿದ ಅಪಾಯ. ಪ್ರತಿ ಭಾರತೀಯ ರಾಷ್ಟ್ರೀಯ ಹಬ್ಬವೂ ಗಾಂಧಿ ಎಂಬ ಅಕ್ಟೋಪಸ್‌ನ ಆಳ್ವಿಕೆ. ಗಾಂಧೀಜಿಯ ಈ ರೀತಿಯ ಆರಾಧನೆಗೆ ಹೊರಟಿದ್ದ ಯಾವ ಭಾರತೀಯನಿಗೂ ಉಳಿದ ಸ್ವತಂತ್ರ ಹೋರಾಟಗಾರರು ಲೆಕ್ಕಕ್ಕುಂಟು ಲೆಕ್ಕಕ್ಕಿಲ್ಲ. ಹೀಗೆ ಬೆಳೆಯುತ್ತಾ ಹೊರಟ ಈ ಗಾಂಧಿ ಎಲ್ಲಿಯೋ ದೇವರಾಗಿಬಿಡುತ್ತಾನೆ ಎಂದು ಭಯಪಡುವುದರೊಳಗಾಗಿ ಗಾಂಧಿ ಮಹಾತ್ಮನಾದ. ಇದು ಸಂಪೂರ್ಣ ಸಂತೃಪ್ತಿಯ ಬೆಳವಣಿಗೆಯಲ್ಲದಿದ್ದರೂ ಒಂದಷ್ಟು ಸಮಾಧಾನದ ವಿಷಯವಂತೂ ಸತ್ಯ.

ಗಾಂಧಿ, ನಮ್ಮ-ನಿಮ್ಮೆಲ್ಲರ ಗಾಂಧಿ, ನೀವೂ ಪ್ರೀತಿಸಿಯೂ ಬದುಕಲಾರದ, ಒಪ್ಪಿಯೂ ಅನುಸರಿಸಲಾಗದ, ಆರಾಧಿಸಿಯೂ ಅಪ್ಪಲಾಗದ, ಕಲಿತೂ ಕಲಿಸಲಾಗದ ಈ ಗಾಂಧಿಯೇ ಒಂದು ವಿಚಿತ್ರ. ಆತ ದೇವರಾಗದೆ, ಮಹಾತ್ಮನಾಗಿರುವುದು ನನಗೆ ಒಂದಿಷ್ಟು ಸಮಾಧಾನ ತಂದಿದೆ. ಪ್ರವಾದಿಯೊ, ಸಂತನೊ, ಮಹಾಂತನೊ ಅಥವಾ ಮಹಾತ್ಮನೋ ಇವರೆಲ್ಲಾ ಯಾವುದೇ ಪ್ರಮಾಣದ ಆರಾಧನೆಗೊಳಗಾಗಿಯೂ ಮನುಷ್ಯರ ಲೋಕಕ್ಕೆ ಸಮೀಪವಾಗಿಯೇ ಉಳಿಯುತ್ತಾರೆ. ಶುದ್ಧೀಕರಣದ ಇವರ ಪ್ರಯಾಣ ಅಶುದ್ಧಿಯ ಯಾವುದೋ ಒಂದು ತುದಿಯಿಂದಲೇ ಪ್ರಾರಂಭವಾಗುತ್ತದೆ. ಲಾರ್ಡ್ ಬೈರನ್‌ನ ಈ ಸಾಲುಗಳನ್ನು ಗಮನಿಸಬೇಕು– In men whom condemn as ill, I found so much good and still, In men whom men pronounce devine, I found so much sin and blot, I don't dare to draw a line, between the two whom god has not" ಕವಿಯ ವಾದವಿಷ್ಟೆ, ಎಲ್ಲ ಕೆಟ್ಟವರಲ್ಲಿ ಒಳ್ಳೆಯವರನ್ನು ಕಂಡಿದ್ದೇನೆ, ಎಲ್ಲ ದೇವ ಸಂಭೂತರಲ್ಲಿಯೂ ಪಾಪಾತ್ಮರನ್ನು ಕಂಡಿದ್ದೇನೆ. ಹೀಗಾಗಿ ಒಳಿತು ಕೆಡಕಿನ ಮಾನದಂಡವನ್ನು ಕೈಯಲ್ಲಿಟ್ಟುಕೊಂಡು ಮನುಷ್ಯರನ್ನು ವಿಭಜಿಸುವುದೇ ಸಂಕಷ್ಟದ ಮಾತು.

ಮನುಷ್ಯನ ತಂತ್ರ-ಕುತಂತ್ರ, ಹಠ, ಕಾರಸ್ಥಾನ ಅದಕ್ಕಾಗಿ ಹವಣಿಸುವ ರೀತಿ, ಇಡೀ ಜೀವನವನ್ನೇ ಭ್ರಮೆಗಳ ಗಾಳಿಗೆ ತೂರಿಬಿಡುವ ಸನ್ನದ್ಧು, ಎಲ್ಲವೂ ಚಿಂತನಾರ್ಹ. ಒಂದು ಒಳ್ಳೆಯ ಅಥವಾ ಕೆಟ್ಟ ಮನಸ್ಸಿನ ತಯ್ಯಾರಿ ಬರೀ ಸ್ವತಂತ್ರ ಮತ್ತು ವೈಯಕ್ತಿಕವಾದುದಲ್ಲ ಎಂದು ನಾವು ಒಪ್ಪಲೇಬೇಕು. ಹೀಗೆ ಒಪ್ಪಿಕೊಂಡಾಗ ನಡೆದು ಹೋದ ಪಾಪದ ಸಾಲ ತೀರಿಸಲು ನಾವು ಚಿಂತನಶೀಲರಾಗಬೇಕು ಎನ್ನಿಸುತ್ತದೆ. ಗಾಂಧಿಯನ್ನು ಸಾಯಲಾರದಷ್ಟು ದೊಡ್ಡವನನ್ನಾಗಿ ಬೆಳೆಸಿ, ಕೊನೆಗೆ ಆತನನ್ನು ದೈಹಿಕವಾಗಿ ಅಳುಕಿಸಲಾಗದ್ದಕ್ಕೆ ಅಳುತ್ತಿರುವ ಫ್ರಾಂಕಿನ್‌ಸ್ಟೈನ್‌ದ ಪಾತ್ರಗಳು ನಾವು.

ಈ ಗಾಂಧಿಯೊಂದಿಗೆ ಗುದ್ದಾಡುತ್ತಾ ನಾನೀಗ ಮಧ್ಯವಯಸ್ಸಿನ ಕದ ತಟ್ಟುತ್ತಿದ್ದೇನೆ. ಆದಾಗ್ಯೂ ಕಳೆದ 40 ವರ್ಷಗಳಿಂದ ಈತ ನನ್ನನ್ನು ಬೇಚೈನಾಗಿ ಉಳಿಸಿದ್ದಾನೆ ಎಂದರೆ

ನೀವು ನಂಬಲಿಕ್ಕಿಲ್ಲ. ಅಲ್ಲಲ್ಲಿ ಮಿಣುಕು ದೀಪದಂತೆ, ಉರಿವ ದೀವಟಿಗೆಯಂತೆ, ಮುಗ್ಧವಾಗಿದ್ದ ನನ್ನಜ್ಜನಂತೆ, ಕೆಲವು ಸಲ ಬೇತಾಳದಂತೆ ಈ ಜೀವ. ನನ್ನ ಜೀವನ ನಿರ್ಧಾರದ ಹಲವು ತಿರುವಿನ ಸಂದರ್ಭಗಳಲ್ಲಿಯೂ ಕುಣಿದಾಡಿ ಮಾಯವಾಗಿದೆ. ಗುಂಡಿನ ರಾತ್ರಿಗಳಲ್ಲಿ, ಆಲಿಂಗನದ ಆಟಗಳಲ್ಲಿ, ಸತ್ಯ ಸುಳ್ಳುಗಳ ಬದುಕಿನ ಹಲವು ವಹಿವಾಟುಗಳಲ್ಲಿ, ಈತ ನನ್ನನ್ನು ಪೆಡಂಭೂತದಂತೆ ಬೆನ್ನಟ್ಟಿದ್ದಾನೆ. ಹಾಗೆಯೇ ನಿರ್ವೀಣ್ಯನಾಗಿ ಕುಸಿದು, ಕೊನೆಯುಸಿರಿನತ್ತ ಮನಸ್ಸು ಹೊರಳುವಾಗ ಜೋಹಾನ್ಸ್‌ಬರ್ಗ್‌ದ ಆ ರೈಲ್ವೆಸ್ಟೇಷನ್‌ನಿಂದ ನೇರವಾಗಿ ಎದುರು ಬಂದು ನಿಂತು 'ಫಟಾರ್' ಎಂದು ನನ್ನ ಮುಖಕ್ಕೆ ಹೊಡೆದಿದ್ದಾನೆ, ಎದೆಗೆ ಒದ್ದಿದ್ದಾನೆ. ನನ್ನ ಪಾಲಿನ ಆಲದ ಮರ, ನನ್ನ ಊಟದ ಕರಿಬೇವು ಎರಡೂ ಆಗಿರುವ ಮುಗ್ಧನಗೆಯ, ಸೋರೆಕಾಯಿಯಂಥ ತಲೆಯ, ಈ ಚಾಣಾಕ್ಷ ಮುದುಕ ನನ್ನ ಅತಿ ಪ್ರೀತಿಯ ವಸ್ತುಗಳಲ್ಲಿ ಒಂದಾಗಿದ್ದಾನೆ.

ಹೂ, ಕಾಯಿ, ಬಿರುದಾವಳಿಗಳ ಸಾಲಿಗೆ ಸೇರಿ ಸರ್ಕಲ್‌ಗಳಲ್ಲಿ Statue, ರಿಜರ್ವ್ ಬ್ಯಾಂಕಿನ ಚಿತ್ರ, ಮತ್ತು ಪಬ್ಲಿಕ್ ಪ್ರಾಪರ್ಟಿಯಾಗಿರುವ ಇಂಥ ಯಾವೊಂದು ಹಿರಿಯ ಜೀವವನ್ನೂ ಇತಿಹಾಸದಿಂದೆಳೆದು ಮುಂದೆ ಕೂಡ್ರಿಸಿಕೊಂಡು ಸಿಗರೇಟ್ ಸೇದಿದಂತೆ ಮಾತನಾಡುವುದು ನಮ್ಮಲ್ಲಿಯ ಬಹುಪಾಲು ಮೂರ್ತಿ ಪೂಜಕ ಹಿರಿಯರಿಗೆ ಹಿತವಾಗಿ ಕಾಣಿಸಲಾರದು. ಆದರೆ ಗಾಂಧಿಯನ್ನು ಒಂದು ಕ್ಷಣ ನನ್ನೆದುರು ಎಳೆದು, ಮುಂದೆ ಕೂಡ್ರಿಸಿಕೊಂಡು ಇಲ್ಲಿ ಮಾತನಾಡಿಸಿರುವುದು ಮೇಲೆ ಹೇಳಿದ ರೀತಿಯ ಒಂದು ಉದ್ಧಟತನವೇ ಆಗಿದೆ. ಅದಕ್ಕಾಗಿ ಸಾಧ್ಯವಾದರೆ ಕ್ಷಮಿಸಬೇಕು. ನಲವತ್ತು ವರ್ಷ ಎಂಬ ನನ್ನ ಬದುಕಿನ Mischievous Miniature ನಲ್ಲಿ ಇದು ನಾನು ಗಾಂಧಿಯನ್ನು ನೋಡಿದ ಅಥವಾ ಅರ್ಥೈಸಿಕೊಂಡ ರೀತಿ. ಅಂದ ಮಾತ್ರಕ್ಕೆ ನಮ್ಮ ಯಾವ ಅರ್ಥಗಳೂ ಮೂಲ ಚೇತನ ಒಂದರ ದಾರಿಯಲ್ಲಿ ಅಡ್ಡ ಗೋಡೆಗಳಾಗುತ್ತವೆ ಎಂದು ನಾನು ನಂಬಿಲ್ಲ. ನನ್ನ ಬೊಗಸೆಯ ನೀರೇ ಸಾಗರವಲ್ಲ, ಸಾಗರವಲ್ಲದೇ ಇದ್ದದ್ದೂ ಅಲ್ಲ.

ಜೀಸಸ್‌ನನ್ನು ಕೊಂದವರು, ಶರಣರನ್ನು ಎಳಹೂಟೆ ಮಾಡಿದವರು, ಸಾಕ್ರೆಟಸ್‌ನಿಗೆ 'ಹೆಮ್‌ಲಾಕ್' ಕೊಟ್ಟವರು, ಚೆನ್ನಬಸವಣ್ಣ ....ಹುಟ್ಟಿದವ ಎಂದು ಬರೆದವರು. ಸೆಂಟ್ ಜೋನ್‌ಳನ್ನ ಬೆಂಕಿಗಿಟ್ಟವರು, ಗಾಂಧಿಯನ್ನ ಹತ್ಯೆಗೈದವರು ಯಾರೂ, ಯಾರೂ ನಮ್ಮ ಮನಸ್ಸನ್ನು ಬಿಡಿ, ಕನಿಷ್ಟ ನಮ್ಮ ಸಾರ್ವಜನಿಕ ಗೋಡೆಗಳ ಮೇಲೂ ಕೂಡ ಸ್ಥಾನ ಪಡೆಯಲಿಲ್ಲ. ಆದರೇನಾಯಿತು ಇತಿಹಾಸ ಸೇರಿದರಲ್ಲ? ಎಂದು ನಮ್ಮ ಮನಸ್ಸು ಹೇಳೀತು. ಅಂಥದಕ್ಕೊಂದು ಉತ್ತರ ಏನೆಂದರೆ ವರ್ತಮಾನದಲ್ಲಿ ಅರ್ಥ ಪಡೆಯದ ಬದುಕಿಗೆ ಇತಿಹಾಸದಲ್ಲಿ ಎಂಥ ಸ್ಥಾನ ದೊರೆತರೇನು? ಅಲ್ಲದೆ ಬಾಳೇ ಇಲ್ಲದ ಇಂಥ ಬದುಕುಗಳನ್ನು ಎಷ್ಟು ಕಾಲ ಜಪಿಸಿದರೇನು? ಆದಾಗ್ಯೂ ಚೈತನ್ಯಗಳನ್ನು ಪರೀಕ್ಷೆಗೆ ಒಳಪಡಿಸಿದ ಜೀವನಗಳನ್ನು ಚೈತನ್ಯಕ್ಕೆ ಕೊಟ್ಟಷ್ಟೇ ಪ್ರಾಮುಖ್ಯತೆ ಕೊಟ್ಟು ಕೆಲವು ಬಾರಿ ನೋಡಬೇಕಾಗುತ್ತದೆ. ಅಲ್ಲವೇ? ಹೂವಿನ ಅವಸಾನದ ನಂತರವೂ ವಾಸನೆ ಉಳಿಯುತ್ತದೆ. ಚಿಂತನೆ ಯಾವಾಗಲೂ ವಾಸನೆಯಂತೆ ಅದು ನಿರಂತರ.



ಗಾಂಧಿ ಯಾವುದಕ್ಕೆ ನಾಂದಿ?

೨

ಈ ಲೆಕ್ಕಚಾರಗಳೆಲ್ಲ ಏನೇ ಇರಲಿ, ನಮಗೆ ಬೇಕಾಗಿಯೂ ಬೇಡಾಗಿಯೂ ನಮ್ಮ ಇತಿಹಾಸ, ವರ್ತಮಾನದ ಉದ್ಧರಣೆಯಾಗಿದ್ದಾನೆ ಗಾಂಧಿ. ಭವಿಷ್ಯದಿಂದಲೂ ಆತನನ್ನು ನಾವು ಧಿಕ್ಕರಿಸುವಂತಿಲ್ಲ. 'ರಜೆಯಾಗಿ, ಅಕ್ಟೋಬರ್ 2ರ ಮೋಜಾಗಿ ಬಂದೇ ಬರುತ್ತಾನೆ ಗಾಂಧಿ. ಚೌಕು, ವೃತ್ತಗಳಲ್ಲಿ ಕಾಲೆಜು, ಬಂದೀಖಾನೆಗಳಲ್ಲಿ, ಫೋಟೋ ಪುತ್ಥಳಿಯಾಗಿ, ಕಣ್ಣೆರಿಯುತ್ತಾನೆ ಗಾಂಧಿ. ಗುಂಡು-ಗೋಷ್ಠಿಗಳಲ್ಲಿ, ಸುಳ್ಳಿನ ಸಂತೆಯಲ್ಲಿ, ಕಾಳ ಸಂತೆಯಲಿ ಪುತ್ಥಳಿಯಾಗಿ ಗಾಂಧಿ ಮಾರಾಟವಾಗುತ್ತಾನೆ. ಉಪವಾಸದ ನಾಟಕಗಳಲ್ಲಿ, ಧರ್ಮಾರ್ಥ ಚಿಂತನೆಗಳಲ್ಲಿ ಸಾಕ್ಷಿಯಾಗುತ್ತಾನೆ ಗಾಂಧಿ.' ಗಾಂಧಿಯಿಲ್ಲದ ಯಾವುದಾದರು ಸ್ಥಳ ಅಥವಾ ಆಲೋಚನೆ ಯನ್ನು ನಾವು ಕಲ್ಪಿಸಬಹುದೇ? ನನಗಿದು ಬಿಡಿಸಲಾಗದ ಪ್ರಶ್ನೆ. ಹೀಗೆಲ್ಲಾ ಗಾಂಧಿಯ ಬಗ್ಗೆ ವಿವೇಚಿಸುತ್ತಾ ಈ ಗಾಂಧಿಯನ್ನು ನಾವೆಲ್ಲಿಗೆ ಕರೆದೊಯ್ದೆವು? ನಮ್ಮ ಸಾಮಾಜಿಕತೆ ಮತ್ತು ರಾಜಕೀಯದ ಯಾವ ಅಳತೆಗೋಲಾಗಿ ಅವನನ್ನು ಇಟ್ಟುಕೊಂಡೆವು ನನಗೆ ತಿಳಿಯುತ್ತಿಲ್ಲ.

1947ರ ಜುಲೈ18ರಂದು ಗಾಂಧಿ ಅತ್ಯಂತ ಮಹತ್ವದ ಮಾತೊಂದನ್ನು ಆಡಿದ್ದಾನೆ. ``Politics will have some effect on the people only if carried on with a sense of Dharma and with purity of conduct''. ಧರ್ಮವೋ, ರಾಜಕಾರಣವೋ ಅಥವಾ ಇವೆರಡು ಸೇರಿದ್ದನ್ನು ಕುರಿತು ಆಡಿದ ಗಾಂಧಿಯ ಈ ಮಾತಿಗೆ ಏನಾದರೂ ಅರ್ಥವುಂಟೆ? ಅಂಬೇಡ್ಕರರು ಹೇಳುವ "ಇತಿಹಾಸವನ್ನು ಗೌರವಿಸದವನು ಇತಿಹಾಸವನ್ನು ಸೃಷ್ಟಿಸಲಾರ" ಎನ್ನುವ ಮಾತನ್ನು ಮುಂದಿಟ್ಟುಕೊಂಡು ನೋಡಿದಾಗಲೂ ಗಾಂಧಿ ನಮ್ಮ ಇತಿಹಾಸದ ಅವಿಭಾಜ್ಯ ಅಂಗವಲ್ಲವೆ? ಅವನನ್ನು ಇತಿಹಾಸ ಪುರುಷ ಎಂದು ಒಪ್ಪಿಕೊಳ್ಳುವುದಾದರೆ ಆತನ ಯಾವ ತಲ್ಲಣಗಳು, ಯಾತನೆಗಳು ನಮ್ಮ ಕರುಳು ಹಿಂಡಿಸಿವೆ? ಗಾಂಧಿ ಒಬ್ಬ ಮನುಷ್ಯನಾಗಿಯೂ ಮನುಷ್ಯರನ್ನ ಕಾಡದಷ್ಟು ಏಕೆ ದೂರಾದ? ನೀವೇ ಉತ್ತರಿಸಬೇಕು.

'ಯಂಗ್ ಇಂಡಿಯಾ'ದಲ್ಲಿ 1921ರಲ್ಲಿ ಗಾಂಧಿ ಬರೆದ ಮಾತೊಂದು ಹೀಗಿದೆ. ಕ್ಷಣ-ಕ್ಷಣಕ್ಕೂ ಹೆಜ್ಜೆ ತಪ್ಪುತ್ತಿದ್ದ ಭಾರತೀಯರ ನಾಗರೀಕ ಪ್ರಜ್ಞೆಯನ್ನು ಕಂಡು ಅಸಹಾಯಕನಾಗಿ ಗಾಂಧಿ ಸಿಡಿಮಿಡಿಗೊಂಡು ಈ ಮಾತನ್ನ ಬರೆದಿರಬಹುದು. "ಇದೀಗ ಭಾರತವು ಬೆಂಕಿ ಹೊತ್ತಿಕೊಂಡ ಮನೆಯಂತಿದೆ ಎಂಬುದು ನನ್ನ ನಂಬಿಕೆ. ದಿನ-ದಿನವೂ ಅದರ ಮಾನವೀಯತೆಯು ಸುಟ್ಟು ಕರಕಲಾಗುತ್ತಿದೆ. ದಿನ-ದಿನವೂ ದುಡಿಯಲು ಮತ್ತು ದುಡಿಮೆಯ ಫಲದಿಂದ ಅನ್ನವನ್ನು ಗಳಿಸಿಕೊಳ್ಳಲು ಅವಕಾಶವಿಲ್ಲದೆ ಅದು ಹಸಿವೆಗೊಂಡು ಸಾಯುತ್ತಿದೆ". 30 ಕೋಟಿ ಭಾರತೀಯರೆನ್ನುವವರು ತಮ್ಮ ಕರ್ತವ್ಯವೆನ್ನುವುದನ್ನು ಮರೆತಿರುವಾಗ ಸರಕಾರವನ್ನ ಏಕೆ ದೂಷಿಸಬೇಕು? ಎನ್ನುತ್ತಿದ್ದ ಗಾಂಧಿಗೆ ತಮ್ಮ ಕೊನೆಯ ದಿನಗಳವರೆಗೂ ಈ ದೇಶದ ಮನೋಸ್ಥಿತಿಯಲ್ಲಿ ಬದಲಾವಣೆಯಾಗದೆ ಇರುವುದು ಖೇದದ ವಿಷಯವಾಗಿಯೇ ಉಳಿಯಿತು. ಅಹಿಂಸೆಯ ಮಹಾನ್ ಆರಾಧಕನಾಗಿದ್ದ ಗಾಂಧಿ ತಮ್ಮ ಕೊನೆಯ ದಿನಗಳನ್ನೆಲ್ಲಾ ಹಿಂದೂ-ಮುಸ್ಲಿಂರ ರಕ್ತಗಳಿಂದ ಸಿಕ್ತವಾಗಿದ್ದ ಗಲ್ಲಿಗಳನ್ನು ತೊಳೆಯುವುದರಲ್ಲಿಯೇ ಕಳೆಯಬೇಕಾದುದು, ಕೊನೆಗೆ ತನ್ನ ಬದುಕನ್ನು ಹಿಂಸೆಯಲ್ಲಿಯೇ ಅಂತ್ಯವಾಗಿಸಿಕೊಳ್ಳಬೇಕಾದುದು ಎಂಥ ವಿಪರ್ಯಾಸವಲ್ಲವೇ?


18 ಜುಲೈ 1947ರ ಶುಕ್ರವಾರ ದೆಹಲಿಯ ಭಂಗಿ ಕಾಲೋನಿಯಲ್ಲಿ ನಾಯಕರ ಗುಂಪೊಂದು ಗಾಂಧಿಯನ್ನು ಭೆಟ್ಟಿಯಾಯಿತು. ಅವು ಗಾಂಧಿ, 'ರಾಜಕೀಯವೂ ಧರ್ಮದ ಚೌಕಟ್ಟಿನಲ್ಲಿರಬೇಕು' ಎಂದು ಬೋಧಿಸುತ್ತಿದ್ದ ದಿನಗಳು. ಗಾಂಧಿ ಬೋಧಿಸುತ್ತಿದ್ದ ಧರ್ಮ ಹಿಂದೂ ಮತ್ತು ಮುಸ್ಲಿಂ ಮತಗಳನ್ನು ಮೀರಿದ ವಿವೇಕ ಮತ್ತು ವಿವೇಚನೆಯಾಗಿತ್ತು. ಆದರೆ ಬಹುಪಾಲು ಸಿಖ್‌ರಿಂದ ಕೂಡಿದ್ದ ಈ ಗುಂಪಿಗೆ ಗಾಂಧೀಜಿಯ ಯಾವ ವಿಶ್ಲೇಷಣೆಗಳೂ ಮನವರಿಕೆಯಾಗುವ ಲಕ್ಷಣಗಳಿರಲಿಲ್ಲ. ಮುಸ್ಲಿಂರು, ಈ ದೇಶದಲ್ಲಿ ಅಲ್ಪಸಂಖ್ಯಾತರು ಎಂಬುವ ಒಂದು ನೆಪವನ್ನಿಟ್ಟುಕೊಂಡು ಗಾಂಧೀಜಿ ನಿರಂತರವಾಗಿ ಮುಸ್ಲಿಂರ ಬೆಂಬಲಕ್ಕೆ ನಿಂತಿರುವುದು ಸಿಖ್ ಯುವಕರ ಆಕ್ರೋಶಕ್ಕೆ ಕಾರಣವಾಗಿತ್ತು. ಪಾಕಿಸ್ತಾನದೊಂದಿಗೆ ತೃಪ್ತವಾಗಿರದ ಈ ಮುಸ್ಲಿಂರು ಮುಂದೊಂದು ದಿನ ಭಾರತದ ಪ್ರಮುಖ ನಗರಗಳಾದ ಆಗ್ರಾ, ಅಜ್ಮೀರ, ಅಲಿಘಡ್ ಮತ್ತು ದೆಹಲಿಗಳನ್ನೂ ಕೇಳಲು ಹಿಂಜರಿಯಲಾರರು ಎನ್ನುವುದೇ

ಅವರ ವಾದ. "ಹಿಂಸೆಗೆ ಮುಸ್ಲಿಂರು ಕಾರಣವಾಗಿರುವಾಗ ಹಿಂದುಗಳಷ್ಟನ್ನೇ ಏಕೆ ಜರಿಯುತ್ತೀರಿ? ಇಷ್ಟೆಲ್ಲಾ ಅವಘಡಗಳು ಜರುಗಿದ ಮೇಲೂ ಮುಸ್ಲಿಂರನ್ನು ಏಕೆ ನಂಬುತ್ತೀರಿ? ಎನ್ನುವ ಸಿಖ್ ಯುವಕರ ಪ್ರಶ್ನೆ ಗಾಂಧಿಯ ಒಳಬೇನೆಗೆ ಕಾರಣವಾಗಿತ್ತು.

ಛಿದ್ರವಾಗುತ್ತಿದ್ದ ದೇಶ, ದಾರಿತಪ್ಪಿದ್ದ ಮಗ, ಸ್ವಾರ್ಥಪರವಾಗುತ್ತಿದ್ದ ರಾಜಕಾರಣ, ರಸ್ತೆ-ರಸ್ತೆಗಳಲ್ಲಿ ಅಮಾಯಕರ ಬಲಿ, ದೊಂಬಿ, ಲೂಟಿ, ಸ್ತ್ರೀ-ಮಾನಹರಣ, ಹೀಗೆ ಕುದಿಯುತ್ತಿದ್ದ ವರ್ತಮಾನವೆಂಬ ಬಾಣಲೆಯ ಪಕ್ಕದಲ್ಲಿ ನಿಂತಿದ್ದ ಗಾಂಧಿ ನಿರಾಯುಧ ಬಾಣಸಿಗನಾಗಿದ್ದನಷ್ಟೆ. ಮನುಷ್ಯನ ಹೃದಯ ಸೌಂದರ್ಯದಲ್ಲಿ ವಿಶ್ವಾಸ ಕಳೆದುಕೊಳ್ಳದ ಗಾಂಧೀ ಹೇಳಿದ್ದಿಷ್ಟೆ. "ಪಾಕಿಸ್ತಾನದಲ್ಲಿ ಹಿಂದೂಗಳನ್ನು ಅತ್ಯಂತ ಕ್ರೂರವಾಗಿ ನಡೆಸಿಕೊಳ್ಳಲಾಗುತ್ತಿದೆ ಎನ್ನುವುದನ್ನು ನಾನು ಬಲ್ಲೆ. ಆದರೆ ಆ ಕ್ರಿಯೆಗೆ ಇಲ್ಲಿ ಒಂದು ಪ್ರತಿಕ್ರಿಯೆಗೆ ತೊಡಗುವ ನಾನು ಅವರಿಗಿಂತಲೂ ನಿರ್ಲಜ್ಜನಾಗಬೇಕಾಗುತ್ತದೆ. ಪ್ರತಿಕಾರದಿಂದ ನಾವು ಏನನ್ನು ಸಾಧಿಸಲು ಸಾಧ್ಯವಿದೆ? ಉದಾಹರಣೆಗೆ ನನ್ನ ಬದುಕನ್ನೇ ನೋಡಿ. ನನ್ನ ಹಿರಿಯ ಮಗ ಹರಿಲಾಲ್ ಅನೇಕ ಸಾರಿ ಇಲ್ಲಿಗೆ ಬರುತ್ತಾನೆ. ಪ್ರತಿಸಾರಿಯು ಸಮಜಾಯಿಷಿ ನೀಡುತ್ತಾನೆ. ದುಷ್ಟರ ಸಂಗವನ್ನು ಬಿಡುತ್ತೇನೆ, ನಾನಿನ್ನು ಕುಡಿಯುವುದಿಲ್ಲ ಬಾಪು, ಎಲ್ಲ ದುಷ್ಟ ಚಟುವಟಿಕೆಗಳಿಂದಲೂ ದೂರವಿರುವ ನಿರ್ಧಾರ ಮಾಡಿದ್ದೇನೆ ಎಂದೇ ಹೇಳುತ್ತಾನೆ. ಆದರೆ ಅವನೆ ಆಡಿದ ಒಂದು ಮಾತನ್ನೂ ಆತನಿಗೆ ಇದುವರೆಗೆ ಒಮ್ಮೆಯೂ ಪಾಲಿಸಲು ಆಗಿಲ್ಲ; ಇಷ್ಟಾಗ್ಯೂ, ಇಂದು ಮತ್ತೇ ಆತ ಬಂದು ತನ್ನನ್ನು ತಾನು ಸುಧಾರಿಸಿಕೊಳ್ಳುವ ಮಾತುಗಳನ್ನು ಹೇಳುವುದಾದರೆ ನಾನು ಅವನ ಮೇಲೆ ಸಿಟ್ಟಿಗೇಳುವುದೆ? ನಾನು ಆತನನ್ನು ಧಿಕ್ಕರಿಸಲಾದೀತೆ? ಇಲ್ಲ ಖಂಡಿತವಾಗಿಯೂ ಅವನು ತನ್ನ ಮಾತನ್ನು ಉಳಿಸಿಕೊಳ್ಳುವಂತೆ ಪ್ರೋತ್ಸಾಹದ ಮಾತುಗಳನ್ನೇಳುವುದೇ ನನ್ನ ಧರ್ಮವಾಗಿದೆ. ಇದರಲ್ಲಿಯೇ ಆತನ ಸುಧಾರಣೆಯ ಆಶಾಕಿರಣವಿದೆ. ಹೀಗೆ ಭಾರತಕ್ಕೆ ನಿಷ್ಠರಾಗಿರುತ್ತೇವೆ ಎಂದು ಮುಸ್ಲಿಂರು ಹೇಳುತ್ತಿರುವವರೆಗೂ ಮುಸ್ಲಿಂರನ್ನು ನಂಬಬೇಕಾದುದು ನಮ್ಮ ಧರ್ಮವಾಗಿದೆ. ಇದರೊಂದಿಗೆ ಜಾಗರೂಕರಾಗಿರಬೇಕಾದುದೂ ಅವಶ್ಯಕವಾಗಿದೆ. ಇತ್ತೀಚೆಗೆ ಪಂಡಿತ್ ಪಂಥ್‌ರವರು ಉತ್ತರ ಪ್ರದೇಶದಲ್ಲಿ ಮುಸ್ಲಿಂರ ರಕ್ಷಣೆಯನ್ನು ಮಾಡಲಾಗುವುದು ಎಂದು ಹೇಳಿದ್ದಾರೆ. ಇದರ ಅರ್ಥ ನಿರಂತರವಾಗಿ ಹಿಂದೂಗಳನ್ನು ಉದ್ರೇಕಿಸುವ ಮುಸ್ಲಿಂ ಲೀಗ್‌ನ ನಾಯಕರು ಏನೆಲ್ಲ ಮಾಡಿದರೂ ಅವರನ್ನು ರಕ್ಷಿಸುವುದು ಎಂದರ್ಥವಲ್ಲ ಎಂದೂ ಸ್ಪಷ್ಟಪಡಿಸಿದ್ದಾನೆ. ಬಂಧುಗಳೇ ಜಾತಿಯ ಹುಚ್ಚುತನವನ್ನು ಮರೆತು ಈ ದೇಶ ಎಂದು ಬಾಳುವದು ಎನ್ನುವುದನ್ನು ನೋಡಲು ನಾನು ಕಾತುರನಾಗಿದ್ದೇನೆ. ನಮ್ಮ ಧರ್ಮಗಳು ಏನೇ ಆಗಿರಲಿ ನಮ್ಮ ಕ್ರಿಯೆ ಮಾತ್ರ ಭಾರತ, ಭಾರತೀಯತೆಯಾಗಿರಲಿ ಎಂದು ಸ್ಪಷ್ಟಪಡಿಸಿದ ಗಾಂಧಿ ದೊಂಬಿಯ ಆ ದಿನಗಳಲ್ಲಿ ಮಾಧ್ಯಮ ಮಿತ್ರರಿಗೆ, ಪತ್ರಿಕೆಯ ಸಾಂಪಾದಕರುಗಳಿಗೆ ಕೈ ಮುಗಿದು ಹೇಳಿದ್ದು ಇಷ್ಟೇ- "ಬಂಧುಗಳೇ ಕೋಟಿ ಕೋಟಿ ಭಾರತೀಯರ ಶಿಕ್ಷಣ ಉತ್ತಮ ಆಹಾರ, ಮೈ ತುಂಬಾ ಬಟ್ಟೆ, ನೆಮ್ಮದಿಯ ನಿದ್ರೆಗಾಗಿ ಒಂದು ಸೂರು, ನಿಮ್ಮ ಬರಹದ ಉದ್ದೇಶಗಳಾಗಲಿ, ಪರಸ್ಪರ ಹಿಂದೂ-ಮುಸ್ಲಿಂರ ಕಡಿದಾಟ ರೋಚಕದ ಸುದ್ದಿಗಳಾಗಿ ನಿಮ್ಮ ಪತ್ರಿಕೆಗಳಲ್ಲಿ ಎಂದೂ ಬಿತ್ತರಗೊಳ್ಳದಿರಲಿ."

ಗಾಂಧಿ ಆಕಾಶದೆತ್ತರಕ್ಕೆ ಬೆಳೆದಿದ್ದ. ಈ ಬೆಳವಣಿಗೆ ಒಂದು ಕಡೆಯಲ್ಲಿ ಸರಳ-ಸರಳ ಎನಿಸಿಕೊಂಡರೆ, ಇನ್ನೊಂದೆಡೆ ಸಾಮಾನ್ಯನಿಗೆ ತುಂಬಾ ಸಂಕೀರ್ಣವೆನ್ನಿಸುವ ಗಾಂಧಿಯನ್ನು ತೋರಿಸುತ್ತಿತ್ತು. ಗಾಂಧಿಯ ಈ ಅಂತಿಮ ಪ್ರತಿ ಹೆಜ್ಜೆಗೂ ಪ್ರಶ್ನೆಗಳು ಸಾಮಾನ್ಯವಾಗಿದ್ದವು. ಈ ಒಬ್ಬ ಗಾಂಧಿಯೇ ತಮ್ಮೆಲ್ಲಾ ಪ್ರಶ್ನೆಗಳಿಗೆ ನೈತಿಕ ಹೊಣೆಗಾರನಾಗುವುದು ಅಥವಾ ಹೊಣೆಗಾರನನ್ನಾಗಿಸುವುದು ತಪ್ಪು ಎಂದು ಯಾರಿಗೂ ಅನಿಸಲಿಲ್ಲ.

'ಬಾಂಬೆ ಕ್ರಾನಿಕಲ್' ಪತ್ರಿಕೆಯ ಸಂಪಾದಕರಾದ ಮಿ। ಎಸ್.ಎ. ಬ್ರಾಲ್ವಿಗೆ ಗಾಂಧಿ, ಹಿಂದಿ ಭಾಷೆಯೊಂದನ್ನೇ ರಾಷ್ಟ್ರ ಭಾಷೆಯಾಗಿಸುತ್ತಿರುವುದು ಇಷ್ಟವಿರಲಿಲ್ಲ. ಬದಲಾಗಿ ಉರ್ದು ಆ ಸ್ಥಳದಲ್ಲಿ ಯಾಕೆ ಬರಬಾರದು? ಎನ್ನುವ ಪ್ರಶ್ನೆ. ಕೆಲವರು ಭಾರತದ ರಾಷ್ಟ್ರಧ್ವಜದ ಮೂಲೆಯಲ್ಲಿ ಬ್ರಿಟಿಷ್ ಯೂನಿಯನ್ ಜೈಕನ್ನು ತೋರಿಸಬೇಕೆಂದು ಮತ್ತೆ ಕೆಲವರು ಬೇಡ ಎಂದು; ವಿಭಜನೆಯಾಗುತ್ತಿದ್ದ ಭಾರತ ಮತ್ತು ಪಾಕಿಸ್ತಾನ ಸೈನ್ಯದ ತುಕ್ಕಡಿಗಳಿಗೆ ಜನರಲ್ ವಿಲಿಯಂ ಸ್ಲಿಂ ಮತ್ತು ಜನರಲ್ ಫ್ರಾನ್ಸಿಸ್ ಟ್ಯೂಕರ್ ಮುಂದಾಳುಗಳಾಗಿರಬೇಕು ಎಂದು ಕೆಲವರು ವಾದಿಸಿದರೆ ಮತ್ತೆ ಕೆಲವರು ಇವರುಗಳು ಬೇಡವೇ ಬೇಡವೆಂದು; ಗೋಹತ್ಯೆ ನಿಷೇಧಿಸಬೇಕೆಂದು ಹಿಂದೂಗಳು ಮುಂದಾದರೆ ಅವುಗಳನ್ನು ಕಸಾಯಿಖಾನೆಯಲ್ಲಿಗಿಂತಲೂ ಕೆಟ್ಟದಾಗಿ ಜೀವಂತವಾಗಿ ನಡೆಸಿಕೊಳ್ಳುವುದಕ್ಕಿಂತಲೂ ಹತ್ಯೆ ಮಾಡುವುದರಲ್ಲಿ ತಪ್ಪೇನಿಲ್ಲ ಎನ್ನುವುದು ಮುಸ್ಲಿಂರ ವಾದ. ತಮ್ಮೊಳಗೇ ಇಷ್ಟೊಂದು ದ್ವಂದ್ವಗಳನ್ನಿಟ್ಟುಕೊಂಡು ಗಾಂಧಿಯೊಬ್ಬನಿಂದ ಒಂದೇ ಅಭಿಪ್ರಾಯ ಬರಬೇಕೆಂಬುದು ಮೂರ್ಖತನದ ಪ್ರಶ್ನೆ ಎಂದು ಯಾರಿಗೂ ಅನಿಸಲಿಲ್ಲ. ಆದರೆ ಗಾಂಧಿ ನಿರ್ಮೋಹಿಯಾಗಿದ್ದ. ಶ್ರೇಷ್ಠತೆಗೆ ಹೋರಾಡುವ ಪ್ರತಿಯೊಬ್ಬನೂ ಸಹನೆಯ ಪರಮೋಚ್ಚ ಹಂತವನ್ನು ಸಾಧಿಸಬೇಕೆನ್ನುವುದು ಗಾಂಧಿಯ ವಾದವಾಗಿತ್ತು. ಆತ ಈ ಅಂಧಕಾರದ ಮಧ್ಯ ಬೆಳಕಿಗಾಗಿ ತಡಕಾಡುತ್ತಿದ್ದ.



ಬಾಣಲೆ ಪಕ್ಕ ನಿರಾಯುಧ ಬಾಣಸಿಗ

೩

ಜುಲೈ 20, 1947ರ ರವಿವಾರ, ಗಾಂಧಿಯ ದುಗುಡವನ್ನು ಹೆಚ್ಚಿಸುವ ವಿಷಯಗಳನ್ನೇ ಹೊತ್ತು ತಂದಿತು. ಬುದ್ಧನ ನಾಡೆಂದೇ ಪ್ರಸಿದ್ಧವಾದ ಬರ್ಮಾದ ರಂಗೂನ್‌ನಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಯು ಆಂಗ್ ಸಾನ್ ಮತ್ತು ಅವರ ಅನುಚರರ ಕಗ್ಗೊಲೆಯಾಗಿತು. ಗಾಂಧಿ ಸತ್ತವರ ಆತ್ಮಕ್ಕೆ ಶಾಂತಿ ಕೋರಿ ಪ್ರಾರ್ಥನೆ ಮಾಡಿದ. ಕೊಲೆಗಡುಕರನ್ನು ಕ್ಷಮಿಸೆಂದು ದೇವರ ಮೊರೆ ಹೊಕ್ಕ. ಮನಃಪರಿವರ್ತನೆಗೆ ಖಡ್ಗ–ತುಪಾಕಿಗಳ ಅವಶ್ಯಕತೆಯಿಲ್ಲ, ಮನುಷ್ಯರನ್ನು ರಕ್ತದಾಹದಿಂದ ಮುಕ್ತಗೊಳಿಸಲು ಸುವಿಚಾರವೊಂದೇ ಸಾಕೆಂದ. ಆದರೆ ಈ ಪ್ರಾರ್ಥನೆ ಯಾರನ್ನಾದರೂ ತಲುಪಿತೆ? ಇದೇ ದಿನ ಮಧ್ಯಾಹ್ನ ಮುಸ್ಲಿಂ ಲೀಗ್‌ನ ಪತ್ರಿಕೆಯಾದ `The Dawn of Karachi'ಯ ಸಂಪಾದಕನೊಬ್ಬ ಈ ಗಾಂಧಿ ಹಿಂದೂ–ಮುಸ್ಲಿಂ ದಂಗೆಗಳ ಪ್ರಶ್ನೆ ಬಂದಾಗ ನೆಹರುವನ್ನು ರಕ್ಷಿಕೊಂಡು ಪದೇ ಪದೇ ಜಿನ್ನಾರೊಬ್ಬರನ್ನೇ ದೂಷಿಸುವುದು ಸರಿಯಲ್ಲ ಎಂದು ಕಟುವಾಗಿ ಟೀಕಿಸಿದ್ದು ಗಾಂಧಿಗೆ ತಿಳಿಯಿತು.

ಆದರೆ ಭಾರತದಲ್ಲಿ ಮುಸ್ಲಿಂರ ಮಾನ ಮತ್ತು ಆಸ್ತಿಗಳ ರಕ್ಷಣೆಯಂತೆಯೇ ಪಾಕಿಸ್ತಾನದಲ್ಲಿ ಹಿಂದುಗಳ ಮಾನ ಆಸ್ತಿಗಳ ರಕ್ಷಣೆಯಾಗಬೇಕೆನ್ನುವುದಷ್ಟೇ ಗಾಂಧಿಯ ಕಳಕಳಿಯಾಗಿತ್ತು. ವಿಭಜನೆ ಗಾಂಧಿಯ ಕನಸಲ್ಲೂ ಇರಲಾರದ ವಿಚಾರ, ಆದರೆ ಮುರಿದ ಮನೆ ಮುಂದೆ ಕುಳಿತು ಅಳುವಷ್ಟು ಸಮಯವಿರಲಿಲ್ಲ, ಆತನಿಗೆ ಬೇಡಾಗಿಯೂ ದೇಶದ ವಿಭಜನೆಯಾಗಿ ಹೋಗಿದೆ. ಎರಡು ಪ್ರತ್ಯೇಕ ರಾಷ್ಟ್ರಗಳಿಗೆ ಸಂಬಂಧಪಟ್ಟವರಾಗಿಯೂ ಹಿಂದೂ–ಮುಸ್ಲಿಂರು ಸೌಹಾರ್ದದಿಂದ ಬದುಕುವವರೆಗೂ ಹೋರಾಟ ಮಾಡುವುದೊಂದೆ ನಿಜವಾದ ಸತ್ಯಾಗ್ರಹಿಗೆ ಉಳಿದಿರುವ ಸನ್ಮಾರ್ಗ ಎಂದುಕೊಂಡಂತಿತ್ತು ಗಾಂಧಿ.

ಈಗ ಗಾಂಧಿಗೆ 78. ಬಳಲಿಕೆಯರಿಯದ ದೇಹ ಕೆಲವೊಮ್ಮೆ ನಸುಕಿನ 4 ಗಂಟೆಯವರೆಗೂ ಪತ್ರಗಳಿಗೆ ಉತ್ತರಿಸುವುದರಲ್ಲಿಯೇ ತೊಡಗಿಕೊಂಡಿರುತ್ತಿತ್ತು. ತನ್ನ ಕೊನೆಯ ದಿನಗಳಲ್ಲಿ ಆತ ಅನೇಕರಿಗೆ ಬರೆದ ಪತ್ರಗಳಲ್ಲಿ ಮತ್ತೆ ಮತ್ತೆ ಹೇಳಿದ್ದು– ``You should copy my virtues, but not my errors.'' ಈ ವೇಳೆಯಲ್ಲಿ ಗಾಂಧಿ ಬರೆದ ಅನೇಕ ಪತ್ರಗಳಲ್ಲಿ ತನ್ನ ಅನುಯಾಯಿಗಳೇ ತನ್ನ ವಿರುದ್ಧ ಹೋಗಿ ಪರಸ್ಪರ ಮೋಸಗೊಳಿಸುವ ಕ್ರಿಯೆಯಲ್ಲಿ ತೊಡಗಿರುವುದನ್ನು ಸೂಚಿಸಿದ್ದಾನೆ. ಅವನೊಂದು ಪತ್ರದಲ್ಲಿ ಬರೆಯುತ್ತಾನೆ– "ಮೂವತ್ತು ವರ್ಷಗಳಿಂದ ನಾವು ನಡೆಯಿಸಿಕೊಂಡು ಬಂದ ಈ ಹಿಂಸೆಯ ವಿರುದ್ಧದ ಹೋರಾಟ ಹೆಸರಿಗೆ ಮಾತ್ರ ಅಹಿಂಸಾತ್ಮಕ ಚಳುವಳಿಯಾಗಿತ್ತು. ನಿಜವಾದ ಅರ್ಥದಲ್ಲಿ ಅದು ನಮ್ಮ ಎದೆಗಳ ಕದಗಳನ್ನು ತೆರೆದೆ ಇಲ್ಲ. ಅಂತೆಯೇ ಅದು ದೇಶ ವಿಭಜನೆ, ಹಿಂದೂ–ಮುಸ್ಲಿಂರ ಕೊಲೆಗಳಲ್ಲಿ ಅಭಿವ್ಯಕ್ತಗೊಂಡಿದೆ." ಗಾಂಧಿ ಈ ಸಂದರ್ಭಗಳಲ್ಲಿ ಬರೆದ ಪತ್ರಗಳಲ್ಲಿ ಚರ್ಚಿಸಿದ ವಿಷಯ ಮತ್ತು ಸಂಬಂಧಗಳ ವ್ಯಾಪ್ತಿ ತುಂಬಾ ದೊಡ್ಡದು. ಹತ್ತಿರದ ಸಂಬಂಧಿಗಳು, ಕಾರ್ಯಕರ್ತರು, ಹೊಸಬರು, ಹಳಬರು, ಭಿನ್ನ ದೇಶಗಳ ರಾಜಕೀಯ ಮುಖಂಡರು, ಎಲ್ಲರಿಗೂ ಪತ್ರಗಳನ್ನು ಬರೆದಿದ್ದಾರೆ. ಗಾಂಧಿ ಮಾಡುತ್ತಿದ್ದುದು ದಿನಕ್ಕೆ ಕನಿಷ್ಠ ಸಾವಿರದಿಂದ–ಎರಡು ಸಾವಿರ ಪದಗಳ ನಿರಂತರ ದಾಖಲಾತಿ. ಇವೆಲ್ಲವುಗಳ ಮಧ್ಯದಲ್ಲೂ ಗಾಂಧಿಯ ಸಾಯಂಕಾಲದ ಪ್ರಾರ್ಥನೆ ಅಭಾದಿತವಾಗಿತ್ತು.

21 ಜುಲೈದ ಸಾಯಂಕಾಲದ ಪ್ರಾರ್ಥನೆಯಲ್ಲಿ ಅನುಯಾಯಿ ಒಬ್ಬ ಕೇಳಿದ, "ನೂರಾರು ವರ್ಷಗಳಿಂದ ಸಂಪಾದಿಸಿದ ಆಸ್ತಿಯನ್ನು ಭೂಮಿ, ಬಂಧುಗಳನ್ನು ಬಿಟ್ಟು ಹಿಂದೂಗಳೇ ಪಾಕಿಸ್ತಾನವನ್ನು ಬಿಟ್ಟು ಬನ್ನಿ ಎನ್ನುವ ನಿಮ್ಮ ಕರೆಯಲ್ಲಿ ಯಾವ ಕಾಳಜಿಯಿದೆ ಗಾಂಧೀಜಿಯವರೆ? ನಿಮ್ಮನ್ನು ನೀವು ವ್ಯಾವಹಾರಿಕ ವಿಚಾರವಾದಿ ಎಂದುಕೊಳ್ಳುವುದರಲ್ಲಿ ಯಾವ ಅರ್ಥವಿದೆ? ಈಗ ನಡೆದಿರುವುದೆಲ್ಲವೂ ಅಮಾನವೀಯವಲ್ಲವೇ? ಹಾಡುಹಗಲೆ ನಮ್ಮನ್ನು ದೋಚಿ ಕೊಲೆ ಮಾಡುವವರ ಮುಂದೆ ನಿಮ್ಮ ಅಹಿಂಸವಾದ ಯಾವ ಸಮಾಧಾನವಾದೀತು?" ಗಾಂಧಿಗೆ ಕ್ಷಣಕಾಲ ಇಂತ ಪ್ರಶ್ನೆಗಳಿಗೆ ಏನಂತ ಉತ್ತರಕೊಡುವುದು ಅಥವಾ ಭಾವನಾತ್ಮಕವಾಗಿ ಪ್ರಕ್ಷುಬ್ಧಗೊಂಡವರಿಗೆ ತನ್ನ ಉತ್ತರ ಸಮಾಧಾನ ತರಲು ಸಾಧ್ಯವೇ? ಎನ್ನುವುದೇ ಪ್ರಶ್ನೆಗಳು. ಪದೇ ಪದೇ ಈಗ ಗಾಂಧಿ ಅಂದುಕೊಳ್ಳುತ್ತಿದ್ದುದು ಇಷ್ಟೇ. ಈ ಪ್ರಶ್ನೆಗಳಿಂದ ತಾನು ಜಾಗೃತನಾಗಬೇಕು. ತನ್ನದೇ ಸರಿ ಎಂಬ ಭ್ರಮೆಯಲ್ಲಿ ತಾನು ಸಾಯಬಾರದು, ತಾನೆಂದೂ ಪರಿಪೂರ್ಣನೆಂದು

ತಿಳಿದುಕೊಳ್ಳಬಾರದು. ಹಾಗಂತ ತನ್ನ ಯಾವ ಸೋಲು ತನ್ನನ್ನು ಕೈಚೆಲ್ಲಿ ಕುಳಿತುಕೊಳ್ಳುವಷ್ಟು ನಿರ್ವೀರ್ಯನನ್ನಾಗಿಸಬಾರದು.

ಓಶೋ ಬರೆಯುತ್ತಾನೆ ನಮಗೆ ಸಾವಿನ ನಿಜವಾದ ದರ್ಶನವಾಗುವುದು ನಮ್ಮ ಆತ್ಮಕ್ಕೆ, ಮನಸ್ಸಿಗೆ ಹತ್ತಿರವಾದವರೊಬ್ಬರು ತೀರಿಹೋದಾಗ ಮಾತ್ರ. ಅಲ್ಲಿಯವರೆಗೂ ಸಾವು ಸುಮ್ಮನೆ ಸುಳಿಯುವ ತೆಳುಗಾಳಿಯಷ್ಟೆ. ಮಹಾತ್ಮನಲ್ಲದ ಈ ಗಾಂಧಿಗೂ ಬಹುತೇಕ ಸಾವಿನ ಮೊದಲ ದರ್ಶನವಾದದ್ದು ಮಗನಿಗಿಂತಲೂ ಹೆಚ್ಚಾಗಿದ್ದ ಮಹಾದೇವ ದೇಸಾಯಿ ತೀರಿಕೊಂಡಾಗ. 1944ರ ಆಸುಪಾಸಿನಲ್ಲಿ ಜರುಗಿದ ಈ ಘಟನೆಗೆ ಸಮಾಧಾನವನ್ನು ಹುಡುಕಿ ಗಾಂಧಿ ಆಗ ಮಾರ್ಕ್ಸ್, ಯಂಗೆಲ್ಸ್, ಲೆನಿನ್, ಷೇಕ್ಸ್‌ಪಿಯರುಗಳ ಬರಹಗಳನ್ನು ಓದಲಾರಂಭಿಸಿದ. ಪ್ರೀತಿಯ ಮಡದಿ ಕಸ್ತೂರಿಬಾಳಿಗೆ ನಿರಂತರ ಪಾಠ–ಪ್ರವಚನವನ್ನು ಮಾಡುವುದರ ಮೂಲಕ ದುಃಖದಿಂದ ಹೊರಬರಲು ಯತ್ನಿಸಿದ. ಆದರೆ ಎಲ್ಲವು ವಿಫಲ ಯತ್ನಗಳೆ. Things were falling apart. The falcon was not listening to the falconer.

ಗಾಂಧಿ ಎಂಬ ದೊಡ್ಡ ಬದುಕಿನ ಮನಸ್ಸನ್ನೇ ಆಕ್ರಮಿಸಿಕೊಂಡಿದ್ದ ಮಹಾದೇವ ದೇಸಾಯಿಯ ಸಾವು ಕಸ್ತೂರಿಬಾಳಿಗಂತೂ ಮತ್ತೆಂದೂ ಸರಿಪಡಿಸಲಾಗದ ಆಘಾತವಾಗಿತ್ತು. ಸತ್ಯಾಗ್ರಹ, ಸ್ವಾತಂತ್ರ್ಯ, ಅಹಿಂಸೆ, ಸಾಮರಸ್ಯ ಎಂಬ ಆದರ್ಶಗಳ ಹುಚ್ಚು ಹೊಳೆಯಲ್ಲಿ ಕೊಚ್ಚಿ ಹೋಗುತ್ತಿದ್ದ ಗಾಂಧಿಯನ್ನು ಅಲ್ಲಲ್ಲಿ ತಡೆದು ನಿಲ್ಲಿಸಿ, ಅವನೊಳಗಿದ್ದ ಗಾಂಧಿ ಎಂಬ ಸಾಮಾನ್ಯ ಮನುಷ್ಯನನ್ನ ಮತ್ತೆ ಮತ್ತೆ ಮಾತಾಡಿಸಿದವಳು ಕಸ್ತೂರಿ ಬಾ. ಮಹಾದೇವ ದೇಸಾಯಿಯ ಸಾವಿನಿಂದ ಓಡಿ ಹೋಗಿ ಸಾಹಿತ್ಯ ಮತ್ತು ಶಿಕ್ಷಣದ ಆಸರೆ ಬಯಸಿದ್ದ ಗಾಂಧಿಯನ್ನು ಕಸ್ತೂರಿ ಬಾ ಎಳೆದು ತಂದು ಸಾವಿನೊಂದಿಗೆ ಮುಖಾಮುಖಿಯಾಗಿಸಿದಳು. ಈಗ ಆತನ ಬದುಕೇ ಬಾ ಆಗಿತ್ತು. ಇದ್ದ ಹಿರಿಯ ಮಗ ಹರಿಲಾಲ್ ಆತನ ಪಾಲಿಗೆ ಇಲ್ಲವೆನಿಸಿಬಿಟ್ಟಿದ್ದ. ಈಗ ಭೌತಿಕವಾಗಿ ನಶಿಸಿದ್ದ ಮಾನಸಿಕ ಪುತ್ರ ಮಹಾದೇವ ದೇಸಾಯಿ ಗಾಂಧಿಯ ನೆನಪುಗಳನ್ನೆಲ್ಲಾ ಆವರಿಸಿಬಿಟ್ಟಿದ್ದ. ಸ್ವಾತಂತ್ರ್ಯ ಸಂಗ್ರಾಮದ ಬಿರುಸಿನ ಈ ದಿನಗಳಲ್ಲಿ ಗಾಂಧಿ ತನ್ನದೆನ್ನುವುದನ್ನು ಹೇಳಿಕೊಳ್ಳುವ ಎಲ್ಲ ಸ್ವಾತಂತ್ರ್ಯವನ್ನೂ ಕಳೆದುಕೊಂಡುಬಿಟ್ಟಿದ್ದ.

ಆದರೆ ಇಷ್ಟರಲ್ಲಿಯೇ ಕಸ್ತೂರಿ ಬಾ ಹಾಸಿಗೆ ಹಿಡಿದಳು. ಆಗಾಖಾನ್ ಅರಮನೆಯಲ್ಲಿ ಬಂಧಿಯಾಗಿರುವಾಗಲೇ ರೋಗಗ್ರಸ್ತಳಾದ ಬಾ ಆರೋಗ್ಯ ನೋಡಿಕೊಳ್ಳುತ್ತಿದ್ದ ಪೂನಾದ, ಡಾ.ದೀನ್ ಷಾ ಮೆಹ್ತಾ ಅವರನ್ನು ಕರೆಯಿಸಿಕೊಳ್ಳುವಷ್ಟು ಸ್ವಾತಂತ್ರ್ಯ ಗಾಂಧಿಗಿರಲಿಲ್ಲ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಗಾಂಧಿ ಎಂಬ ವ್ಯಕ್ತಿಯ ಸ್ವಾತಂತ್ರ್ಯವೇ ಪರಾತಂತ್ರವನ್ನು ಅನುಭವಿಸುತ್ತಿತ್ತು. ಈ ತ್ರಿಶಂಕು ಸ್ಥಿತಿಯಲ್ಲಿ ವಿಹ್ವಲನಾಗಿದ್ದ ಗಾಂಧಿಯನ್ನು ಕಸ್ತೂರಿ ಬಾ ನೋಡುವಂತಿರಲಿಲ್ಲ. ಗಂಡನ ತೊಡೆಯ ಮೇಲೆಯೇ ಸಾಯಬೇಕೆಂಬ ಮಹದಾಸೆಯನ್ನಿಟ್ಟುಕೊಂಡಿದ್ದ ಕಸ್ತೂರಿ ಬಾಳಿಗೆ ಕೊನೆಗೆ ಗೆಲುವು ಸಿಕ್ಕಿತು. 1944ರ ಫೆಬ್ರವರಿ 22ನೇ ತಾರೀಖು ಅವಳು ಸ್ವತಂತ್ರಳಾದಳು. 62 ವರ್ಷದ ಗಾಂಧಿಯೊಂದಿಗಿನ ದೀರ್ಘ ದಾಂಪತ್ಯದ ದಾರಿಯನ್ನು ಕ್ರಮಿಸಿದ್ದ ಕಸ್ತೂರಿ ಬಾ ನಿಧನಳಾದಳು. 'ಬಾ' ತನ್ನ

ಸ್ವಾತಂತ್ರ್ಯವನ್ನು ಗಳಿಸಿಬಿಟ್ಟಳು. ಮಹಾತ್ಮ ಎಂದು ಪೂಜಿಸಲ್ಪಟ್ಟ ಕೋಟಿ-ಕೋಟಿ ಭಾರತೀಯರ ಮಧ್ಯ ಗಾಂಧಿ ಇಂದು ಶಬ್ದಶಃ ಒಂಟಿಯಾದ.

ಗಾಂಧಿ ಎಂಬ ಗಾಂಧಿಯೂ ಹೆಂಡತಿಯ ಚಿತೆಗೆ ಬೆಂಕಿಯಿಟ್ಟು 6 ಗಂಟೆಗಳವರೆಗೂ ಉರಿಬಿಸಿಲಿನಲ್ಲಿ ಒಂದು ದೊಣ್ಣೆಯನ್ನು ಊರಿಕೊಂಡು ನಿಂತಿದ್ದನಲ್ಲ ಆಗ ಅವನು ಮನುಷ್ಯನಾಗಿದ್ದ. ಸ್ಮಶಾನದ ಗಿಡದ ಕೆಳಗೆ ಕುಳಿತು ಪಂಚಭೂತಗಳಲ್ಲಿ ಲೀನವಾಗುತ್ತಿದ್ದ ಕಸ್ತೂರಿಬಾಳನ್ನೇ ಎವೆಯಿಕ್ಕದೆ ಗಮನಿಸುತ್ತಿದ್ದನಲ್ಲ ಆಗ ಆತ ಮನುಷ್ಯನಾಗಿದ್ದ. 'ಬಾ ಇಲ್ಲದ ಬದುಕನ್ನೇ ನಾನು ಊಹಿಸಿಕೊಳ್ಳಲಾರೆ. ಅವಳು ನನ್ನದೇ ಅಂಗವಾಗಿಬಿಟ್ಟಿದ್ದಳು. ಅವಳ ಸಾವು ನನ್ನ ಬದುಕಿನಲ್ಲಿ ಶಾಶ್ವತವಾದ ಕಂದರವನ್ನು ಬಿಟ್ಟು ಹೋಗಿದೆ' ಎನ್ನುವಾಗ ಗಾಂಧಿ ಮನುಷ್ಯನಾಗಿದ್ದ. ಬಾ ಬಳಸುತ್ತಿದ್ದ ಬಟ್ಟೆ, ಈ ಗಾಂಧಿಗಾಗಿ ಕಾಯುತ್ತಲೇ ನಿದ್ರೆ ಹೋಗುತ್ತಿದ್ದ ಮೇಜು, ಆಗಾಗ ಕೊಡುತ್ತಿದ್ದ ಎಚ್ಚರಿಕೆಗಳು ಗಾಂಧಿಯನ್ನು ಗಾಂಧಿ ಎಂಬ ಮನುಷ್ಯನಾಗಿಸಿಬಿಟ್ಟಿದ್ದವು. ತಾನೆಂದೋ ಘೋಷಿಸಿಕೊಂಡಿದ್ದ ಬ್ರಾಹ್ಮಚರ್ಯವನ್ನು ಕಸ್ತೂರಿಬಾ ಪೋಷಿಸಿಕೊಂಡು ಬಂದಿರುವುದನ್ನು ನೆನಪಿಸಿಕೊಂಡರೆ ಗಾಂಧಿ ಮನುಷ್ಯನಾಗುತ್ತಿದ್ದ.

ಯಾರೇ ಇರಲಿ, ಬದುಕುವುದು, ಅದೂ ನೆನಪುಗಳ ಹೊರೆ ಹೊತ್ತಿಕೊಂಡು ಈ ಬದುಕನ್ನು ಸವೆಸುವುದು ಇತಿಹಾಸ ಓದಿದಷ್ಟು ಸರಳವಲ್ಲ. ಚಳುವಳಿಯ ಪುಟಗಳಲ್ಲಿ ಗಾಂಧಿಯನ್ನು ಓದುತ್ತಲೇ ಗಾಂಧಿ ಎಂಬ ಮನುಷ್ಯನಿಗೆ ಇಂಥ ಒಂದು ಅನ್ಯಾಯವನ್ನು ನಾವು ಮಾಡಿದೆವೆನೋ ಎಂದು ನನಗೆ ಅನೇಕ ಬಾರಿ ಅನಿಸಿದೆ. ಮಾರ್ಚ್ 9ನೇ ತಾರೀಖು ಲಾರ್ಡ್ ವೇವೆಲ್ ಅವರಿಗೆ ಗಾಂಧಿ ಬರೆದ ಪತ್ರವನ್ನು ಪ್ರೊಫೆಸರ್ ಆರ್.ಎಲ್. ಅನಂತರಾಮಯ್ಯನವರು ತುಂಬಾ ಚೆನ್ನಾಗಿ ಅನುವಾದಿಸಿದ್ದಾರೆ. ಇದು ಮಹಾತ್ಮ ಗಾಂಧಿ ಬರೆದ ಪತ್ರವಲ್ಲ, ಗಾಂಧಿ ಬರೆದ ಪತ್ರ. ದ್ವಂದ್ವಗಳ ತಿರುಗಣೆಯಲ್ಲಿ ಸಿಲುಕಿದ ಹಡಗಿನಂತಾಗಿದ್ದ ಗಾಂಧಿ ಬರೆದ ಪತ್ರ. "ನನ್ನ ಪತ್ರಕ್ಕೆ ತಪ್ಪದೇ ಉತ್ತರ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸುತ್ತೇನೆ. ಮೊದಲನೆಯದಾಗಿ, ನನ್ನ ಪತ್ನಿಯ ನಿಧನಕ್ಕಾಗಿ ತಾವು ಮತ್ತು ಲೇಡಿ ವೇವಲ್ ಅವರೂ ಕಳಿಸಿದ ಸಂತಾಪಕ್ಕಾಗಿ ಕೃತಜ್ಞತಾಪೂರ್ವಕ ವಂದನೆಗಳು. ಅವಳಿಗಾಗಿಯೇ ಬದುಕಿ ಸಂಕಟಪಡುವುದಕ್ಕಿಂತ ಬಿಡುಗಡೆ ತರುವ ಮರಣ ಮೇಲೆಂದು ನಾನು ಸಾವನ್ನು ಸ್ವಾಗತಿಸಿದ್ದೇನಾದರೂ ಅದು ಘಟಿಸುತ್ತಿಲ್ಲ.

ಈಗ ನನಗಾಗಿರುವ ನಷ್ಟ ಮಾತ್ರ ನಾನು ಯೋಚಿಸಿದಷ್ಟೂ ಅಪಾರವಾಗಿದೆ. ನಾವು ಎಲ್ಲರಂತೆ ಸಾಮಾನ್ಯ ದಂಪತಿಗಳಾಗಿರಲಿಲ್ಲ. 1906ರಲ್ಲಿ ಪ್ರಜ್ಞಾಪೂರ್ವಕವಲ್ಲದ ಪರೀಕ್ಷೆಗಳ ನಂತರ, ಪರಸ್ಪರ ಸಮ್ಮತಿಯಿಂದ ನಾವು ಬ್ರಹ್ಮಚರ್ಯವನ್ನು ಬದುಕಿನ ನಿಯಮವಾಗಿ ಆರಿಸಿಕೊಂಡೆವು. ಇದು ಹಿಂದೆಂದಿಗಿಂತಲೂ ಮಿಗಿಲಾಗಿ ನಮ್ಮನ್ನು ಒಟ್ಟಾಗಿ ಬಂಧಿಸಿತು ಎಂಬುದು ನನಗೆ ತುಂಬ ಸಂತೋಷ ಕೊಡುವ ಸಂಗತಿ. ನಾವು ಇಬ್ಬರಾಗಿರಲೇ ಇಲ್ಲ. ನಾನು ಅಪೇಕ್ಷಿಸದಿದ್ದರೂ ಅವಳು ನನ್ನಲ್ಲಿ ತನ್ನನ್ನು ಲೀನವಾಗಿಸಿಕೊಂಡಳು. ಇದರ ಫಲ ಅವಳು ನಿಜವಾಗಿಯೂ ನನ್ನ ಉತ್ತಮಾರ್ಧವಾದದ್ದು. ಕಸ್ತೂರಿ ಬಾ ಮೊದಲಿನಿಂದಲೂ

ಗಟ್ಟಿ ಮನಸ್ಸಿನವಳು. ಮೊದಮೊದಲಲ್ಲಿ ಅದನ್ನು ನಾನು ಹಠಮಾರಿತನ ಎಂದು ತಪ್ಪಾಗಿ ಭಾವಿಸಿದ್ದೆ. ಆದರೆ ಆ ದೃಢಚಿತ್ತವೇ ಅಹಿಂಸಾತ್ಮಕ ಅಸಹಕಾರ ತತ್ವದ ಕಲೆ ಹಾಗೂ ಆಚರಣೆಗಳಲ್ಲಿ ನನ್ನ ಗುರುವಾಗಲು ಅವಳಿಗೆ ಸಾಮರ್ಥ್ಯ ಕೊಟ್ಟಿತು. ಈ ಆಚರಣೆ ಮೊದಲು ನನ್ನ ಕುಟುಂಬದವರಿಂದಲೇ ಪ್ರಾರಂಭವಾಯಿತು. ಅದನ್ನು 1906ರಲ್ಲಿ ರಾಜಕೀಯ ಕ್ಷೇತ್ರಕ್ಕೆ ಪ್ರವೇಶ ಮಾಡಿದಾಗ ಇನ್ನೂ ಸಮಗ್ರವಾದ, ವಿಶೇಷವಾಗಿ ಟಂಕಿಸಿದ ಸತ್ಯಾಗ್ರಹ ಎಂಬ ಪದದಿಂದ ಪ್ರಚುರ ಮಾಡಲಾಯಿತು. ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಬಂಧನಗಳ ಸರಣಿ ಪ್ರಾರಂಭವಾದಾಗ ಕಸ್ತೂರಿ ಬಾ ನಾಗರಿಕ ಹೋರಾಟಗಾರರಲ್ಲಿ ಒಬ್ಬಳಾಗಿದ್ದಳು. ನನಗಿಂತ ಹೆಚ್ಚು ದೈಹಿಕ ಕಷ್ಟಗಳನ್ನು ಆಕೆ ಅನುಭವಿಸಿದ್ದಾಳೆ. ಅನೇಕ ಸಲ ಬಂಧನಕ್ಕೊಳಗಾಗಿದ್ದರೂ ಕೂಡ ಅವಳು ಈ ಸಾರಿಯ ನನ್ನ ಬಂಧನದ ರೀತಿಯನ್ನು ಒಪ್ಪಿರಲಿಲ್ಲ. ದೈನಂದಿನ ಸೌಲಭ್ಯಗಳೆಲ್ಲ ದೊರೆತಿದ್ದುದೇ ಅದಕ್ಕೆ ಕಾರಣ. ನನ್ನ ಹಾಗೂ ಇತರ ಅನೇಕರ ಬಂಧನ, ಅದರ ಹಿಂದೆಯೇ ಆಕೆಯ ಬಂಧನ, ಇವು ಆಕೆಗೆ ಆಘಾತ ಉಂಟು ಮಾಡಿದ್ದವು. ಮನಸ್ಸಿನಲ್ಲಿ ಕಹಿ ಬೆಳೆಸಿದ್ದವು. ನನ್ನ ಬಂಧನಕ್ಕೆ ಅವಳು ಎಷ್ಟು ಮಾತ್ರಕ್ಕೂ ಸಿದ್ಧವಾಗಿರಲಿಲ್ಲ. ನಾನು ಅಹಿಂಸಾತ್ಮಕ ಹೋರಾಟ ನಡೆಸುವವನು. ನಾನಾಗಿಯೇ ಬಂಧನಕ್ಕೆ ಒಳಗಾಗುವವರೆಗೆ ಅವರು ನನ್ನನ್ನು ಬಂಧಿಸುವುದಿಲ್ಲ ಎಂದು ಆಕೆಗೆ ನಾನು ಭರವಸೆ ಕೊಟ್ಟಿದ್ದೆ. ಆಕೆಗಾದ ಆಘಾತ ಎಷ್ಟು ತೀವ್ರವಾಗಿತ್ತೆಂದರೆ, ಬಂಧಿತಳಾದೊಡನೆಯೇ ಆಕೆಗೆ ತೀವ್ರವಾದ ಅತಿಸಾರ ಉಂಟಾಯಿತು. ಆಕೆಯೊಂದಿಗೆ ಬಂಧಿತವಾಗಿದ್ದ ಡಾ॥ ಸುಶೀಲಾ ನಯ್ಯರ್ ಒಂದು ವೇಳೆ ಸರಿಯಾದ ಚಿಕಿತ್ಸೆ ನೀಡದೆ ಹೋಗಿದ್ದರೆ ಈ ಶಿಬಿರಕ್ಕೆ ಬಂದು ನನ್ನನ್ನು ಕೂಡಿಕೊಳ್ಳುವ ಮೊದಲೆ ಬಾ ಸತ್ತು ಹೋಗಿರುತ್ತಿದ್ದಳು. ಇಲ್ಲಿ ನನ್ನ ಸಾನಿಧ್ಯ ಅವಳಿಗೆ ಸಮಾಧಾನವನ್ನು ತಂದಿತು. ಮುಂದೆ ಯಾವುದೇ ಚಿಕಿತ್ಸೆಯಿಲ್ಲದೆ ವ್ಯಾಧಿ ಶಮನವಾಯಿತು. ಆದರೆ ಕಹಿ ಕಳೆಯಲಿಲ್ಲ. ತೀವ್ರವಾದ ವಿಷಾದದಿಂದಾಗಿ ನಿಧಾನವಾಗಿ ಯಾತನೆಯಿಂದ ಒಳಗೇ ಆಕೆಯ ದೇಹ ಕ್ಷಯಿಸಿತು."

ಬಾಳಿನ ಮುಸ್ಸಂಜೆಯಲ್ಲಿ ಹೀಗೆ ಗಾಂಧಿ ಬೆತ್ತಲಾಗುತ್ತ ಹೊರಟ. 'ಬರಿಗೈ ಫಕೀರನೆಂಬ' ಒಂದು ಸಾಮಾನ್ಯ ವಿಶೇಷಣವೂ ಅವನಿಗೆ ಹೊರೆಯಾಗಲಾರಂಭಿಸಿತ್ತು. ಹದಗೆಟ್ಟು ಹೋಗಿದ್ದ ದೇಶದ ಸಾಮಾಜಿಕ, ರಾಜಕೀಯ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಿಂದಾಗಿ ಮನಸ್ಸುಗಳು ವಕ್ರವಾಗುತ್ತ ಸಾಗಿದ್ದವು. ಮನೆಯಲ್ಲಿ ಹೆಂಡತಿಯೊಂದಿಗೆ ಸಾಮರಸ್ಯವನ್ನೋ, ಅಧಿಕಾರವನ್ನೋ ಸಾಧಿಸಲಾಗದ ಎಂಥ ರಣಹೇಡಿಯೂ ಗಾಂಧಿಯ ಲೋಪದೋಷಗಳನ್ನು ಓದುವಷ್ಟು, ಆ ಕುರಿತು ಪ್ರಶ್ನೆಗಳನ್ನು ಕೇಳುವಷ್ಟು ಸ್ವತಂತ್ರನಾಗಿಬಿಟ್ಟಿದ್ದ. ಸಮಗ್ರ ಭಾರತದ ಪ್ರತಿಯೊಬ್ಬ ಪ್ರಜೆಯನ್ನು ಪ್ರತಿನಿಧಿಸಬೇಕೆಂಬ ಗಾಂಧಿಯ ಅಸೆ ಈಗ ಅವನಿಗೆ ತುಂಬಾ ದುಬಾರಿಯಾಗಿ ಪರಿಣಮಿಸಿತ್ತು. ಕಸ್ತೂರಿ ಬಾಳ ನಿಧನದೊಂದಿಗೆ ಗಾಂಧಿ ಸಿಕ್ಕ ಸಿಕ್ಕವರ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲಾಗದೆ ತಳಮಳಿಸುತ್ತಿದ್ದ. ಜನರ ಪ್ರಶ್ನೆಗಳಿಗೆ ಗಾಂಧಿಯ ವೈಯಕ್ತಿಕ ಬದುಕೂ ಹೊರತಾಗಿರಲಿಲ್ಲ. ಬಾ ಮತ್ತು ಮಹದೇವ ದೇಸಾಯಿಯ ಸಾವೂ ಹೊರತಾಗಿರಲಿಲ್ಲ.



ಮಹಾದೇವನನ್ನು ಮರೆತ ಮಹಾತ್ಮ

೪

ತನ್ನ ಮಾನಸ ಪುತ್ರನೆಂದು ಹೇಳಿಕೊಳ್ಳುತ್ತಿದ್ದ ಮಹಾದೇವ ದೇಸಾಯಿಯ ಬಗೆಗೆ ಗಾಂಧಿಗೆ ಇದ್ದ ಪ್ರೀತಿಯನ್ನು ಜನರು ಪ್ರಶ್ನಿಸಲು ಆರಂಭಿಸಿದರು. ಕಸ್ತೂರಿಬಾಳ ನಿಧನದ ನಂತರ ಅವಳ ಹೆಸರಿನಲ್ಲಿ ಒಂದು ಕೋಟಿ ಇಪ್ಪತ್ನಾಲ್ಕು ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿ ‘ಕಸ್ತೂರಿಬಾ ಸ್ಮಾರಕ ವಿಶ್ವಸ್ತ ನಿಧಿ’ಯ ಸ್ಥಾಪನೆ ಮಾಡಿದ್ದು, ಗಾಂಧಿಯೇ ಅದರ ಅಧ್ಯಕ್ಷನೂ ಆಗಿದ್ದ. ಹೆಂಡತಿಯ ಸ್ಮರಣಾರ್ಥ ಇಷ್ಟನ್ನು ಮಾಡಿದ ಗಾಂಧಿ ಮಹಾದೇವ ದೇಸಾಯಿ ಅವರ ಹೆಸರಿಗೂ ಏನಾದರೂ ಮಾಡಬಹುದಿತ್ತಲ್ಲ? ತನ್ನ ಇಡೀ ಬದುಕನ್ನು ನೆರಳಿನಂತೆ ತನ್ನನ್ನು ಹಿಂಬಾಲಿಸುತ್ತ ಕಳೆದ ಮಹಾದೇವ ದೇಸಾಯಿಯ ಹೆಸರು ಮುಂದೊಮ್ಮೆ ಇತಿಹಾಸದ ನಾಗಾಲೋಟದಲ್ಲಿ ಮರೆತು ಬಿಡಬಹುದಾದ ಹೆಸರಾಗಬಹುದು ಎನ್ನುವ ಪ್ರಶ್ನೆ ಗಾಂಧಿಗೇಕೆ ಕಾಡಲಿಲ್ಲ? ಮನೆಮಠಗಳನ್ನು ತೊರೆದು, ಗಾಂಧಿಯ ಮಾತು, ಚಳುವಳಿ, ಹೋರಾಟಗಳೆಲ್ಲವುಗಳನ್ನು ದಾಖಲಿಸಿಕೊಳ್ಳುತ್ತ, ಅದನ್ನೇ ತನ್ನ ಸಂಸಾರವನ್ನಾಗಿ ಮಾಡಿಕೊಂಡಿದ್ದ ಮಹಾದೇವ ದೇಸಾಯಿಗಾಗಿ ಈ ಗಾಂಧಿ ಏನು ಮಾಡಿದ? ಎನ್ನುವ ಪ್ರಶ್ನೆಗಳನ್ನು

ಅನೇಕ ಪತ್ರಕರ್ತರು ಗಾಂಧಿಯ ಮುಂದಿರಿಸಿದರು. ಏಳುನೂರು ಸಾವಿರ ಭಾರತದ ಹಳ್ಳಿಗಳ ಪ್ರತಿಯೊಬ್ಬ ಬಡವ, ದಲಿತ, ಕೂಲಿ, ರೈತನ ಸಮಸ್ಯೆಗಳನ್ನು ತಾನರಿಯಬೇಕು, ಅಂದುಕೊಂಡಿದ್ದ ಗಾಂಧಿಗೆ ಪಕ್ಕದಲ್ಲಿಯ ಮಹಾದೇವ ದೇಸಾಯಿಯನ್ನು ಅರಿಯಲಾಗಲಿಲ್ಲ ಎಂದು ಕೆಲವರು ಗಾಂಧಿಯನ್ನು ಟೀಕಿಸಿದರು. ಗಾಂಧಿ ಈಗ ತನ್ನೊಳಗೇ ಹುದುಗಿಸಿಕೊಂಡಿದ್ದ ಮಹಾದೇವ ದೇಸಾಯಿ ಎಂಬ ಚೇತನದ ಕುರಿತ ತನ್ನ ವಿಚಾರಗಳನ್ನು ದಾಖಲಿಸಲೇಬೇಕಾದ ಅನಿವಾರ್ಯ ಉಂಟಾಯಿತು. ತನ್ನೊಳಗೆ ಶಬ್ದಾತೀತವಾಗಿದ್ದ ಮಹಾದೇವನ ಕಾಯಕ ಶುದ್ಧಿಗೆ ಗಾಂಧಿ ಈಗ ಮಾತುಗಳ ಸಾಣೆ ಹಿಡಿಯಬೇಕಾಯಿತು. ಇಂಥ ಒಂದು ಆಪಾದನೆಗೆ ಗುರಿಯಾಗಬೇಕಾಯಿತಲ್ಲ ಎನ್ನುವ ಕಾರಣದಿಂದ ಕೊನೆಗೆ ಗಾಂಧಿ, ಮನಸ್ಸಿಲ್ಲದ ಮನಸ್ಸಿನಿಂದ, ಮಹಾದೇವ ದೇಸಾಯಿಯ ಬಗೆಗೆ, ಅವನ ನಿಧನದ ನಂತರ ತಾನು ಯಾಕೆ ಆತನಿಗಾಗಿ ಒಂದು ಯೋಜನೆಯನ್ನು ಎತ್ತಿಕೊಳ್ಳಲಿಲ್ಲ ಎಂದು ಸ್ಪಷ್ಟಪಡಿಸುತ್ತ ಬರೆಯುತ್ತಾನೆ– "ಭೌತಿಕವಾದ ಸ್ಮಾರಕವೊಂದನ್ನು ಸ್ಥಾಪಿಸುವುದು ನನ್ನ ವ್ಯಾಪ್ತಿಗೆ ಮೀರಿದ್ದು. ಮಹಾದೇವನ ಸ್ನೇಹಿತರು, ಮೆಚ್ಚುವವರು ಕೈಗೊಳ್ಳಬೇಕಾದ ಕೆಲಸ ಅದು. ಒಬ್ಬ ತಂದೆ ತನ್ನ ಮಗನಿಗಾಗಿ ಒಂದು ನಿಧಿಯನ್ನು ಪ್ರಾರಂಭಿಸುತ್ತಾನೇನು? ಕಸ್ತೂರಿ ಬಾ ಸ್ಮಾರಕ ನಿಧಿಗೂ ನಾನು ಜವಾಬ್ದಾರನಲ್ಲ– ನಿಧಿಯನ್ನು ಅದರ ಧ್ಯೇಯೋದ್ದೇಶಗಳಿಗೆ ಅನುಗುಣವಾಗಿ ಮಾತ್ರವೇ ಬಳಸುವುದನ್ನು ಖಚಿತಪಡಿಸಲೊಸುಗ ಮಾತ್ರ ನಾನು ಆ ಸಮಿತಿಯ ಅಧ್ಯಕ್ಷನಾಗಿದ್ದೇನೆ. ಅದೇ ರೀತಿ ಮಹಾದೇವನ ಬಂಧುಗಳು, ಮಿತ್ರರೂ ಸೇರಿ ಸ್ಮಾರಕ ನಿಧಿಯನ್ನು ಕೂಡಿಸಲು ಸಮಿತಿ ರಚನೆ ಮಾಡಿದರೆ, ಅಧ್ಯಕ್ಷನಾಗಿದ್ದು ಅದರ ಸೂಕ್ತ ಉಪಯೋಗಕ್ಕೆ ನಿರ್ದೇಶನ ನೀಡಬೇಕೆಂದು ನನ್ನನ್ನು ಕರೆದರೆ ಅದಕ್ಕೂ ನಾನು ಸಂತೋಷದಿಂದ ಒಪ್ಪಿಯೇನು.

ಅವನು ನನ್ನ ನೆರಳಿನಂತೆಯೆ. ನೂಲುತ್ತಲೇ ಗಂಟೆಗಟ್ಟಲೆ ಕಳೆಯುತ್ತ ಸಂತೋಷಪಡುತ್ತಿದ್ದ. ದಿನದ ಕನಿಷ್ಠ ಪ್ರಮಾಣದ ನೂಲುವುದನ್ನು ಮುಗಿಸಲು ಅವನು ತನ್ನ ನಿದ್ದೆಯ ಸಮಯವನ್ನು ಕಡಿಮೆ ಮಾಡುತ್ತಿದ್ದ. ಈ ಹಟ ಏಕೆ ಅವನಿಗಿತ್ತು? ನನ್ನನ್ನು ಮೆಚ್ಚಿಸುವ ಸಲುವಾಗಿ ಖಂಡಿತ ಅಲ್ಲ ಎಂದು ಹೇಳಬಲ್ಲೆ. ಬಹಳವಾಗಿ, ಕೂಲಂಕುಷವಾಗಿ ಚರ್ಚೆ ಮಾಡಿದ ನಂತರವೆ ಅವನು ನನ್ನ ಹಾದಿಯನ್ನು ಹಿಡಿದದ್ದು. ಹಸಿವಿನಿಂದ ಸೊರಗುವ ಭಾರತದ ಜನಕೋಟಿಗೆ ಲೌಕಿಕ ಪರಿಹಾರ ಸಿಗಬೇಕಾದರೆ ಅದು ಚರಕಾದೊಂದಿಗೆ ಸಂಬಂಧಿಸಿದೆ ಎಂದು ಅವನು ದೃಢವಾಗಿ ನಂಬಿದ್ದ. ನಂಬಿಕೆಯಿಲ್ಲದೆ ಯಾವುದೇ ಕೆಲಸವನ್ನು ಅವನು ಕೈಗೊಂಡದ್ದು ನನಗೆ ತಿಳಿಯದು. ಅಲ್ಲದೆ ಪ್ರತಿದಿನವೂ ಕೈಯ್ಯಾರ ಕೆಲಸ ಮಾಡುವುದರಿಂದ ತಾನು ಕೈಗೊಳ್ಳುವ ಯಾವುದೇ ಸಾಹಿತ್ಯಕವಾದ ಕೆಲಸ ಶ್ರೀಮಂತವಾಗುತ್ತದೆ ಎಂಬುದನ್ನು ಅವನು ಕಂಡುಕೊಂಡನು. ಅದರಿಂದ ಅವನ ಕೆಲಸಕ್ಕೆ ಒಂದು ವಾಸ್ತವಿಕತೆ ಬಂದಿತು, ಇಲ್ಲವಾದರೆ ಬರುತ್ತಿರಲಿಲ್ಲ. ನಿಧಿಯೆತ್ತುವುದು ಒಳ್ಳೆಯದು ಮತ್ತು ಅಗತ್ಯವಾದದ್ದು. ಆದರೆ ಮಹಾದೇವನ ರಚನಾತ್ಮಕ ಕೆಲಸವನ್ನು ಅನುರಿಸುವುದು ಇನ್ನೂ ಉತ್ತಮ. ಒಂದು ಸ್ಮಾರಕನಿಧಿಗಾಗಿ ಚಂದಾ ಕೊಡುವುದು ಅದಕ್ಕಿಂತಲೂ ಹೆಚ್ಚು ಘನವಾದ ರೀತಿಯ ಕೆಲಸಕ್ಕೆ ಪ್ರತಿಯಾಗುವುದು ಸರಿಯಲ್ಲ"

ಎಷ್ಟೊಂದು ವಿಚಿತ್ರವಾಗಿದೆ ನೋಡಿ ನಮ್ಮ ಆಲೋಚನಾ ರೀತಿ. ಸ್ವಾತಂತ್ರ್ಯಪೂರ್ವದಿಂದ ಇವತ್ತಿನವರೆಗೂ, ಗಾಂಧಿ ಅವಸಾನದ ನಂತರವೂ ಈ ರೀತಿಯಾಗಿ ಅವನನ್ನು ನಾವು ಪ್ರಶ್ನಿಸುವುದನ್ನು ನಿಲ್ಲಿಸಿಯೇ ಇಲ್ಲ. 22 ಜುಲೈ 1947ರಲ್ಲಿ ಆಗ ಲಂಡನ್‌ದಲ್ಲಿ ವಾಸವಾಗಿದ್ದ ಜೆ.ಸಿ.ಕುಮಾರಪ್ಪ ಎನ್ನುವವರಿಗೆ ಪತ್ರವೊಂದನ್ನು ಬರೆಯುತ್ತಾ ಈ ದೇಶ 'ಮಹಾತ್ಮ' ಎಂದು ತನ್ನನ್ನು ಸಂಬೋಧಿಸುವುದರ ಕಾರಣ ಅದೆಂಥ ಯಮಭಾರವನ್ನು ತಾನು ಹೊತ್ತು ಸಾಗಬೇಕಾಗಿದೆ ಎನ್ನುವುದನ್ನು ಅತ್ಯಂತ ನೋವಿನಿಂದ ವಿವರಿಸುತ್ತಾನೆ – ``I am, like you an ordinary human being and want to serve people as long as the God gives me the strength to do so. Moreover, anyone who is not distressed or ashamed by the carnage that is going on in the country must either be God or a hard hearted man. I am neither.".

ಭಾರತದ ಬೀದಿ–ಬೀದಿಗಳಲ್ಲಿ ಜಾತಿ–ಧರ್ಮದ ಹೆಸರಿನಲ್ಲಿ ಕೊಲೆಯಾಗುತ್ತಿದ್ದ, ಅತ್ಯಾಚಾರಕ್ಕೊಳಗಾಗುತ್ತಿದ್ದ ಮಹಿಳೆಯರನ್ನು, ಮಕ್ಕಳನ್ನು ನೋಡಿ ಗಾಂಧಿ ಶಬ್ದಶಃ ನಲುಗಿಹೋಗಿದ್ದ. ತನ್ನ ಕಣ್ಣೆದುರೆ ಅವಸಾನಕ್ಕೊಳಗಾಗುವ ಮನೆತನವನ್ನು ನೋಡಿ ಮಮ್ಮಲ ಮರುಗಿದ ಕುಟುಂಬದ ಯಜಮಾನನಂತಾಗಿತ್ತು ಗಾಂಧಿಯ ಕೊನೆಯ ದಿನಗಳ ಸ್ಥಿತಿ. ಯಾಕೆಂದರೆ ಅವನು ಬದುಕೆಲ್ಲವೂ ಆರಾಧಿಸಿದ್ದ 'ಅಹಿಂಸೆ' ಅವನ ಕಣ್ಣೆದುರೆ ಹಿಂಸೆಯ ದಳ್ಳುರಿಯಲ್ಲಿ ಬೆಂದುಹೋಗುತ್ತಿತ್ತು. ದೇಶ ಸ್ವತಂತ್ರವಾಗುತ್ತಿರುವಂತೆಯೇ ಸೈನಿಕ ವ್ಯವಸ್ಥೆ ಇಲ್ಲಿ ಅನಿವಾರ್ಯವಾಗುತ್ತಿದ್ದರ ಕುರಿತು ಗಾಂಧಿಗೆ ಖೇದವಿತ್ತು. ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗುತ್ತಲೇ ಸೈನಿಕ ವ್ಯವಸ್ಥೆ ನಮಗೆ ಅನಿವಾರ್ಯ ಎನ್ನುವುದಾದರೆ ಸ್ವಾತಂತ್ರ್ಯಕ್ಕೆ ಯಾವ ಅರ್ಥವಿದೆ? ಎನ್ನುವುದು ಗಾಂಧಿಯ ಪ್ರಶ್ನೆಯಾಗಿತ್ತು. ವೈರಿಗಳಲ್ಲಿಯೂ ಜೀವನ ಸೌಂದರ್ಯವನ್ನು ಕಾಣುತ್ತಿದ್ದ ಗಾಂಧಿ ಅಂದಿನ ವೈಸ್‌ರಾಯ್ ಮೌಂಟ್‌ಬ್ಯಾಟನ್‌ರನ್ನು ಬ್ರಿಟಿಷ್ ಸಂಸ್ಕೃತಿ ಮತ್ತು ನಡುವಳಿಕೆಯ ಉತ್ತಮ ನಿದರ್ಶನ ಎಂದು ಸಾರ್ವಜನಿಕವಾಗಿ ಹೇಳಿದುದು ಅನೇಕರಿಗೆ ಅಸಮಾಧಾನವನ್ನು ತಂದಿತ್ತು. ನನ್ನನ್ನು ಸಾಮಾನ್ಯರ ಮಧ್ಯ ಕಾಣಿ, ಮಹಾತ್ಮನೆಂಬ ಹೊನ್ನಶೂಲಕ್ಕೆ ನನ್ನನ್ನೇರಿಸಿ ಪ್ರಪಂಚದ ವಿಮರ್ಶೆಯಿಂದ ಅತೀತನನ್ನಾಗಿಸಬೇಡಿ ಎನ್ನುವ ಗಾಂಧಿಯ ಮೊರೆ ಬಹುತೇಕ ಯಾರಿಗೂ ಕೇಳಿಸಲಿಲ್ಲ. ಇಂತಹ ವಂಚನೆಗೊಳಗಾದ ಗಾಂಧಿ ಕುರಿತು ದೇವು ಹನೆಹಳ್ಳಿ ತುಂಬಾ ಸುಂದರವಾಗಿ ಬರೆದಿದ್ದಾರೆ. "ಮೋಹನದಾಸ ಕರಮಚಂದ ಗಾಂಧಿ ಎಲ್ಲವನ್ನೂ ಕಳಚಿಕೊಂಡು ಜೀವಂತವಿದ್ದಾಗಲೇ 'ಮಹಾತ್ಮ' ಆಗಿ ಜೀವನ್ಮುಕ್ತನಾಗುತ್ತಿದ್ದಂತೆ, ಬಯಲಾಗುತ್ತಿದ್ದಂತೆ, ಆ ಬಯಲನ್ನೇ ತಂದಿಕ್ಕಿ ಆಲಯವನ್ನು ಮಾಡಿ ಗಾಂಧಿಯನ್ನ ಅದರೊಳಕ್ಕೆ ಕೂಡಿಹಾಕಿ ವಿಮರ್ಶಾತೀತನನ್ನಾಗಿಸಿದರು. ಮೋಹನದಾಸನು ಹಠವಾದಿ, ಛಲವಾದಿ. ಕೆಲವರು 'ಮಹಾತ್ಮಾ ಗಾಂಧಿಯದು ಮೊಂಡುತನ' ಎಂದೂ ಹೇಳುವರು. ಗಾಂಧಿವಾದಿಗಳು ಗಾಂಧಿಯನ್ನು ವಿಮರ್ಶಾತೀತಗೊಳಿಸಿದಷ್ಟೇ ಗಾಂಧಿ ಕೂಡಾ ವಿಮರ್ಶೆಯನ್ನು ಸಹಿಸಿದ 'ಜಗಮೊಂಡ' ಎಂದವರೂ ಇದ್ದಾರೆ. ಮಹಾತ್ಮಗಾಂಧಿ ಎಲ್ಲ ಭಿನ್ನಾಭಿಪ್ರಾಯಗಳನ್ನು ಮೆಟ್ಟಿ ನಿಂತರು. ಅಂಬೇಡ್ಕರ್, ರಾಜಾಜಿ, ಭಾರತೀಯ ಕಮ್ಯೂನಿಸಂ, ಸರ್ದಾರ್ ಪಟೇಲ್,

ಭಗತ್‌ಸಿಂಗ್, ನೇತಾಜಿ... ಎಲ್ಲರೂ ಗಾಂಧಿಗೆದುರಾಗಿ ಸರಿದು ನಿಂತರು. ಮಹಾತ್ಮಗಾಂಧಿ ಅವಹೇಳನಕ್ಕೆ, ಬೈಗುಳಕ್ಕೆ, ಭಜನೆಗೆ ಗುರಿಯಾದಷ್ಟು ವಿಮರ್ಶೆಗೆ ಗುರಿಯಾಗಲಿಲ್ಲ."

ಇದು ಸತ್ಯ ಅಲ್ಲವೇ? ಮಹಾತ್ಮ ಎನ್ನುವ ಕನ್ನಡಕದಿಂದ ಗಾಂಧಿಯನ್ನು ನೋಡುತ್ತಾ ಬಂದ ನಮಗೆ ಸಣ್ಣ ಸಣ್ಣದಕ್ಕೆ ಮಿಡಿಯುವ, ಸಿಡಿಯುವ, ದೇವರು-ಧರ್ಮವನ್ನು ಕುರಿತು ತಣ್ಣಗೆ ಮಾತನಾಡುವ ಗಾಂಧಿ ಸಿಗಲೇ ಇಲ್ಲ. ಗಾಂಧಿಯ ಕೊನೆಯ ದಿನಗಳ ದಿನಚರಿಯನ್ನು ತೆರೆದು ನೋಡಬೇಕು. ತರತಮಗಳನ್ನು ಅರಿಯದ ಅವನ ಬರಹಗಳಲ್ಲಿ ದೇವರಿಗಾಗಿ ಹಂಬಲಿಸಿದಷ್ಟೇ ತೀವ್ರವಾಗಿ ಮನುಷ್ಯರಿಗಾಗಿಯೂ ಹಂಬಲಿಸಿದ್ದನ್ನೂ ನೋಡಬಹುದು. 1947ರ ಜುಲೈ 23ರ ನಸುಕಿನ ನಾಲ್ಕು ಗಂಟೆಗೆ ಎದ್ದು ಕುಳಿತು ತಮ್ಮ ಮಗ ಮಣಿಲಾಲನ ಮಗಳು ಮತ್ತು ತನ್ನ ಮೊಮ್ಮಗಳು ಆದ ಸೀತಾಳಿಗೆ ಒಂದು ಪತ್ರ ಬರೆದಿದ್ದಾನೆ.

"ಚಿ॥ ಸೀತಾಳಿಗೆ,

ಇಷ್ಟು ಚಿಕ್ಕ ವಯಸ್ಸಿನಲ್ಲಿ, ಬದುಕಿನಲ್ಲಿ ನೀನು ವಿಶ್ವಾಸ ಕಳೆದುಕೊಂಡು ಸಾಧಿಸುವುದೇನಿದೆ? ಶಾಲೆಯಲ್ಲಿ ನಡೆದಿರುವುದನ್ನು ಮರೆತುಬಿಡು. ನೀನು ತಿಳಿದುಕೊಂಡಂತೆ ನಿನ್ನ ಆತ್ಮಗೌರವಕ್ಕೆ ಯಾರೂ ಧಕ್ಕೆ ತಂದಿಲ್ಲ. ಮಗುವೆ ಸಮಾಧಾನಿಸಿಕೋ, ಓದಿನೆಡೆಗೆ ಗಮನವಿರಿಸು, ಸಶಕ್ತವಾದ ಆರೋಗ್ಯವನ್ನು ಬೆಳೆಸಿಕೊ. ನಿಯಮಗಳನ್ನು ಯಾವ ಕಾಲಕ್ಕೂ ಉಲ್ಲಂಘಿಸಬೇಡ. ಉದ್ವೇಗಗಳಿಗೆ ಆಸ್ಪದ ಕೊಡಬೇಡ. ನಿನ್ನ ಮನಸ್ಸಿಗೆ ಯಾವುದು ಸರಿ ಅನಿಸುತ್ತದೆಯೋ ಅದನ್ನು ಲೋಕದ ಹಂಗಿಲ್ಲದೆ ಮಾಡು. ಸ್ವಯಂ ಶಿಸ್ತು ಎನ್ನುವುದು ಬಹಳ ಮುಖ್ಯವಾದುದು. ಪತ್ರ ಬರೆಯುತ್ತಿರು.

ಆಶೀರ್ವಾದಗಳೊಂದಿಗೆ,

ಇಂತಿ ನಿನ್ನ ಬಾಪು."



ನಾನು ದೇವರನ್ನು ಕಂಡಿಲ್ಲ

೫

ಗಾಂಧಿ ನೂಕುತ್ತಿದ್ದ ಈ ದಿನದ ಇನ್ನೊಂದು ಸಂದರ್ಭವನ್ನು ನಾನು ನಿಮ್ಮ ಮುಂದಿಡುತ್ತೇನೆ. ಭಂಗಿ ಕಾಲೋನಿಯ ಸಾಯಂಕಾಲದ ಅವರ ಪ್ರಾರ್ಥನೆಯ ಸಂದರ್ಭದಲ್ಲಿ ವ್ಯಕ್ತಿಯೊಬ್ಬ ಕೇಳುತ್ತಾನೆ–

"ಬಾಪು ನೀವು ದೇವರನ್ನು ಎಂದಾದರು ಮುಖತಃ ನೋಡಿದ್ದೀರಾ?" ಇದಕ್ಕೆ ಗಾಂಧಿ ಕೊಡುವ ಉತ್ತರ ಸೊಗಸಾಗಿದೆ.

"ಖಂಡಿತವಾಗಿಯೂ ಇಲ್ಲ, ಒಂದು ವೇಳೆ ನಾನು ದೇವರನ್ನು ಕಂಡಿದ್ದರೆ ಇಂದು ನಿನ್ನೊಂದಿಗೆ ಮಾತನಾಡುವ ಅವಶ್ಯಕತೆಯಿರುತ್ತಿರಲಿಲ್ಲ. ಆದರೆ ದೇವರ ಅಸ್ತಿತ್ವದಲ್ಲಿ ನಾನು ಅಪಾರವಾದ ನಂಬಿಕೆಯನ್ನಿರಿಸಿಕೊಂಡಿದ್ದೇನೆ. ಜಗತ್ತಿನ ಕೋಟಿ–ಕೋಟಿ ಜನರು ನನ್ನೊಂದಿಗೆ ಇದೇ ವಿಶ್ವಾಸವನ್ನು ಹಂಚಿಕೊಂಡಿದ್ದಾರೆ. ಕೋಟ್ಯಂತರ ಅನಕ್ಷರಸ್ಥರು ಹೊಂದಿರುವ ಈ ನಂಬುಗೆಯನ್ನು ಎಂಥ ಪಂಡಿತನೂ ಅಲುಗಾಡಿಸಲು ಸಾಧ್ಯವಿಲ್ಲ. ದೇವರ

ಆಶೀರ್ವಾದಕ್ಕೆ ಒಳಪಡಬೇಕಾದರೆ ಸಿಟ್ಟು ಮತ್ತು ಆಶೆಯನ್ನು, ಹೊಗಳಿಕೆ ಮತ್ತು ನಿಂದನೆಯನ್ನು ಅಳಿದುಬಿಡಬೇಕಾಗುತ್ತದೆ."

ನನಗೆ ಆಶ್ಚರ್ಯವಾಗುವುದೇ ಇಲ್ಲ. ಗಾಂಧಿ ವ್ಯವಹರಿಸುತ್ತಿರುವುದು ಮಗುವಿನೊಂದಿಗೋ, ಮಾಧ್ಯಮದವರಿಗೊಂದಿಗೋ, ರಾಜಕಾರಣಿಗಳೊಂದಿಗೋ, ಧಾರ್ಮಿಕ ಮುಖಂಡರೊಂದಿಗೋ ಅದು ಮುಖ್ಯವಲ್ಲ. ಆದರೆ ಈ ಎಲ್ಲರೊಂದಿಗೂ ವ್ಯವಹರಿಸುವ ಗಾಂಧಿ ಒಬ್ಬನೇ ಆಗಿರುತ್ತಾನೆ ಮತ್ತು ಸ್ಥಿತಪ್ರಜ್ಞನಾಗಿರುತ್ತಾನೆ. ಒಂದು ದೇಶದ ಆರೋಗ್ಯದಷ್ಟೆ ಮುಖ್ಯವಾಗಿರುತ್ತದೆ ಗಾಂಧಿಗೆ ಮಗುವಿನ ಆರೋಗ್ಯವೂ ಕೂಡ. ವ್ಯಕ್ತಿಗತ ಶಿಸ್ತಿನಷ್ಟೆ ಪ್ರಮುಖವಾಗುತ್ತದೆ ಗಾಂಧಿಗೆ ದೇವರಲ್ಲಿಯ ವಿಶ್ವಾಸವೂ ಕೂಡ. ಆದರೆ ಬಹುತೇಕ ಆಧ್ಯಾತ್ಮ ಮತ್ತು ಲೌಕಿಕತೆಗಳ ಮಧ್ಯ ವ್ಯತ್ಯಾಸದ ಗೆರೆ ಎಳೆದುಕೊಂಡ ನಮಗೆ ಗಾಂಧಿಯನ್ನು ಅರಿಯುವುದು ಕಷ್ಟವಾಯಿತೇನೋ?

ದೇಶಕ್ಕೆ ಸ್ವಾತಂತ್ರ್ಯ ಬರುತ್ತಿದೆ ಎನ್ನುವ ಯಾವ ಕ್ಷಣಗಳೂ ಗಾಂಧಿಯ ಪಾಲಿಗೆ ನೆಮ್ಮದಿಯ ಕ್ಷಣಗಳಾಗಿರಲಿಲ್ಲ. ದಿನಕ್ಕೊಂದು ಆಘಾತಕಾರಿ ವಿಷಯ. ನೌಖಾಲಿ ಹಾಗೂ ಬಿಹಾರಗಳಂತೂ ಜನಾಂಗೀಯ ಕದನದಲ್ಲಿ ಶಬ್ದಶಃ ಹೊತ್ತುರಿಯುತ್ತಿದ್ದವು. ದೆಹಲಿಯ ಭಂಗೀ ಕಾಲನಿಯಿಂದ ವಿಶ್ರಾಂತಿಗಾಗಿ ಬಾಪು ಸಾಬರಮತಿಗೆ ಬರಬೇಕು ಎಂಬುದು ಅನೇಕರ ಆಸೆಯಾಗಿತ್ತು. ಆದರೆ ಪಂಡಿತ ನೆಹರು ಮತ್ತು ಸರ್ದಾರ್ ವಲ್ಲಭಭಾಯಿ ಪಟೇಲರು ರಾಜಕೀಯ ಬಿರುಸಿನ ಚಟುವಟಿಕೆಗಳ ಈ ಕ್ಷಣದಲ್ಲಿ ಗಾಂಧಿ ಯಾವಾಗಲೂ ತಮ್ಮೊಂದಿಗೇ ಇರಬೇಕೆಂದು ಒತ್ತಾಯಿಸುತ್ತಿದ್ದರು. ಆದರೆ ಆಚಾರದಲ್ಲಿ ಸಾಮ್ಯತೆ ಇಲ್ಲದ ಈ ಬಲವಂತದ ಇರುವಿಕೆಗೆ ಯಾವ ಅರ್ಥವೂ ಇಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತ ಗಾಂಧಿ 24 ಜುಲೈ (ಗುರುವಾರ) 1947ರಂದು ಪಟೇಲರಿಗೆ ಬರೆಯುತ್ತಾನೆ–

"ಬಂಧು,

ಕಾಶ್ಮೀರದ ಪ್ರಶ್ನೆ ಬಗೆಹರಿಯುವವರೆಗೆ ಮಾತ್ರ ನಾನು ನಿಮ್ಮೊಂದಿಗೆ ದೆಹಲಿಯಲ್ಲಿ ಇರಬೇಕು ಅಂದುಕೊಂಡಿದ್ದೇನೆ. ಈಗ ನಡೆಯುತ್ತಿರುವುದ್ಯಾವುದೂ ನನಗಿಷ್ಟವಿಲ್ಲ. ಯಾವ ಕಾರಣಕ್ಕಾಗಿ ಸದ್ಯ ಇರುವುದು ಬದಲಾಗಬೇಕು ಎಂದು ನಾನು ಬಯಸುತ್ತಿದ್ದೇನೆ ಎಂದು ನನಗೂ ಸರಿಯಾಗಿ ಹೊಳೆಯುತ್ತಿಲ್ಲ. ಆದರೆ ಒಟ್ಟಾರೆ ನಾನು ಮಾತ್ರ ಈ ಬೆಳವಣಿಗೆಗಳೊಂದಿಗೆ ಗುರ್ತಿಸಿಕೊಳ್ಳಲು ಇಷ್ಟಪಡುವುದಿಲ್ಲ. ಆಗಸ್ಟ್ 15ರೊಳಗಾಗಿ ನಾನು ಬಿಹಾರಕ್ಕೆ ಹೋಗಬೇಕು. ನೌಖಾಲಿಯಲ್ಲಿಯ ಸಮಸ್ಯೆಗಳಂತೂ ನನ್ನನ್ನು ನಿದ್ರಾಹೀನನನ್ನಾಗಿಸಿವೆ. ಇನ್ನು ನಾಲ್ಕು ದಿನ ನಾನು ನಿಮ್ಮೊಂದಿಗೆ ಇರುತ್ತೇನೆ. ಆನಂತರ ದಯವಿಟ್ಟು ಇಲ್ಲಿರಲು ನನ್ನನ್ನು ಒತ್ತಾಯಿಸಬೇಡಿ. ಯಾಕೋ ಗೊತ್ತಿಲ್ಲ. ಇತ್ತೀಚೆಗೆ "ಹರಿಜನ" ಪತ್ರಿಕೆಯನ್ನು ನಿಲ್ಲಿಸಿಬಿಡಬೇಕು ಎಂದು ನನಗನ್ನಿಸಿದೆ. ದೇಶವನ್ನು ವಿರುದ್ಧ ದಿಕ್ಕಿನಲ್ಲಿ ನಾನು ನಡೆಯಿಸಬಾರದು ಅಲ್ವೆ? ರಾಜಕೀಯ ಒಂದೆಡೆ, ನಾನು ಹೇಳುತ್ತಿರುವ ರಾಜಕೀಯ ಆದರ್ಶ ಇನ್ನೊಂದೆಡೆ ಆಗುತ್ತಿರುವಂತೆ ನನಗೆ ಭಾಸವಾಗುತ್ತಿದೆ. ದಯವಿಟ್ಟು ಈ ಎಲ್ಲ ವಿಚಾರಗಳನ್ನು ಕುರಿತು ನೀವೂ ಆಲೋಚಿಸಿ ನನಗೆ ತಿಳಿಸಿರಿ."

ಆಶೀರ್ವಾದಗಳೊಂದಿಗೆ
ಬಾಪು.

ಗಾಂಧಿಗೆ ತನ್ನ ಹಾಗೂ ತನ್ನ ಅನುಯಾಯಿಗಳ ಮಧ್ಯ ರಾಜಕೀಯ ಕಾರಣಗಳಿಂದಾಗಿ ಎಲ್ಲಿ ವ್ಯತ್ಯಾಸ ಬರುತ್ತಿದೆ ಎಂಬುದು ಸ್ಪಷ್ಟವಾಗಿತ್ತು. ಅಂತೆಯೇ ಹೇಳುತ್ತಿದ್ದರು, ``If the country's leaders and the people become divided into opposite camps, I do not know, what the fate of the country will be" ಎಂದು. ಆದರೆ ಈ ಮಾತು ಕ್ಲೀಷೆಯಾಯಿತು.

``Realising truth means realising that all human beings are one, that all religions are one, just as all over limbs are members of the same body. ಭಾರತ ಮತ್ತು ಪಾಕಿಸ್ತಾನದ ಹುಟ್ಟು ಅನಿವಾರ್ಯ, ಅದು ತನ್ನೆಲ್ಲಾ ಆದರ್ಶಗಳನ್ನು ಧಿಕ್ಕರಿಸಿ ತನ್ನವರೇ ಆರಾಧಿಸುತ್ತಿರುವ ಸ್ವಾರ್ಥದ ಪರಮಸೃಷ್ಟಿ ಎಂದು ಗಾಂಧಿಗೆ ಯಾವಾಗ ಸ್ಪಷ್ಟವಾಯಿತೋ ಅವರು ಕನಿಷ್ಠ ಈ ಮೇಲಿನ ಮಾತುಗಳನ್ನು ಹೇಳುವುದರ ಮೂಲಕ ಭಾರತ ಮತ್ತು ಪಾಕಿಸ್ತಾನಗಳನ್ನು ಒಂದೇ ರಾಷ್ಟ್ರವಾಗಿಡಲು ಪ್ರಯತ್ನಿಸಿದರು. ಹೊತ್ತಿ ಉರಿಯುತ್ತಿದ್ದ ಕಾಶ್ಮೀರಕ್ಕೆ ಗಾಂಧಿ ಹೋಗಬೇಕೆನ್ನುವುದು ನೆಹರುರವರ ಆಶೆಯಾದರೆ, ಬಿಹಾರ ಮತ್ತು ನೌಖಾಲಿಗಳಿಗೆ ತೆರಳಬೇಕೆನ್ನುವುದು ಗಾಂಧಿಯ ಹಠವಾಗಿತ್ತು. ಈ ಮಧ್ಯದಲ್ಲಿ ತಮ್ಮ ಪ್ರದೇಶ ಪಾಕಿಸ್ತಾನಕ್ಕೆ ಸೇರಬೇಕೆಂದು ದಂಗೆಯೆದ್ದ ಜನರ ಕುರಿತು ಬೀರೇಂದ್ರನಾಥ್ ದಾಸ್‌ರವರಿಂದ ಪತ್ರ ಬಂತು. ಈ ಮೂರು ದಾರಿಗಳ ಮಧ್ಯ ಯಾವ ದಾರಿಯನ್ನು ಆಯ್ದುಕೊಳ್ಳಬೇಕು?, ಯಾರಿಗೆ ಸಾಂತ್ವನ ಹೇಳಬೇಕು? ಭಾರತದ ಆಂತರ್ಯದಲ್ಲಿ ನಿರಂತರವಾಗಿ ಉಲ್ಬಣಗೊಳ್ಳುತ್ತಿದ್ದ ಪ್ರತ್ಯೇಕತಾವಾದದ ಈ ಭಯಾನಕ ರೋಗದ ಮುಂದೆ ಗಾಂಧಿ ಕೈಚೆಲ್ಲಿ ಕುಳಿತ ವೈದ್ಯರಾಗಿದ್ದರು.

ಒಂದೆಡೆ ಬಾಪು ನಿಮ್ಮ ಆರೋಗ್ಯ ಸರಿಯಿಲ್ಲ, ನೀವು ಸಾಬರಮತಿಗೆ ಬಂದು ವಿರಮಿಸಬೇಕೆಂದು ಹರಿಪ್ರಸಾದ್ ದೇಸಾಯಿ ನಿರಂತರವಾಗಿ ಒತ್ತಾಯಿಸುತ್ತಲೇ ಇದ್ದರು. ಆದರೆ ತಾನು ವಿರಮಿಸಲಾಗದು ಈ ಕ್ಷಣದಲ್ಲಿ ತಾನು ಸಾಬರಮತಿಗೆ ಬರಲೂ ಆಗದು, ಯಾಕೆ? ಎನ್ನುವುದನ್ನು ವಿಶ್ಲೇಷಿಸುತ್ತಾ 25 ಜುಲೈ 1947ರಂದು ಗಾಂಧಿ ಬರೆಯುತ್ತಾನೆ.

"ಪ್ರಿಯ ದೇಸಾಯಿ, ನಾವು ಸಂತಸಪಡುವುದೇನಾದರು ಇದೆಯಾ? ಪೂರ್ಣ ಸ್ವರಾಜ್ಯ ನಮ್ಮಿಂದ ಇನ್ನೂ ಬಹಳ ದೂರದಲ್ಲಿದೆ ಎಂದು ನಿನಗನ್ನಿಸುವುದಿಲ್ಲವೆ? ಸರಿ, ನಮಗೆ ಸ್ವರಾಜ್ಯ ಎನ್ನುವುದಾದರು ಬಂದಿದೆಯೇ? ಬ್ರಿಟಿಷರ ಮುಷ್ಠಿಯಿಂದ ಬಿಡುಗಡೆಗೊಂಡರೆ ಸ್ವರಾಜ್ಯವಾಯಿತೇ? ಸ್ವರಾಜ್ಯದ ಅರ್ಥ ಇಷ್ಟು ಸಂಕುಚಿತವೇ? ಹಾಗಲ್ಲ ಅನಿಸುತ್ತದೆ ನನಗೆ. ಈಗ ನನ್ನ ಪಾಲಿಗೆ ಸಾಬರಮತಿ ತುಂಬಾ ದೂರ ನೌಖಾಲಿ ಮಾತ್ರ ನನ್ನ ಸಮೀಪದಲ್ಲಿದೆ ಎನಿಸುತ್ತಿದೆ".

ಸ್ವಾತಂತ್ರ್ಯ ಸಂದರ್ಭ ಎನ್ನುವುದು ಬರೀ ಸಮಸ್ಯೆಗಳ ಭಾರತ. ಉಡುವ ಬಟ್ಟೆಯಿಂದ ಉಣ್ಣುವ ಊಟದವರೆಗೆ, ನಡೆವ ನೆಲದಿಂದ ನುಡಿವ ಭಾಷೆಯವರೆಗೆ ಎಲ್ಲವು ಸಮಸ್ಯೆಗಳೇ. ಅಂದ ಹಾಗೆ ಇನ್ನು ಕೆಲವೇ ದಿನಗಳಲ್ಲಿ ಹುಟ್ಟಲಿರುವ 'ಭಾರತ' ಎಂಬ ಸ್ವತಂತ್ರ ದೇಶದಲ್ಲಿ ಯಾವುದು ಜನಸಂಪರ್ಕದ ಭಾಷೆಯಾಗಿರಬೇಕು? ಎನ್ನುವುದು ಕೂಡ ಗಾಂಧಿಯ

ಮುಂದಿದ್ದ ಅತಿ ದೊಡ್ಡ ಪ್ರಶ್ನೆ. ಅದಕ್ಕೆ ಅವರು ಕಂಡುಕೊಂಡ ಉತ್ತರ ಹಿಂದುಸ್ಥಾನಿ. ಹಿಂದಿ ಮತ್ತು ಉರ್ದುವಿನಿಂದ ಮೈದಾಳಿದ ಹಿಂದುಸ್ಥಾನಿ. ಸಂಸ್ಕೃತದಿಂದ ಪ್ರಭಾವಿತವಾದ ಹಿಂದಿಯನ್ನಾಗಲಿ ಅಥವಾ ಬರೀ ಪರ್ಶಿಯನ್ ಉರ್ದುವಿನಿಂದ ಪ್ರಭಾವಿತವಾದ ಹಿಂದಿಯನ್ನಾಗಲಿ ಗಾಂಧಿ ಎಂದೂ ಸಮರ್ಥಿಸಲಿಲ್ಲ ಎನ್ನುವುದನ್ನು ನಾವು ಇಲ್ಲಿ ಗಮನಿಸಬೇಕು. ತನ್ನ ಕೊನೆಯ ದಿನಗಳ ಈ ಅವಧಿಯಲ್ಲಿಯೇ ಗಾಂಧಿ ದೇಶದುದ್ದಕ್ಕೂ ಮರ ನೆಡುವ ಅಭಿಯಾನ ಹಮ್ಮಿಕೊಳ್ಳಬೇಕೆಂದಿದ್ದ ಹಾಗೂ ಆ ಕುರಿತು ಹರಿಜನ ಪತ್ರಿಕೆಯಲ್ಲಿ ಚರ್ಚಿಸಿಯೂ ಇದ್ದ.

ಎಲ್ಲ ಸಮಸ್ಯೆಗಳಲ್ಲಿ ಅವನನ್ನು ಕಾಡಿದ ಮತ್ತೊಂದು ಸಮಸ್ಯೆ ಕಾಂಗ್ರೆಸ್ಸಿನದು. ಜುಲೈ 26, 1947ರಂದು ಕಾಂಗ್ರೆಸ್ಸನ್ನು ಕುರಿತು ಕಾಂಗ್ರೆಸಿನ ಮುಂದಿನ ಹೆಜ್ಜೆಗಳನ್ನು ಕುರಿತು ಗಾಂಧಿ ಏನು ಯೋಚಿಸುತ್ತಿದ್ದ ಎನ್ನುವುದು ದಾಖಲಾಗಿದೆ. ಇಂದು ನಮ್ಮ ಪಥಭ್ರಷ್ಟ ಕಾಂಗ್ರೆಸ್ಸಿಗರು ಆ ಸಾಲುಗಳನ್ನೋದಿ ತಮ್ಮ ಪಥವನ್ನು ಸರಿಪಡಿಸಿಕೊಳ್ಳಬೇಕಿದೆ. ನಿರಂತರ ಮೂವತ್ತು ವರ್ಷಗಳವರೆಗೆ ಮಗುವಿನಂತೆ ಲಾಲಿಸಿ-ಪಾಲಿಸಿ ಗಾಂಧಿ ಕಾಂಗ್ರೆಸ್ಸನ್ನು ಬೆಳೆಸಿಕೊಂಡು ಬಂದ. ಅವರು ಕಾಂಗ್ರೆಸ್ಸಿನಿಂದ ಮುಖ್ಯವಾಗಿ ನಿರೀಕ್ಷಿಸಿದ್ದು ಎರಡನ್ನು. ಒಂದು ಬ್ರಿಟಿಷ್ ಆಳ್ವಿಕೆಯಿಂದ ದೇಶ ಮುಕ್ತವಾಗುವವರೆಗೂ ಅವರ ವಿರುದ್ಧ ನಿರಂತರ ಅಹಿಂಸಾತ್ಮಕ ಹೋರಾಟ, ಎರಡನೆಯದು ಜನಸಾಮಾನ್ಯನನ್ನು ಮೇಲೆತ್ತುವ ರಚನಾತ್ಮಕ, ಸಾಮಾಜಿಕ ಚಟುವಟಿಕೆಗಳು, ಇದರರ್ಥ ಸಾಮಾನ್ಯರಿಗಾಗಿ ಸಾಕ್ಷರತೆ ಮತ್ತು ಶಿಕ್ಷಣ, ದುರ್ಬಲರಿಗಾಗಿ ಪೌಷ್ಠಿಕ ಆಹಾರ, ಸ್ವತಂತ್ರ ಭಾರತದ ಪ್ರತಿಯೊಬ್ಬ ಪ್ರಜೆಯೂ ತನ್ನ ಹಕ್ಕು ಮತ್ತು ಜವಾಬ್ದಾರಿಗಳನ್ನು ಕುರಿತು ಅರಿಯುವಂತಾಗಿಸುವುದು. ಹೀಗೆ ಗಾಂಧಿ ಸ್ಪಷ್ಟವಾಗಿ ಬರೆಯುತ್ತಾನೆ, ``If the congress wishes to preserve it's strength it must vigorously persue the constructive programme, not politics."



ಗಾಂಧಿ v/s ಗಾಂಧಿ

೬

ಕಾಂಗ್ರೆಸ್ ಯಾವುದೇ ಕಾರಣಕ್ಕೂ ಒಂದು ರಾಜಕೀಯ ಸಂಘಟನೆಯಾಗಿ ರೂಪುಗೊಳ್ಳುವುದು ಗಾಂಧಿಯ ಆಸೆಯಾಗಿರಲಿಲ್ಲ.

ಮೈಮರೆಯುವಿಕೆಗೆ ಗಾಂಧಿ ಎನ್ನುವ ವ್ಯಕ್ತಿತ್ವದಲ್ಲಿ ಅವಕಾಶವೆ ಇರಲಿಲ್ಲ. ಇದೇ ನಸುಕಿನ ಜಾವ 5.15ಕ್ಕೆ ಯುವಕನೊಬ್ಬ ತನ್ನಿಂದ ತೆಗೆದುಕೊಂಡು ಹೋದ ಪುಸ್ತಕಗಳನ್ನು ಮರಳಿಸಬೇಕಾದ ಎಚ್ಚರಿಕೆಯನ್ನು ನೀಡುತ್ತಲೂ ಆ ಯುವಕನಿಗೆ ಗಾಂಧಿ ಪತ್ರ ಬರೆದಿದ್ದಾನೆ.

1947, ಜುಲೈ 27ರ ಸಾಯಂಕಾಲ, ದೆಹಲಿಯ ಭಂಗಿ ಕಾಲೋನಿಗೆ ಗಾಂಧಿಯನ್ನು ಭೆಟ್ಟಿಯಾಗಲು ಬಾದುಷಾ ಖಾನ್, ಪಂಡಿತ್ ನೆಹರು, ಮಿಸ್ಟರ್ ಶಂಕರ ರಾವ್ ಡಿಯೋ, ರಾಜೇಂದ್ರ ಪ್ರಸಾದ್ ಎಲ್ಲರೂ ಬಂದಿದ್ದರು. ಗಾಂಧಿಯ ಕಣ್ತುಂಬ ಕನಸುಗಳಿದ್ದವು. ಭವಿಷ್ಯದ ಭಾರತದಲ್ಲಿ ರಾಜಕೀಯ ನಾಯಕನೊಬ್ಬ ಹೇಗಿರಬೇಕು ಎಂಬುದನ್ನು ಈಗ ಗಾಂಧಿ ಎಲ್ಲರಿಗೂ ತಿಳಿಸಿ ಹೇಳುತ್ತಿದ್ದ. ಪ್ರಜ್ಞಾವಂತ ನಾಗರಿಕನು ಬೆಳೆಸುವ, ಒಂದು ದೊಡ್ಡ ಸ್ವಯಂ ಸೇವಾ ತಂಡವನ್ನು ನಾವು ಹುಟ್ಟುಹಾಕಬೇಕು. ಜನರಿಂದ ಆಯ್ಕೆಯಾದ ನಾಯಕ, ಜನರಿಗೆ ವಿನೀತನಾಗಿರಬೇಕು. ದಾರಿತಪ್ಪುವ ಯಾವುದೇ ನಾಯಕನನ್ನು ಕಿತ್ತೊಗೆಯುವ ಶಕ್ತಿಯನ್ನು ಜನತೆ ಗಳಿಸಿಕೊಳ್ಳಬೇಕು. Ministers are not there to rule over the people but to serve them ಎನ್ನುವುದು ಗಾಂಧಿಯ ಎಚ್ಚರಿಕೆಯಾಗಿತ್ತು. ಇಂದಿನ ನಸುಕಿನಲ್ಲಿ ಅಕ್ಬರ್ ಭಾಯಿ ಚಾವಡಾ ಅವರಿಗೆ ಪತ್ರ ಬರೆಯುತ್ತಾ ಗಾಂಧಿ ಹೇಳುತ್ತಾನೆ. "ಪ್ರಿಯ ಚಾವಡಾ, ಬಹುತೇಕ ನನ್ನ ಬದುಕಿನ ಉಳಿದ ದಿನಗಳು ಬಿಹಾರ್ ಮತ್ತು ನೌಖಾಲಿಗಳಲ್ಲಿಯೇ ಮುಗಿದು ಹೋಗುತ್ತವೆ. ದೇವರು ಅನುಮತಿಸುವುದಾದರೆ ಬರೀ ನೂರಿಪ್ಪತ್ತೈದು ವರ್ಷವಲ್ಲ ನೂರೈವತ್ತು ವರ್ಷಗಳವರೆಗೂ ನಾನು ಇರಲು ಇಚ್ಛಿಸುತ್ತೇನೆ. ಆದರೆ ಅದು ಆತನ ಇಚ್ಛೆ ಆಗಿರದೆ ಹೋದರೆ ಈ ಕ್ಷಣದಲ್ಲೇ ಸಾವು ಬರಲೆಂದು ಆಶಿಸುತ್ತೇನೆ. ನನ್ನ ಬದುಕೆಲ್ಲವು ಖಂಡಿತವಾಗಿಯೂ ರಾಮನ ಆಜ್ಞೆಯಂತೇ ಸಾಗಲಿ."

ಈ ಪತ್ರವನ್ನು ಓದುತ್ತಿರುವಂತೆ ಇದರಲ್ಲಿ ನಾವು ಆಯುಷ್ಯದ ಆಸೆಗೆ ಬಿದ್ದ ಮೋಹದ ಮುದುಕನೊಬ್ಬನನ್ನು ಕಾಣುವುದಿಲ್ಲ. ಬದಲಾಗಿ ಆತನ ಸೇವೆಯ ಹಂಬಲವನ್ನು ಕಾಣುತ್ತೀರಿ. ಅಂತೆಯೇ ಭಾರತದ ಸ್ವಾತಂತ್ರ್ಯ ದಿನಾಚರಣೆ ಹೇಗಿರಬೇಕೆನ್ನುವುದನ್ನು ಗಾಂಧಿ ಬರೆಯುತ್ತಾನೆ– ``I recomend it's celebration with fasting, prayer and deep heart searching."

ಈ ಮಧ್ಯದಲ್ಲಿ ಕಾಶ್ಮೀರದ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಗಾಂಧೀಜಿ ಕಾಶ್ಮೀರಗೆ ಹೋಗಬೇಕೆಂದು ಒತ್ತಾಯಿಸಿ ಲಾರ್ಡ್ ಮೌಂಟ್ ಬ್ಯಾಟನ್ 28 ಜುಲೈ 1947ರಲ್ಲಿ ಪತ್ರ ಬರೆಯುತ್ತಾರೆ. ಆದರೆ ಈ ಕುರಿತು ಪ್ರಸ್ತಾಪಿಸುತ್ತಾ ಗಾಂಧಿ ಪಟೇಲರಿಗೆ ಪತ್ರ ಬರೆಯುತ್ತಾನೆ. ಕಾಶ್ಮೀರ್‌ಗೆ ಹೋಗಲು ತನ್ನ ಮನಸ್ಸಿಲ್ಲ ಅದನ್ನು ತಾನು ಹಿಂದೆ ಬರೆದ ಪತ್ರದಲ್ಲಿಯೂ ಸ್ಪಷ್ಟಪಡಿಸಿದ್ದೇನೆ ಎಂದು ಸ್ಪಷ್ಟವಾಗಿ ನುಡಿಯುತ್ತಾನೆ. ಎಲ್ಲೋ ತನ್ನ ಅನುಯಾಯಿಗಳೇ ತನಗೆ ತಪ್ಪು ಮಾಹಿತಿಯನ್ನು ನೀಡುತ್ತಿದ್ದಾರೆ ಎನ್ನುವ ಸಂಶಯ ಗಾಂಧಿಗೆ ಈಗ ಕಾಡುತ್ತದೆ. ಪಟೇಲರು ಮತ್ತೆ ಗಾಂಧಿಗೆ ನೀವೇ ಕಾಶ್ಮೀರಿಗೆ ಹೋಗಬೇಕು ಎಂದು ಪತ್ರ ಬರೆದಾಗ ನೊಂದ ಗಾಂಧಿ ಜೀವನ್ ಜೀ ದೇಸಾಯಿಗೆ ತಮ್ಮ ಬೇಸರವನ್ನು ತೋಡಿಕೊಳ್ಳುತ್ತ ಬರೆದಿದ್ದಾನೆ. "ಪ್ರಿಯ ದೇಸಾಯಿ, ನಾವು "ಹರಿಜನ"ವನ್ನು ನಿಲ್ಲಿಸಬೇಕಾದೀತೇನೋ. ನಮ್ಮ ರಾಜಕೀಯ ಮುಖಂಡರು ನಡೆಸುತ್ತಿರುವ ಅನೇಕ ಕ್ರಿಯೆಗಳಲ್ಲಿ ನನಗೆ ಶಬ್ದಶಃ ಆಸಕ್ತಿ ಇಲ್ಲದಾಗಿದೆ. ಆದರೆ ಅವರು ಮಾಡುವ ಕಾರ್ಯಗಳನ್ನು ಖಡಾಖಂಡಿತವಾಗಿ ವಿರೋಧಿಸುವ ಶಕ್ತಿಯನ್ನೂ ನಾನು ಕಳೆದುಕೊಂಡಿದ್ದೇನೆ. ಬರೀ ಪತ್ರಿಕೆಯೊಂದನ್ನು ನಡೆಸಿಕೊಂಡು ಹೋದ ಮಾತ್ರಕ್ಕೆ ಏನನ್ನು ಸಾಧಿಸಿದಂತಾಯಿತು?

ನೀವಾಗಲೀ, ಸರ್ದಾರರಾಗಲಿ, ನಾನಿಲ್ಲದೆ ಪತ್ರಿಕೆಯನ್ನ ನಡೆಸುವುದಿಲ್ಲ ಎನ್ನುತ್ತಿದ್ದೀರಿ ಈಗ ನನ್ನ ತಲೆಯೆನ್ನುವುದು ಗಲಿಬಿಲಿಯ ಗೂಡಾಗಿದೆ. ಕಾಶ್ಮೀರಕ್ಕೆ ನಾನು ಹೋಗಬೇಕೆನ್ನುವ ನಾಯಕರ ಆಶೆ ನನಗೆ ಹೊರೆಯಾಗಿದೆ. ಏನು ಮಾಡುವುದು ಹೇಳಿ."

ಈ ಮಧ್ಯದಲ್ಲಿ ಕಾಂಗ್ರೆಸ್ಸೆನ್ನುವುದು ಬರಿ ಹಿಂದುಗಳ ಗುಂಪಾಯಿತೇನೋ ಎನ್ನುವ ಅನುಮಾನವೂ ಗಾಂಧಿಯನ್ನ ಕಾಡಲಾರಂಭಿಸುತ್ತದೆ. ಎಲ್ಲಿಯವರೆಗೆ ಭಾರತದ ಮುಸ್ಲಿಂರು ತಾವು ಭಾರತೀಯರಲ್ಲ ಎಂದು ಹೇಳಿಕೊಳ್ಳುವರೊ, ಅಲ್ಲಿಯವರೆಗೆ ಅವರನ್ನು ರಕ್ಷಿಸುವುದು ಕಾಂಗ್ರೆಸ್‌ನ ಹೊಣೆಯಾಗುತ್ತದೆ. ಪಾಕಿಸ್ತಾನದ ವಿಷಯದಲ್ಲೂ ಅಷ್ಟೇ. ಅದರ ಧ್ವಜದ ಬಣ್ಣ ಏನೇ ಆಗಿರಲಿ, ಎಲ್ಲಿಯವರೆಗೆ ಪಾಕಿಸ್ತಾನದಲ್ಲಿರುವ ಎಲ್ಲ ಜನಗಳನ್ನು ಅದು ಪ್ರತಿನಿಧಿಸುತ್ತಿರುತ್ತದೆಯೋ ಅಲ್ಲಿಯವರೆಗೂ ಭಾರತದ ರಾಷ್ಟ್ರಧ್ವಜಕ್ಕೆ ಕೊಡುವ ಮರ್ಯಾದೆಯನ್ನೇ ತಾನು ಅದಕ್ಕೂ ಕೊಡುತ್ತೇನೆಂದು ಗಾಂಧಿ ಸ್ಪಷ್ಟಪಡಿಸಿದ್ದಾನೆ.

ಸುಶೀಲಾ ಪೈ ಎನ್ನುವ ಮಹಿಳೆ ಗಾಂಧಿಗೆ ಪತ್ರ ಬರೆದು ಬಾಪು ಈ ಪಾಕಿಸ್ತಾನದ ಕಲ್ಪನೆಯೇ ತಪ್ಪಲ್ಲವೇ? ಎಂದು ಕೇಳಿದಾಗ ನೋವಿನಿಂದ ಗಾಂಧಿ ಹೇಳಿದುದು ಇಷ್ಟೇ, The decision about Pakistan is of course wrong. But against whom am I to fight, and to what end. ಬಹುತೇಕ ಈ ಸಂದರ್ಭದ ಹಿನ್ನೆಲೆಯಲ್ಲಿಯೇ ಲೇಖಕರೊಬ್ಬರು ಬರೆದಿರಬಹುದು, "ವಿಪರ್ಯಾಸವೆಂದರೆ, ಗಾಂಧಿ ತತ್ತರಿಸಿದ್ದು ತಾನೇ ರಚಿಸಿದ ಚಿತ್ರಗಳಿಗೆ, ತನ್ನದೇ ಕುಡಿಗಳಿಗೆ, ತನ್ನದೇ ಕರಕಮಲ ಸಂಜಾತರಿಗೆ– ಅವರೆಂದರೆ ಜವಹರ್‌ಲಾಲ್ ನೆಹರು ಮತ್ತು ಮಹಮದ್ ಅಲಿ ಜಿನ್ನಾ. ಸ್ವಾತಂತ್ರ್ಯಾನಂತರ, ಗಾಂಧಿಯ ಹತ್ಯೆಯಾದ ಅನಂತರ, ಕ್ಷಣ–ಕ್ಷಣ ಜಾರುತ್ತಿದ್ದಂತೆ ಇದಿರಿಲ್ಲದ ಗಾಂಧಿ ತತ್ತರಿಸಿದ್ದು ತನ್ನೆದುರು ತಾನೇ ನಿಂತಾಗ. ಅದು ಗಾಂಧಿ v/s ಗಾಂಧಿ. ಸ್ವತಂತ್ರ ಭಾರತದಲ್ಲಿ ಕ್ಷಣಕ್ಷಣಕ್ಕೂ ಗಾಂಧಿ v/s ಗಾಂಧಿ."

ಒಂದರ್ಥದಲ್ಲಿ ಇದು ಸತ್ಯವೂ ಕೂಡ. ಗಾಂಧಿಯ ಈ ಅನೇಕ ಪತ್ರಗಳನ್ನು ಸಂಭಾಷಣೆ, ಸಂಪರ್ಕಗಳನ್ನು ಗಮನಿಸಿದರೆ, ವ್ಯಾವಹಾರಿಕವಾಗಿ ತಾನು ತುಂಬಾ ಜಾಣನೆಂದುಕೊಂಡಿದ್ದ ಗಾಂಧಿಗೆ ತನ್ನೆದುರಿನ ಅನೇಕ ಸಮಸ್ಯೆಗಳಿಗೆ ಅಷ್ಟೇ ವ್ಯಾವಹಾರಿಕವಾದ ಉತ್ತರಗಳನ್ನು ಕಂಡುಕೊಳ್ಳಲು ಆಗಲಿಲ್ಲ. ಬದುಕೆಲ್ಲವೂ ಮಹಾತ್ಮನಾಗಬೇಕೆನ್ನುವ ಮಹಾನ್ ಕನಸು ಕಂಡ ಗಾಂಧಿ ಇತ್ತ ಸಾಮಾನ್ಯನಂತೆ ಸಂಕೀರ್ಣವೂ, ಅತ್ತ ಸಂತನಂತೆ ನಿರಾಳವೂ ಆಗದೇ ಒದ್ದಾಡುವುದನ್ನು ಗಮನಿಸುತ್ತೇವೆ. ತನ್ನೊಳಗೊಬ್ಬ ಕರ್ಮಠ ಹಿಂದುವನ್ನು ಬಚ್ಚಿಟ್ಟುಕೊಂಡ ಗಾಂಧಿ ಮುಸ್ಲಿಂರ ಹಿಂಸೆಗೆ ಹೌಹಾರಿದ್ದು ಸ್ಪಷ್ಟವಾಗುತ್ತದೆ. ಗಾಂಧಿ ತನ್ನನ್ನೊಬ್ಬ ಸತ್ಯಸಂಧ, ನಿರ್ಭಯ, ಅಹಿಂಸೆಯ ಆರಾಧಕನೆಂದು ಎಷ್ಟೆಲ್ಲಾ ಹೇಳಿಕೊಂಡಿದ್ದರೂ ಕಾಶ್ಮೀರದ ವಿಷಯದಲ್ಲಿ ಅದ್ಯಾಕೆ ಅಷ್ಟೊಂದು ಹಿಂಜರಿದ ಮತ್ತು ಹಿಂಜರಿಯುತ್ತಿದ್ದ. ಅಲ್ಲಲ್ಲಿ ಸಮಸ್ಯೆಗಳನ್ನು ಬಗೆಹರಿಸಲಾಗದೇ ಕೈಚೆಲ್ಲಿ, ಸಹಚರರೊಂದಿಗೆ ಸಿಡಿಮಿಡಿಗೊಂಡು ಸುಮ್ಮನಾಗುವ ಈ ಮುದುಕ ನನಗಂತೂ ನಮ್ಮ ನಿಮ್ಮ ಮನೆಯ ಹತಾಶ ವೃದ್ಧರಿಗಿಂತ ತುಸು ಮೇಲು ಅಷ್ಟೇ.

ಗಾಂಧಿ ಸೌಥ್ ಆಫ್ರಿಕಾದಿಂದ ಭಾರತಕ್ಕೆ ಬರುತ್ತಲೇ ಒಮ್ಮೆ ಹರಿದ್ವಾರದ ಕುಂಭಮೇಳದಲ್ಲಿ ಭಾಗವಹಿಸಿದ್ದ ಕಾಶ್ಮೀರದ ದೊರೆ ಮಹಾರಾಜ ಹರೀಸಿಂಗ 1915ರಲ್ಲಿಯೇ ಕಾಶ್ಮೀರ ಕುರಿತಾದ ಸಮಸ್ಯೆಗಳನ್ನು ಚರ್ಚಿಸುವಂತೆ ಗಾಂಧಿಯನ್ನು ಕೇಳಿಕೊಂಡಿದ್ದರು. ಆದರೆ ಈ ಕುರಿತು ಅನಂತರದಲ್ಲಿ ಗಾಂಧಿ ಪದೇ ಪದೇ ನೆಹರುವನ್ನು ಒತ್ತಾಯಿಸಿದನೆ ವಿನಃ ತಾನು ಮುಂದಾಗಲಿಲ್ಲ. ನೆಹರು ಮಾತ್ರ ಕಾಶ್ಮೀರ ಸಮಸ್ಯೆಯನ್ನು ಬ್ರಿಟಿಷರ ನಿರ್ಗಮನದ ನಂತರದ ಚರ್ಚೆಯ ವಿಷಯವೆಂದುಕೊಂಡಿದ್ದರೆ ವಿನಃ ಅದಕ್ಕೂ ಮುಂಚೆ ಆಲೋಚಿಸಲು ಇಷ್ಟಪಡಲಿಲ್ಲ. ಈಗ ಗಾಂಧಿ ಕಾಶ್ಮೀರ ಕುರಿತು ಗಂಭೀರವಾದ ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ಸಾಕಷ್ಟು ಕಾಲ ಮಿಂಚಿ ಹೋಗಿತ್ತು. 29 ಜುಲೈ 1947ರ ದೆಹಲಿಯ ಭಂಗಿ ಕಾಲನಿಯಲ್ಲಿಯ ಪ್ರಾರ್ಥನೆ ಮುಗಿದ ನಂತರ ಗಾಂಧಿ ಚರ್ಚಿಸುತ್ತಾನೆ. ಕಾಶ್ಮೀರದ ಮಹಾರಾಜನಿಗೆ ನೀನು ಪಾಕಿಸ್ತಾನವನ್ನು ಬೇಡಾ ಭಾರತವನ್ನು ಸೇರಿಕೋ ಎಂದು ನಾನು ಸೂಚಿಸಲಾರೆ. ನಿಜವಾದ ಸ್ವತಂತ್ರ ಪ್ರಭುಗಳು ಪ್ರಜೆಗಳೇ. ಅರಸನೂ ಕೂಡ ಜನತೆಯ ಸೇವಕ. ಹಾಗೊಂದು ವೇಳೆ ಅವನಲ್ಲದಿದ್ದರೆ ಅವನು ಅರಸನೂ ಅಲ್ಲ. ಇದು ನನ್ನ ಅಚಲವಾದ ನಿರ್ಧಾರ ಮತ್ತು ನಾನು ಈ ಕಾರಣಕ್ಕಾಗಿಯೇ ಬ್ರಿಟಿಷರ ವಿರುದ್ಧ ಬಂಡೆದ್ದದ್ದು. ಯಾಕೆಂದರೆ ಬ್ರಿಟಿಷರು ಭಾರತದ ಕೇವಲ ಪ್ರಭುಗಳೆಂದು ತಿಳಿದುಕೊಂಡರು. ಭಾರತೀಯರನ್ನು ಸರಿಯಾಗಿ ಗುರುತಿಸುವಲ್ಲಿ ಅಲಕ್ಷ ತೋರಿದರು. ಕಾಶ್ಮೀರದಲ್ಲಿಯೂ ಅಷ್ಟೇ. ನಿಜವಾದ ರಾಜದಂಡ ಜನರ ಕೈಯಲ್ಲಿದೆ. ಅವರು ಇಷ್ಟಪಟ್ಟಂತೆ ಆಗಬೇಕು. ಕಾಶ್ಮೀರದಲ್ಲಿ ಸಾರ್ವಜನಿಕರ ಮಧ್ಯ ಇದ್ದಾಗ ನಾನು ಏನನ್ನೂ ಮಾಡಲು ಇಷ್ಟಪಡುವುದಿಲ್ಲ. ನಾನು ಜನತೆಯಲ್ಲಿ ಶಾಂತಿಗಾಗಿ ಪ್ರಾರ್ಥಿಸುತ್ತೇನೆಷ್ಟೇ. ``I do not even want a public prayer; though I may have it, as prayer is part of my life."

ಗಾಂಧಿ ಇಂತಹದೊಂದು ಸಾರ್ವಜನಿಕ ಅಭಿವ್ಯಕ್ತಿಯನ್ನು ಕಾಶ್ಮೀರದ ವಿಷಯಕ್ಕೆ ಸಂಬಂಧಿಸಿದಂತೆ ನೀಡುವುದರೊಳಗಾಗಿ ಎಷ್ಟೊಂದು ಸಮಯ ಉರುಳಿ ಹೋಗಿತ್ತು. ಅವನ ಹೇಳಿಕೆಯ ಎಲ್ಲ ವಿಷಯಗಳೂ ಸರಿ. ಆದರೆ ತಾನೊಬ್ಬ ನಿಯಮಪಾಲನೆಯ ಸನಾತನ ಹಿಂದೂ ಎಂದುಕೊಂಡಿದ್ದ ಗಾಂಧಿ I do not even want a public prayer ಎಂದು ಹೇಳಿದ್ದು ಏಕೆ? ಎನ್ನುವುದು ಸ್ಪಷ್ಟವಾಗುವುದೇ ಇಲ್ಲ. ಕಠೋರ ರಾಜ-ಕಾರಣಿಯಾಗಬೇಕಾಗಿದ್ದ ಗಾಂಧಿ ಎನ್ನುವ ಗಾಂಧಿ ಆಗ ಮಹಾತ್ಮನಾಗದೇ ಇದ್ದಿದ್ದರೆ ಇಂದು ಭಾರತದಲ್ಲಿ ಕಾಶ್ಮೀರದ ಪ್ರಶ್ನೆ ಇರುತ್ತಿರಲಿಲ್ಲವೆನೋ...



ಗಾಂಧಿ ಎಂಬ ಬೆಳಕಿನಲ್ಲಿ ಎಷ್ಟೊಂದು ಕತ್ತಲೆ?

೭

ವ್ಯಕ್ತಿ ಆರಾಧನೆ, ಎಲ್ಲೋ ನಮ್ಮನ್ನು ಗಾಂಧಿಯಿಂದ ದೂರ ಒಯ್ದು ನಿಲ್ಲಿಸಿಬಿಡುತ್ತದೆ. ಪ್ರಪಂಚದ ಎಲ್ಲ ಸಾಮಾಜಿಕ ಸುಧಾರಕರು ಈ ಕಾರಣಕ್ಕಾಗಿಯೇ ಅಲ್ಲವೇ ದೇವರಾಗಿರುವುದು? ನಮ್ಮ ಗಾಂಧಿ ಅವನ ಆಶಯಕ್ಕೂ ವಿರುದ್ಧವಾಗಿ ಮಹಾತ್ಮನಾಗುವುದು ಅವನ ಆರಾಧಕರಿಂದಲೇ. ಇರುವ ಒಬ್ಬ ಗಾಂಧಿಗೆ ಕೋಟಿ ಕೋಟಿ ಗಾಂಧಿಗಳನ್ನು ಕಲ್ಪಿಸಿಕೊಂಡು, ತಮ್ಮ ಹೃದಯಗಳಲ್ಲಿ ಇಟ್ಟುಕೊಂಡು ಪೂಜಿಸಿದರಲ್ಲಾ ಇದನ್ನು ಏನೆನ್ನಬೇಕು? ಈ ಕಾಲದ ಅಂತರದಲ್ಲಿ ಕುಳಿತುಕೊಂಡು ನಾವೀಗ ಪ್ರಶ್ನಿಸಿಕೊಳ್ಳಬೇಕಿದೆ, ಗಾಂಧಿ ಒಬ್ಬ ಮನುಷ್ಯ ತಾನೇ? ಆದರೆ ಎಲ್ಲಾ ಆರೋಪ ಅಪವಾದಗಳಿಂದ ಹೊರತಾದ ಗಾಂಧಿ ನಮ್ಮವನಾಗಲು ಸಾಧ್ಯವೇ? ದೇವರನ್ನೂ ತಮ್ಮ ಅಳತೆಯ ಲೆಕ್ಕಾಚಾರದಲ್ಲಿ ನೋಡುವ ಮನುಷ್ಯನಿಗೆ ಗಾಂಧಿಯ ಈ ಪರಿಯ ಆರಾಧನೆ ಸರಿ ಕಾಣಿಸಲಿಲ್ಲವೇನೋ?

ಏನೇ ಇರಲಿ, ಗಾಂಧಿ ಎಂಬ ಈ ಬೆಳಕಿನಲ್ಲಿ ಎಷ್ಟೊಂದು ಕತ್ತಲೆಯಿದೆ. ಇಪ್ಪತ್ತು ಲಕ್ಷ ಹಿಂದೂಗಳ ಮಾರಣಹೋಮಕ್ಕೆ ಈ ಗಾಂಧಿಯೇ ಕಾರಣ ಎನ್ನುವ ನಾಥುರಾಮ ಗೋಡ್ಸೆಯ ಅಪವಾದಕ್ಕೆ ಯಾವ ಮನ್ನಣೆ ಇದೆ?

ಹೀಗೆಯೇ ಆಯಿತು, ಎಲ್ಲ ಪ್ರಶ್ನೆಗಳಿಗೂ ವಾರಸುದಾರ ಗಾಂಧಿಯೇ ಎನ್ನುವ ಭಾರತೀಯರಿಗೆ ಗಾಂಧಿ ಎನ್ನುವ ಮನುಷ್ಯನ ಮಿತಿಗಳು ಅರ್ಥವಾಗಲಿಲ್ಲವೇನೋ. ಕೊನೆಯ ದಿನಗಳ ಅವನ ಬದುಕು ಉರಿಯ ಚಪ್ಪರದ ಕೆಳಗಿನ ಕನಸಷ್ಟೇ. ಇಷ್ಟವಿಲ್ಲದಿದ್ದರೂ ಗಾಂಧಿ ಕೊನೆಗೂ ಕಾಶ್ಮೀರಕ್ಕೆ ಹೊರಡಲೇಬೇಕಾಯಿತು. ತನ್ನ ಸಾಂತ್ವನಕ್ಕಾಗಿ ರಾಜಕೀಯವಲ್ಲದ ಅನೇಕ ನೆಪಗಳನ್ನು ಗಾಂಧಿ ಕಾಣಬೇಕಾಯಿತು. ತನ್ನ ಸೇವಕಿಯರಲ್ಲಿ ಒಬ್ಬಳಾಗಿದ್ದ ಮನುಳ ಆರೋಗ್ಯ ಕಾಶ್ಮೀರದಲ್ಲಿ ಸುಧಾರಿಸಬಹುದು. ಬದುಕೆಲ್ಲಾ ತಮ್ಮನ್ನು ನೆನಪಾಗಿ ಕಾಡಿದ ಹಿಮಾಲಯದ ಬೆಟ್ಟದ ಸಾಲುಗಳನ್ನು ಕಣ್ತುಂಬ ನೋಡಬಹುದು, ದೇವರ ಅನ್ವೇಷಣೆಗೆ ಅಲ್ಲಿಯ ಪ್ರಶಾಂತ ವಾತಾವರಣ ತನಗೆ ಮತ್ತಷ್ಟು ಅನುವು ಮಾಡಿಕೊಡಬಹುದು, ಹೀಗೆ ಏನೆಲ್ಲಾ. ಆದರೆ ಒಳ ಒತ್ತಡ ಬೇರೆಯೇ ಆಗಿತ್ತು. 30 ಜುಲೈ 1947ರ ಅವರ ವಿಚಾರಗಳನ್ನು ಗಮನಿಸಿದರೆ, "ತಾನೇ ಸಾಕಿ ಬೆಳೆಸಿದ ಕುಡಿಗಳು ರಾಜಕೀಯದ ಲೆಕ್ಕಚಾರದಲ್ಲಿ ಭಾರತದ ಸ್ವಾತಂತ್ರ್ಯಕ್ಕಿಂತಲು ಹೆಚ್ಚು ತೀವ್ರವಾಗಿ ಪಾಕಿಸ್ತಾನದ ಸೃಷ್ಟಿಗಾಗಿ ಹಂಬಲಿಸುತ್ತಿರುವುದು ಆತನಿಗೆ ಸ್ಪಷ್ಟವಾಗಿ ಗೋಚರವಾಯಿತು. ತನ್ನ ದೇಹದ ಮೇಲೆ ಮಾತ್ರ ದೇಶ ವಿಭಜನೆ ಎಂದಿದ್ದ ಗಾಂಧಿ, ಈ ಎಲ್ಲ ರಾಜಕೀಯ ಬೆಳವಣಿಗೆಗಳನ್ನು ನೋಡಿ, ಈ ದೇಹ ತನಗೂ ಭಾರವಾಯಿತೆಂದುಕೊಂಡನೇನೋ. ಇಷ್ಟರೊಳಗಾಗಿ ಅದೆಷ್ಟೋ ಸಿಖ್ ಯುವಕರು, 'ಗಾಂಧಿ ನೀವಿನ್ನು ರಾಜಕೀಯ ಸನ್ಯಾಸ ಸ್ವೀಕರಿಸಿ ಹಿಮಾಲಯಕ್ಕೆ ಹೋಗಿಬಿಡಿ' ಎಂದು ಹೇಳಿಯೂ ಆಗಿತ್ತು. ಇಂಥ ಟೀಕೆಯಿಂದ ನೊಂದು ಕಾಶ್ಮೀರಕ್ಕೆ ಹೊಗುವ ಪೂರ್ವದಲ್ಲಿ ಗಾಂಧಿ ಡಾ.ಬಾಬು ರಾಜೇಂದ್ರ ಪ್ರಸಾದರಿಗೆ ಹೀಗೊಂದು ಪತ್ರ ಬರೆದಿದ್ದಾನೆ–

"ಬಂಧು,

ವರ್ತಮಾನಕ್ಕೆ ಬೆನ್ನು ತೋರಿಸಿ, ಹೇಡಿಯಂತೆ ನನಗೆ ಹಿಮಾಲಯಕ್ಕೆ ಹೋಗುವ ಇಷ್ಟ ಇಲ್ಲ. ಅದಕ್ಕೂ ಮುಂಚೆ ಹರಿದ್ವಾರ, ನೌಖಾಲಿ, ಬಿಹಾರ್ ಮತ್ತು ಪಂಜಾಬ್‌ಗಳಲ್ಲಿ ನಡೆದ ಸಾಮೂಹಿಕ ಹತ್ಯೆಗಳ ಸ್ಥಳಗಳನ್ನು ನಾನು ಸಂದರ್ಶಿಸಲು ಬಯಸುತ್ತೇನೆ. ನೀವು ನನಗೆ ಹಿಮಾಲಯದ ಸೌಂದರ್ಯವನ್ನು ವಿವರಿಸಿದ್ದೀರಿ. ಆದರೆ ನನಗೆ ಮನುಷ್ಯರ ಮಧ್ಯ ಭಯಾನಕ ಕಂದರ–ಕಣಿವೆಗಳ ಅನುಭವವಾಗುತ್ತಿದೆ. ಕಾಶ್ಮೀರಿಗೆ ಹೋದ ನಂತರವೂ ಇದುವೇ ನನ್ನ ಹುಡುಕಾಟವಾಗಿರುತ್ತದೆ. ಯಾರಿಗೆ ಗೊತ್ತು, ಇದುವೇ ನನ್ನ ಕಾಶ್ಮೀರದ ಮೊದಲ ಮತ್ತು ಕೊನೆಯ ಭೆಟ್ಟಿಯೂ ಆಗಬಹುದು.

ಅಂದ ಹಾಗೆ, ನಿಮ್ಮಲ್ಲಿ ನನ್ನ ಕೋರಿಕೆ, ನನ್ನ ಅನುಪಸ್ಥಿತಿಯಲ್ಲಿ ಸಾರ್ವಜನಿಕ ಕ್ಷೇತ್ರಕ್ಕೆ ಸಂಬಂಧಪಟ್ಟ ಯಾವ ಕಾರ್ಯಗಳೂ ನಿಲ್ಲದಿರಲಿ. ಅದಕ್ಕಾಗಿ ಬೇಕಾದ ಹಣಕಾಸಿನ ಸಹಾಯದ ಬಗೆಗೂ ಚಿಂತೆ ಮಾಡಬೇಡಿ. ಸಾರ್ವಜನಿಕ ಸೇವೆಯಲ್ಲಿ ನಿರತನಾಗಿರುವ ವ್ಯಕ್ತಿಯನ್ನು ಹುಡುಕಿಕೊಂಡು ಹಣ ಬರುತ್ತದೆ. ಕೆಲವೊಮ್ಮೆ ಹಾಗೆ ಹಣಬರುವುದು ನಿಲ್ಲುವುದಾದರೆ ನಮ್ಮಲ್ಲಿ ಏನೋ ಕೊರತೆ ಇದೆ ಎಂದೇ ಅರ್ಥ. ಸಾಬರಮತಿಯ ಸಂದರ್ಭದಲ್ಲಿ ನನ್ನ ಮತ್ತು ಮದನ್‌ಲಾಲ್‌ರ ಅನುಭವ ಇದೇ ಆಗಿತ್ತು. ದುಡ್ಡಿಲ್ಲದ ಆ ಘಳಿಗೆಯಲ್ಲಿ ಎಲ್ಲಿ ಕೆಲಸ ನಿಂತೇ ಹೋಗುತ್ತದೆ ಎಂದು ನಮಗೆ ಚಿಂತೆಯಾಗಿತ್ತು. ಆದರೆ ಒಂದು ಮುಂಜಾವು ಇದ್ದಕ್ಕಿದ್ದಂತೆ ಒಬ್ಬ ವ್ಯಕ್ತಿ ಕಾರಿನಲ್ಲಿ ಬಂದು ಕಂತೆ ಕಂತೆ ಹಣವನ್ನು ನಮ್ಮ ಕೈಯಲ್ಲಿಟ್ಟು ಹೋದ. ಆ ಕ್ಷಣ ದ್ರೌಪದಿಗೆ ಕೃಷ್ಣ ಅಭಯಹಸ್ತ ನೀಡಿದ ಅನುಭವ ನಮಗೆ. ``If, therefore, we put our trust in God, and go on serving in selfless spirit our work will never be held up."



ಗಾಂಧಿ ಗೋ ಬ್ಯಾಕ್

೮

ಗಾಂಧಿ ಇನ್ನೆಂದೂ ಕಶ್ಮೀರದಿಂದ ಮರಳುವುದಿಲ್ಲ ಎನ್ನುವಂತೆಯೇ ತನ್ನ ಈ ಭೇಟಿಯನ್ನು ದಾಖಲಿಸುತ್ತಾ ಹೋಗಿದ್ದಾನೆ. 30 ಜುಲೈ ದೆಹಲಿಯಿಂದ ಹೊರಟು 31ರ ಮುಂಜಾನೆ ಪಂಜಾಬನ್ನು ತಲುಪಿ, ಆಗಸ್ಟ್ 1ನೇ ತಾರೀಖಿನಂದು ಗಾಂಧಿ ರಾವಲ್ಪಿಂಡಿಯನ್ನು ತಲುಪುತ್ತಾನೆ. ಇಡೀ ದೇಶಕ್ಕೇ ಗೊತ್ತಿರುವಂತೆ ಗಾಂಧಿಯ ರೈಲು ಪ್ರವಾಸ ಯಾವಾಗಲೂ ತೃತೀಯದರ್ಜೆಯ ಕಂಪಾರ್ಟ್‌ಮೆಂಟ್‌ನಲ್ಲಿಯೇ. ತನ್ನನ್ನು ಜನಸಾಮಾನ್ಯರ ಸಮೀಪ ಇಟ್ಟುಕೊಳ್ಳುವ ಒಂದು ಪ್ರಯತ್ನ ಇದು ಎಂದು ಹೇಳುತ್ತಿದ್ದ ಗಾಂಧಿಯ ಈ ಪ್ರವಾಸವನ್ನು ಕುರಿತು, ಅವರ ಗಾನಕೋಗಿಲೆ ಸರೋಜಿನಿ ನಾಯ್ಡು ಲೇವಡಿ ಮಾಡದೇ ಬಿಟ್ಟಿಲ್ಲ. "ಗಾಂಧಿ ಆಯ್ಕೆಯ ಈ ಸರಳ

ಮತ್ತು ಸಾಮಾನ್ಯ ದರ್ಜೆಯ ಪ್ರವಾಸ ಅತ್ಯಂತ ದುಬಾರಿಯಾದುದು. ಈ ಅಜ್ಜನನ್ನು ಖುಷಿಯಾಗಿಡಲು ಭಾರತದ ಬೊಕ್ಕಸಕ್ಕೆ ಒಂದಿಷ್ಟು ಕತ್ತರಿ ಖಂಡಿತ ಬೀಳಲೇಬೇಕು." ಇದು ಗಾಂಧಿಯ ದುರ್ದೈವ. ಯಾವುದನ್ನು ಗಾಂಧಿ ಸರಳವೆಂದುಕೊಳ್ಳುತ್ತಿದ್ದರೋ, ಅದರ ಇನ್ನೊಂದು ಮುಖವೇ ಸಂಕೀರ್ಣತೆ. ಅವರೆಡೂ ಪರಸ್ಪರ ಸಂವಾದಿ ಮತ್ತು ಫಲಿತಾಂಶಗಳು.

ಜುಲೈ 31ರಂದು ಪ್ರವಾಸ ಪ್ರಾರಂಭಿಸಿದ ಗಾಂಧಿ ಎಲ್ಲವನ್ನೂ ಯಥಾವತ್ತಾಗಿ ನಡೆಸಿಕೊಂಡು ಹೊರಟಿದ್ದ. ಸಾಮೂಹಿಕ ಪ್ರಾರ್ಥನೆಯೊಂದನ್ನು ಹೊರತುಪಡಿಸಿ, ನಸುಕಿನ 3–30ಕ್ಕೆ ಏಳುವುದಾಗಲಿ, ತಮ್ಮ 'ಹರಿಜನ'ಕ್ಕಾಗಿ ಲೇಖನಗಳನ್ನು ಕಳುಹಿಸುವುದಾಗಲಿ, ರೈಲಿನಲ್ಲಿ ಕಿಟಕಿಯ ಪಕ್ಕ ಕುಳಿತುಕೊಂಡು ಎಲ್ಲ ನಿಲ್ದಾಣಗಳಲ್ಲಿಯೂ ಸೇರುತ್ತಿದ್ದ ಜನರ ಯೋಗಕ್ಷೇಮವನ್ನು ಕೇಳುವುದಾಗಲಿ, ಎಲ್ಲವೂ ಯಥಾಪ್ರಕಾರ. ಈ ದಿನ ಆತ ಮುಖ್ಯವಾಗಿ ಮೂರು ಪತ್ರಗಳನ್ನು ಬರೆಯುತ್ತಾನೆ. ಮೊದಲನೆಯದು, ಸರ್ದಾರ್ ವಲ್ಲಭಭಾಯ್ ಪಟೇಲ್‌ರ ಮಗಳಾದ ಮಿಸ್.ಮಣಿಬೇಹನ್ ಪಟೇಲ್‌ರಿಗೆ. ನಸುಕಿನ ನಾಲ್ಕು ಗಂಟೆ ಮೂವತ್ತು ನಿಮಿಷಕ್ಕೆ ಬರೆದ ಈ ಪತ್ರದಲ್ಲಿ, "ನಿಮ್ಮ ತಂದೆಯ ಎಲ್ಲ ಸಾಹಸದಲ್ಲೂ ನೀನು ಜೊತೆಯಾಗಿರು, ನಿಷ್ಠಾವಂತಳಾಗಿರು. ನಿನ್ನನ್ನು ಜೊತೆಯಾಗಿಸಿಕೊಳ್ಳುವುದರ ಮೂಲಕ ನಿನ್ನ ತಂದೆ ನಿನಗೊಂದು ಅದ್ಭುತವಾದ ಅವಕಾಶ ಒದಗಿಸಿಕೊಟ್ಟಿದ್ದಾರೆ. ಅದನ್ನು ಸರಿಯಾಗಿ ಬಳಸಿಕೊ" ಎಂದು ಬರೆದಿದ್ದಾನೆ. ಇದೇ ನಸುಕಿನ ಜಾವ ರಾಜಕುಮಾರಿ ಅಮೃತ್ ಕೌರ್‌ರಿಗೆ ಪತ್ರ ಬರೆದು ತಿಳಿಸುತ್ತಾನೆ,

"Keep well, and cheer up. Personal service when it merges into universal service, is the only service worth doing. All else is rubbish."

Love

- Bapu.

ಸೇವಾಗ್ರಾಮದ ಆಶ್ರಮಕ್ಕೆ ತನ್ನನರಸಿಕೊಂಡು ಬಂದ ಯೂರೋಪಿಯನ್ನರನ್ನು ಹೇಗೆ ಕಾಣಬೇಕು ಎಂದು ತಿಳಿಸುತ್ತಾ ಚಮನ್‌ಲಾಲ್ ಷಾಗೆ ಬರೆದ ಗಾಂಧಿಯ ಸಾಲು ಹೀಗಿದೆ, "ಬಂದವರು ಬಡವರಾಗಿರುವುದರಿಂದ ಅವರಿಗೆ ಕೈತುಂಬ ಕೆಲಸ ಬೇಕಿದೆ. ಅವರ ಬಗೆಗೆ ಕಾಳಜಿ ಇರಲಿ." ಹಾಗೆ ಅವರು ಖಾಲಿ ಕೂಡದೇ ಇರಲಿ. ಬದಲಾಗುತ್ತಿರುವ ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಅದೇ ಮುಂಜಾವು ಅಗಾಥಾ ಹ್ಯಾರಿಸನ್‌ಗೆ ಬರೆದ ಪತ್ರದ ಸಂದೇಶ ಇಷ್ಟೇ.

``Things are topsy-turvy, we are all, including the British, on our trail. God is Great. He will make possible what appears impossible to man. Jesus Christ came into this world, to preach and spread the gospel of love and peace. But what many of his followers have brought about is tyranny and misery.

Love

- Bapu.

ಬಹುತೇಕ ಪಂಜಾಬ್‌ದಲ್ಲಿರಬಹುದು, ಪ್ರಾರ್ಥನೆಯ ನಂತರ ರಾಮಧನ್ ಎನ್ನುವ ಗಾಯಕ ಕಾಶ್ಮೀರಕ್ಕೆ ಹೋಗುವ ಅವಶ್ಯಕತೆ ಏನಿದೆ? ಎನ್ನುವ ಪ್ರಶ್ನೆಯನ್ನು ಇಟ್ಟಾಗ ಗಾಂಧಿ ಹೇಳಿದ್ದಾನೆ, "ಪಂಜಾಬದ ಅಮೃತ್‌ಸರಕ್ಕೆ ಬರಬೇಕೆನ್ನುವುದೇ ತನ್ನ ಬಲವಾದ ಇಚ್ಛೆಯಾಗಿದ್ದಾಗಿಯೂ ಕೂಡ ತಾನು ಕಾಶ್ಮೀರಕ್ಕೆ ಹೊರಟಿರುವುದು ಕೇವಲ ವಚನ ಪಾಲನೆಗಾಗಿ. ತಾನು ಶ್ರೀರಾಮನ ಪರಮಭಕ್ತ. ಕೇವಲ ವಚನ ಪರಿಪಾಲನೆಗಾಗಿ ಇಡೀ ಬದುಕನ್ನೇ ಧಾರೆ ಎರೆದ ಶ್ರೀರಾಮನ ಮೌಲ್ಯಗಳನ್ನು ಆತನ ಭಕ್ತನಾಗಿ ತಾನು ಪಾಲಿಸಲೇಬೇಕಿದೆ. ಹಿಂಸೆ ಮತ್ತು ಕ್ರೌರ್ಯವನ್ನು ಕೇವಲ ಪ್ರಾಮಾಣಿಕವಾದ ಪ್ರೀತಿಯಿಂದ ಮಾತ್ರ ಗೆಲ್ಲಲು ಸಾಧ್ಯವಿದೆ ಎಂದು ವಿವರಿಸಿದ್ದಾನೆ.

ಗಾಂಧಿ ರಾವಲ್ಪಿಂಡಿಯಲ್ಲಿ ಇಳಿದಾಗ ಆಗಸ್ಟ್ ತಿಂಗಳ ಮೊದಲ ದಿನ. ರಾಜಧಾನಿ ದೆಹಲಿ ಅಧಿಕಾರ ಹಸ್ತಾಂತರ, ಪದಗ್ರಹಣ ಸಮಾರಂಭ, ಖಾತೆಗಳ ಹಂಚಿಕೆ, ಬ್ರಿಟಿಷರ ನಿರ್ಗಮನ ಹೀಗೆ ಏನೆಲ್ಲ ಚಟುವಟಿಕೆಗಳ ಕೇಂದ್ರ. ಭಾರತದ ಸ್ವಾತಂತ್ರ್ಯಕ್ಕೆ ಎರಡು ವಾರಗಳ ಸಮಯವಷ್ಟೆ. ಪಾಕಿಸ್ತಾನಕ್ಕೆ ವಿಲೇವಾರಿಯಾಗಬೇಕಿದ್ದ ಒಂದು ಕೋಟಿ ಭಾರತೀಯರ ಸಂಸಾರಗಳು ಯಾವ ರಾಜಕೀಯ ನಾಯಕನಿಗೆ ಎಷ್ಟು ಕಾಡಿತ್ತೋ ಅದು ದೇವರಿಗೇ ಗೊತ್ತು. ಆಗಸ್ಟ್ 15, 1947ರಂದು ಗಾಂಧಿ ತಮ್ಮೊಂದಿಗೆ ಇರಲೇಬೇಕು ಎನ್ನುವ ಕಾರಣಕ್ಕೆ ಮನವೊಲಿಸಿ ಅವನನ್ನು ಕರೆಯಿಸಿಕೊಳ್ಳುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಲೇ ಇದ್ದವು. ಆದರೆ ಗಾಂಧಿ ಮಾತ್ರ ಯಾವುದೇ ಸ್ಥಿತಿಯಲ್ಲೂ ಅಂದಿನ ತಮ್ಮ ವಾಸ್ತವ್ಯ ಬೆಂಗಾಲದ ನೌಖಾಲಿಯಲ್ಲಿಯೇ ಎಂದು ಸ್ಪಷ್ಟಪಡಿಸಿಯಾಗಿತ್ತು.

ಆಗಸ್ಟ್ 1ರಂದು ಗಾಂಧಿ ರಾವಲ್ಪಿಂಡಿಯಲ್ಲಿ ಬಂದಿಳಿದಾಗ ಅವನನ್ನು ಸ್ವಾಗತಿಸಲು ಬಂದವರು ಕಾಶ್ಮೀರ್ ನ್ಯಾಷನಲ್ ಕಾನ್ಫರನ್ಸ್‌ನ ಅಧ್ಯಕ್ಷರಾದ ಭಕ್ಷಿ ಗುಲಾಂ ಮೊಹಮ್ಮದ್. ಒಂದೆಡೆ ಇದಕ್ಕೂ ಮುಂಚೆ ಪಂಜಾಬ್‌ದ ಅಮೃತ್‌ಸರ್ ರೇಲ್ವೆ ಸ್ಟೇಷನ್‌ದಲ್ಲಿ ಯುವಕರ ಗುಂಪೊಂದು ಕಪ್ಪು ಬಟ್ಟೆ ಧರಿಸಿ, ಕಪ್ಪು ಬಾವುಟಗಳನ್ನು ತೋರಿಸಿ, "ಗಾಂಧಿ ಗೋ ಬ್ಯಾಕ್" ಎಂದು ಘೋಷಣೆಗಳನ್ನು ಕೂಗಿದ್ದು ಗಾಂಧಿಗೆ ಬೇಸರ ತಂದಿತ್ತು. ಇಂಥದೇ ಒಂದು ದೃಶ್ಯ ಕಾಶ್ಮೀರದಲ್ಲಿ ಮರುಕಳಿಸುವುದಾದರೂ ಗಾಂಧಿಗೆ ಬೇರೆ ದಾರಿಗಳೇ ಇರಲಿಲ್ಲ. ಮಹಾರಾಜಾ ಹರಿಸಿಂಗ್, ಭಾರತೀಯ ಯಾವುದೇ ರಾಜಕೀಯ ನಾಯಕರೂ, ಭಾರತದ ಒಂದು ಸ್ಪಷ್ಟ ಭೂ ನಕ್ಷೆ ನಿರ್ಧಾರವಾಗದ ಹೊರತು ತನ್ನ ಕಾಶ್ಮೀರಕ್ಕೆ ಭೇಟಿ ಕೊಡತಕ್ಕದ್ದಲ್ಲ ಎಂದು ಲಾರ್ಡ್ ಮೌಂಟ್ ಬ್ಯಾಟನ್‌ರಿಗೆ ಪತ್ರ ಬರೆದು ತಿಳಿಸಿದ ಮೇಲೂ ಗಾಂಧಿ ಇಲ್ಲಿಗೆ ಹೊರಟು ಬಂದಿದ್ದ. ಜವಾಹರ್‌ಲಾಲ್ ನೆಹರೂ ಅಷ್ಟೇ ಅಲ್ಲ, ಗಾಂಧಿಯೂ ಕೂಡ ತಾನು ಅಂದುಕೊಂಡಿರುವ ಈ ಪ್ರವಾಸವನ್ನು ನಿಲ್ಲಿಸಬೇಕು, ಒಂದು ವೇಳೆ ಬರುವುದಾದರೆ ಶರದ್‌ಋತುವಿನಲ್ಲಿ ಬರಲಿ, ಭಾರತದಲ್ಲಿ ಒಂದು ಸೌಹಾರ್ದದ ವಾತಾವರಣ ಸೃಷ್ಟಿಯಾಗದ ಹೊರತು ಅಲ್ಲಿಂದ ಬರುವ ಯಾವ ನಾಯಕರೂ ಕಾಶ್ಮೀರಕ್ಕೆ ನೆಮ್ಮದಿಯನ್ನು ತರಲಾರರು ಎನ್ನುವುದು ಮಹಾರಾಜ ಹರಿಸಿಂಗ್‌ನ ಸ್ಪಷ್ಟ ನಿರ್ಧಾರವಾಗಿತ್ತು. ಆದರೆ ಗಾಂಧಿ ಈಗ ಕಾಶ್ಮೀರಿಗೆ ಬಂದಾಗಿತ್ತು. ಕೋಹಲಾದಿಂದ 140 ಕಿ.ಮಿ. ಅಂತರದಲ್ಲಿರುವ ಶ್ರೀನಗರಕ್ಕೆ ಹೋಗಲು ಗಾಂಧಿಗಾಗಿ ವಿಶೇಷ ವಾಹನದ ವ್ಯವಸ್ಥೆಯನ್ನು ಮಾಡಲಾಗಿತ್ತು.

ಹೀಗೆ ರಾಷ್ಟ್ರರಾಜಕಾರಣದ ಬೆಳವಣಿಗೆಗಳು ಒಂದೆಡೆಯಾದರೆ ಗಾಂಧಿಯ ಮಾರ್ಗ ಇನ್ನೊಂದೆಡೆಯಾಗಿತ್ತು, ಭಾವನಾತ್ಮಕವಾಗಿ ಮತ್ತು ಭೌತಿಕವಾಗಿ ಭೂಸ್ವರ್ಗ ಎಂದು ಆರಾಧಿಸಲ್ಪಟ್ಟ ಕಾಶ್ಮೀರ ಗಾಂಧೀಜಿಯನ್ನು ಯಾವುದೇ ರೀತಿಯಲ್ಲಿಯೂ ಸಮಾಧಾನಿಸುವ ಸ್ಥಿತಿಯಲ್ಲಿರಲಿಲ್ಲ. ಭಾರತ ವಿರೋಧಿಯಾದ, ಪಾಕಿಸ್ತಾನ ಪರವಾದ 'ಮುಸ್ಲಿಂ ಕಾನ್ಫರೆನ್ಸ್ ಆಫ್ ಕಾಶ್ಮೀರ್'ದ ಘೋಷಣೆಗಳು ಬಾರಾಮುಲ್ಲಾ ಮತ್ತು ಕೋಹಲಾದ ಬೀದಿಬೀದಿಗಳಲ್ಲಿ ನಿರಂತರವಾಗಿದ್ದವು. ಕೆಲವು ಕಡೆಯಂತೂ ರೊಚ್ಚಿಗೆದ್ದ ಮುಸ್ಲಿಂ ಯುವಕರ ಗುಂಪು ಗಾಂಧಿಯ ಮೈಮೇಲೆ ಹೋಗುವ ಪ್ರಯತ್ನವನ್ನೂ ಮಾಡಿದರು. ಸ್ಟೇಟ್ ಪೋಲೀಸನ ಸಹಾಯವಿಲ್ಲದೇ ಹೋಗಿದ್ದರೆ, ಗಾಂಧಿ ಈ ದಿನವೇ ಹುತಾತ್ಮನಾಗಿರುತ್ತಿದ್ದನೇನೋ. ನಿರಂತರ ರಕ್ಷಣೆಯ ನಂತರವೂ ಗಾಂಧಿಯ ಕಾರಿನ ಕಿಟಕಿಯ ಗಾಜುಗಳು ಜನರ ರೋಷಕ್ಕೆ ಬಲಿಯಾಗುವುದನ್ನು ಯಾರಿಂದಲೂ ತಪ್ಪಿಸಲಾಗಲಿಲ್ಲ. ಹೀಗೆ ಹುಚ್ಚೆದ್ದು, ಮತಾಂಧತೆಯ ಯುದ್ಧೋತ್ಸಾಹದಲ್ಲಿ ಕುಣಿಯುತ್ತಿದ್ದ ಜನರ ಮಧ್ಯದಲ್ಲಿಯೇ ತಾನು ಹೋಗಬೇಕು, ತನ್ನ ಅಪರಾಧಗಳೇನೆಂದು ಕೇಳಬೇಕು, ಅವರ ಅಸಮಾಧಾನಗಳಿಗೆ ಕಾರಣಗಳನ್ನು ಹುಡುಕಬೇಕು ಎನ್ನುವುದು ಗಾಂಧಿಯ ಆಸೆಯಾಗಿದ್ದರೂ ಸ್ಟೇಟ್ ಪೋಲೀಸ್ ಅವನಿಗೆ ಅನುಮತಿಸಲಿಲ್ಲ.

ಬಾರಾಮುಲ್ಲಾದ ಎಲ್ಲಾ ಹಿಂಸೆ, ಅಪಮಾನ, ಅಸಹ್ಯಗಳನ್ನು ಅನುಭವಿಸಿ ಗಾಂಧಿ ಶ್ರೀನಗರಕ್ಕೆ ತಲುಪಿದಾಗ ಸಾಯಂಕಾಲದ ಐದು ಗಂಟೆ. ಗೋಧೂಳಿಯ ಸಮಯ, ಗಿಡ-ಮರಗಳ ತುಂಬ ಹಕ್ಕಿ-ಪಕ್ಷಿಗಳ ಕಲರವ. ಗಾಂಧಿ ಬರುವ ದಾರಿಯ ಇಕ್ಕೆಲಗಳಲ್ಲಿ ಗಾಂಧಿಯನ್ನು ಸ್ವಾಗತಿಸಲು ಹೂ-ಹಾರಗಳನ್ನು ಹಿಡಿದುಕೊಂಡು ನಿಂತ ಸಾಲು-ಸಾಲು ಜನಗಳು. ಈಗ ಗಾಂಧಿ ಒಂದಿಷ್ಟು ನಗೆ ಸೂಸಲು ಪ್ರಯತ್ನಸಿದ. ಬೇಗಂ ಅಬ್ದುಲ್ಲಾ ಓಡಿ ಬಂದು ಗಾಂಧಿಯನ್ನು ನಡೆಸಿಕೊಂಡು ಮೊಗಲ್ ಸಾಮ್ರಾಟರ ಸ್ವರ್ಗವಾದ ಕಾಶ್ಮೀರದಲ್ಲಿ ಶುಭೇಚ್ಛೆಗಳನ್ನು ಕೋರಿದಳು. ಮಿ.ಕಿಶೋರಿಲಾಲ್ ಸೇಠಿ ಎನ್ನುವ ಕಾಂಟ್ರಾಕ್ಟರ್‌ನ ಮನೆಯಲ್ಲಿ ತಂಗಿದ್ದ ಗಾಂಧಿ, ಶ್ರೀನಗರದ ಸುಪ್ರಸಿದ್ಧ ದಲ್‌ತಟಾಕದ ದಂಡೆಯಲ್ಲಿ ತಮ್ಮ ಅನುಯಾಯಿಗಳೊಂದಿಗೆ ವಿಹರಿಸಿದ. ಮರುದಿನ ನಸುಕಿನ ಮೂರು ಗಂಟೆಗೆ ಪಂಡಿತ ರಾಮಚಂದ್ರ ಖಾಕ್, ಷೇಕ್ ಮೊಹಮ್ಮದ್ ಅಬ್ದುಲ್ಲಾ, ಗಾಂಧಿಯನ್ನು ಸಂದರ್ಶಿಸಿ ರಾಜಕೀಯ ವಿದ್ಯಮಾನಗಳನ್ನು ಚರ್ಚಿಸಿದರು. ಪಂಡಿತ ರಾಮಚಂದ್ರ ಖಾಕ್ ಕಾಶ್ಮೀರದ ಮಹಾರಾಜನ ವಿಶ್ವಾಸವನ್ನು ಗಳಿಸಿಕೊಂಡ ಮನುಷ್ಯ, ಮೊಹಮ್ಮದ್ ಅಬ್ದುಲ್ಲಾ ನೆಹರು ಅವರ ವಿರೋಧಿ. ಒಂದು ಗಂಟೆಯ ನಿರಂತರ ಚರ್ಚೆಯಾಯಿತು, ಆದರೆ ಯಾವುದೇ ನಿರ್ಧಾರಕ್ಕೆ ಬರಲಾಗಲಿಲ್ಲ. ಆನಂತರ ಕಾಶ್ಮೀರದ ಅನೇಕ ವಿದ್ಯಾರ್ಥಿ ಸಂಘಟನೆಗಳ, ನಾಗರಿಕರ ಭೆಟ್ಟಿ, ಧರ್ಮದ ಹೆಸರಿನಲ್ಲಿ ತಮ್ಮ ಕಣಿವೆಯ ನೆಮ್ಮದಿಯನ್ನು ಹಾಳುಗೊಳಿಸುತ್ತಿರುವ, ತಮ್ಮ ಕನಸುಗಳನ್ನು ಛಿದ್ರಗೊಳಿಸುತ್ತಿರುವ ವಿಷಯಗಳ ಚರ್ಚೆ. ಗಾಂಧಿ ಅಂತಿಮವಾಗಿ ಕಂಡುಕೊಂಡಿದಿಷ್ಟೇ. ಎಲ್ಲರೂ ಎಲ್ಲರ ವಿರುದ್ಧ ಬೆರಳು ಮಾಡುತ್ತಿದ್ದಾರೆ. ಪರಸ್ಪರ ದೋಷಾರೋಪಣೆ ಸಾಮಾನ್ಯವಾಗಿ ಹೋಗಿದೆ. ಯಾರೂ ತಪ್ಪಿತಸ್ಥರಲ್ಲ ಎಂದ ಮೇಲೆ, ತಪಿತಸ್ಥರನ್ನು ಹುಡುಕುವುದೆಲ್ಲಿ? ಇದು ಗಾಂಧಿಯ ಪ್ರಶ್ನೆ.



ಹೆಗಲಿಗೂ ಹೊರೆಯಾದ ಗಾಂಧಿ

೬

ಅಭಾ ಮತ್ತು ಮನುಳ ಹೆಗಲ ಮೇಲೆ ಗಾಂಧಿ ಭರವಸೆ ಇರಿಸಿದಷ್ಟೂ ಈ ದೇಶದ ಹಿಂದೂಗಳು, ಮುಸ್ಲಿಮರು, ಪಾರಸಿ ಮತ್ತು ಕ್ರಿಶ್ಚಿಯನ್ನರು ಗಾಂಧಿಯ ಹೆಗಲುಗಳನ್ನು ನಂಬಿರಲಿಲ್ಲ. ಸ್ವಾತಂತ್ರ್ಯ ಸಿಕ್ಕು ಏಳು ದಶಕಗಳ ನಂತರವೂ ಗಾಂಧಿ ಒಬ್ಬ ನಾಟಕೀಯ ವ್ಯಕ್ತಿ ಎಂದು ಈ ದೇಶದ ಅಪೂರ್ಣ ಚಿಂತಕರಿಗೆ ಅನ್ನಿಸುವುದಾದರೆ ನಾಟಕೀಯತೆ ಇವರ ಬದುಕಿನಲ್ಲಿ ಎಷ್ಟೊಂದು ಸಹಜವಾಗಿರಬಹುದು! ಇವರ ವಾದವೇ ಸತ್ಯ ಎನ್ನುವುದಾದರೆ ಸ್ವಾತಂತ್ರ ಸಿಕ್ಕ ರಾತ್ರಿ ನೌಖಾಲಿಯಲ್ಲಿ ಒಂಟಿಯಾಗಿದ್ದ ಗಾಂಧಿ, ದೆಹಲಿಯ ಭಂಗಿ ಕಾಲೋನಿಯಲ್ಲಿ ಧ್ಯಾನಸ್ಥನಾಗಿದ್ದ ಗಾಂಧಿ, ಶ್ರೀನಗರದ ರಾಜಾ ಹರಿಸಿಂಗನ ಮುಂದೆ ಫಕೀರನಾಗಿದ್ದ ಗಾಂಧಿ, ರಾಜಕಾರಣಿಗಳಾಗಿದ್ದ ಪಟೇಲ, ನೆಹರೂ ಮತ್ತು ಜಿನ್ನಾರಿಗೆ ಧರ್ಮದೀಕ್ಷೆ ನೀಡುತ್ತಿದ್ದ ಗಾಂಧಿ, ತನ್ನ ಪ್ರಾರ್ಥನಾ ಶಿಬಿರಗಳಲ್ಲಿ ಎಲ್ಲಾ ಧರ್ಮಗಳ ಅಂತಿಮ ಸಾರ ಒಂದೇ ಎಂದು ಸಾರುತ್ತಿದ್ದ ಗಾಂಧಿ, ಸೋರೆಕಾಯಿಯಂತಹ ತನ್ನ ತಲೆಯನ್ನು ಮನುಳ ತೊಡೆಯ ಮೇಲ್ಲಿಟ್ಟು ಬ್ರಹ್ಮಚರ್ಯದ

ಸತ್ವಪರೀಕ್ಷೆಯಲ್ಲಿದ್ದ ಗಾಂಧಿ, ತಾನು ಕುಡಿಯುವ ಚಹಾದ ಕಪ್ಪಿನಲ್ಲಿ ದುಂದುಗಾರಿಕೆಯ ಜಾತ್ರೆ ಆಯಿತೆಂದು ಕಾಶ್ಮೀರದ ರಾಜನೊಂದಿಗೆ ಜಗಳವಾಡಿದ ಗಾಂಧಿ, ಈ ಎಲ್ಲಾ ಯುಗಾಂತರಕ್ಕೆ ಸಾಕ್ಷಿಯಾಗಬಲ್ಲ ಘಟನೆಗಳ ಮಧ್ಯ ಯಾವುದೋ ಸಾಮಾನ್ಯನನ್ನು ನೆನಪಿಸಿಕೊಂಡು ಮಧ್ಯರಾತ್ರಿ ಎದ್ದು ಪತ್ರ ಬರೆಯುತ್ತಿದ್ದ ಗಾಂಧಿ ನಮ್ಮನ್ನು ಕಾಡಲೇಬಾರದಿತ್ತು. ವಾದವಿಷ್ಟೇ, ಒಂದು ಗಾಂಧಿ ನಾವು ತಿಳಿದಂತಿರಲಿಕ್ಕಿಲ್ಲ ಮತ್ತೊಂದು ಆತ ನಮ್ಮ ಸಂಕುಚಿತ ನಿರೀಕ್ಷೆಗಳ ಫಲಿತಾಂಶವಾಗಿರಲಿಕ್ಕಿಲ್ಲ.

ರವಿವಾರ, ಆಗಸ್ಟ 3, 1947ರಂದು ಗಾಂಧಿ ಕಾಶ್ಮೀರದ; ಶ್ರೀನಗರದ ದಾರಿಯಲ್ಲಿದ್ದರು. ಇದು ಗಾಂಧಿಯ ಜೈತ್ರ ಯಾತ್ರೆಯಲ್ಲ. ಅವನೆಲ್ಲ ಸಾರ್ವಜನಿಕ ಪ್ರಾರ್ಥನೆಗಳು ಈಗ ನಿಷೇಧಿಸಲ್ಪಟ್ಟಿದ್ದವು. ಹೀಗಾಗಿ ಕಾಶ್ಮೀರದಲ್ಲಿ ಕಾಲಿಡುತ್ತಲೇ ಗಾಂಧಿ ಹೇಳಿ ಕೊಳ್ಳಲೇಬೇಕಾಯಿತು, "ಕಾಶ್ಮೀರದ ನನ್ನ ಬಂಧುಗಳೆ, ನಾನು ಬಂದಿರುವುದು ಬೇಗಂ ಷೇಕ್ ಅಬ್ದುಲ್ಲಾರನ್ನು ಭೆಟ್ಟಿಯಾಗಲು. ಷೇಕ್ ಅಬ್ದುಲ್ಲಾ ಒಬ್ಬ ಶ್ರೇಷ್ಠ ಸತ್ಯಾಗ್ರಹಿ. ಭಾರತ ಮತ್ತು ಪಾಕಿಸ್ತಾನಗಳೆಂಬ ಪ್ರಶ್ನೆಗಳನ್ನು ಚರ್ಚಿಸಲು ನಾನು ಬಂದಿಲ್ಲ. ನಾನು ರಾಜ-ಕಾರಣಿಯಲ್ಲ. ಪಾಕಿಸ್ತಾನ ಈಗಾಗಲೆ ಸೃಷ್ಟಿಯಾಗಿ ಹೋಗಿದೆ. ಆ ಕುರಿತು ಜಗಳಗಳಿಲ್ಲ."

ಪ್ರಧಾನಿ ಖಾಖ್ ಅವರ ನೇತೃತ್ವದ ಕಾಶ್ಮೀರದ ಸರ್ಕಾರವು ಅಷ್ಟೇ, ಫೋರ್ ಷೆಡ್ ಭಾಗ್‌ದ ವ್ಯಾಪ್ತಿಯನ್ನು ಮೀರದ ಗಾಂಧಿಯ ಚಟುವಟಿಕೆಗಳು ಮುಂದುವರೆಯಬಹುದು ಎಂದು ಹೇಳಿತು. ಆಗಸ್ಟ 2ರಂದು ನಿಯುಕ್ತ ಸ್ಥಳದಲ್ಲಿ ಗಾಂಧಿಯ ಪ್ರಥಮ ಸಾರ್ವಜನಿಕ ಸಭೆ ಏರ್ಪಟ್ಟಿತು. ಭಾಗವಹಿಸಿದ ಜನರ ಸಂಖ್ಯೆ 20 ಸಾವಿರ. ಈ ಕ್ಷಣಕ್ಕೆ ಕಾಶ್ಮೀರವೆಂಬ ಈ ಹಿಮದ ನೆಲ ಗಾಂಧಿಗೆ ಉರಿವ ಒಲೆಗಿಂತಲೂ ಭಯಂಕರವಾಗಿತ್ತು. ಏನೆಲ್ಲಾ ಮಾತು, ಟೀಕೆಗಳು ಹನ್ನೆರಡು ಗಂಟೆಗಳ ದೀರ್ಘ ಪ್ರವಾಸದ ನಂತರ ಇಲ್ಲಿಗೆ ಬಂದಿದ್ದ ಗಾಂಧಿ ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಭಯಂಕರವಾಗಿದ್ದವು. 'ಕಾಶ್ಮೀರದ ಹುಲಿ'ಯೆಂದೇ ಖ್ಯಾತರಾಗಿದ್ದ ಷೇಕ್ ಅಬ್ದುಲ್ಲಾರನ್ನು ಬಿಡುಗಡೆಗೊಳಿಸಿಯೇ ತೀರಬೇಕೆಂದು ಒಂದು ಗುಂಪಿನ ಒತ್ತಡ, ಇನ್ನು ಹತ್ತೇ ದಿನಗಳಲ್ಲಿ ದೇಶ ಸ್ವತಂತ್ರವಾಗಿಬಿಡುತ್ತದೆ, ಆಗ ನಮ್ಮ ಸ್ಥಿತಿ ಏನು? ಎಂದು ಪ್ರಶ್ನಿಸುತ್ತಿದ್ದ ಅಲ್ಪಸಂಖ್ಯಾತರಾದ ಮುಸ್ಲಿಂರ ಮತ್ತು ಸಿಖ್ಖರ ಮತ್ತೊಂದು ಒತ್ತಡ, ಕಾಶ್ಮೀರದ ವ್ಯಾಪ್ತಿಗೆ ಬಂದ ಪಂಜಾಸಾಹೇಬ ಎಂಬ ಸಿಖ್ ಧಾರ್ಮಿಕ ಸ್ಥಳದ ಒತ್ತಡ, ದೇಶ ವಿಭಜನೆಯ ನಂತರ ತಾನು ಸೇರಬೇಕಾದುದು ಭಾರತವನ್ನೋ ಅಥವಾ ಪಾಕಿಸ್ತಾನವನ್ನೋ ಎನ್ನುವ ಕಾಶ್ಮೀರದ ಮಹಾರಾಜಾ ರಾಜಾ ಹರಿಸಿಂಗನ ಒತ್ತಡ, ಅಯ್ಯೋ, ಗೋಡ್ಸೆಯ ಗುಂಡೂ ಇವುಗಳಷ್ಟು ಭೀಕರವಾಗಿರಲಿಲ್ಲ ಬಿಡಿ!

ನಿತ್ಯವೂ ಡಾ. ಸುಶೀಲನಯ್ಯರ್ ಹೇಳುತ್ತಿದ್ದ ಭಗವದ್ಗೀತೆ ಅಥವಾ ಜಡ್ ಅವೆಸ್ತಾದ ಧರ್ಮೋಚ್ಚಾರಗಳಾಗಲಿ, ಬೇಗಂ ಅಬ್ದುಲ್ಲಾರ ಖುರಾನ್‌ದ ಸಾಲುಗಳಾಗಲೀ, ಕಾಶ್ಮೀರದ ಯುವತಿಯರು ಹಾಡಿದ ಸೂಫಿ ಪದ್ಯಗಳಾಗಲೀ, ಗೋಡ್ಸೆಯ ಗುಂಡುಗಳಷ್ಟು ಕರುಣಾಳು ಏಕಿರಲಿಲ್ಲ? ನನ್ನ ಈ ವಾದ ಅತಿರೇಕವೆನ್ನಿಸಬೇಕಿಲ್ಲ. ಹೀಗೊಬ್ಬ ಭಕ್ತ ಗಾಂಧಿಯನ್ನು ಪ್ರಶ್ನಿಸುತ್ತಾನೆ. ಆತನ ಪತ್ರ ಹೈದರಾಬಾದಿನಿಂದ ಬರುತ್ತದೆ, "ಬಾಪೂ, ನಿಮ್ಮ ಪ್ರಾರ್ಥನೆಗಳಲ್ಲಿ

ಖುರಾನ್ ಮತ್ತು ಗೀತೆಯ ಸಾಲುಗಳು ಅನಿವಾರ್ಯವೇ? ಎಲ್ಲ ಧರ್ಮಗಳ ಮೂಲ ಒಂದೇ ಎನ್ನುವುದಾದರೆ ಅವುಗಳಿಗೆ ಭಾಷೆಯ ಭಿನ್ನತೆ ಬೇಕೆ? ಭಾಷೆ ಎನ್ನುವುದು ನಾಟಕದ ಅನಿವಾರ್ಯವಲ್ಲವೇ?" ಈ ಪ್ರಶ್ನೆಗೆ ಗಾಂಧಿ ಕೊಡುವ ಉತ್ತರವನ್ನು ನೀವು ಗಮನಿಸಬೇಕು, "ಹೌದು ಬಂಧು, ನಿನ್ನ ಪ್ರಶ್ನೆ ಸರಿಯಾಗಿಯೇ ಇದೆ. ಅಬ್ಬಾಸ್ ತಾಯಬ್‌ಜೀಯ ಮಗಳಾದ ರೈನಾ ತಾಯಬ್‌ಜಿಯಿಂದ ನಾನು ಖುರಾನ್‌ದ ಪವಿತ್ರ ಸಾಲುಗಳನ್ನು ಕಲಿತೆ. ಆದರೆ ನೆನಪಿರಲಿ, ಅವಳು ಕೃಷ್ಣನ ಮಹಾನ್ ಆರಾಧಕಿ. ಎಲ್ಲ ಧರ್ಮಗಳನ್ನೂ ಸಮೀಕರಿಸಿಕೊಂಡಿದ್ದ ಆಕೆ ನನ್ನ ಸೇವಾಗ್ರಾಮದ ಮಹಾನ್ ಸೇವಕಿಯಾಗಿದ್ದಳು. ಅವಳಿಗೊಂದು ಕನಿಷ್ಠ ಗೌರವವನ್ನು ಸೂಚಿಸುವುದಕ್ಕಾಗಿ ಖುರಾನ್ ಮತ್ತು ಭಗವದ್ಗೀತೆ ಎರಡನ್ನೂ ಇಂದಿಗೂ ತೆಕ್ಕೆಯಲ್ಲಿಟ್ಟುಕೊಂಡು ಸಾಗುತ್ತಿದ್ದೇನೆ. ಗೆಳೆಯನೇ ನಿನ್ನ ಮುಂದಿನ ಪ್ರಶ್ನೆ, ಜಡ್ ಅವೆಸ್ಟಾ. 1943ರ ಮಾರ್ಚ್ 3ರಂದು ಆಗಾಖಾನ್ ಅರಮನೆಯ ಸೆರೆಯಲ್ಲಿದ್ದ ನಾನು ಉಪವಾಸವನ್ನು ಬಿಡುತ್ತಿದ್ದ ವೇಳೆ ಡಾ.ಗಿಲ್ಡರ್ ಇದರ ಕೆಲವು ಪದ್ಯಗಳನ್ನು ಕಲಿಸಿದರು, ನನಗೆ ಸಾವಿನಿಂದ ವಿಮೋಚನೆ ನೀಡಿದರು. ಬಂಧು, ಈ ಮೇಲಿನ ಮೂರು ಮಹನೀಯರಿಗೆ ನನ್ನ ಕನಿಷ್ಠ ಗೌರವ ಸೂಚಿಸುವ ಸಲುವಾಗಿ ನಾನು ಇವುಗಳನ್ನು ಅನಿವಾರ್ಯವಾಗಿಸಿಕೊಂಡಿದ್ದೇನೆ, ನೀನು ಕ್ಷಮಿಸುವುದಾದರೆ ಕ್ಷಮಿಸು." ಇದು ಗಾಂಧಿ.

ಮನುಷ್ಯ ಗೌರವದ ಮಿತಿಯನ್ನು ಮೀರುವವ ಮಾತ್ರ ಇಲ್ಲಿಯೂ ಗಾಂಧಿಯನ್ನು ಪ್ರಶ್ನಿಸಲು ಸಾಧ್ಯವಿದೆ.

ದೇಶ ಸ್ವಾತಂತ್ರ್ಯದ ಆ 20 ದಿನಗಳಲ್ಲಿ ಈ ಗಾಂಧಿ ಹೊತ್ತುರಿಯುವ ಭಾರತಕ್ಕೆ ಎಂತಹ ತಣ್ಣೀರಾಗಿದ್ದ. ಬೆಂಕಿ ತನ್ನ ಕೆನ್ನಾಲಿಗಳ ಹೆಡಮುರಿಗೆ ಕಟ್ಟಿ ಹೇಡಿಯಾಗಿತ್ತು ಆದರೆ ಹಿಂದು-ಮುಸ್ಲಿಂ ದೊಂಬಿ, ಕದನ, ಕಡಿದಾಟ, ಇಂಥವುಗಳಿಗೆ ಮೂಕ ಸಾಕ್ಷಿಯಾದ ಗಾಂಧಿಯನ್ನು ನೋಡಿ, ಸಹಿಸಿಕೊಳ್ಳಲಾಗದೆ ಪತ್ರಕರ್ತನೊಬ್ಬ ಬರೆದ, "ಗಾಂಧಿಯ ಕಣ್ಮುಂದೆಯೇ ಗಾಂಧಿಯ ಜೀವಂತ ಸಮಾಧಿಯಾಯಿತು. ಯಾವ ಮೌಲ್ಯಗಳ ಕಾರಣಕ್ಕಾಗಿ ಇಂದು ದೇಶ ಈ ಹಂತ ತಲುಪಿತೋ ಅವುಗಳ ವಿನಾಶವಾಯಿತು. ಯಾವ ನಿಚ್ಚಣಿಕೆ ಹಿಡಿದುಕೊಂಡು ನಾವು ಬ್ರಿಟಿಷ ಸಾಮ್ರಾಜ್ಯದ ಶಿಖರವನ್ನೇರಿದೆವೋ ಅವುಗಳನ್ನೇ ಮರೆತಾಯಿತು. ಹಿಂದೂ-ಮುಸ್ಲಿಂ ಐಕ್ಯತೆ, ಹಿಂದೂಸ್ಥಾನಿ ಭಾಷೆ, ಮತ್ತು ಖಾದಿ ಎಂಬ ಮೌಲ್ಯದ ಜೀವಂತ ದಹನವಾಯಿತು" ಎಂದು.

ಗಾಂಧಿಯೊಳಗೊಬ್ಬ ಸಾಮಾನ್ಯನಿದ್ದರೆ ಈ ಸಾಲುಗಳನ್ನೋದಿ ಎಷ್ಟೊಂದು ಸುಖಿಸಬಹುದಿತ್ತು. ಆದರೆ ಈಗ ಗಾಂಧಿ ಕೇಳುವ ಪ್ರಶ್ನೆಯೇ ಭಿನ್ನವಾಗಿದೆ, ``Can I believe that I have been buried? Who is my greatest follower, and who is the smallest? I have on one hand myself as my follower and I have on other hand all Indians, ಎಲ್ಲ ಹಿಂದೂ ಮುಸ್ಲಿಂರೂ ಒಂದೇ. ಇವರ್‍ಯಾರೂ ನನ್ನ ಖಾದಿ ಎಂಬ ಸಿದ್ಧಾಂತವನ್ನು ಪಾಲಿಸುತ್ತಾರೆ, ಮತ್ತು ನನ್ನ ಕೈಗಾರಿಕಾ ವಿರೋಧಿ ನೀತಿಯನ್ನು ಖಂಡಿಸುತ್ತಾರೆಂದು ನಾನಂದುಕೊಳ್ಳುವುದಿಲ್ಲ. ಆದರೆ ಖಂಡಿತವಾಗಿ ಇವರ್‍ಯಾರೂ ನನ್ನ

‘ಹಿಂದೂಸ್ತಾನ’ವನ್ನು ಅಷ್ಟೊಂದು ಸರಳವಾಗಿ ಬಿಟ್ಟುಕೊಡುವುದಿಲ್ಲ. ಅಸ್ಪೃಶ್ಯತೆಯನ್ನು ಮರೆಯುವುದರ ಮೂಲಕ ಹಿಂದೂಗಳು ಬೆಳೆಯಬೇಕು, ಹಿಂದೂ ವಿರೋಧ ನೀತಿಯನ್ನು ಅಳಿಯುವುದರ ಮೂಲಕ ಮುಸ್ಲಿಂರು ಬೆಳೆಯಬೇಕು” ಎನ್ನುವುದು ಗಾಂಧಿಯ ಸ್ಪಷ್ಟ ನಿಲುವಾಗಿತ್ತು.

ಕಾಶ್ಮೀರದ ಜನತೆಗೆ ಷೇಕ್ ಅಬ್ದುಲ್ಲಾರ ಬಿಡುಗಡೆ, ದೇಶ ಸ್ವಾತಂತ್ರ್ಯ ಅಥವಾ ದೇಶ ವಿಭಜನೆಗಿಂತಲೂ ಮುಖ್ಯವಾಗಿತ್ತು. ಹಿಂದೂ-ಮುಸ್ಲಿಂರ ಪ್ರಶ್ನಾತೀತ ನಾಯಕರಾಗಿದ್ದ ಇವರನ್ನು ಬಂಧನದಲ್ಲಿರಿಸಿದಾಗ ನಾವೇನು ಮಾಡಲು ಸಾಧ್ಯ? ಎನ್ನುವ ಜನರಿಗೆ ಗಾಂಧಿ ಹೇಳುತ್ತಿರುವುದು ಬಹುತೇಕ ಅರ್ಥವಾಗಲೇ ಇಲ್ಲ. ಗಾಂಧಿ ಹೇಳಿದ, “ಯಾವುದೇ ನಾಯಕ ಒಬ್ಬ ಪ್ರತಿನಿಧಿಯಷ್ಟೇ. ಆತ ಎಷ್ಟೇ ಪ್ರಶ್ನಾತೀತನಾಗಿದ್ದರೂ ಆತನ ಮೇಲೆಯೆ ಸಂಪೂರ್ಣವಾಗಿ ವಾಲಿಬಿಡುವುದು ಆರೋಗ್ಯಕರವಲ್ಲ. ನಮ್ಮ ಕಾಲುಗಳ ಮೇಲೆ ನಾವು ನಿಲ್ಲಬೇಕು. ಹಾಗೆಯೇ ಜನನಾಯಕನೊಬ್ಬ ತನ್ನ ನಿರ್ಗಮನದ ನಂತರ ತನ್ನ ಅನುಯಾಯಿಗಳು ಅನಾಥ ಪ್ರಜ್ಞೆಯನ್ನನುಭವಿಸುವ ರೀತಿಯಲ್ಲಿ ಜನತೆಯನ್ನು ಬಿಡಬಾರದು, ಬದಲಾಗಿ ತನ್ನ ಅನುಪಸ್ಥಿತಿಯಲ್ಲಿಯೂ ಹೋರಾಟ ಮುಂದುವರೆಸುವ ರೀತಿಯಲ್ಲಿ, ಜನರಲ್ಲಿ ಆತ್ಮವಿಶ್ವಾಸ, ಶಿಸ್ತು ಮತ್ತು ಸಂಯಮಗಳನ್ನು ಬೆಳೆಸಬೇಕು. ವ್ಯಕ್ತಿ ಸಾಯಬಹುದು, ಆದರೆ ಹೋರಾಟ ನಿಲ್ಲಬಾರದು” ಸ್ವಯಂ ಇಂಥ ಒಂದು ಸಿದ್ಧಾಂತವನ್ನು ಬದುಕಿದ ಗಾಂಧಿಗೆ ಇವು ಬರೀ ಮಾತುಗಳಾಗಿರಲಿಲ್ಲ. ಗಾಂಧಿ ಸ್ವಯಂ ತಾನು ಪಾಲಿಸದ, ಪ್ರಯೋಗಕ್ಕೊಳಪಡದ ಯಾವ ವಿಚಾರವನ್ನೂ ಅನ್ಯರ ಮೇಲೆ ಹೇರಲಿಲ್ಲ.



ನನ್ನ ಕೊಲೆ ಆಗಬಹುದು!

೧೦

ಸಿಖ್ಖರ ಅತ್ಯಂತ ಪವಿತ್ರ ಸ್ಥಳಗಳಲ್ಲಿ ಕಾಶ್ಮೀರದ ಪಂಜಾಸಾಹೇಬ ಗುರುದ್ವಾರವು ಒಂದು. ಇದು ಭಾರತ ಇತಿಹಾಸದ ಅನೇಕ ವಿಪ್ಲವಗಳನ್ನು ಕಂಡಿದೆ. ಎರಡು ಬಾರಿ ಮುಸ್ಲಿಂರ ದಾಳಿಗೆ ತುತ್ತಾಗಿದೆ. ಇಷ್ಟರಲ್ಲಿಯೇ ಆಗಸ್ಟ್ 15ರಂದು ದೇಶ ಸ್ವತಂತ್ರವಾಗುತ್ತಲೇ ಮತ್ತೆ ಮುಸ್ಲಿಂರ ದಾಳಿಗೆ ತುತ್ತಾಗುತ್ತದೆ. ಆದರೆ ಇಂತಹ ಒಂದು ಆಕ್ರಮಣವನ್ನು ನೋಡುತ್ತಾ ತಮಗೆ ಸುಮ್ಮನಿರಲು ಆಗದು ಎಂದು ಗಾಂಧಿಗೆ ಹೇಳುವ ಸಲುವಾಗಿ ಯುವ ಸಿಖ್, ಧಾರ್ಮಿಕ ನಾಯಕರುಗಳ ಗುಂಪೊಂದು ಭೇಟಿಯಾಗಲು ಗಾಂಧಿಯ ಬಳಿ ಬಂದಿದೆ. ಸಾಧ್ಯವಾದರೆ ಪೂರ್ವ ಪಂಜಾಬ್‌ನ್ನು ಸಿಖ್‌ರಿಗಾಗಿಯೇ ಮೀಸಲಾಗಿರುವ ನೆಲವೆಂದು ಘೋಷಿಸಲೇಬೇಕು ಎಂದು ಅವರು ಗಾಂಧಿಯ ಮೇಲೆ ಒತ್ತಡ ತರುತ್ತಾರೆ. ಈಗ ಗಾಂಧಿ ಈ ಎರಡೂ ಪ್ರಶ್ನೆಗಳಿಗೆ ಉತ್ತರಿಸಬೇಕು–ಸಿಖ್ಖರ ಎರಡನೆಯ ಪ್ರಶ್ನೆಗೆ ಗಾಂಧಿಯ ಪ್ರತಿಕ್ರಿಯೆ ಇಷ್ಟು–

"ಈ ದೇಶದಲ್ಲಿ ಶೌರ್ಯ, ಪರಾಕ್ರಮಗಳಿಗೆ ಹೆಸರಾದ ಒಂದು ಜನಾಂಗ ಇಷ್ಟೊಂದು ಸಂಕುಚಿತವಾಗಬಾರದು. ಇನ್ನು ಪಂಜಾಸಾಹೇಬ್ ಗುರುದ್ವಾರದ ರಕ್ಷಣೆಗಾಗಿ ಗಾಂಧಿ ಹೇಳುವುದಿಷ್ಟೆ ಗುರುದ್ವಾರದ ರಕ್ಷಣೆಗಾಗಿ ಹೊರಗಿನ ಯಾವ ಶಕ್ತಿಯ ಅವಶ್ಯಕತೆಯೂ ಇಲ್ಲ. ನಿಮ್ಮ ಭವಿಷ್ಯ ಕುರಿತಾಗಿ ಇಲ್ಲದ ಭಯಗಳಿಂದ ಹೊರಬನ್ನಿ. ಗುರುದ್ವಾರದ ರಕ್ಷಣೆಗಾಗಿ ನಿಮ್ಮೊಳಗಿನಿಂದಲೇ ಒಂದು ಶಕ್ತಿ ಹೊರ ಬರಬೇಕು. ಆದಾಗ್ಯೂ ಮುಸ್ಲಿಂರೇನಾದರೂ ದಾಳಿ ಮಾಡಿದರೆ ಅದು ಇಸ್ಲಾಂದ ಮಿತಿಯನ್ನು, ಪದ್ಧತಿಯನ್ನು ಮೀರುತ್ತದೆ. ನಿಮ್ಮ ಗುರುದ್ವಾರವನ್ನು ನಾಶ ಮಾಡಲು ಕೈ ಜೋಡಿಸಿದವರೆಲ್ಲಾ ಇಸ್ಲಾಂದ ನಾಶದಲ್ಲಿಯೂ ಕೈ ಜೋಡಿಸಿದ್ದಾರೆ ಎಂದೇ ಅರ್ಥ. ಇಂತಹ ಹೀನ ಕೃತ್ಯಗಳನ್ನು ನಾನು ಎಲ್ಲ ಕಾಲಕ್ಕೂ ವಿರೋಧಿಸುತ್ತೇನೆ."

ಪಂಜಾಸಾಹೇಬದ 9000 ಹಿಂದು ಹಾಗೂ ಸಿಖ್ಖರಿಗೆ ಆಗಸ್ಟ್ 15ರ ಸ್ವಾತಂತ್ರ ದಿನಾಚರಣೆ ಎನ್ನುವುದು ತಮ್ಮ ವಧಾಚರಣೆಯಾಗಿತ್ತೆನ್ನುವುದು ನೋಡಿಯಾಗಿದೆ. ಇತ್ತ ಹಿಂದು ಸಂಘಟನೆಗಳು, ಅತ್ತ ಜಿನ್ನಾ ಹಾಗೂ ಮುಸ್ಲಿಂ ಸಂಘಟನೆಗಳು ಪರಸ್ಪರ ಯಾರು ಯಾರನ್ನೂ ಕೊಲ್ಲಬಾರದು ಎಂದು ಮಾತಾಡಿಕೊಂಡಾಯಿತು. ರಾವಲ್‌ಪಿಂಡಿಯಲ್ಲಿರುವ ನಿರಾಶ್ರಿತರಾರೂ ಭಯಪಡಬೇಕಿಲ್ಲ ಎಂದೂ ಹೇಳಿಯಾಯ್ತು. ಈಗ ಗಾಂಧಿ ಏನು ಹೇಳುತ್ತಾನೆ ಎನ್ನುವುದು ಇದೆಲ್ಲಕ್ಕಿಂತ ಮುಖ್ಯವಾಗಿತ್ತು. ಗಾಂಧಿ ಹೇಳಿದರು– "ಭಯದಿಂದ ನರಳಲು ನೀವು ಯಾವಾಗ ಶುರು ಮಾಡಿದಿರೋ ಆಗಲೇ ಒಂದು ಬಾರಿ ನೀವು ಸತ್ತಾಯಿತು. ಒಬ್ಬ ವ್ಯಕ್ತಿಯನ್ನು, ಒಂದು ಕೋಮನ್ನು ಯಾವಾಗ ನೀವು ದ್ವೇಷಿಸಲು ಶುರು ಮಾಡಿದಿರೋ ಆಗ ನೀವು ಸತ್ತಾಯಿತು. ಅಂತೆಯೆ Even if I am to be murdered, I will bear no ill-will against anyone, I will rather pray to God to grant better sense to the person or persons who murder me."

ಗಾಂಧಿಯ ಈ ಆಕಸ್ಮಿಕ ಮಾತು ಭವಿಷ್ಯದರ್ಶಿಯಾಗಿತ್ತೆ? ನಾಥೂರಾಂ ಗೋಡ್ಸೆ ಗಾಂಧಿಯ ಹತ್ಯೆಗೈದಾಗ ಗಾಂಧಿಯ ಮಾನಸಿಕ ಸ್ಥಿತಿ ಹೀಗೆ ಇತ್ತೆ? ಬದುಕಿನಷ್ಟೇ ಸಾವೂ ಕೂಡ ಗಾಂಧಿಗೆ ಸಹಜವಾಗಿತ್ತೆ? ಈ ಎಲ್ಲ ಪ್ರಶ್ನೆಗಳಿಗೆ ಗಾಂಧಿಯೇ ಉತ್ತರಿಸಬೇಕಷ್ಟೆ ಯಾವುದೇನೇ ಇರಲಿ, ಗಾಂಧಿ ಎಂಬ ಈ ಅರೆಬೆತ್ತಲೆ ಮುಸಾಫಿರ್ ಜುಲೈ 31ರಂದು ದೆಹಲಿಯ ಭಂಗಿ ಕಾಲನಿಯಿಂದ ಕಸಗುಡಿಸುತ್ತ ಹೊರಬಿದ್ದವ ಆಗಸ್ಟ 7ರವರೆಗೂ ಹಗಲು ರಾತ್ರಿ ಅಲೆಮಾರಿಯಾಗಿದ್ದ. ಕೋಟಿ ಕೋಟಿ ಜನರೊಳಗಿದ್ದೂ ಪರದೇಶಿಯಾಗಿದ್ದ. ಬೆಂಬಲಿಗರಿದ್ದೂ ಒಂಟಿಯಾಗಿದ್ದ, ಮದರ್ ಗೀತಾ ತನ್ನ ಕೈಯೊಳಗಿದ್ದೂ ತಬ್ಬಲಿಯಾಗಿದ್ದ, ಸಾವು ಈಗ ಅಲ್ಲಲ್ಲಿ ಹೊಂಚು ಹಾಕಿತ್ತು, ಆತನ ಅತ್ಯಂತ ಪ್ರೀತಿಯ ಚಿಹ್ನೆಯಾಗಿದ್ದ ಚರಕ ಈಗ ರಾಷ್ಟ್ರಧ್ವಜದಿಂದ ಹೊರಬಿದ್ದಿತ್ತು. ಅದಿಲ್ಲದ ಭಾರತದ ರಾಷ್ಟ್ರಧ್ವಜವನ್ನು ನಾನು ಗೌರವಿಸಲಾರೆ ಎಂದು ಗಾಂಧಿ ಎಷ್ಟೇ ಹೇಳಿದರೂ ಅದರ ಬದಲು ಹಿಂಸೆಯ ಸಂಕೇತವಾದ ಸುದರ್ಶನ ಚಕ್ರವನ್ನು ರಾಷ್ಟ್ರಧ್ವಜದಲ್ಲಿ ಸೇರಿಸುವ ಪ್ರಸ್ತಾಪವನ್ನು ನೆಹರು ಮತ್ತು ಪಟೇಲರ ಸಮ್ಮುಖದಲ್ಲಿಯೇ ಅಂಗೀಕರಿಸಲಾಯಿತು. ಈಗಂತೂ ಗಾಂಧಿ ಶಬ್ಧಶಃ ಮೌನಿ. ಈ ಎಲ್ಲ ಕುರಿತು ಆತ ಮಾತಾಡಿದರೂ ಆತ ಯಾರ ವಿರುದ್ಧ ಮಾತಾಡಬೇಕು ಎನ್ನುವುದೇ ಪ್ರಶ್ನೆ.

ಇದೆಲ್ಲ ನಡೆಯುವಾಗ ಆಗಲೇ ಆಗಸ್ಟ್–7. ಭಾರತ ಎನ್ನುವ ನೆಲದ ಎದೆ ಸೀಳಿ ರಾಜ–ಕಾರಣಿಗಳ, ಮತಾಂಧರ ನಕ್ಷೆಯ ನೆಲ ಪಡೆಯಲು ಏಳೇ ದಿನ ಬಾಕಿ. ಈಗ ಗಾಂಧಿ ಕಾಶ್ಮೀರದಿಂದ

ಮತ್ತೆ ಅದೇ ಅಮೃತಸರ್ ಮಾರ್ಗವಾಗಿ ನೌಖಾಲಿಗೆ ಮರಳುತ್ತಿದ್ದ. ಆದರೆ ಈಗ ಅಲ್ಲಿ ಅವರ ವಿರುದ್ಧ ಘೋಷಣೆ, ಕಪ್ಪು ಬಾವುಟ, ಆಕ್ರೋಶದ ಧ್ವನಿ ಯಾವುದೂ ಇರಲಿಲ್ಲ. ಒಂದು ಸಾವಿರ ಸಿಖ್ಖ ಯುವಕರು ದಾರಿಯ ಇಕ್ಕೆಲಗಳಲ್ಲಿ ಪ್ರೀತಿಯ ಹೂಗಳನ್ನು ಕೈಯಲ್ಲಿ ಹಿಡಿದುಕೊಂಡು ನಿಂತಿದ್ದರು. ಗಾಂಧಿ ಬಂಡೆಗಿಂತಲೂ ನೀರು ಶಕ್ತಿಶಾಲಿ ಎಂದು ಸಾಧಿಸಿ ತೋರಿಸಿದ್ದರು. ಸಿಖ್ಖ ಮುಖಂಡನೊಬ್ಬ ಮುಂದೆ ಬಂದು ಗಾಂಧಿಯ ಕೈ ಹಿಡಿದು, "ಮಹಾತ್ಮಾ, ನಮ್ಮ ತಪ್ಪುಗಳನ್ನು ಮನ್ನಿಸು," ಎಂದು ಕಣ್ಣೀರಿಟ್ಟ. ಆಗ ಗಾಂಧಿ ಹೇಳಿದ್ದಿಷ್ಟೆ– ``Forget the past. Remember: everyday dawns for us from the moment we wake up. Let us all, every one, wake up now."

ಆಗಸ್ಟ್–8ರ ಮುಂಜಾವು ಗಾಂಧಿ, ತನ್ನ ಹಿಂಬಾಲಿಕರೊಂದಿಗೆ ಲಾಹೋರದಿಂದ ಪಾಟ್ನಾಕ್ಕೆ ಹೊರಟರು. ಅದು ಮನ್ಸೂನ್ ಮಳೆಯ ಕಾಲ. ಪ್ಯಾಸೆಂಜರ್ ಟ್ರೇನ್‌ನ ಮೂರನೇ ದರ್ಜೆಯ ಕಂಪಾರ್ಟ್‌ಮೆಂಟ್‌ಗಳಲ್ಲಿ ನೀರು ಸೇರಿ ಗಾಂಧಿ ಕುಳಿತ ಬೋಗಿಯನ್ನೆಲ್ಲ ಆವರಿಸಿತು. ಈ ವಿಷಯ ತಿಳಿಯುತ್ತಲೇ ರೈಲನ್ನು ಒಂದು ಕ್ಷಣ ನಿಲ್ಲಿಸಿ, ಅಧಿಕಾರಿಯೊಬ್ಬ ಓಡಿ ಬಂದು, ಕ್ಷಮೆ ಯಾಚಿಸಿ ಗಾಂಧಿಗೆ ಭೋಗಿ ಬದಲಾಯಿಸಿ ಒಳ್ಳೆಯ ಭೋಗಿಗೆ ಬರಲು ಕೋರಿಕೊಂಡ. ನಗುತ್ತ ಗಾಂಧಿ ಕೇಳಿದರು–

"ಆನಂತರ ಈ ಬೋಗಿಯ ಗತಿ ಏನು?"

"ಬೇರೆ ಪ್ರಯಾಣಿಕರಿಗೆ ಒದಗಿಸುತ್ತೇವೆ."

"ಈ ಭೋಗಿ ಅನ್ಯ ಪ್ರಯಾಣಿಕರಿಗೆ ಸೂಕ್ತ ಎಂದು ನೀನು ಭಾವಿಸುವುದಾದರೆ ನನಗೇ ಇರಲಿ ಬಿಡು. ನಾನೂ ಸಾಮಾನ್ಯ ಭಾರತೀಯನೆ ತಾನೆ?"

"ಹಾಗಲ್ಲ ಬಾಪು, ತಮ್ಮ ಆರೋಗ್ಯ ಸರಿಯಾಗಿಲ್ಲ."

"ತಪ್ಪು, ಇದು ತಪ್ಪು. ಒಬ್ಬ ಅಧಿಕಾರಿಯಾಗಿ ಎಂದೂ ಪ್ರಯಾಣಿಕರ ಮಧ್ಯ ಬೇಧ ಎಣಿಸಬೇಡ. ಲಂಚ ತಿನ್ನಬೇಡ."

ಅಧಿಕಾರಿಯ ಕಣ್ ತೆರೆಯಿತು. ಈಗ ಒಂದು ನೆನಪು ತಂದುಕೊಳ್ಳಿ 50 ವರ್ಷಗಳ ಹಿಂದೆ ಸೌಥ್ ಆಫ್ರಿಕಾದ ರೈಲೊಂದರಿಂದ ಗಾಂಧಿ ಹೊರತಳ್ಳಲ್ಪಟ್ಟಿದ್ದ. ಹಾಗೆ ಹೊರಬಿದ್ದ ಗಾಂಧಿಗೆ ಆ ಇಲಾಖೆಯ ಮೇಲೆ ಮತ್ತೆಂದೂ ಸೇಡು ತೀರಿಸಿಕೊಳ್ಳುವ ಯಾವ ಗುರಿಯೂ ಇರಲಿಲ್ಲ. ಗಾಂಧಿ ಈಗ ಪ್ರೀತಿಯೇ ಆಗಿದ್ದ.

ಗಾಂಧಿ ಅವೈಜ್ಞಾನಿಕವಾದದ್ದೇನೂ ನಂಬಿರಲಿಲ್ಲ. ತಾನೇನೂ ಸಾವಿರ ವರ್ಷ ಬದುಕುವವ ಎಂಬ ಭ್ರಮೆ ಗಾಂಧಿಗಿರಲಿಲ್ಲ. ತಾನು ನೂರಿಪ್ಪತ್ತೈದು ವರ್ಷ ಬದುಕುತ್ತೇನೆ ಎಂಬ ಆತನ ವಾದ ಅತ್ಯಂತ ವೈಜ್ಞಾನಿಕವಾಗಿತ್ತು. ಆದರೆ ಗಾಂಧಿಯನ್ನು ವಿಜ್ಞಾನದ ವಿರೋಧಿಯಂತೆ ಬಿಂಬಿಸಲಾಯಿತು. ಇರುವಷ್ಟು ಕಾಲ ಈ ಗಾಂಧಿ ಈ ದೇಶವನ್ನು ತನ್ನ ದೇಹದಂತೆ ರೋಗಮುಕ್ತ, ವ್ಯಸನಮುಕ್ತ, ರಾಷ್ಟ್ರವಾಗಿಸಲು ಯತ್ನಿಸಿದ್ದನಷ್ಟೆ. ಪ್ರಗತಿಯ ದಾರಿಯಲ್ಲಿ ಅವನಿಗೆ ಯಾವುದೂ ಹೊರಗಿನದಾಗಿರಲಿಲ್ಲ. ತನ್ನ ಇಂಗರ್ಸ್‌ನ್ ಗಡಿಯಾರದಲ್ಲಿ ತನ್ನನ್ನೇ ಬಂಧಿಸಿಕೊಂಡಿದ್ದ ಗಾಂಧಿ ಅದರ ಮಹತ್ವವನ್ನು ಪ್ರಪಂಚಕ್ಕೆ ತಿಳಿಸಲು ಹೋರಾಡಿದ.

8 ಆಗಸ್ಟ್‌ರಂದು ಗಾಂಧಿ ತನ್ನ ಪ್ರವಾಸದುದ್ದಕ್ಕೂ ಭಾರತದ ಯುವಕರ ಕುರಿತು ಎಷ್ಟೊಂದು ಆಲೋಚಿಸಿದ್ದಾನೆ– "ಯುವಕರು ಮಾನವ ಜನಾಂಗದ ಭವಿಷ್ಯದ ರೂವಾರಿಗಳು. ದೇಶ ವಿಭಜನೆಯಾಗಲಿ, ಆದರೆ ಯುವಕರ ವಿಭಜನೆಯಾಗಬಾರದು. ನನಗೆ ಚಿಂತೆಯಾಗಿದೆ. ಇಂದಿನ ಈ ಸ್ಥಿತಿಯಲ್ಲಿ ಯುವಕರಾಗಲಿ ಅಥವಾ ಭಾರತದ ರಾಜಕೀಯ ಮುಖಂಡರಾಗಲಿ ಅವರ ಸ್ಥಿತಿಯನ್ನು ಕುರಿತು ಆಲೋಚಿಸುತ್ತಿಲ್ಲ. ಒಳ್ಳೆಯ ಪ್ರಜೆಗಳಾಗುವ ಕುರಿತು ಆಲೋಚನೆಗಳಿಲ್ಲ. ಇತಿಹಾಸದಲ್ಲಿ ಜರುಗಿದ ತಪ್ಪುಗಳನ್ನು ನಾವು ತಿದ್ದಿಕೊಳ್ಳಲು ಸಿದ್ಧರಿಲ್ಲ. ಅನೇಕ ರಾಜಕೀಯ ಪಕ್ಷಗಳು ಯುವಕರನ್ನು ಆಮಿಶಗಳ ಗಾಳ ಹಾಕಿ ಮೀನುಗಳಂತೆ ಹಿಡಿಯುತ್ತಿದ್ದಾರೆ. ಯುವಕರೂ ಅಷ್ಟೆ ಗಾಳದಲ್ಲಿ ಬೀಳಲು ಓಡಿ ಹೋಗುತ್ತಿದ್ದಾರೆ. ಈಗ ಹೀಗೆ ಒಡೆದು ಹೋಗಿರುವ ಯುವಕರನ್ನು ಕ್ರೋಢೀಕರಿಸುವುದು ಕಷ್ಟಕರವಾಗಿದೆ. ಆದರೂ ಅವರನ್ನು ಒಂದುಗೂಡಿಸದೆ ದೇಶಕ್ಕೆ ಉಳಿಗಾಲವಿಲ್ಲ. ಯುವಕರೂ ರಾಜಕೀಯದಿಂದ ದೂರ ಉಳಿದು ಅಧ್ಯಯನಕ್ಕೆ ತೊಡಗಿಸಿಕೊಳ್ಳಬೆಕು. ಯಾವುದನ್ನೂ ಅಭ್ಯಸಿಸದೆ ಅನುಸರಿಸುವುದು ಅಪರಾಧವೇ ಸರಿ. ಅಧ್ಯಯನದ ನಂತರ ಆತ ಕ್ರಿಯಾಶೀಲನಾಗಬೇಕಾದ ಒಂದು ಘಟ್ಟ ಬಂದೇ ಬರುತ್ತದೆ. ರಾಜಕೀಯ ಪಕ್ಷಗಳು ತಮ್ಮ ಉದ್ದೇಶಕ್ಕಾಗಿ ಯುವಕರನ್ನು ಬಳಸಿಕೊಳ್ಳುತ್ತಿರುವುದು ತಪ್ಪು. ಯುವಕರು, ಹಿರಿಯರು ಹೇಳುವುದೆಲ್ಲವೂ ಸರಿ ಅಥವಾ ಇದು ಹಿರಿಯರ ಆಜ್ಞೆ ಎಂದು ತಿಳಿದುಕೊಳ್ಳುವುದು ತಪ್ಪು. ಯುವಕ ಸನ್ಯಾಸಿಯಂತೆ ಬದುಕಬೇಕು. ಜ್ಞಾನ ಮುಖೇನ ಬರುವ ಆನಂದವನ್ನು ಹೊರತುಪಡಿಸಿ ಇನ್ನಾವುದೇ ಆನಂದವನ್ನು ಆತ ಅನುಭವಿಸಬಾರದು. ಯುವಕನದು ನಿರಂತರ ಜ್ಞಾನದಿಂದ ಜ್ಞಾನದೆಡೆಗಿನ ಪ್ರವಾಸ."

ಬ್ರಿಟಿಷ್ ಭಾರತಕ್ಕಿಂತಲೂ ಸ್ವತಂತ್ರ ಭಾರತ ಸ್ವೇಚ್ಛಾಚಾರಿಯಾಗಿರುತ್ತದೆ. ಭ್ರಷ್ಟವಾಗಿರುತ್ತದೆ ಎಂದು ಗಾಂಧೀಜಿಗೆ ಯಾಕನ್ನಿಸಿತು? ಅವನ ಸ್ವಾತಂತ್ರ ಹೋರಾಟ ಎನ್ನುವುದು ಹಾಗಾದರೆ ಬಿಟ್ಟ ಬಾಣ ಮತ್ತು ಕೊಟ್ಟ ಮಾತಾಗಿತ್ತೆ? ಯುವಕರನ್ನು ಕುರಿತು ಮಾತನಾಡಿದ, ಆಲೋಚಿಸಿದ ಇದೇ ದಿನ ಗಾಂಧಿ ಬಿಹಾರದ ಗವರ್ನ್‌ರ್‌ಗೆ ಒಂದು ತಿಳುವಳಿಕೆಯ ಪತ್ರ ಬರೆದಿದ್ದಾನೆ– "ರಾಜ್ಯದ ಎಲ್ಲ ವ್ಯವಹಾರಗಳು ಹಿಂದಿಯಲ್ಲಿರಲಿ. ಮಿಸ್ಟರ್ ಜಯರಾಮದಾಸ್ ದೌಲತ್‌ರಾಮ Live a natural and simple life. ಹದಗೆಟ್ಟು ಹೋಗಿರುವ ರಾಜ್ಯದ ಆಡಳಿತವನ್ನು ಸುಧಾರಿಸಿಕೊ. ಎಲ್ಲ ಮಂತ್ರಿಗಳು ಒಂದಾಗಿ ರಾಜ್ಯದ ಅಭಿವೃದ್ಧಿಯತ್ತ ಗಮನ ಹರಿಸುವಂತೆ ಮಾಡು. ಅಲ್ಪಸಂಖ್ಯಾತರನ್ನು ವಿಶ್ವಾಸಕ್ಕೆ ತೆಗೆದುಕೊ. ಹಳ್ಳಿಗಳಿಗೆ ಹೋಗಿ ಸಾಮಾನ್ಯನಂತೆ ಸಾಮಾನ್ಯರಲ್ಲಿ ಬೆರೆತುಕೊ. ಗುಡಿಕೈಗಾರಿಕೆ ಹಾಗೂ ಖಾದಿಯನ್ನು ಮರೆಯಬೇಡ. ಭ್ರಷ್ಟಾಚಾರವನ್ನು ಪಿಡುಗು ಎಂದು ದೂರವಿಡು. ಪಕ್ಷಾತೀತನಾದ ವ್ಯಕ್ತಿಯನ್ನು ಸೆಕ್ರೆಟರಿಯಾಗಿ ಇಟ್ಟುಕೊ."

ಕೇವಲ ಐವತ್ತು ವರ್ಷ ಈ ಮೇಲಿನ ಘಟನೆಗೆ. ಈಗ ನೋಡಿ ರಾಜಕೀಯ, ಇಲ್ಲಿ ಗವರ್ನ್‌ರ್ ಯಾರು? ಮುಖ್ಯಮಂತ್ರಿ ಯಾರು? ಮುಖಂಡರು ಯಾರು? ಯಾರು ಯಾರಿಗೆ ಮಾದರಿ? ಯಾರ ಕಾರ್ಯವ್ಯಾಪ್ತಿಯೇನು? ನಮ್ಮ ರಾಜಕಾರಣಕ್ಕೆ ಈಗ ಮಾರ್ಗದರ್ಶಕರು ಯಾರು? ದೇಶ ಎನ್ನುವುದು ಕಾಲಾಡಿಸಿ ಬಿಟ್ಟ ಕೊಚ್ಚೆಯಾಗಿದೆ.



ಸಬ್‌ಕಾ ಮಾಲಿಕ ಏಕ್ ಹೈ

೧೧

ಗಾಂಧಿಯ ಕೊನೆಯ ಆಶೆಗಳಲ್ಲಿ ಒಂದು, ಭಾರತೀಯರು ಪಾಕಿಸ್ಥಾನಕ್ಕೆ ಪಾಕಿಸ್ಥಾನಿಯರು ಭಾರತಕ್ಕೆ ವೀಸಾ ಇಲ್ಲದೇ ಪಯಣಿಸುವಂತೆ ಆಗಬೇಕು ಎಂಬುದು. ದೇಶ ವಿಭಜನೆ ಎನ್ನುವುದು ಸಹೋದರರಿಬ್ಬರು ಮನೆಯನ್ನು ಹಂಚಿಕೊಂಡಂತೆ ಸರಳವಾಗಿರಬೇಕು. ಎರಡೂ ಮನೆಗಳೊಳಗಿನ ದೇವರುಗಳು, ಮಂದಿರ-ಮಸೀದಿಗಳು, ಸ್ತ್ರೀ, ಮಕ್ಕಳು, ವೃದ್ಧರು, ಗೌರವಿಸಲ್ಪಡಬೇಕು. ಇದು ಆಡಳಿತದ ವಿಭಜನೆಯೇ ವಿನಃ ವಿಶ್ವಾಸದ ವಿಭಜನೆಯಲ್ಲ ಎಂದು ಗಾಂಧಿಯ ವಾದ. ಅಂತೆಯೇ ಪಾಟ್ನಾದ ತನ್ನ ಪ್ರಾರ್ಥನಾ ಸಭೆಯಲ್ಲಿ ಆಗಸ್ಟ್ 9ರ ಸಾಯಂಕಾಲ ಗಾಂಧಿ ಜನರಿಗೆ ತಿಳಿಹೇಳಿದ್ದ ಕೂಡ- "ನಾನು ಸನಾತನ ಹಿಂದು. ಅವಿಭಜಿತ ಭಾರತದ ಆರಾಧಕ. ನನ್ನಂತೆ ಎಲ್ಲ ಭಾರತೀಯರೂ ತಿಳಿದುಕೊಂಡರೆ ದೇಶವಿಭಜನೆ ಎನ್ನುವುದು ನಮ್ಮನ್ನು ಭೂತದಂತೆ ಕಾಡಬೇಕಿಲ್ಲ. ಭಾರತೀಯನಾಗಿದ್ದ ನಮ್ಮ ಜಿನ್ನಾ ಪಾಕಿಸ್ತಾನದ ಜನರ ಆಶೋತ್ತರಗಳಿಗೆ ಸ್ಪಂದಿಸಲು ಅಲ್ಲಿಗೆ ಹೋಗಿದ್ದಾರೆ ಎಂದು ತಿಳಿದುಕೊಳ್ಳುತ್ತೇನೆ. ನನ್ನ

ಪಾಲಿಗೆ ಮಾತ್ರ ಭಾರತವೇ ಆಗಲಿ ಪಾಕಿಸ್ತಾನವೇ ಇರಲಿ, ಅವು ನನ್ನ ಎರಡು ಮನೆಗಳಂತೆ ಅಷ್ಟೇ. ಜನಾಂಗೀಯ ಕಲಹ ತಲೆದೋರುವುದಾದರೆ ನೆನಪಿರಲಿ, ನಾನು ಶಾಂತಿ ಸ್ಥಾಪನೆಗಾಗಿ ಪ್ರಾಣವನ್ನೂ ಕಳೆದುಕೊಳ್ಳಲು ಸಿದ್ಧ."

ಈ ಸಾಲುಗಳಲ್ಲಿಯೂ ಗಾಂಧಿ ಕೇವಲ ಮುಸ್ಲಿಂರ ಹಿತೈಷಿ, ಅವರ ರಕ್ಷಕ ಎಂದುಕೊಂಡ ಭಾರತೀಯರನ್ನ ಇತಿಹಾಸ ಕ್ಷಮಿಸಲು ಸಾಧ್ಯವಿಲ್ಲ. ಅಯ್ಯೋ! ಇವು ನಮ್ಮ ಹಿರಿಯಜ್ಜನ ಮಾತುಗಳು ಎನ್ನುವಷ್ಟೇ ಗೌರವವನ್ನು ಇಟ್ಟುಕೊಂಡಿದ್ದರೂ, ಕುಟುಂಬವೊಂದರ ಹಿರಿಯನಿಗೆ ಕೊಡುವಷ್ಟೇ ಗೌರವವನ್ನು ಈತನಿಗೆ ಕೊಟ್ಟಿದ್ದರೂ ಉಳಿಯುತ್ತಿದ್ದುದು ಹಿಂದೂ-ಮುಸ್ಲಿಂರ ಮನೆ, ಆಸ್ತಿ, ಮಕ್ಕಳು ಮತ್ತು ದೇವರುಗಳು. ಗಾಂಧಿ ಎನ್ನುವ ಮನುಷ್ಯನಿಗೆ ರಕ್ಷಣೆಯ ಅವಶ್ಯಕತೆ ಇರಲಿಲ್ಲ. ಯಾಕೆಂದರೆ ಈ ಮುಸಾಫಿರ್‌ನಿಗೆ ಅಸುರಕ್ಷಿತತೆ ಎಂದೂ ಪ್ರಶ್ನೆಯಾಗಲಿಲ್ಲ. ಆತ್ಮಸಾಕ್ಷಿಯ ಬುಲೆಟ್ ಪ್ರೂಫಿನ ಈತ ಯಾರನ್ನೂ ಖಂಡಿಸಬಲ್ಲವನಾಗಿದ್ದ, ವಿರೋಧಿಸಬಲ್ಲವನಾಗಿದ್ದ, ಯಾವ ಕ್ಷಣದಲ್ಲಿಯೂ ಪೊರಕೆ ಕೈಯಲ್ಲಿ ಹಿಡಿದುಕೊಂಡು ಹಾದಿಬದಿಯ ಗುಲಾಮನಾಗಬಲ್ಲವನಾಗಿದ್ದ, ಎಂದು ನಾನು ಬರೆದ ಮಾತ್ರಕ್ಕೆ ಗಾಂಧಿ ಮಹಾತ್ಮನಾಗಬಾರದು. ಆತ ಮನುಷ್ಯ, ಮನುಷ್ಯರ ಮಧ್ಯದ ಆತನ ಈ ಪರಿಗಣನೆಗೆ ಅಯ್ಯೋ! ಅರವತ್ತು ವರ್ಷ ಬೇಕಾಗಿತ್ತೆ?

ಈ ಅಂತಿಮ ದಿನಗಳಲ್ಲಿ ಬಿಹಾರದ ಜಮೀನ್ದಾರರಿಗೆ ಗಾಂಧಿ ಬರೆಯುತ್ತಾನೆ, "ದುಡಿಯುವ ಕೈಗಳಿಗೆ ಕೆಲಸ ಕೊಡಿ, ಅವರು ಮಾತ್ರ ಭೂಮಿಯ ವಾರಸುದಾರರಾಗಿರುವುದರಿಂದ ರೈತರಿಗೆ ಭೂಮಿಯನ್ನು ಬಿಟ್ಟುಕೊಡಿ. ಬದಲಾವಣೆಯ ಗಾಳಿ ಬೀಸುತ್ತಿದೆ, ಬ್ರಿಟಿಷರು ದೇಶ ಬಿಟ್ಟು ತೊಲಗುತ್ತಿದ್ದಾರೆ, ನಿಮಗಿಂತಲೂ ಮುಂಚೆ ಅವರಿಲ್ಲಿ ಜಮೀನ್ದಾರರಾಗಿದ್ದರು, ಪ್ರಭುಗಳಾಗಿದ್ದರು, ಹೀಗೆ ಇದ್ದವರೊಮ್ಮೆ ತಮ್ಮ ಸ್ಥಳವನ್ನು ಬಿಟ್ಟುಕೊಡುವುದು ಅನಿವಾರ್ಯವಾಗುತ್ತದೆ ಎನ್ನುವುದಾದರೆ ನಿಮ್ಮ ಸ್ಥಿತಿಯನ್ನು ಊಹಿಸಿಕೊಳ್ಳಿ. ಆಯುಧಗಳ ಸಹಾಯದಿಂದ ನೀವು ಜನರನ್ನು ಹತ್ತಿಕ್ಕಲಾಗದು. ನೆನಪಿರಲಿ, ಬಿಹಾರದ ಜಮೀನ್ದಾರುಗಳ ಬಳಿಯಿರುವ ಆಯುಧಗಳನ್ನು ಮುಟ್ಟುಗೋಲು ಹಾಕಲು ನಾನು ಇಷ್ಟರಲ್ಲಿಯೇ ಬಿಹಾರ್ ಸರ್ಕಾರಕ್ಕೆ ಬರೆಯಲಿದ್ದೇನೆ."

ಆಗಸ್ಟ್ 9ರಂದು ಹೀಗೆ ಮಾತನಾಡಿದ ಗಾಂಧಿ ಜಮೀನ್ದಾರರ ಆಕ್ರೋಶಕ್ಕೆ, ಅಪನಂಬಿಕೆಗೆ, ಯಾಕೆ ಗುರಿಯಾಗಬೇಕಾಯಿತೋ ನನಗೆ ತಿಳಿಯುತ್ತಿಲ್ಲ. ಈ ಎಚ್ಚರಿಕೆಯ ಮಾತುಗಳಿಂದ ಗಾಂಧಿ ರಕ್ಷಿಸಿದ್ದು ಜಮೀನ್ದಾರರನ್ನೇ ಹೊರತು ರೈತರನ್ನಲ್ಲ. ಬಡರೈತರು ಭುಗಿಲೆದ್ದು, ಬಿಹಾರದ ಬೀದಿ-ಬೀದಿಗಳಲ್ಲಿ ಜಮೀನ್ದಾರರನ್ನು ಕೊಂದು ಹಾಕಬಹುದು. ಬ್ರಿಟಿಷರ ವಿದಾಯ, ದೇಶ ವಿಭಜನೆ, ಸ್ವಾತಂತ್ರ್ಯೋತ್ಸವಗಳ ನೆಪದಲ್ಲಿ ಅರಾಜಕತೆ ತಲೆಯೆತ್ತಿ ಜಮೀನ್ದಾರರುಗಳ ಸುರಕ್ಷತೆ ಕಷ್ಟಕರವಾಗಬಹುದು, ತುಳಿತಕ್ಕೊಳಗಾದ, ಶತಮಾನಗಳ ದ್ವೇಷ ಇಟ್ಟುಕೊಂಡ ಜನಗಳು ದಂಗೆ ಏಳಬಹುದು ಎಂದು ಭೀತಿಗೊಂಡವ ಗಾಂಧಿಯೊಬ್ಬನೆ. ಅನೇಕ ದಿನಗಳಿಂದ ಇಂತಹ ಭಯಗಳಿಂದ ಅವಿಶ್ರಾಂತನಾಗಿದ್ದ ಗಾಂಧಿಗೊಂದು ನೌಖಾಲಿಯಿಂದ ಸುದ್ದಿ ಬಂತು. ಕನುಗಾಂಧಿಯ ನೇತೃತ್ವದಲ್ಲಿ ನೌಖಾಲಿಯಲ್ಲಿ ಈಗ ಹಿಂದೂ-ಮುಸ್ಲಿಂರ ಮಧ್ಯ ಅದ್ಭುತ ಸಾಮರಸ್ಯ ಒಡಮೂಡಿತ್ತು. ಇದನ್ನು ಕೇಳುತ್ತಲೇ ಗಾಂಧಿಗೆ ನೆಮ್ಮದಿಯ ನಿದ್ರೆ ಬಂತು.

ಆಗಸ್ಟ್ 10ರ ಬೆಳಗಾದರೆ ಗಾಂಧಿಗೆ ನೌಖಾಲಿಗೆ ಹೋಗುವ ತವಕ, ಆದರೆ ಹಾಗಾಗಲಿಲ್ಲ. ಈಗ ಕಲ್ಕತ್ತೆ ಹೊತ್ತುರಿಯುತ್ತಿದೆ, ಮಹಾನದಿ ಗಂಗೆಯ ಮಗಳೆಂದೇ ಪ್ರಸಿದ್ಧವಾದ ಹೂಗ್ಲಿ ನದಿ

ಹರಿದು, ಶ್ರೀರಾಮಕೃಷ್ಣ ಪರಮಹಂಸ, ಕಬೀರ, ವಿಶ್ವಭಾರತಿಯಂತಹ ಮಹಾನ್ ಸಂತರ ಅಡಿಯ ಮಣ್ಣಾಗಿ ಗುರುದೇವ ರವೀಂದ್ರರ ಕಣ್ಣಾಗಿ, 1904ರಲ್ಲಿಯೇ ದೇಶಭಕ್ತಿಯ ಕಹಳೆ ಮೊಳಗಿಸಿದ ಈ ನೆಲ ಈಗ ಹಿಂದೂ-ಮುಸ್ಲಿಂರ ರಕ್ತದಿಂದ ತೋಯ್ದುಹೋಗಿದೆ. ಗವರ್ನರ್ ಬ್ಯಾರೊ ಹೇಳುವ ಪ್ರಕಾರ ಹಿಂದೂಗಳಿಗೆ ಅಂಜಿ ಮುಸ್ಲಿಂರು ಕಲ್ಕತ್ತೆಯಿಂದ ಪಲಾಯನಗೈಯುತ್ತಿದ್ದಾರೆ. ಅವರಿಗೀಗ ಗಾಂಧಿ ಎಂಬ ಸಾಮಾನ್ಯ ಮನುಷ್ಯನ ಅಭಯ ಬೇಕಾಗುತ್ತದೆ. ಸುದೈವಕ್ಕೆ ಕಲ್ಕತ್ತೆಯ ಮಾಜಿ ಮೇಯರ್ ಆಗಿದ್ದ, ಹಾಲಿ ಕಲ್ಕತ್ತಾ ಮುಸ್ಲಿಂ ಲೀಗ್‌ನ ಸೆಕ್ರೆಟರಿ ಆಗಿದ್ದ ಎಸ್.ಮೊಹಮ್ಮದ್ ಉಸ್ಮಾನ್ ಗಾಂಧಿಯ ಅಭಿಮಾನಿಯಾಗಿದ್ದ. ಆಗಸ್ಟ್ 10ರಂದು ಅಸಂಖ್ಯಾತ ಮುಸ್ಲಿಂರನ್ನು ಸೇರಿಸಿಕೊಂಡು ಗಾಂಧಿಯ ಬಳಿ ಬಂದ ಉಸ್ಮಾನ್, ಗಾಂಧಿ ಯಾವ ಕಾರಣಕ್ಕೂ ನೌಖಾಲಿಗೆ ಹೋಗಬಾರದು, ಇಷ್ಟಕ್ಕೂ ನೌಖಾಲಿಗೆ ಗಾಂಧಿ ಹೊರಟಿರುವುದು ಹಿಂದುಗಳನ್ನು ರಕ್ಷಿಸುವುದಕ್ಕೋಸ್ಕರ, ನೀವು ಒಬ್ಬ ಹಿಂದೂ ಆಗಿರುವಂತೆ ಒಬ್ಬ ಮುಸ್ಲಿಂನೂ ಆಗಿರುವುದು ಸತ್ಯವೆನ್ನುವುದಾದರೆ, ಕಲ್ಕತ್ತೆಯಲಿ ನಮ್ಮ ರಕ್ಷಣೆಗೋಸ್ಕರ ಯಾಕೆ ಉಳಿಯಬಾರದು? ಎಂದು ವಾದಿಸಿದ. ಗಾಂಧಿ ಉಸ್ಮಾನ್‌ರ ಈ ವಾದವನ್ನು ಸ್ವೀಕರಿಸುತ್ತಲೇ ಅವನ ಹೆಗಲಿಗೊಂದು ಜವಾಬ್ದಾರಿ ಹೇರಿದರು. "ಇಲ್ಲಿಯ ಮುಸ್ಲಿಂರನ್ನು ಸಂಕಷ್ಟಕ್ಕೆಡೆ ಮಾಡಿ ನೌಖಾಲಿಯಲ್ಲಿ ಹಿಂದೂಗಳನ್ನು ಸಾವಿನ ದವಡೆಯಿಂದ ಪಾರು ಮಾಡುವುದು ನನ್ನ ಉದ್ದೇಶವಲ್ಲ. ಆದರೆ ಸಂಕಷ್ಟದಲ್ಲಿರುವ ಅಲ್ಲಿಯ ಜನತೆಯನ್ನು ಹಾಗೆಯೇ ಬಿಟ್ಟು ಇಲ್ಲಿ ಉಳಿಯುವುದು ನನಗೆ ಸಾಧ್ಯವಾಗದ ಮಾತು. ಉಸ್ಮಾನ್, ನೀವು ನನಗೆ ವಚನ ಕೊಡಿ, ನೌಖಾಲಿಯ ಒಂದು ನರಪಿಳ್ಳೆಗೂ ಧಕ್ಕೆ ಬಾರದು ಎನ್ನುವ ಅಭಯ ಕೊಡಿ. ಈ ಮಾತಿನಲ್ಲಿ ಒಂದು ವೇಳೆ ಏನಾದರೂ ಎಡವಟ್ಟಾದರೆ ನಾನು ಉಪವಾಸದ ಮೂಲಕ ಪ್ರಾಣ ತ್ಯಜಿಸುತ್ತೇನೆ."

ಗಾಂಧಿ 11 ಆಗಸ್ಟ್‌ರಂದು ಹೋಗಬೇಕಾದ ತಮ್ಮ ದಿನಾಂಕವನ್ನು 13ಕ್ಕೆ ಮುಂದೂಡಿದರು. ಗಾಂಧಿ ಕಲ್ಕತ್ತೆಯಲ್ಲಿ ಉಳಿದ. ಆದರೆ ಆತನ ರಕ್ತದೊತ್ತಡದಲ್ಲಿ ಮಾತ್ರ ಏರುಪೇರಾಗಿತ್ತು. ಆರೋಗ್ಯ ಅಂದುಕೊಂಡಷ್ಟು ಸರಿಯಾಗಿರಲಿಲ್ಲ. ಆ ಸಾಯಂಕಾಲ ಪ್ರಾರ್ಥನಾ ಸಭೆಯಲ್ಲಿ ಗಾಂಧಿ ಹೇಳಿದ–

ಗೆಳೆಯರೇ,

ನಿಮ್ಮ ಒತ್ತಾಸೆಯ ಮೇರೆಗೆ ನಾನಿಲ್ಲಿ ಉಳಿದುಕೊಂಡಿದ್ದೇನೆ. ಜೀವನದುದ್ದಕ್ಕೂ ಹಿಂದು-ಮುಸ್ಲಿಂರಿಬ್ಬರಿಗಾಗಿಯೂ ಬದುಕು ಸವೆಸಿದ್ದೇನೆ. ಆದರೆ ದೇಶ ಸ್ವತಂತ್ರವಾಗುವ ಹೊಸ್ತಿಲಲ್ಲಿ ನಿಮ್ಮ ನಿಮ್ಮ ಮೂರ್ಖತನದಿಂದಾಗಿ ಇಷ್ಟೊಂದು ರಕ್ತ ಹರಿಯುತ್ತದೆಂದು ನಾನೆಂದೂ ಭಾವಿಸಿರಲಿಲ್ಲ. ಇಂಥವರ ಮಧ್ಯ ಈ ಎಲ್ಲ ಹುಚ್ಚಾಟಕ್ಕೆ ಮೂಕ ಸಾಕ್ಷಿಯಾಗುವ ಬದಲು ದೇವರು ನನ್ನನೇಕೆ ಕರೆಸಿಕೊಳ್ಳುತ್ತಿಲ್ಲ ಎಂದು ಚಿಂತಿತನಾಗಿದ್ದೇನೆ. ಜನತಗೆ ರಕ್ಷಣೆ ನೀಡಬೇಕಾದ ಪೊಲೀಸರೂ ಮತಾಂಧರಾಗಿದ್ದಾರೆ ಎಂದು ಕೇಳಿ ನನಗೆ ಎಷ್ಟೊಂದು ನೋವಾಗಿದೆ. ಈಗ ನನಗುಳಿದಿರುವ ದಾರಿ ಒಂದೇ. ನೀವಂತೂ ನನ್ನ ಕೈ ಬಿಟ್ಟಿದ್ದೀರಿ. ಕನಿಷ್ಠ ನಾನು ನಂಬಿದ ದೇವರು ನನ್ನ ಕೈಬಿಡದಿರಲಿ."

ಗಾಂಧಿ ನಿರ್ಗಮಿಸಿದರು. ಹಿಂದೂ-ಮುಸ್ಲಿಂರು ನಾಚಿಕೆಯಿಂದ ತಲೆತಗ್ಗಿಸಿಕೊಂಡು ಅಲ್ಲಿಂದ ಹೋಗುವ ಹೊರತು ಅನ್ಯದಾರಿಯಿರಲಿಲ್ಲ.

ಇದೆಲ್ಲಾ ಎಷ್ಟೊಂದು ಮೂರ್ಖತನವಾಗಿತ್ತು. ಎರಡು ಸನಾತನ ಸಮಾಜಗಳು, ಲಕ್ಷಾಂತರ ಬುದ್ಧಿಜೀವಿಗಳು, ಸಾವಿರಾರು ರಾಜಕಾರಣಿಗಳು, ಹಲವು ಸಾವಿರ ಧರ್ಮಗುರುಗಳು, ಸರ್ಕಾರಗಳು,

ಬಗೆಹರಿಸಲಾಗದ ಸಮಸ್ಯೆಯನ್ನು ಗಾಂಧಿಯೊಬ್ಬನೇ ನೀಗಿಸಬೇಕು ಎನ್ನುವುದು ಎಷ್ಟೊಂದು ಅಸ್ವಾಭಾವಿಕ ನಿರೀಕ್ಷೆಯಾಗಿತ್ತು. ಸರ್ ಫ್ರೆಡ್ರಿಕ್ ಬ್ಯಾರೊಗೆ ಗಾಂಧಿ ಬರೆಯುತ್ತಾನೆ,

"ಯಾವುದನ್ನು ನೀನು ಮತ್ತು ನಿನ್ನ ಸರ್ಕಾರ ಮಾಡಲಾಗದು ಎಂದು ಕೈಚೆಲ್ಲಿ ಕುಳಿತಿರೋ, ಅದನ್ನು ನಿನ್ನೆ ಒಂದು ಕೋಮಿನ ಜನತೆ ಸಾಧಿಸಿ ತೋರಿಸಿದ್ದಾರೆ. ದೇವರೆಂಬ ಕುಂಬಾರನ ಕೈಯಲ್ಲಿ ಈ ಮಣ್ಣಿನ ಮನುಷ್ಯ ಏನನ್ನೂ ಸಾಧಿಸಬಲ್ಲ ಎಂಬುದು ನಿನಗೆ ಈಗಲಾದರೂ ಮನವರಿಕೆಯಾಗಬೇಕು."

ಅದೇನು ಹುಚ್ಚೋ, ಆಪಾದನೆಗಳ ಹೆಡಿಗೆ ಹೊತ್ತು, ಹಿಂದುಗಳು ಕಲ್ಕತ್ತೆಯಲ್ಲಿ ಗಾಂಧಿಯನ್ನು ಭೇಟಿ ಮಾಡಿದರು. ಮುಸ್ಲಿಂರಿಂದಾಗಿ ತಮ್ಮ ಸ್ಥಿತಿ ಕರುಣಾಜನಕವಾಗಿದೆಯೆಂದು ಹೇಳಿಕೊಂಡರು. ಆಗ ಗಾಂಧಿ ಕೇಳಿದ್ದಿಷ್ಟೇ, "ಕಲ್ಕತ್ತೆಯ ಒಟ್ಟು ಜನಸಂಖ್ಯೆಯ ಇಪ್ಪತ್‌ಮೂರು ಪ್ರತಿಶತ ಮಾತ್ರ ಮುಸ್ಲಿಮರಿದ್ದಾರೆ. ಆದರೆ ಎಪ್ಪತ್ತೆರಡು ಪ್ರತಿಶತ ಇರುವ ನಿಮಗೆ ಅವರಿಂದ ಹಿಂಸೆ ಆಯಿತು ಎನ್ನುವುದನ್ನು ನಾನು ನಂಬುವುದಿಲ್ಲ. ಸರ್ಕಾರ ಮತ್ತು ಸಮಾಜದ ಜವಾಬ್ದಾರಿಯುತ ಸ್ಥಾನದಲ್ಲಿರುವವರು ತಮ್ಮ ಕೆಲಸವನ್ನು ಸರಿಯಾಗಿ ನಿಭಾಯಿಸುತ್ತಿಲ್ಲ ಎಂದು ಬೇಕಾದರೂ ಹೇಳಿರಿ. ಸರ್ಕಾರ ಮಾಡಲಾಗದನ್ನು ಪ್ರಸಂಗ ಬಂದರೆ ನೀವೇ ಮಾಡಿ ತೋರಿಸಿರಿ. ನೀವು ಬಹುಸಂಖ್ಯಾತರೆನ್ನುವುದು ರಚನಾತ್ಮಕವಾಗಿ ಸಾಧಿಸಿ ತೋರಿಸಿ. ಆದರೆ ಯಾವುದೇ ಕಾರಣಕ್ಕೂ ಅಲ್ಪಸಂಖ್ಯಾತರ ಮೇಲೆ ಹರಿಹಾಯಬೇಡಿ."

ಅಸಮಾಧಾನಿಗಳಾದ ಹಿಂದೂಗಳು ಹಿಂದಿರುಗಿದರು. ಗಾಂಧಿ ಆಮೀಯಾ ಎನ್ನುವ ಪುಟ್ಟ ಬಾಲಕಿಗೆ ಪತ್ರ ಬರೆಯುವುದರಲ್ಲಿ ತಲ್ಲೀನರಾದರು.

> ನಿನ್ನ ಪತ್ರ ಕೈ ಸೇರಿದೆ. ನಿನ್ನ ಕೈ ಬರಹ ತುಂಬಾ ಮುದ್ದಾಗಿದೆ. ತರಬೇತಿ ಮುಗಿದ ನಂತರ ಶಾಂತಿನಿಕೇತನಕ್ಕೆ ಹೋಗು. ನನಗೆ ಅದು ಇಷ್ಟವಿಲ್ಲ, ಇದು ಇಷ್ಟವಿಲ್ಲ ಎನ್ನುವ ನಿನ್ನ ಸಾಲುಗಳೇ ಹೇಳುತ್ತವೆ, ನೀನು ಕಲಿಯಬೇಕಾದುದಿನ್ನೂ ತಂಬಾ ಇದೆ. ಆಸಕ್ತಿಯೊಂದಿದ್ದರೆ ಸಾಕು, ಬದುಕಿಗೆ ಎಷ್ಟೊಂದು ಮಾರ್ಗಗಳು ತೆರೆದುಕೊಳ್ಳುತ್ತವೆ. ಉರ್ದು ಬರೆಯುವುದನ್ನು ಕಲಿತುಕೋ. ನಿನ್ನ ಮುಂದಿನ ಪತ್ರವನ್ನು ಉರ್ದುವಿನಲ್ಲಿಯೇ ನಿರೀಕ್ಷಿಸುತ್ತೇನೆ. ಆರೋಗ್ಯ ಚೆನ್ನಾಗಿಟ್ಟುಕೊ.
>
> ಇಂತಿ
>
> ನಿನ್ನ ಬಾಪು

ಆಗಸ್ಟ್ 12ರ ನಸುಕಿನ ನಾಲ್ಕಕ್ಕೆ ಡಾ.ಪಿ.ಸಿ. ಘೋಷ್, ಎಸ್.ಪಿ.ರಾಯ್‌ಚೌಧುರಿ, ಮೊಹಮ್ಮದ್ ಉಸ್ಮಾನ್, ಎಮ್.ಎನ್.ಚಟರ್ಜಿಯನ್ನು ಕರೆದುಕೊಂಡು ಗಾಂಧಿ ಕಲ್ಕತ್ತಾದ ಗಲಭೆ ಪೀಡಿತ ಪ್ರದೇಶಗಳಾದ ಪೈಕ್‌ಪಾರಾ, ಚಿತ್‌ಪೂರ್, ಬೆಲ್‌ಗಾಚಿಯಾ, ಮಾಣಿಕ್‌ಟೋಲಾ, ನರ್ಕಿಲ್ ದಂಗಾಯಿ, ಬಿಳಿಯಾ ಘಾಟ್, ಟಾಂಗ್ರಾ, ಏಂಟಾಲಿ ಮತ್ತು ರಾಜಾ ಬಝಾರ್‌ಗಳಿಗೆ ಸಂದರ್ಶನ ಕೊಟ್ಟರು. ಅಲ್ಲಲ್ಲಿ ಅರೆಸುಟ್ಟ ಮನೆಗಳು, ಬಿಕೊ ಎನ್ನುತ್ತಿದ್ದ ರಸ್ತೆಗಳು, ವಲಸೆ ಹೋಗಿ ಕದ ಮುಚ್ಚಿದ ಮನೆಗಳು, ಅನಾಥವಾದ ದನ-ಕರುಗಳು, ದೈಹಿಕವಾಗಿ ಹಿಂಸೆಗೊಂಡ, ಇರಿತಕ್ಕೊಳಗಾದ ಅಮಾಯಕರು ಎಲ್ಲ ನೋಡಿ ಗಾಂಧಿ ಕಣ್ಣೀರಿಟ್ಟ. ಮಾತು ಇಂಗಿಹೋಯಿತು, ``The nacked truth about fallen man caused in him, a hurt too deep for words."



ಪಾತಕಿಯೊಂದಿಗೆ ಪರಮಾತ್ಮನ ಸ್ಮರಣೆ

೧೨

ಗಾಂಧಿ ಈಗ ಭಾರತದ ಇತಿಹಾಸ ಕಂಡ ಶುದ್ಧ ಪಾತಕಿಯೊಬ್ಬನನ್ನು ಸಂಧಿಸುವ ಘಳಿಗೆ. ಮಾತು, ರೀತಿ, ತತ್ವ, ಸಿದ್ಧಾಂತಗಳೆಲ್ಲದರಲ್ಲಿಯೂ ಆತ ಗಾಂಧಿಯ ತದ್ವಿರುದ್ಧ. ಜಿನ್ನಾನ 'ಡೈರೆಕ್ಟ್ ಆ್ಯಕ್ಷನ್ ಡೇ' ಅನ್ನು ನೂರಕ್ಕೆ ನೂರು ಯಶಸ್ವಿಗೊಳಿಸಿ ಇಡಿ ಕಲ್ಕತ್ತೆ ಹಿಂದೆಂದೂ ಕಂಡ-ರಿಯದ ಹಿಂದೂಗಳ ಕಗ್ಗೊಲೆಗೆ ಕಾರಣನಾದ ನಲವತ್ತೇಳು ವರ್ಷದ ನರಹಂತಕ. ಹೆಣ್ಣು-ಹೆಂಡ, ಕಾಳಸಂತೆ, ಕ್ಯಾಬರೆಗಳಲ್ಲಿ ಕ್ರಿಯಾಶೀಲನಾಗಿದ್ದ ಈತ ಜಿನ್ನಾನ ಕಟ್ಟರ್ ಅನುಯಾಯಿ, ಅಥವಾ ಜಿನ್ನಾನಷ್ಟೆ ರಾಜಕೀಯ ಲೆಕ್ಕಾಚಾರದ ಮುಸ್ಲಿಂ. ತನ್ನ ಭಯಾನಕ ಕೃತ್ಯಗಳಿಂದ ಹಿಂದೂಗಳ ನಿದ್ದೆಗೆಡಿಸಿ, ಅವರು ಮನೆ-ಮಠಗಳನ್ನು ಬಿಟ್ಟು ಹೋಗುವಂತೆ ಮಾಡಬಹುದು, ಆ ಮೂಲಕ ಮುಸ್ಲಿಂರ ಏಕಮೇವ ನಾಯಕನಾಗಬಹುದು ಎಂದು ಕನಸು ಕಂಡ ಪಾತಕಿ. ಈಗ ಗಾಂಧಿ ನೌಖಾಲಿಗೆ ಹಿಂದಿರುಗುವುದನ್ನು ಬಿಟ್ಟು ಸೋಡೆಪುರ್ ಆಶ್ರಮದಲ್ಲಿ, ಕಲ್ಕತ್ತಾದ ಬಳಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾನೆ ಎಂದು ಗೊತ್ತಾಗುತ್ತಲೇ ಆತ ಓಡಿ ಬಂದ. ಈತನ

ಹೆಸರು ಸುಹರ್‌ವರ್ದಿ. ಕಲ್ಕತ್ತಾದಲ್ಲಿ ಸುಹರ್‌ವರ್ದಿ ಮತ್ತು ಮತಾಂಧ ಮುಸ್ಲಿಂರನ್ನು ಕೊಲ್ಲಲೇಬೇಕೆಂದು ಕಾಯುತ್ತಿದ್ದ ಹಿಂದೂಗಳ ಕೈಯಿಂದ ತಮ್ಮ ರಕ್ಷಣೆ ಮಾಡಿ ಎಂದು ಗಾಂಧಿಯ ಮೊರೆಹೊಕ್ಕ ರಕ್ತದಲ್ಲಿಯೇ ಕೈತೊಳಿಯುತ್ತಿದ್ದ ಶಹೀದ ಸುಹರ್‌ವರ್ದಿ, ವ್ಯಭಿಚಾರ ಮತ್ತು ವೈಭೋಗವನ್ನೇ ಜೀವನ ಎಂದುಕೊಂಡಿದ್ದ. ಸುಹರ್‌ವರ್ದಿ ಕರಾಚಿಯಿಂದ ಓಡಿಬಂದು ಹೀಗೆ ಕೇಳಿಕೊಳ್ಳುವುದು ಬುದ್ಧನೆದುರು ಅಂಗುಲಿಮಾಲಾ ಮಾತನಾಡಿದಂತಿದೆ. ಆದರೆ ಸುಹರ್‌ವರ್ದಿಯ ಮಾತನ್ನು ಕೇಳುವುದೆಂದರೆ ಗಾಂಧಿ ತನ್ನ ಸಾವನ್ನು ಆಹ್ವಾನಿಸಿಕೊಂಡಂತೆ. ಅಪಾರ ಸಂಖ್ಯೆಯ ಹಿಂದೂಗಳ ಸಂಶಯಕ್ಕೆ ಎಡೆಕೊಟ್ಟಂತೆ.

ಆಗಸ್ಟ್ 13ರ ಪ್ರಾರ್ಥನಾ ಸಭೆಯಲ್ಲಿ ಹಿಂದೂ ಯುವಕನೊಬ್ಬ ಈ ಕುರಿತು ಗಾಂಧಿಯನ್ನು ಏನೆಲ್ಲಾ ಪ್ರಶ್ನೆ ಮಾಡಿಯಾಗಿತ್ತು– "ನಮ್ಮ ಮಾರಣಹೋಮ ನಡೆಯುವಾಗ ಬಾರದ ನೀವು ಈಗ ಯಾಕೆ ಬಂದೀರಿ? ಇಂದು ಮುಸ್ಲಿಂರು ಕಲ್ಕತ್ತೆಯನ್ನು ಬಿಟ್ಟು ಹೋಗುವುದು ನೀವು ಗಂಭೀರವಾಗಿ ಪರಿಗಣಿಸುವುದಾದರೆ ಪಾಕಿಸ್ತಾನದ ಮೂಲೆ ಮೂಲೆಗಳಿಂದ, ನೌಖಾಲಿಯಿಂದ, ಹಿಂದೂಗಳು ಪಲಾಯನಗೈದದ್ದು ನಿಮಗೆ ಗಂಭೀರ ಪ್ರಶ್ನೆ ಎನಿಸಲಿಲ್ಲ ಏಕೆ? ಮಿ.ಗಾಂಧಿ, ಕಲ್ಕತ್ತೆಗೆ ನಿಮ್ಮ ಅವಶ್ಯಕತೆ ಇಲ್ಲ. ಶಹೀದ್ ಸುಹರ್‌ವರ್ದಿಯನ್ನು ನೀವು ರಕ್ಷಿಸಲಾರಿರಿ, ಈ ಕ್ಷಣ ಕಲ್ಕತ್ತೆ ಬಿಟ್ಟು ತೊಲಗಿರಿ" ಎಂದು ಅರಚಾಡಿದ್ದ. ಆದರೆ ಈ ಎಲ್ಲ ವಿರೋಧದ ಮಧ್ಯ ಕೂಡಾ ಕಲ್ಕತ್ತೆಯ ಬೇಲಿಘಾಟ ಪ್ರದೇಶದ ಹೈದರಿ ಮ್ಯಾನ್‌ಷನ್‌ದಲ್ಲಿ ಗಾಂಧಿ ಸುಹರ್‌ವರ್ದಿಯೊಂದಿಗೆ ಉಪವಾಸವ್ರತ ಕೈಗೊಳ್ಳಲು ನಿರ್ಧರಿಸಿದ್ದ.

ಗಾಂಧಿ ಹೇಳಿದ, "ಸುಹರ್‌ವರ್ದಿ ನಂಬಿಕೆಗೆ ಅರ್ಹನಲ್ಲದ ವ್ಯಕ್ತಿ ಎಂದು ನನಗೆ ಹೇಳಿದ್ದಾರೆ. ಹಾಗೆಯೇ ಗಾಂಧಿ ನಂಬಿಕೆಗೆ ಅರ್ಹನಲ್ಲದ ವ್ಯಕ್ತಿ ಎಂದು ಚರ್ಚಿಲ್ ಮತ್ತು ಜಿನ್ನಾ ಬಹಳ ಹಿಂದೆಯೇ ಹೇಳಿದ್ದಾರೆ. ಅಂತೆಯೇ ನಾವಿಬ್ಬರೂ ಅನರ್ಹರು. ಸಂಪೂರ್ಣ ಮುಸ್ಲಿಮರಿಂದ ಆಕ್ರಮಿಸಲ್ಪಟ್ಟ ಈ ಪ್ರದೇಶದಲ್ಲಿ ಹಿಂದೂ–ಮುಸ್ಲಿಂರ ಬಾಂಧವ್ಯಕ್ಕಾಗಿ ಪ್ರಾರ್ಥಿಸುತ್ತಾ ಉಪವಾಸ ವ್ರತ ಕೈಗೊಳ್ಳಲು ನಾವು ನಿರ್ಧರಿಸಿದ್ದೇವೆ. ನೌಖಾಲಿಯ ಪ್ರತಿಯೊಬ್ಬ ಹಿಂದುವಿನ ರಕ್ಷಣೆಯ ಜವಾಬ್ದಾರಿ ಸುಹರ್‌ವರ್ದಿ ಮೇಲಿದೆ. ಇನ್ನು ಮುಂದೆ ಎಂದೂ ಶಹೀದ ಸುಹರ್‌ವರ್ದಿ ಆಯುಧಗಳನ್ನು ಮುಟ್ಟಲಾರ. ಕಲ್ಕತ್ತಾದ ಕೊಳಚೆ ಪ್ರದೇಶದ, ಬಾಗಿಲುಗಳೇ ಇಲ್ಲದ, ಮುರಿದ ಕೊಂಪೆಯಂತಹ ಈ ಅರಮನೆಯಲ್ಲಿ ಆತ ನನ್ನೊಂದಿಗೆ ಉಪವಾಸವಿದ್ದು ಸಾಯುತ್ತಾನೆ. ಆದರೆ ಹಿಂಸಾಕೃತ್ಯಗಳಲ್ಲಿ ತೊಡಗಲಾರ. 1946ರಲ್ಲಿ ಮುಸ್ಲಿಂರು ಕಲ್ಕತ್ತಾದಲ್ಲಿ ಏನು ಮಾಡಿದರೋ ಅದೊಂದು ಹೀನಕೃತ್ಯ. ಆದರೆ ಅದಕ್ಕೊಂದು ಪ್ರತಿಕಾರ ತೀರಿಸಿಕೊಳ್ಳುವ ಮೂಲಕ ಹಿಂದೂಗಳಾದ ನೀವಾದರೂ ಏನನ್ನು ಸಾಧಿಸಲು ಸಾಧ್ಯವಿದೆ?

ಗೆಳೆಯನೇ, ನನ್ನ ವಿರುದ್ಧ ಮಾತನಾಡುವ ಎಲ್ಲ ಹಕ್ಕೂ ನಿನಗಿದೆ. ನೀನು ಏನು ಬೇಕಾದರೂ ಮಾಡಬಹುದು. ನಾನು ಜೀವನಯಾತ್ರೆಯ ಕೊನೆಯ ಘಟ್ಟದಲ್ಲಿದ್ದೇನೆ. ನಾನಿನ್ನು ಮುಂದೆ ಸಾಗಬೇಕಾದುದು ಬಹಳಿಲ್ಲ. ಆದರೆ ನೆನಪಿಟ್ಟುಕೋ, ನೀನು

ಹುಚ್ಚನಂತೆಯೇ ವರ್ತಿಸುವುದಾದರೆ ನಾನದನ್ನು ನೋಡುತ್ತಾ ಕುಳಿತುಕೊಳ್ಳುವ ಜಾಯಮಾನದವನಲ್ಲ. ನಿನ್ನಂತೆಯೇ ವರ್ತಿಸಿದ ಅನೇಕ ಯುವ ಮುಸ್ಲಿಂರಿಗೆ ಇದೇ ಎಚ್ಚರಿಕೆಯನ್ನು ನಾನು ನೌಖಾಲಿಯಲ್ಲಿ ನೀಡಿದ್ದೇನೆ. ರಾತ್ರಿಯಾಗಿದೆ, ದಯವಿಟ್ಟು ಮನೆಗೆ ಹೋಗು, ನಾಳೆ ಮತ್ತೆ ಬಾ."

ಇಷ್ಟರಲ್ಲಿಯೇ ಸುಹರ್‌ವರ್ದಿ ಹೈದರಿ ಮ್ಯಾನ್‌ಷನ್‌ದ ಮುಂದೆ ಕಾರಿನಲ್ಲಿ ಬಂದಿಳಿದ. ಆಕ್ರೋಶಗೊಂಡ ಹಿಂದೂಗಳು ಆತನ ಕಾರನ್ನು ಜಖಂಗೊಳಿಸಲು ಯತ್ನಿಸಿದರು. ಗಾಂಧಿ ಶಬ್ಧಶಃ ಜನರ ಮಧ್ಯ ಹೋಗಿ ಈ ಕೊಲೆಗಡುಕನ ಜೀವ ರಕ್ಷಿಸಬೇಕಾಯಿತು. ಆ ಕ್ಷಣಗಳನ್ನು ನೆನೆಸಿಕೊಂಡು ಗಾಂಧಿ ಬರೆದಿದ್ದಾರೆ, ``I have taken many risks before, but this is perhaps the greatest of all." ಮುಸ್ಲಿಂ ಪ್ರದೇಶದ ಮುಸ್ಲಿಂರ ಮನೆಯಲ್ಲಿ ನಾನಿದ್ದೇನೆ. ಆದರೆ ನಾವೆಲ್ಲರೂ ಶ್ರೀರಾಮನ ರಕ್ಷೆಯಲ್ಲಿದ್ದೇವೆ. ಅವನ ಅಣತಿಯಂತೆಯೇ ಎಲ್ಲ ಸಾಗುತ್ತದೆ. ಸುಹರ್‌ವರ್ದಿಯ ಎದೆಯಲ್ಲಿ ನಿತ್ಯವೂ ನಡುಕ. ಆದರೆ ಗಾಂಧಿ ಮಾತ್ರ ನಿರಂತರ ಪತ್ರ ವ್ಯವಹಾರದಲ್ಲಿ ತೊಡಗಿಕೊಂಡಿದ್ದರು. ಈಗಾಗಲೇ ಆಗಸ್ಟ್ 14, ದೇಶ ಸ್ವಾತಂತ್ರ್ಯದ ಘಳಿಗೆ ಇಪ್ಪತ್ನಾಲ್ಕು ಗಂಟೆಗಳ ಪ್ರಶ್ನೆಯಷ್ಟೆ. ದೇಶಕ್ಕೆ ಸ್ವಾತಂತ್ರ್ಯ ಸಿಗುವ ದಿನ ತಾನು ರಾಜಧಾನಿಯಿಂದ ದೂರ, ಬಹುದೂರ ಏಕಾಂಗಿಯಾಗಿ ಮೌನ ಮತ್ತು ಕಾಯಕದಲ್ಲಿ ನಿರತನಾಗಿ ಕರ್ಮಯೋಗಿಯಂತೆ ದಿನ ಕಳೆಯಬೇಕೆಂದುಕೊಂಡಿದ್ದ ಗಾಂಧಿಯ ಕನಸು ನನಸಾಗುವ ಕ್ಷಣ. ಗಾಂಧಿ ತಾನಂದುಕೊಂಡಿದ್ದನ್ನು ಸಾಧಿಸುವ ದಾರಿಯಲ್ಲಿದ್ದ.

ನಾಳೆ ಬಾ ಎಂದು ಗಾಂಧಿ ತಿಳಿಸಿದ್ದ ಯವಕ ಮತ್ತೆ ಮರುದಿನ ಬಂದ. ಆದರೆ ಈಗ ಅವನಲ್ಲಿ ನಿನ್ನೆಯ ಆ ಆಕ್ರೋಶವಿಲ್ಲ. ಆಗಸ್ಟ್ 14ರ ಮುಂಜಾವು ಆತನ ಮನಸ್ಸು ನಿರಭ್ರ ಆಕಾಶದಂತೆ. ಮೊದಮೊದಲು ಹಿಂದೂಗಳು ತನ್ನನ್ನು ಜಜ್ಜಿ ಕೊಂದೇ ಬಿಡಬಹುದು ಎಂದು ಗಾಂಧಿಯ ಹಿಂದೆ ಹಿಂದೆ ಅಡಗಿ ಕೂಡ್ರುತಿದ್ದ ಶಹೀದ ಸುಹರ್‌ವರ್ದಿ ಮೆಲ್ಲಗೆ ಒಂದೊಂದೇ ಹೆಜ್ಜೆ ಜನರೆದುರು ಬರಲಾರಂಭಿಸಿದ, ಮಾತನಾಡಲಾರಂಭಿಸಿದ. ಹಾಗೆಯೇ ಗಾಂಧಿಯೊಡನೆ ಇಪ್ಪತ್ನಾಲ್ಕು ಗಂಟೆಗಳ ಉಪವಾಸ ಮಾಡಿದ ಆತ ಬಳಲಿ ಹೋಗಿದ್ದ. 1946ರ ದಂಗೆ ಮತ್ತು ಹಿಂದೂಗಳ ಕೊಲೆಗೆ ತಾನೇ ಕಾರಣ ಎಂದು ಅಲ್ಲಿ ಸೇರಿದ್ದ ಮೂವತ್ತು ಸಾವಿರ ಜನರೆದುರು ಒಪ್ಪಿಕೊಂಡು ಕಣ್ಣೀರಿಟ್ಟ. ಗಾಂಧಿಯ ನಂತರ ಭಾಷಣ ಮಾಡಿದ ಕಟ್ಟರ್ ಮುಸ್ಲಿಂವಾದಿ ಭಾಷಣದ ಕೊನೆಗೆ 'ಜೈಹಿಂದ್' ಎಂದು ಘೋಷಣೆ ಹಾಕಿದ. ಜನಗಳು ಮನೋಕ್ಷೋಭೆಗಳಿಂದ ಸ್ವತಂತ್ರರಾಗಬೇಕು. ಅದು ನಿಜವಾದ ಸ್ವಾತಂತ್ರದ ಅರ್ಥ, ಎನ್ನುವ ಗಾಂಧಿಯ ವಾದ ಸುಹರ್‌ವರ್ದಿಯ ಮೂಲಕ ಮೂವತ್ತು ಸಾವಿರ ಜನಗಳ ಎದುರು ಗೆಲುವು ಕಂಡಿತ್ತು.

ಆಗಸ್ಟ್ 15, ಈ ದೇಶದ ಕೋಟಿ ಕೋಟಿ ಭಾರತೀಯರು ತದೇಕಚಿತ್ತದಿಂದ ಕಾಯ್ದ ದಿನ, ದೇಶ ಸ್ವತಂತ್ರವಾಯಿತು. ಆದರೆ ಗಾಂಧಿಗೆ ಗೊತ್ತಿತ್ತು, ಕ್ಷುದ್ರತೆಯಿಂದ, ಸ್ವಾರ್ಥದಿಂದ, ಸ್ವಜನ ಪಕ್ಷಪಾತದಿಂದ, ಭ್ರಷ್ಟಾಚಾರದಿಂದ, ಜಾತೀಯತೆಯಿಂದ ಭಾರತೀಯರು ಸ್ವತಂತ್ರರಾಗಿಲ್ಲ ಎಂದು. ಆಕಾಶದಲ್ಲಿ ತ್ರಿವರ್ಣ ಧ್ವಜವೇನೋ ಹಾರಿತು, ಆದರೆ ಗಾಂಧಿಯ ತಲೆಬಾಗಿತ್ತು.

ನವದೆಹಲಿಯ ಅಸೆಂಬ್ಲಿಯಲ್ಲಿ ಭಾರತದ ಪ್ರಥಮ ರಾಷ್ಟ್ರಪತಿ ಗಾಂಧಿಯ ಗುಣಗಾನ ಮಾಡುತ್ತಿದ್ದರು– "ಇತಿಹಾಸದುದ್ದಕ್ಕೂ ಭಾರತದ ನಿರಂತರತೆಗೆ ಕಾರಣವಾದ ಮೌಲ್ಯಗಳೆಲ್ಲವನ್ನು ಗಾಂಧಿ ಪ್ರತಿನಿಧಿಸುತ್ತಾರೆ. ಅವರೊಬ್ಬರಿಲ್ಲದೆ ಹೋಗಿದ್ದರೆ ನಮ್ಮ ಜನ್ಮಸಿದ್ಧ ಹಕ್ಕಾದ ಸ್ವಾತಂತ್ರ್ಯವನ್ನು ನಮಗೆ ಕೇಳಲಾಗುತ್ತಿರಲಿಲ್ಲ. ಪ್ರಪಂಚದಲ್ಲಿ ಎಂದೂ ಸೋಲದ ಸತ್ಯ ಮತ್ತು ಅಹಿಂಸೆ ಎಂಬ ಎರಡು ಮಹಾನ್ ಶಕ್ತಿಗಳನ್ನು ಅವರು ನಮ್ಮ ಕೈಗಿಟ್ಟಿದ್ದಾರೆ. ಅವರ ಈ ಎರಡು ಶಕ್ತಿಗಳ ಸಹಾಯದಿಂದಲೇ ನಾವು ಸ್ವರಾಜ್ಯವನ್ನು ಗಳಿಸಿದೆವು ಎನ್ನುವುದು ಪ್ರಪಂಚದ ಇತಿಹಾಸದಲ್ಲಿಯೇ ಅಳಿಸಲಾಗದ ದಾಖಲಾತಿಗೆ ಕಾರಣವಾಗುತ್ತದೆ." ಭಾರತದ ಕೊನೆಯ ವೈಸ್‌ರಾಯ್ ಹಾಗೂ ಗಾಂಧಿಯ ಸ್ನೇಹಿತನೆನಿಸಿಕೊಂಡ ಮೌಂಟ್ ಬ್ಯಾಟನ್ ಅಸೆಂಬ್ಲಿಯಲ್ಲಿ ಹೇಳುತ್ತಾನೆ–``At this historic moment, let us not forget all that India owes to Mahatma Gandhi-the architect of her freedom through Non-violence. We miss his presence here today, and would have him know how much he is in our thoughts."

ಜನತೆಗೆ ಸ್ವಾತಂತ್ರ್ಯದ ಅರ್ಥ ಗೊತ್ತಿತ್ತೋ ಅಥವಾ ಇಲ್ಲವೋ, ಹಳ್ಳಿ–ಹಳ್ಳಿಯ ಮುರುಕಲು ಗುಡಿಸಲುಗಳ ಮೇಲೆಯೂ ಕೂಡ ಭಾರತದ ತ್ರಿವರ್ಣಧ್ವಜ ಹಾರಿತು.

ಇಂತಹ ಒಂದು ಚಾರಿತ್ರಿಕ ಘಟನೆ ದೇಶದ ಇತಿಹಾಸದಲ್ಲಿ ನಡೆಯುವಾಗ ಗಾಂಧಿ ಎಲ್ಲಿದ್ದ? ಏನನ್ನು ಮಾಡುತ್ತಿದ್ದ? ಆತನ ಮನಃಸ್ಥಿತಿ ಏನಿತ್ತು? ಇವೆಲ್ಲಾ ನನ್ನನ್ನು ಬಾಲ್ಯದಿಂದಲೂ ಕಾಡಿದ ಪ್ರಶ್ನೆಗಳು. ಈ ಗಾಂಧಿಯನ್ನು ಪ್ರೀತಿಸಿದ್ದರೆ, ಹೋಗಲಿ ಬಿಡಿ ಕನಿಷ್ಠ ದ್ವೇಷಿಸಿದ್ದರೂ ಕೂಡ ಇಂತಹ ಒಂದು ಹುಡುಕಾಟ ನಿಮ್ಮೊಳಗೂ ಇರುತ್ತದೆ.

ಆಗಸ್ಟ್ 14ರ ಮಧ್ಯರಾತ್ರಿಯಿಂದಲೇ ಬೀದಿಬೀದಿಗಳಲ್ಲಿ ಜನತೆ, 'ವಂದೇ ಮಾತರಂ', 'ಭಾರತ್ ಮಾತಾಕೀ ಜಯ್', 'ಮಹಾತ್ಮಾಗಾಂಧಿ ಕೀ ಜಯ್,' ಎಂದು ಘೋಷಣೆಗಳನ್ನು ಕೂಗುತ್ತಾ ಅಲೆಯುವಾಗ ಎಪ್ಪತ್ತೆಂಟು ವರ್ಷದ ಗಾಂಧಿ ಕಲ್ಕತ್ತೆಯ ಬೇಲಿಘಾಟದಲ್ಲಿ ಪ್ರಾರ್ಥನೆಯಲ್ಲಿ ತೊಡಗಿದ್ದ. ಅರ್ಥಂಬರ್ಥ ಸುಟ್ಟುಹೋದ ನಗರದ, ಮುದುರಿಕೊಂಡ ಮಾನವ ಮನಸ್ಸುಗಳ, ಚದುರಿಹೋದ ಸಂಬಂಧಗಳ, ಪವಣಿಸುವ ಸಾರ್ಥಕ ಕಾರ್ಯದಲ್ಲಿ ತೊಡಗಿಕೊಂಡಿದ್ದ. ಆತ ಕಲ್ಕತ್ತೆಯಲ್ಲಿರುವುದು, ಮೌನದ ಒಂದು ನೋಟದಿಂದಲೇ ಮೃಗಗಳನ್ನು ಮನುಷ್ಯರಾಗಿಸುತ್ತಿರುವುದು ಬಹುತೇಕ ಬಾಬು ರಾಜೇಂದ್ರಪ್ರಸಾದ್, ನೆಹರೂ, ಜಿನ್ನಾ, ಮೌಂಟ್‌ಬ್ಯಾಟನ್ ಅಧಿಕಾರ ಗ್ರಹಣದ ಸಂದರ್ಭದಲ್ಲಿ ಒಂದಿಷ್ಟೂ ಚಪ್ಪಾಳೆಯ ಖುಷಿ ಅನುಭವಿಸಲು ಕಾರಣವಾಯಿತು. ಗಾಂಧಿಯ ಮೌನ, ಭವಿಷ್ಯದ ಭಾರತದ, ಪಾಕಿಸ್ತಾನದ ರಾಜಕೀಯ ಮುಖಂಡರುಗಳ ಭಾಷಣಗಳನ್ನು ಸಾಧ್ಯವಾಗಿಸಿತು. ರಕ್ತಸಿಕ್ತವಾಗಿದ್ದ ಕಲ್ಕತ್ತೆ, ದೆಹಲಿ, ನೌಖಾಲಿಗಳಲ್ಲಿ ಹಿಂದೂ–ಮುಸ್ಲಿಮರೆಲ್ಲಾ ಒಂದಾಗಿ ಖಡ್ಗ, ಚೂರಿಗಳನ್ನು ಹಿಡಿದ ಕೈಗಳಲ್ಲಿಯೇ ಹೂವು–ಹಣ್ಣನ್ನು ಹಂಚುವಂತಾಗಿಸಿತು. ಆದರೆ, ಇದಾವುದೂ ನಿರಾಯಾಸವಾಗಿ ಬಂದುದಾಗಿರಲಿಲ್ಲ. ಸಮಯ ಪರಿಪಾಲನೆ, ಆರೋಗ್ಯ ಸೂತ್ರಗಳ ಪಾಲನೆಗೆ ಜಗತ್ಪ್ರಸಿದ್ಧವಾಗಿದ್ದ ಗಾಂಧಿ ಆಗಸ್ಟ್ 12 ಮತ್ತು 14ರಂದು ಶಬ್ದಶಃ

ತನ್ನೆಲ್ಲ ನಿಯಮಗಳನ್ನು ಗಾಳಿಗೆ ತೂರಬೇಕಾಯಿತು. ಆಗಸ್ಟ್ 13ರ ರಾತ್ರಿಯಂತೂ ಇಷ್ಟು ತಡವಾಗಿ ಊಟ ಮಾಡುವುದರ ಬದಲು ಉಪವಾಸವಿರುವುದೇ ವಾಸಿ ಎಂದು ಮಲಗಿಬಿಟ್ಟ. ಇನ್ನು 14ರ ರಾತ್ರಿಯೂ ಅಷ್ಟೇ. ಕಲ್ಕತ್ತ ನಗರವನ್ನು ಅಲೆದು ಅಲೆದು ಸುಸ್ತಾಗಿದ್ದ ಗಾಂಧಿ ತಾನು ಠಿಕಾಣಿ ಹೂಡಿದ್ದ ಹೈದರಿ ಮ್ಯಾನ್‌ಷನ್‌ಗೆ ಬಂದು ಊಟಕ್ಕೆ ಕುಳಿತಾಗಲೂ ತೂಕಡಿಸುತ್ತಿದ್ದ.

ರಾತ್ರಿ ಗಂಟೆ ಹತ್ತಾದರೆ ಗಾಂಧಿಗೆ ಮಧ್ಯರಾತ್ರಿಯಾದಂತೆ. ತನ್ನ ಗಡಿಯಾರ ನೋಡಿ ಅಯ್ಯೋ ಎಷ್ಟೊಂದು ತಡವಾಯಿತು ಎಂದ. ಪಕ್ಕದಲ್ಲೇ ಇದ್ದ ಶಹೀದ್ ಸುಹರ್‌ವರ್ದಿ ನಗುತ್ತಾ, ``Bapu, It is only 10 o'clock, the night is young." ಪ್ರತ್ಯುತ್ತರ ನೀಡಿದ ಗಾಂಧಿ, "ಹೌದು ಶಹೀದ್, ನಿನ್ನ ಪಾಲಿಗೆ ದಿನವೂ ಕೂಡ ಈಗಷ್ಟೇ ಪ್ರಾರಂಭವಾಗಿರಬಹುದು. ಆದರೆ ನನ್ನ ಪಾಲಿಗೆ ಅರ್ಧರಾತ್ರಿಯೂ ಕಳೆದು ಹೋಗಿದೆ. ನಾನು ಮತ್ತೆ ನಸುಕಿನ ಮೂರುವರೆಗೆ ಕಾರ್ಯೋನ್ಮುಖನಾಗುವವನಲ್ಲವೇ?" ಗಾಂಧಿ ಕೇವಲ ಮೂರು ಗಂಟೆಯಷ್ಟೇ ನಿದ್ರೆಗೆ ಜಾರಿದ. ಕಣ್ಣುಬಿಟ್ಟಾಗ ಆತ ಸ್ವತಂತ್ರ ಭಾರತದಲ್ಲಿ ಕಣ್ಣು ತೆರೆದಿದ್ದ.

ನಸುಕಿನ ಜಾವ ಪುಟ್ಟ ಹೆಣ್ಣುಮಕ್ಕಳ ಗುಂಪೊಂದು ಠ್ಯಾಗೋರರ ಗೀತೆಗಳನ್ನು ಹಾಡುತ್ತಾ ಹೈದರಿ ಮ್ಯಾನ್‌ಷನ್‌ಗೆ ಗಾಂಧಿಯ ದರ್ಶನಕ್ಕಾಗಿ ಬಂದರು. ಆತನ ಆಶೀರ್ವಾದ ಪಡೆದು ಅವರೆಲ್ಲ ಹಕ್ಕಿಗಳಂತೆ ಮತ್ತೆ ಮರೆಯಾದರು. ಆಗಸ್ಟ್ 15ರ ಈ ಮುಂಜಾವು, ಆ ಇಡೀ ದಿನ ಕೊಳಚೆ ಪ್ರದೇಶದಲ್ಲಿ ಹಾಳುಬಿದ್ದ ಹೈದರಿ ಮ್ಯಾನ್‌ಷನ್ ಆಶ್ರಮವಾಗಿ ಪರಿವರ್ತನೆಗೊಂಡಿತ್ತು.

ಗಾಂಧಿ ಬರಿಗಾಲಿನಿಂದ ರಸ್ತೆಗಿಳಿದ, ಆತ ಕೊಚ್ಚೆ, ಕೆಸರು, ಹೇಸಿಗೆಯ ಮೇಲೆ ಹೆಜ್ಜೆಗಳನ್ನಿಡುತ್ತಾ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವುದನ್ನು ನೋಡಿ ಸಾವಿರ ಸಾವಿರ ಜನಗಳು ಅದೇ ಕೆಲಸಕ್ಕೆ ತೊಡಗಿಕೊಂಡರು. ಮಾತಿಲ್ಲ, ಘೋಷಣೆಗಳಿಲ್ಲ, ಒಂದು ಮಹಾನ್ ಮೌನ, ಇಲ್ಲಿ ಹೊರಗಿನದನ್ನು ಸ್ವಚ್ಛ ಮಾಡುತ್ತಲೇ ಗಾಂಧಿಯ ಮನಸ್ಸು ಲಾಹೋರ್ ಮತ್ತು ಪಂಜಾಬ್‌ಗಳ ಬಗ್ಗೆ ಆಲೋಚಿಸುತ್ತಿತ್ತು. ಅಲ್ಲಿ ಮಾರಣಹೋಮ ಹಾಗೆಯೇ ಮುಂದುವರೆದಿತ್ತು. ನಿನ್ನೆ-ಮೊನ್ನೆಯವರೆಗೆ ಮುಯ್ಯಿಗೆ ಮುಯ್ಯಿ ಎಂದು ಕಡಿದಾಡುತ್ತಿದ್ದ ಜನ ಇಂದು ಇಲ್ಲಿ ಹೂಹಂಚಲು ಸಾಧ್ಯವಾಗಿದೆ ಎನ್ನುವುದಾದರೆ ಇದು ಲಾಹೋರ್ ಮತ್ತು ಪಂಜಾಬ್‌ಗಳಲ್ಲಿ ಸಾಧ್ಯವಾಗುತ್ತಿಲ್ಲ ಏಕೆ?

ಮಧ್ಯಾಹ್ನವಾಗುತ್ತಲೇ ಗಾಂಧಿ ಒಳಬಂದು ಚರಕ ಮುಂದಿಟ್ಟುಕೊಂಡು ನೂಲುತ್ತಾ ಆಗಸ್ಟ್ 15ರ ಈ ದಿನ ಇಂಗ್ಲೆಂಡಿನಲ್ಲಿರುವ ಮಿಸ್. ಅಗಾಥಾ ಹ್ಯಾರಿಸನ್‌ರವರಿಗೆ ಒಂದು ಪತ್ರ ಬರೆಯಿಸಿದ್ದಾನೆ.

ಪ್ರಿಯ ಅಗಾಥಾ,

ನಾನು ನೂಲುತ್ತಿರುವುದರಿಂದ ಈ ಪತ್ರವನ್ನು ಬೇರೆಯವರಿಂದ ಬರೆಯಿಸಿದ್ದೇನೆ. ದೇವರಿಗೆ ಧನ್ಯವಾದಗಳನ್ನು ಹೇಳುತ್ತಾ, ನಾನಂದುಕೊಂಡಂತೆಯೇ ಆತನ ಸ್ಮರಣೆಯನ್ನು ಮಾಡುತ್ತಾ, ಆಗಸ್ಟ್ 15ರ ಈ ದಿನವನ್ನು, ಸ್ವಾತಂತ್ರ ಭಾರತದ ಈ ಕ್ಷಣಗಳನ್ನು ಕಳೆಯುತ್ತಿದ್ದೇನೆ. ವೆಸ್ಟ್

ಬೆಂಗಾಲದ ಗವರ್ನರ್ ಆದ ರಾಜಾಜಿಯ ಗೌರ್ನಮೆಂಟ್ ಹೌಸ್ ಜನರಿಂದ ಸುತ್ತುವರಿಯಲ್ಪಟ್ಟಿರುವುದರಿಂದ ಅವರಿಗೆ ಬರಲಾಗಿಲ್ಲ, ಆದರೆ ನಿನ್ನ ಎರಡನೆಯ ಪತ್ರವನ್ನು ಕಳುಹಿಸಿದ್ದಾರೆ. ಭಾರತದ ಸ್ವಾತಂತ್ರ ಕುರಿತು ಬ್ರಿಟನ್ನಿನ ಪಾರ್ಲಿಮೆಂಟಿನಲ್ಲಿ ಬಿಲ್ ಪಾಸಾಗುವಾಗ ಅರ್ಲ್ ವಿಂಟರ್‌ಟನ್ ನನ್ನನ್ನು ನಿಂದಿಸಿದ್ದಾರೆ ಎಂದು ಪತ್ರದಲ್ಲಿ ದಾಖಲಿಸಿರುವೆ. ಅವರ ಕಣ್ಣುಗಳಿಗೆ ನಾನೊಬ್ಬ ಮೂಲಭೂತವಾದಿಯಂತೆ ಕಾಣುತ್ತಿದ್ದರೆ ಯಾರೇನು ಮಾಡಲಾದೀತು? ಯಾವುದೇ ವ್ಯಕ್ತಿ ನನ್ನ ಪರವಾಗಿ ಅಥವಾ ವಿರೋಧವಾಗಿ ಮಾತನಾಡುವುದು ನನ್ನನ್ನೀಗ ಬಾಧಿಸುವುದಿಲ್ಲ. ನಾನು, ನೀನು ಇಂತಹ ನಿಂದನೆಗಳಿಗೂ ನಗೆಯನ್ನೇ ಉತ್ತರವಾಗಿ ನೀಡುತ್ತಾ ನಮ್ಮ ಕರ್ತವ್ಯಗಳನ್ನು ನಾವು ಮಾಡಬೇಕಿದೆ. ಇಷ್ಟರಲ್ಲಿಯೇ ನೂಲುವ ಕೆಲಸ ಮುಗಿಯುತ್ತದೆ, ನಾನು ಉತ್ತರಿಸಬೇಕಾದುದು, ಚರ್ಚಿಸಬೇಕಾದುದು ಇನ್ನೂ ತುಂಬಾ ಇದೆ.

ಪ್ರೀತಿಯೊಂದಿಗೆ

ಬಾಪು



ಬಲವಂತದ ಮಾಘಸ್ನಾನ

೧೩

ಆಗಸ್ಟ್ 16ರ ಮುಂಜಾವು ಸೇರಿದ ಮೂವತ್ತು ಸಾವಿರ ಜನರನ್ನು ಶಹೀದ್ ಸುಹರ್‌ವರ್ದಿ 'ಜೈಹಿಂದ್' ಎಂದು ಕೂಗಲು, ಘೋಷಣೆಗಳನ್ನು ಹಾಕಲು ಹುರಿದುಂಬಿಸುತ್ತಿದ್ದ. ಹಿಂದೂಗಳ ವಿನಾಶವೇ ತನ್ನ ಜೀವನದ ಗುರಿ ಎಂದುಕೊಂಡಿದ್ದ ಯುವಕನೊಬ್ಬ ಪರಿವರ್ತನೆ ಗೊಂಡಿದ್ದು, ಆತ 'ಹಿಂದ್' ಎಂದು ಕೂಗುವುದು ಒಂದು ಚಾರಿತ್ರಿಕ ಘಟನೆ ಯಾಕಾಗಬಾರದು? ಯಾಕಾಗಲಿಲ್ಲ? ಇವೆಲ್ಲವುಗಳಿಂದ ನಿರ್ಲಿಪ್ತ ಆಗಿದ್ದ ಗಾಂಧಿ ಮಾತ್ರ ತನ್ನ ಗೆಲುವಿನಲ್ಲಿಯೂ ಘನತೆಯಿಂದ, 'ಹರಿಜನ'ಕ್ಕಾಗಿ ಲೇಖನ ಬರೆಯುವುದರಲ್ಲಿ ತಲ್ಲೀನನಾಗಿದ್ದ.

"ದೇಶಭಕ್ತಿಯ ಉತ್ಸಾಹ, ಗಂಟೆ ಗಂಟೆಗೂ ಹೆಚ್ಚಾಗುತ್ತಿದೆ. ಇದನ್ನು ಏನಂತ ಗ್ರಹಿಸಲಿ? ಪವಾಡವೆನ್ನಲೇ? ಆಕಸ್ಮಿಕವೆನ್ನಲೇ? ಅಥವಾ ಸಹಜವೆನ್ನಲೇ? ಏನಾದರೂ ಅಂದುಕೊಳ್ಳೋಣ ಸರಿ, ಆದರೆ ಒಂದಂತೂ ಸತ್ಯ, ಈ ಯಶಸ್ಸಿನ

ಸಂಪೂರ್ಣ ವಾರಸುದಾರ ನಾನೊಬ್ಬನೇ ಅಲ್ಲ, ಅಥವಾ ಶಹೀದ್ ಸಾಹೇಬರೂ ಅಲ್ಲ, ಇದು ಒಬ್ಬಿಬ್ಬರಿಗೇ ಸಲ್ಲುವಂಥದಲ್ಲ, ಮನುಷ್ಯರೆಲ್ಲರೂ ದೇವರ ಅಣತಿಯ ಆಟಿಗೆಗಳು.

ದೇವರು ತಾನು ಒಲಿದಂತೆ ನಮ್ಮನ್ನು ಕುಣಿಸುತ್ತಾನೆ. ಮನುಷ್ಯ ಅಂತಿಮವಾಗಿ ಮಾಡಬಹುದಾದುದಿಷ್ಟೇ, ಆತನ ದಿವ್ಯ ಸಂಗೀತಕ್ಕೆ ಹೆಜ್ಜೆ ಹಾಕಬೇಕಷ್ಟೇ. ಸೃಷ್ಟಿಕರ್ತನ ಇಚ್ಛೆಯಲ್ಲಿ ನಮ್ಮ ಪೂರ್ಣ ವಿಶ್ವಾಸವಿರಬೇಕು. ಇದನ್ನು ನೀವು ಒಪ್ಪುವುದಾದರೆ ತಿಳಿದುಕೊಳ್ಳಿ, ನನ್ನನ್ನು ಮತ್ತು ಶಹೀದ್ ಸುಹರ್‌ವರ್ದಿ ಸಾಹೇಬರನ್ನು ದೇವರು ಎರಡು ಸಾಧನಗಳಂತೆ ಬಳಸಿಕೊಂಡಿದ್ದನಷ್ಟೇ. ನಾನು ವೈಯಕ್ತಿಕವಾಗಿ ಕೇಳಿಕೊಳ್ಳುವುದಾದರೆ ನನ್ನ ಯೌವ್ವನದ ಈ ಕನಸು ನನ್ನ ಜೀವನದ ಮುಸ್ಸಂಜೆಯಲಿ ನನಸಾಗಬೇಕಿತ್ತೇ? ನಾವಾಗಲೇ ಮತೀಯ ವಿಷವನ್ನು ಕುಡಿದಿದ್ದೇವೆ. ಆದರೆ ಸ್ನೇಹದ ಈ ಮಧು ವಿಷದ ಅನಾಹುತಗಳನ್ನು ಉಪಶನಗೊಳಿಸುತ್ತದೆ. ನಾನು ದೇವರಲ್ಲಿ ಪ್ರಾರ್ಥಿಸಿಕೊಳ್ಳುವುದಿಷ್ಟೆ, ಹಿಂದೂ–ಮುಸ್ಲಿಮರ ಈ ಸ್ನೇಹದ ಸವಿ ಎಂದೂ ರುಚಿಗೆಡದಿರಲಿ."

ಗಾಂಧಿಯ ಮರಿಮಗನಂತೆ ಕುಳಿತುಕೊಂಡು ಆತನ ಈ ಸಾಲುಗಳನ್ನು ಓದುವಾಗ ನನಗಿದು ಪವಾಡವೆನಿಸುತ್ತಿಲ್ಲ. ಸಾವಿರ ವರ್ಷಗಳೇನೂ ಬದುಕದ ಗಾಂಧಿ ಬರುವ ಸಾವಿರ ವರ್ಷಗಳ ಚರ್ಚೆಗೆ ಗ್ರಾಸವಾಗುವಂತೆ ಸಾಗಿ ಬಂದ ದಾರಿಯನ್ನು ಗಮನಿಸುತ್ತಿದ್ದೇನಷ್ಟೇ. ತಾವು ನಡೆಯುವ ರಸ್ತೆಯಲಿ ಬಿದ್ದ ಒಂದು ಸಣ್ಣ ಕಲ್ಲನ್ನೂ ಎತ್ತಿಹಾಕದ ಪಂಡಿತರೊಂದಿಗೆ, ಚಿಂತಕರೊಂದಿಗೆ, ಸೇರಿಕೊಂಡು ನಾನೂ ಅದೆಷ್ಟೋ ಬಾರಿ ಈ ಗಾಂಧಿ ಎನ್ನುವ ಗಾಂಧಿಯ ಗುಣಾವಗುಣಗಳ ಪಟ್ಟಿಯನ್ನು ಇಟ್ಟಿರಬಹುದೇನೋ. ಚರಂಡಿ ಪಕ್ಕ ಶೆರೆಯ ಅಮಲಿನಲ್ಲಿ ಬಿದ್ದ ಕುಡುಕನೂ ಗಾಂಧಿಯ ಕುರಿತು ಮಾತಾಡುತ್ತಾನೆ ಬಿಡಿ. ಅದೇ ನಮ್ಮ ಗಾಂಧಿಯ ವಿಶೇಷತೆ. ಆದರೆ ಒಂದೇ ಪ್ರಶ್ನೆ, ಏನೆಲ್ಲವನ್ನು ಮಾತನಾಡಬಹುದಾದ ನಾವು ಗಾಂಧಿಯ ಪ್ರಾಯೋಗಿಕತೆ, ಅದಕ್ಕಾಗಿ ಆತ ತೋರಿಸುತ್ತಿದ್ದ ಪ್ರಾಮಾಣಿಕತೆಗಳನ್ನು ಪ್ರಶ್ನಿಸಬಹುದೇ?

ಕಾಂಗ್ರೆಸ್ ನಾಯಕರನ್ನು ಉದ್ದೇಶಿಸಿ, ಅಧಿಕಾರ ಪಡೆದ ಖುಷಿಯಲ್ಲಿದ್ದ ಅವರಿಗೆ ಆಗಸ್ಟ್ 15ರಂದು ಗಾಂಧಿ ಒಂದು ಮಹತ್ವದ ಮಾತನ್ನು ಹೇಳಿದ. ಇದು ಎಲ್ಲ ಕಾಲದ ರಾಜಕಾರಣಕ್ಕೂ, ರಾಜಕೀಯಕ್ಕೂ ಅನ್ವಯಿಸುವ ಮಾತು. "ಇಂದಿನಿಂದ ಮುಳ್ಳಿನ ಕಿರೀಟವನ್ನು ಹಾಕಿಕೊಳ್ಳಲು ನೀವು ಸಿದ್ಧರಾಗಿರಿ. ಪರಿಶ್ರಮಕ್ಕೆ ಸಿದ್ಧರಾಗಿರಿ. ಸತ್ಯ ಮತ್ತು ಅಹಿಂಸೆಗಳು ನಿಮ್ಮ ಸಂಸ್ಕೃತಿಯಾಗಿರಲಿ. ವಿನಯಶೀಲರಾಗಿರಿ. ಖಂಡಿತವಾಗಿಯೂ ಬ್ರಿಟಿಷರು ಅಧಿಕಾರವನ್ನು ಬಿಟ್ಟುಕೊಡುವ ಮೂಲಕ ಜಾಣರಾಗಿದ್ದಾರೆ. ಈಗ ದೇಶವೂ ನಿಮ್ಮದು. ಅಧಿಕಾರವೂ ನಿಮ್ಮದು. ಅಂತೆಯೇ ಪ್ರತಿಕ್ಷಣವೂ ಇದು ನಿಮ್ಮ ಸತ್ವ ಪರೀಕ್ಷೆಯ ಕಾಲ. ಅಧಿಕಾರದ ಬಗ್ಗೆ ಎಚ್ಚರವಾಗಿರಿ. ಅಧಿಕಾರ ಮನುಷ್ಯನನ್ನು ಪಥ ಭ್ರಷ್ಟನನ್ನಾಗಿಸುತ್ತದೆ. ಐಶಾರಾಮದ ಗಾಳಿಯಲ್ಲಿ ತೇಲಿ ಹೋಗದಿರಿ. ದೇವರು ಸದಾ ನಿಮ್ಮನ್ನು ರಕ್ಷಿಸಲಿ."

ಈ ಮೇಲಿನ ಮಾತುಗಳನ್ನು ಗಮನಿಸಿದರೆ ಗಾಂಧಿಯ ಸಂದೇಶದಲ್ಲಿ ಅತೃಪ್ತಿಯ ವಾಸನೆ ಬಡಿಯುವುದಿಲ್ಲ. ನಮ್ಮನ್ನು ಆಳಿದವರು ನಮ್ಮ ಪಕ್ಕದಲ್ಲೇ ಇರುವಾಗ ನಾವು ನಗೆಪಾಟಲಾಗದಂತೆ ನಡೆದುಕೊಳ್ಳವದು ಹೇಗೆ? ಎನ್ನುವ ರಾಜಕಾರಣದ ಸೂತ್ರವನ್ನು

ಇಡುತ್ತಿದ್ದಾನೆ ಗಾಂಧಿ. ವ್ಯಾಪಾರಿಗಳಾಗಿ ಬಂದಿದ್ದ ಬ್ರಿಟಿಷರಿಗೆ ಪ್ರಭುಗಳ ಸ್ಥಾನ ನಿರೀಕ್ಷಿತ ಮತ್ತು ನಿರ್ಧಯತ್ವಕ್ಕೆ ಸೋಪಾನ. ಆದರೆ ಕೋಟ್ಯಾಂತರ ಭಾರತೀಯರಲ್ಲಿ ಒಬ್ಬನಾಗಿ ರಾಜ-ಕಾರಣಿಯಾಗುವ ಭಾರತೀಯನಗೆ ಅಧಿಕಾರದ ಮುಖವಾಡ ಸಾಧುವಲ್ಲ. ಅಥವಾ ಸಾಧುವಾಗಬಾರದು ಎನ್ನುವದು ಗಾಂಧಿಯ ನಿರೀಕ್ಷೆ ಇರಬಹುದೇನೋ? ಜನರ ಚಪ್ಪಾಳೆ ಹೆಚ್ಚಾದಂತೆ ತನ್ನೊಳಗೇ ಎಚ್ಚರವಾಗಿರುವ ಮನುಷ್ಯ ಅವುಗಳಿಂದ ಭಯಗ್ರಸ್ಥನಾಗುತ್ತಾನೆ. ಮುಖ ತಿರುಗಿಸಲು ಯತ್ನಿಸುತ್ತಾನೆ. ಆದರೆ ಮೂರ್ಖ ಅದೇ ಸತ್ಯ ಎಂದುಕೊಳ್ಳುತ್ತಾನೆ.

ಸ್ವಾತಂತ್ರ್ಯ ಸಿಕ್ಕ ಮರುಕ್ಷಣವೇ ಜನರ ಪಾಲಿಗೂ ಮತ್ತು ನಮ್ಮ ನಾಯಕರ ಪಾಲಿಗೂ ದೇವರಾಗಿಬಿಟ್ಟಿದ್ದ ಗಾಂಧಿ ಹದಿನೇಳು ಆಗಸ್ಟರಂದು ಒಂದು ಪತ್ರ ಬರೆದಿದ್ದಾನೆ. ಆ ಪತ್ರದ ವಿಷಯವೇ ಈ ಪ್ರಸಿದ್ಧಿ. ಕಲ್ಕತ್ತೆಯ ಬೇಲಿಘಾಟದ ಹೈದರಿಮ್ಯಾನಷನ್ ಸುತ್ತ ದಿನೇ ದಿನೇ ಜನರ ಸಂಖ್ಯೆ ಹೆಚ್ಚಾಗುತ್ತಿದೆ. ಜನರ ಈ ಪೂಜೆ ಮತ್ತು ಹೊಗಳಿಕೆಯಿಂದ ನಾಚಿ, ನಲುಗಿದ ಗಾಂಧಿ ತನ್ನ ಸಂದರ್ಶನದ ಅವಧಿಯನ್ನು ಕೇವಲ ಮೂರು ಗಂಟೆಗಳಿಗೆ ಅಂದರೆ ಮುಂಜಾನೆ 11–30ರಿಂದ ಮಧ್ಯಾಹ್ನ 2.30ರವರೆಗೆ ಸೀಮಿತಗೊಳಿಸಿಕೊಳ್ಳುತ್ತಾನೆ. ಜನರ ಜಯಘೋಶ, ಆರಾಧನೆ, ಗಾಂಧಿಯನ್ನು ಹೇಗೆ ನಾಚಿಸಿತ್ತು ಎನ್ನಲು ಪಟೇಲರಿಗೆ ಬರೆದ ಈ ಸಾಲುಗಳಲ್ಲಿ ಓದಬೇಕು. "ಎಲ್ಲ ಜಯಘೋಷಗಳಿಗೂ, ಜನರ ಕೂಗಾಟಗಳಿಗೂ ನಾನು ಕಿವುಡನಾಗಿ ಹೋಗಿದ್ದೇನೆ. ಜನರನ್ನು ಬೆಟ್ಟಿಯಾಗಲೇಬಾರದು ಎನ್ನುವದು ನನ್ನ ಉದ್ದೇಶವಲ್ಲ. ಆದರೆ ನನ್ನನ್ನು ನಾನೇ ಹೇಗೆ ಬಿಡುವು ಮಾಡಿಕೊಳ್ಳಬೇಕೆನ್ನುವುದು ದೊಡ್ಡ ತಲೆನೋವಾಗಿದೆ. ಬರುತ್ತಿರುವ ಜನಸಾಗರ ನೋಡಿದರೆ ನನಗೆ ಖಿಲಾಫತ್ ಚಳುವಳಿಯ ಆ ದಿನಗಳು ನೆನಪಾಗುತ್ತಿವೆ. ಆದರೆ ಜನರ ಈ ಉತ್ಸಾಹ ಬರೀ ತಾತ್ಕಾಲಿಕವಾದುದೇ?"

ತನ್ನ ಸುತ್ತಲೂ ಮಾತು ಹೆಚ್ಚಾದಷ್ಟೂ ಗಾಂಧಿ ಅಂತರಮುಖಿಯಾದ. ತಾರಕಕ್ಕೆ ಅಂಟಿ-ಕೊಂಡ ರಾಜಕಾರಣದ ಪಟ್ಟುಗಳನ್ನು ಸಡಿಲಿಸಿ ಸಂತನಂತೆ ದೇವರಿಗಾಗಿ ಹಂಬಲಿಸಿದ, ದೇವರ ಕುರಿತು ಆಲೋಚಿಸಿದ. ಹದಿನೇಳು ಆಗಸ್ಟ ಎನ್ನುವದು ರಾಜಕಾರಣಿಗಳಿಗೆ ಮತ್ತು ಶ್ರೀಮಂತರಿಗೆ ಅಮಲಿನ ಕ್ಷಣಗಳಾಗಿದ್ದರೆ ದೇಶ ವಿಭಜನೆಯ ಕರಾಳ ಭೂತದ ತುಳಿತಕ್ಕೆ ಒಳಗಾಗಿದ್ದ ಸಾಮಾನ್ಯರಿಗೆ ಅವು ಸಾವು ಬದುಕಿನ ಪ್ರಶ್ನೆಯ ದಿನಗಳು. ಆದರೆ ಹದಿನೇಳು ಆಗಸ್ಟಕ್ಕೆ ಹರಿಜನ ಪತ್ರಿಕೆಗಾಗಿ ಗಾಂಧಿ ಇವಾವನ್ನೂ ಕುರಿತು ಪತ್ರ ಬರೆಯಲಿಲ್ಲ. ಆತನ ಒಕ್ಕಣಿಕೆಯ ಗುರಿ ಮಾತ್ರ ದೇವರ ಸನ್ನಿಧಿ.

"ಒಳ್ಳೆಯತನವೇ ದೇವರು. ಇಂತಹ ದೇವರಲ್ಲಿ ಒಂದಿಷ್ಟು ಕಡಿಮೆ ಒಂದಿಷ್ಟು ಹೆಚ್ಚು ಎಂದು ವಿಭಜನೆಯಿಲ್ಲ. ಅಥವಾ ಈ ದೇವರು ದೆವ್ವಕ್ಕಿಂತಲೂ ಶ್ರೇಷ್ಠ ಎನ್ನುವ ತುಲನೆ ಮೂರ್ಖತನದ್ದು. ದೇವರು ಇಡಿಯಾಗಿ ಒಳ್ಳೆಯವನು. ಅವನಲ್ಲಿ ಕೆಡುಕಿಲ್ಲ. ದೇವರ ಕಲ್ಪನೆಯಲ್ಲಿ ಮನುಷ್ಯನ ಸೃಷ್ಟಿಯಾಗಿದೆ. ಆದರೆ ದುರ್ದೈವ. ಆನಂತರ ಮನುಷ್ಯ ತನ್ನ ಕಲ್ಪನೆಯಂತೆ ತನ್ನನ್ನು ರೂಪಿಸಿಕೊಂಡಿದ್ದಾನೆ. ಮನುಷ್ಯನ ಈ ಉದ್ಧಟತನವೇ ಆತನನ್ನು ಸಮಸ್ಯೆಗಳ ಸಮುದ್ರಕ್ಕೆ ಎಸೆದಿದೆ. ದೇವರು ಸರ್ವಶ್ರೇಷ್ಠ ವಿಜ್ಞಾನಿ. ಆತನ ಉಪಸ್ಥಿತಿಯಲ್ಲಿ ಕಬ್ಬಿಣವು ಚಿನ್ನವಾಗಿ ರೂಪಾಂತರಗೊಳ್ಳುತ್ತದೆ. ಹಾಗೆಯೇ ಎಲ್ಲ ಕೆಡುಕು ಒಳಿತಾಗಿ ಬದಲಾಗುತ್ತದೆ.

"ದೇವರು ಕಾಲಾತೀತ, ಆತ ಬದುಕುತ್ತಾನೆ. ಆದರೆ ನಮ್ಮಂತಲ್ಲ. ಆತನ ಸೃಷ್ಟಿಗಳೂ ಬದುಕುತ್ತವೆ. ಆದರೆ ಸಾವಿಗೆ ಅಧೀನವಾಗಿರುತ್ತವೆ. ಆದರೆ ದೇವರೇ ಜೀವನ, ದೇವರೇ ಜೀವ. ಹೀಗಾಗಿ ಒಳಿತು ಎನ್ನುವುದು ದೇವರಿಗೆ ವಿಶೇಷಣವಲ್ಲ. ಮೃತ ವಸ್ತುಗಳಲ್ಲಿ, ಜೀವಗಳಲ್ಲಿ ದೇವರ ಈ ಒಳಿತು ಚೈತನ್ಯವಾಗಿ ಜೀವದಾಯಿಯಾಗಿ ಬರುತ್ತದೆ. ದೇವರ ಈ ಒಳಿತಿನಿಂದಾಗಿಯೇ ಎಲ್ಲವೂ ನೀತಿಯಾಗಿ ಪರಿಣಮಿಸುವದು. ಯಾವುದೇ ನೀತಿ ನಮ್ಮೊಳಗೊಂದಾಗಬೇಕೆಂದು ಬಯಸುವದಾದರೇ ಅದು ದೇವರೊಂದಿಗೆ ಸಂಪರ್ಕಿಸಿಕೊಂಡಿರಬೇಕು. ನಾವು ಒಳ್ಳೆಯವರಾಗಲು ಬಯಸುತ್ತೇವೆ. ಯಾಕೆಂದರೆ ನಾವು ದೇವರನ್ನು ಅರ್ಥೈಸಿಕೊಳ್ಳಲು ಮತ್ತು ತಲುಪಲು ಯತ್ನಿಸುತ್ತೇವೆ. ಪ್ರಪಂಚದ ಸಿದ್ಧಾಂತಗಳೆಲ್ಲ ಧೂಳಿಪಟವಾಗುತ್ತವೆ, ಕಾರಣ ಅವು ಕಾಲಕಾಲಕ್ಕೆ ದೇವರಿಂದ ದೂರ ಸರಿಯುತ್ತವೆ. ಯಾವುದು ದೇವರ ಮುಖವಾಣಿಯಾಗಿರುತ್ತದೆಯೋ ಅದು ನಮ್ಮ ಅಸ್ತಿತ್ವದ ಭಾಗವಾಗಿರುತ್ತದೆ ಮತ್ತು ನಮ್ಮನ್ನು ಸಶಕ್ತರನ್ನಾಗಿಸುತ್ತದೆ.

ಒಳಿತನ್ನು ಹೊರತುಪಡಿಸಿದ ದೇವರು ಮೃತ್ಯುವಿನ ಆಹ್ವಾನವಷ್ಟೇ. ಇಂತಹ ದೇವರುಗಳು ನಮ್ಮ ಹುಚ್ಚು ಕಲ್ಪನೆಯಲ್ಲಿ ಸೃಷ್ಟಿಯಾಗುತ್ತಾರೆ."

ಹೀಗೆಲ್ಲ ಬರೆದ ಗಾಂಧಿ ಹಿಮಾಲಯದ ದಾರಿ ಹಿಡಿದನೇನು? ಬರೀ ಭಜನೆ, ಕೀರ್ತನೆಗಳಲ್ಲಿ ಮುಳುಗಿ ಹೋದನೇನು? ನಿಮ್ಮ ಸ್ವಾತಂತ್ರ್ಯ ನಿಮಗೆ ಸಿಕ್ಕಿದೆ. ಇನ್ನು ನಾನು ನಿಮ್ಮಿಂದ ಸ್ವತಂತ್ರ್ಯ ಎಂದು ಪಲಾಯನ ಗೈದನೇನು? ಈ ಗಾಂಧಿಯೊಬ್ಬ ಆಗ ಸರಿಯಾಗಿ ಆಲೋಚಿಸಿದ್ದರೆ ಇಂದು ಈ ದೇಶದ ಸ್ಥಿತಿಯೇ ಇಷ್ಟು ದಾರುಣವಾಗಿರುತ್ತಿರಲಿಲ್ಲ. ಆತ ಸಂತನಂತೆ ವರ್ತಿಸಿದ್ದೆ ಇಷ್ಟೆಲ್ಲ ದ್ವಂದ್ವಗಳಿಗೆ ಕಾರಣವಾಯಿತು, ಎಂದು ವಾದಿಸುವ ಪಂಡಿತರಿಗೆ ಇದೇ ಆಗಸ್ಟ್ ಹದಿನೇಳರಂದು ಭಾರತದ ರಾಜ್ಯಗಳ ರಾಜ್ಯಪಾಲರುಗಳು ಏನನ್ನು ಮಾಡಬೇಕು ಮತ್ತು ಏನನ್ನು ಮಾಡಬಾರದು ಎಂದು ತಿಳಿಸುತ್ತ ಆತ ಬರೆದ ಲೇಖನದ ಕೆಲವು ವಿಚಾರಗಳನ್ನು ನಾನು ಇಲ್ಲಿ ಪ್ರಸ್ಥಾಪಿಸಲೇಬೇಕು.

1. ಜನಸಾಮಾನ್ಯರೊಂದಿಗೆ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳಲು ಅತ್ಯಂತ ಸಾಮಾನ್ಯ ಕ್ರಿಯೆಯಾದ ಚರಕವನ್ನು ರಾಜ್ಯಪಾಲರುಗಳು ಕೈ ಬಿಡಬಾರದು.
2. ಅತ್ಯಂತ ಸಾಧಾರಣ ಮನೆಯಲ್ಲಿ ವಾಸಿಸುತ್ತ ಜನಸಾಮಾನ್ಯರಿಗೆ ರಾಜ್ಯಪಾಲನೊಬ್ಬ ಸಹಜವಾಗಿ ಜನರಿಗೆ ದೊರಕುವಂತಿರಬೇಕು.
3. ವಿದೇಶಿ, ವಿಲಾಸಿ ವಸ್ತುಗಳನ್ನು ಆತ ಬಳಸುತಕ್ಕದಲ್ಲ. ರಾಜ್ಯಪಾಲನ ಬದುಕು ಸರಳ ಜೀವನ ಮತ್ತು ಶ್ರೇಷ್ಠ ಆಲೋಚನೆಗಳಿಗೆ ಸಾಕ್ಷಿಯಾಗಿರಬೇಕು.
4. ಜಾತಿ ಆಧಾರಿತವಾಗಿ, ಮತ, ಬಣ್ಣ, ಲಿಂಗಾಧಾರಿತವಾಗಿ ರಾಜ್ಯಪಾಲನೊಬ್ಬ ಜನರನ್ನು ಎಂದೂ ನೋಡತಕ್ಕದಲ್ಲ.
5. ಪೌರ್ವಾತ್ಯವೇ ಆಗಿರಲಿ ಪಾಶ್ಚಾತ್ಯವೇ ಆಗಿರಲಿ ಜಗತ್ತಿನ ಎಲ್ಲ ಶ್ರೇಷ್ಠ ವಿಚಾರಗಳ ಪ್ರತಿನಿಧಿಯಾಗಿರಬೇಕು.

6. ಆತ ಭಾರತದ ಪ್ರಜೆಯಾಗಿರುವುದರೊಂದಿಗೆ ಪ್ರಪಂಚದ ಪ್ರಜೆಯಾಗಿರಬೇಕು.

7. ಜನಕರಾಜನಂತೆ ಪ್ರಭುಗಳನ್ನೂ, ಪ್ರಜೆಗಳನ್ನೂ ಸಮಾನವಾಗಿ ನೋಡಬೇಕು.

8. ಭಾರತದ ರಾಷ್ಟ್ರೀಯ ಭಾಷೆಯನ್ನು ಬಳಸುವುದರೊಂದಿಗೆ ಆತ ರಾಜ್ಯಪಾಲನಾಗಿ ನಿಯುಕ್ತಗೊಂಡ ರಾಜ್ಯದ ಜನತೆಯ ಭಾಷೆಯಲ್ಲಿ ಆತ ವ್ಯವಹರಿಸಬೇಕು.

ಈಗ ಹೇಳಿ ನಮ್ಮ ಗಾಂಧಿ ಬರೀ ಅಧ್ಯಾತ್ಮದ ಮೂಟೆಯೇ?

18 ಆಗಸ್ಟ್ 1947 ಕಲ್ಕತ್ತೆ ಮುಸ್ಲಿಂರ ಅತ್ಯಂತ ಪವಿತ್ರ ಹಬ್ಬವಾದ 'ಈದ್'ಗಾಗಿ ಸಿದ್ಧವಾಗುತ್ತಿದ್ದ ಸಂದರ್ಭ. ಮುಸ್ಲಿಂರು ಗಾಂಧಿಯನ್ನು ಯಾವ ಕಾಲಕ್ಕೂ ಭೆಟ್ಟಿಯಾಗಲೇಬಾರದು ಎಂದುಕೊಂಡಿದ್ದರೂ ಕೂಡ ಈಗ ಗಾಂಧಿಯ ಭೆಟ್ಟಿಗೆ ಬಂದರು. ಸೌತ್ ಆಫ್ರಿಕಾದಲ್ಲಿ ಇದ್ದಾಗಲೂ ಮುಸ್ಲಿಂ ಬಾಂಧವರೊಂದಿಗೆ 'ಈದ್' ಆಚರಿಸುತ್ತಿರುವ ಗಾಂಧಿ ಈಗ ಕಲ್ಕತ್ತೆಯಲ್ಲಿ ಹಿಂದೂ-ಮುಸ್ಲಿಂ ಇಬ್ಬರನ್ನೂ ಹಬ್ಬಕ್ಕಾಗಿ ಪ್ರೋತ್ಸಾಹಿಸುತ್ತಿದ್ದ. ಮತ್ತೆ ಮತ್ತೆ ಆತ ಕಲ್ಕತ್ತೆಯ ಜನತೆಗೆ ಹೇಳಿದ, ಕ್ಷಣ ಮಾತ್ರಕ್ಕೆ ಅಬ್ಬರಿಸಿ ಇಳಿದು ಹೋಗುವ ತೆರಗಳಂತಾಗಬಾರದು ನಮ್ಮ ಒಳ್ಳೆಯ ಭಾವನೆಗಳು. ಅವು ನಿರಂತರವಾಗಿರುವಂತೆ ನೋಡಿಕೊಳ್ಳಬೇಕಾಗುತ್ತದೆ. ಸಕಾರಾತ್ಮಕವಾಗಿ ಆಲೋಚಿಸುವ ಜನರನ್ನು ಮಾತ್ರ ನಮ್ಮೊಂದಿಗೆ ಇಟ್ಟುಕೊಳ್ಳಬೇಕಾಗುತ್ತದೆ. ಇಂತಹ ಒಂದು ಕಲೆ ಕಲ್ಕತ್ತೆಯಿಂದಲೇ ಪ್ರಾರಂಭವಾಗಲಿ. ನಿಜವಾಗಿಯೂ ನಾವು ಇದನ್ನು ಗೆದ್ದರೆ ಇದರ ಪರಿಣಾಮವನ್ನು ನಾವು ರಾಷ್ಟ್ರದುದ್ದಕ್ಕೂ ನೋಡಬಹುದಾಗಿದೆ. If we fail to do this work and act constructively right form now on wards, the freedom we have won far India will be just a nine days wonder."

ಹಿಂದು-ಮುಸ್ಲಿಂರ ಐಕ್ಯತೆಯ ಈ ಗಳಿಗೆಗಳು ಸಹಜವೋ ಅಥವಾ ನಾಟಕವೋ ಎನ್ನುವ ಪ್ರಶ್ನೆ ಗಾಂಧಿಗೆ ಎಲ್ಲ ಕಾಲಕ್ಕೂ ಇತ್ತು. ಇದೇ ಆಗಸ್ಟ್ 18ರಂದು ಅಂತಹ ಒಂದು ಪ್ರಶ್ನೆಯನ್ನು ತನ್ನ ಮುಂದೆ ಹಾಕಿಕೊಳ್ಳುತ್ತ ಮೀರಾಬೆನ್‌ಳಿಗೆ ಗಾಂಧಿ ಒಂದು ಪತ್ರ ಬರೆದಿದ್ದಾನೆ. "ನೋಡಿಲ್ಲಿ, ಜನಜಂಗುಳಿಯಲ್ಲಿ ಅಪಾರವಾದ ಸಂತಸವಿದೆ. ಆದರೆ ನನ್ನೊಳಗೆ ಸಂತೋಷವೂ ಇಲ್ಲ ಸಂತೃಪ್ತಿಯೂ ಇಲ್ಲ. ಯಾಕೆ ಹೀಗೆ? ನನ್ನೊಳಗೆ ಏನಾದರೂ ಕೊರತೆ ಇದೆಯೇ? ಹಿಂದೂ-ಮುಸ್ಲಿಂರ ಅವಸರದ ಈ ಸಾಮರಸ್ಯ ನಿಜವಾದುದೇ? ಇವರೆಲ್ಲ ಇದಕ್ಕೆ ನಾನು ಕಾರಣ ಎನ್ನುತ್ತಿದ್ದಾರೆ. ಆದರೆ ನನಗನ್ನಿಸುತ್ತದೆ. ನಾನಿಲ್ಲದೇ ಹೋಗಿದ್ದರೂ ಪರಿಸ್ಥಿತಿಗಳು ಇವರನ್ನು ಹೀಗೆಯೇ ನಡೆಯಿಸಿಕೊಂಡು ಹೋಗುತ್ತಿದ್ದವು. ಸಮಯವೇ ಇದಕ್ಕೆ ಉತ್ತರ ಹೇಳಬೇಕು."

ಹೌದು, ಸದಾ ಜಾಗೃತನಾಗಿರುವ ಮನುಷ್ಯನಿಗೆ ಮಾತ್ರ ಸಂಶಯಗಳು, ತಲ್ಲಣಗಳು ಮತ್ತು ದ್ವಂದ್ವಗಳು, ಸಂತನೋ, ಸಾಮಾನ್ಯನೋ ನಿಂತ ನಂಬಿಕೆಯ ನೆಲ ಕಾಲ ಕೆಳಗೆ ಜಾರುತ್ತಿರುವ ಅನುಭವಗಳು ಇರುವವರೆಗೆ ಮಾತ್ರ ಈ ಹೋರಾಟ, ಈ ಜೀವನ.



೧೪

ರ್‍ಯಾಡಕ್ಲಿಪ್ ಎಳೆದ ರೆ(ಡೆ)ಡ್ ಲೈನ್

ಒಂದು ಟೈಪ್ ರೈಟರಿನ ಸಹಾಯದಿಂದ ರ್‍ಯಾಡ್‌ಕ್ಲಿಪ್ ಎರಡು ದೇಶಗಳನ್ನು ಸೃಷ್ಟಿಸಿಬಿಟ್ಟ ಎನ್ನುವ ಭಾರತದ ಇತಿಹಾಸದ ಈ ಸಾಲು ಅದೆಷ್ಟು ಘೋರ ಸಾವು ನೋವುಗಳನ್ನು ತಂದೊಡ್ಡಿತು ಎನ್ನುವುದನ್ನು ಈಗ ಊಹಿಸಲೂ ಕೂಡ ಆಗುವುದಿಲ್ಲ. ಜಿನ್ನಾ ಅಂತೆಯೇ ಹೇಳಿದ್ದ "ಒಬ್ಬ ಗುಮಾಸ್ತ, ಒಂದು ಟೈಪ್‌ರೈಟರಿನಿಂದ ಪಾಕಿಸ್ಥಾನವನ್ನು ಸೃಷ್ಟಿಸಿದ."

ತಮ್ಮ ತಮ್ಮ ಆಸ್ತಿ–ಪಾಸ್ತಿ, ಊರು–ಕೇರಿ, ಮಂದಿರ–ಮಸೀದಿಗಳ ಉಳುವಿಗಾಗಿ ಅನೇಕರು ಈ ರ್‍ಯಾಡಕ್ಲಿಪ್‌ನನ್ನು ಓಲೈಸಿದರು. ಆದರೆ ಆತ ಮಾತ್ರ ನಿರ್ಲಿಪ್ತನಾಗಿಯೇ ಇರಬೇಕಿತ್ತು. ಯಾಕೆಂದರೆ ಈ ದೇಶದ ಎದೆಯ ಮೇಲೆ ಮುಖ್ಯವಾಗಿ ವಿಭಜನೆಯ ರೇಖೆಯನ್ನು ಎಳೆಯಬೇಕಿತ್ತು. ಹಾಗೇ ಎಳೆದಾಗ ಬಂಗಾಲದ ಖುಲ್ನಾ ಎಂಬ ಊರು ಪಾಕಿಸ್ಥಾನಕ್ಕೆ ಸೇರಿಬಿಟ್ಟಿತ್ತು.

ಭಾರತವನ್ನು ಅತಿಯಾಗಿ ಪ್ರೀತಿಸುತ್ತಿದ್ದ ಆ ಊರಿನ ಜನರು ದಾರಿ ಕಾಣದೆ ಗಾಂಧಿಯೆಡೆಗೆ ಬಂದರು. ಅವರ ಪ್ರಶ್ನೆಯೊಂದೇ, ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಆಗಸ್ಟ್ 15 ರಂದು ಅವರು ಭಾರತದ ತ್ರಿವರ್ಣ ಧ್ವಜ ಹಾರಿಸಿದ್ದಾರೆ. ಆದರೆ ಈಗ ಅದು ಪಾಕಿಸ್ಥಾನದ ವ್ಯಾಪ್ತಿಗೆ ಬರುತ್ತಿದೆ. ತಮಗೆ ಮಾತ್ರ ಪಾಕಿಸ್ತಾನವನ್ನು ಸೇರಲು ಇಚ್ಛೆಯಿಲ್ಲ. ಏನು ಮಾಡಬೇಕು? ಈಗ ಗಾಂಧಿಯ ನಿರ್ಧಾರ ಮಿಲಿಟರಿ ಅಧಿಕಾರಿಯಂತೆ ನೇರ ಮತ್ತು ಸ್ಪಷ್ಟ. ಆತ ಹೇಳಿದ "ಈ ಪ್ರಶ್ನೆಗೆ ನನ್ನ ಬಳಿ ಎರಡು ಅಭಿಪ್ರಾಯಗಳಿಲ್ಲ. ನಿಮ್ಮ ಊರು ಪಾಕಿಸ್ಥಾನದ ವ್ಯಾಪ್ತಿಗೆ ಬರುವುದಾದರೆ ಭಾರತದ ಭಾವುಟವನ್ನು ಇಳಿಸಬೇಕು ಮತ್ತು ಪಾಕಿಸ್ಥಾನದ ಧ್ವಜವನ್ನೇ ಗೌರವಿಸಬೇಕು. ರ್‍ಯಾಡ್‌ಕ್ಲಿಪ್ ಸಂತೋಷದಿಂದ ನಮಗೆ ಈ ಅವಾರ್ಡನ್ನು ನೀಡಿದ್ದಾರೆ. ಒಳ್ಳೆಯದೋ ಕೆಟ್ಟದ್ದೋ ಸ್ವೀಕರಿಸಲೇಬೇಕು." ಗಾಂಧಿಯ ಈ ಹೇಳಿಕೆಯಿಂದ ನೊಂದ ಜನ ಸಪ್ಪೆ ಮುಖ ಹಾಕಿಕೊಂಡು ಗತಿಕಾಣದೇ ಊರಿಗೆ ಹಿಂದಿರುಗಿದರು.

19 ಆಗಸ್ಟ್ 1947ರಂದು ಗಾಂಧಿ ಕಲ್ಕತ್ತೆಯಿಂದ ಹದಿನಾಲ್ಕು ಕಿ.ಮೀಟರ ದೂರದಿಂದ ಬರಾಕ್‌ಪೋರ್‌ಗೆ ಸುಹ್ರವರ್ದಿಯೊಂದಿಗೆ ಹೊರಟ. ಅದು ಹಿಂದು-ಮುಸ್ಲಿಂ ದಂಗೆಯಿಂದ ಪ್ರಕ್ಷುಬ್ಧಗೊಂಡ ಊರು. ಗಾಂಧಿ ಅಲ್ಲಿಗೆ ಹೋಗುವುದರೊಳಗಾಗಿ ಮಧ್ಯ ವಯಸ್ಸಿನ ಮುಸ್ಲಿಂ ವ್ಯಕ್ತಿಯೊಬ್ಬ ಓಡಿಬಂದು ಕಾಲಿಗೆರಗಿ "ಗಾಂಧಿ ಸಾಹೇಬ, ನಮ್ಮ ಎಲ್ಲ ತಪ್ಪುಗಳಿಗಾಗಿ ಕ್ಷಮಿಸಿ. ನಮಗೆ ಗೊತ್ತಿದೆ, ಈ ಹಿಂದೆ ನಾವು ಅನೇಕ ತಪ್ಪುಗಳನ್ನು ಮಾಡಿದ್ದೇವೆ. ಆದರೆ ಇನ್ನು ಮುಂದೆ ನಾವು ಒಂದೇ ಕುಟುಂಬದ ಸದಸ್ಯರಂತೆ ಕೂಡಿ ಬದುಕಿ ತೋರಿಸುತ್ತೇವೆ" ಎಂದು ಕಣ್ಣೀರಿಟ್ಟ. ಹಿಂದೂ ನಾಯಕನೊಬ್ಬ ತಾನು ಮತ್ತು ತನ್ನ ಸಹಚರರು ಇನ್ನೆಂದೂ ಹಿಂಸೆಯ ಹಾದಿಯನ್ನು ತುಳಿಯುವುದಿಲ್ಲ ಎಂದು ಭರವಸೆ ಕೊಟ್ಟ.

ಗಾಂಧಿಯ ಸಮ್ಮುಖದಲ್ಲಿ ಬರಾಕ್‌ಪೂರದ ಜನರೆಲ್ಲರೂ 'ಹಿಂದು-ಮುಸ್ಲಿಂ ಏಕ್ ಹೈ', 'ಪಾಕಿಸ್ಥಾನ ಜಿಂದಾಬಾದ್', 'ಹಿಂದೂಸ್ಥಾನ ಜಿಂದಾಬಾದ್', 'ಮಹಾತ್ಮ ಗಾಂಧಿಜೀ ಕಿ ಜೈ' ಎಂದು ಜೈಕಾರ ಹಾಕಿ ಕುಣಿದಾಡಿದರು. ಇದೇ ಸಾಯಂಕಾಲ ಕಲ್ಕತ್ತೆಯ 'ಮೊಹ್ಮಡನ್ ಸ್ಪೋರ್ಟಿಂಗ್ ಕ್ಲಬ್' ಮೈದಾನದಲ್ಲಿ ಗಾಂಧಿಯ ಸಾಯಂಕಾಲದ ಪ್ರಾರ್ಥನೆಯೊಂದಿಗೆ ಕನಿಷ್ಠ ಐದು ಲಕ್ಷ ಜನ ಹಿಂದೂ ಮುಸ್ಲಿಂರು ಸೇರಿದರು. ಈ ಜನಸಾಗರದ ಮಧ್ಯವೇ ಬೆಳೆದು ಬಂದ ಗಾಂಧಿಗೂ ಇಂಥ ಅಭೂತಪೂರ್ವ ಜನಸಾಗರ ಒಂದು ಕ್ಷಣ ಆಶ್ಚರ್ಯವನ್ನುಂಟುಮಾಡಿತು. ದ್ವಂದ್ವ ಮತ್ತು ಖುಷಿಯಿಂದ ಭಾರವಾಗಿದ್ದ ಗಾಂಧಿ ಅತ್ಯಂತ ಕಡಿಮೆ ಮಾತನಾಡಿದ್ದ. "ಈ ದೇಶದ ಇತಿಹಾಸದಲ್ಲಿ ಹಿಂದು-ಮುಸ್ಲಿಂರು ನಿರಂತರವಾಗಿ ಇಂದಿನಂತೆಯೇ ಕೂಡಿ ಬದುಕಿದ್ದಾರೆ. ಆದರೆ ಇತ್ತೀಚಿಗೆ ಮಾತ್ರ ಇಂತಹ ದೃಶ್ಯಗಳು ವಿರಳವಾಗಿದ್ದವು. ಸರಿ, ಈಗಲಾದರೂ ಮುಸ್ಲಿಂ ಲೀಗ್, ಕಾಂಗ್ರೆಸ್ ಮತ್ತು ನ್ಯಾಷನಲ್ ಗಾರ್ಡ್‌ನ ಸದಸ್ಯರೆಲ್ಲರೂ ಇಲ್ಲಿ ಸೇರಿದ್ದೀರಲ್ಲ ಅಷ್ಟು ಸಾಕು. ನನ್ನ ಪ್ರಾರ್ಥನೆ ಇಷ್ಟೇ ಈ ನಿಮ್ಮ ಸಾಮರಸ್ಯ ಅಖಂಡವಾಗಿರಲಿ. ನಮಗೆ ಸಿಕ್ಕ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲು ನಾವು ಅನೇಕ ತ್ಯಾಗಗಳಿಗೆ ಸಿದ್ಧರಾಗಬೇಕಿದೆ. ಸ್ವಾತಂತ್ರ ಪಡೆಯುವುದಕೋಸ್ಕರ ನಾವು ಯಾವ ಸತ್ಯ ಮತ್ತು ಅಹಿಂಸೆಯ ದಾರಿ ಅನುಸರಿಸಿದೆವೊ ಹಾಗೆಯೇ ಈ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದಕ್ಕೋಸ್ಕರವೂ ಮತ್ತೆ ಅದೇ ದಾರಿಯನ್ನು ನಾವು ಅನುಸರಿಸಬೇಕಿದೆ."

ಹೀಗೆ ಜನಗಳಿಗೆ ಸಂಭೋದಿಸುತ್ತಲೇ ಗಾಂಧಿ ಈ ಮತಿಯ ಗಲಭೆ ಮತ್ತು ಜನಾಂಗೀಯ ಕದನಗಳಿಗೆ ಒಂದು ಶಾಶ್ವತ ಪರಿಹಾರದ ದಾರಿಯನ್ನು ಹುಡುಕುವುದರಲ್ಲಿ ತಲ್ಲೀನನಾಗಿದ್ದ. ಹಾಗೆ ಒಂದು ಕ್ಷಣ ಅಂದುಕೊಂಡ ಭಾರತವೇ ಇರಲಿ, ಪಾಕಿಸ್ಥಾನವೇ ಇರಲಿ ಅಥವಾ ಪ್ರಪಂಚದ ಇನ್ನಾವುದೇ ದೇಶದ ಮೂಲೆಯಲ್ಲಾಗಲೀ ಇಂತಹ ಸಂದರ್ಭಗಳಲ್ಲಿ ಬಹುಸಂಖ್ಯಾತರಾಗಿರುವವರು ಹೆಚ್ಚು ಜವಾಬ್ದಾರಿಯಿಂದ ಹಾಗೂ ತ್ಯಾಗ ಮತ್ತು ಪ್ರೀತಿಯ ತತ್ವಗಳಿಂದ ತಮ್ಮನ್ನೇ ತಾವು ಶಿಸ್ತಿಗೆ ಒಳಪಡಿಸಿಕೊಂಡರೆ ಬಹಳಷ್ಟು ಅನಾಹುತಗಳನ್ನು ತಪ್ಪಿಸಬಹುದು ಎನ್ನುವದು ಗಾಂಧಿಯವಾದ.

ದುರ್ದೈವದ ವಿಷಯವೇ ಇದು. ಇಂತಹವೊಂದು ಪರಿಹಾರ ಸೂತ್ರದಿಂದ ತಾನು ಬಹುಸಂಖ್ಯಾತರ ಆಕ್ರೋಶಕ್ಕೆ ಒಳಗಾಗಿ ಕೊಲೆಯಾಗಬಹುದು ಎನ್ನುವ ಆಲೋಚನೆ ಗಾಂಧಿಗೆ ಹೊಳೆಯಲಿಲ್ಲವೇನೋ.

ಆಗಸ್ಟ್ 20ರಂದು ತನ್ನ ಈ ನಂಬಿಗೆಯನ್ನು ಕುರಿತು ಗಾಂಧಿ ಈ ಭಾಷಣವನ್ನು ಮಾಡಿದ್ದ. ಹಿಂಸೆಯ ಕರಾಳ ಮುಖಗಳನ್ನು, ಅದರ ಪ್ರಗತಿಹೀನತೆಯನ್ನು ಸಾಮಾನ್ಯರಿಗೆ ಮನಗಾಣಿಸುವುದೇ ಆತನ ಈ ಭಾಷಣದ ಉದ್ದೇಶವಾಗಿತ್ತು. ಆತ ಹೇಳಿದ್ದ–

"ಮನುಷ್ಯ ಕುಲ ತಾನು ಸಾಗಿ ಬಂದ ದಾರಿಯುದ್ದಕ್ಕೂ ಹಿಂಸೆಯನ್ನು ಪ್ರತಿಪಾದಿಸುತ್ತಲೆ ಬಂದಿದೆ. ಸ್ವರಕ್ಷಣೆಯ ಹೆಸರಿನಲ್ಲಿ ಯುದ್ಧಗಳು, ಮಹಾಯುದ್ಧಗಳು ಜರುಗಿವೆ. ಮನುಷ್ಯ ಹಿಂಸೆಗೆ ಪ್ರತಿಯಾಗಿ ಹಿಂಸೆಯನ್ನು ಸಾರಿ ಬಿಡುವುದರಿಂದ ದಾರಿ ಸಿಗುತ್ತದೆ ಎಂದು ಸರಳೀಕರಿಸಿ ಬಿಡುತ್ತಾನೆ. ಈ ಕಾರಣಕ್ಕಾಗಿಯೇ ಪ್ರಪಂಚದುದ್ದಕ್ಕೂ ಆಯುಧಗಳ ಶೇಖರಣೆ, ಪೂಜೆ ಮತ್ತು ಬಚ್ಚಿಡುವಿಕೆಯಂಥ ಕಾರ್ಯಗಳು ನಡೆಯುತ್ತಿವೆ.

ಫಲಿತಾಂಶ, ಈ ಪ್ರಪಂಚ ಯಾವಾಗ ಸುರಕ್ಷಿತವಾಗಿರಲು ಸಾಧ್ಯ? ಎನ್ನುವ ಪ್ರಶ್ನೆಗೆ ಇಂದಿಗೂ ನಮಗೆ ಉತ್ತರವನ್ನು ಕಂಡುಕೊಳ್ಳಲು ಆಗಿಲ್ಲ. ಕಬ್ಬಿಣದ ಈ ಆಯುಧಗಳನ್ನು ಒಕ್ಕಲುತನದ ಪರಿಕರಗಳಾಗಿ ಮಾರ್ಪಡಿಸಲಾಗಿಲ್ಲ. ಆದರೆ ಇತಿಹಾಸದಲ್ಲಿ ಇದುವರೆಗೂ ಜರುಗಿದ ಕೃತ್ಯಗಳಿಂದ ಮನುಷ್ಯ ಇಷ್ಟರಲ್ಲಿಯೇ ಪಾಠ ಕಲಿಯಬೇಕಿತ್ತು. ಹೋಗಲಿ, ಹಿಂಸೆ ಬೆಳೆಯುವ ರೀತಿಯ ಬಗೆಗೆ ಏನಾದರೂ ನಮಗೆ ತಿಳುವಳಿಕೆ ಇದೆಯೇ? ಅದು ಬೆಳೆಯುವದು ಮತ್ತೊಂದು ಹಿಂಸೆಯ ಮೇಲಿಯೇ. ಪ್ರತಿ ಆಕ್ರಮಣಕಾರಿಗೂ ತನ್ನ ದಾಳಿಯ ಹಿಂದೆ ಒಂದು ಉದ್ದೇಶ ಕಾಣುತ್ತದೆ. ಹೀಗಾಗಿ ಆತ ಏನಾದರೂ ಮಾಡಲು ಮತ್ತು ಆ ಮೂಲಕ ತನ್ನೆದುರು ವ್ಯಕ್ತಿ ಮತ್ತು ವಸ್ತುವನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಮತ್ತೆ ಆಕ್ರಮಣಮಾಡುತ್ತಾನೆ. ಎದುರಾಳಿ ಅವನಷ್ಟೇ ಕ್ರೂರಿಯಾಗಿದ್ದರೆ, ಹಿಂಸೆಯ ಫಲಿತಾಂಶ ಇನ್ನೂ ಭಯಂಕರವಾಗಿರುತ್ತದೆ. ಯಾರೋ ಒಬ್ಬರು ಸೋಲುವದಂತೂ ಖಂಡಿತ. ಆದರೆ ಇಲ್ಲಿ ಸೋಲು ಗೆಲುವಿನ ಭಾಷೆ ಹುಟ್ಟುಕೊಳ್ಳುತ್ತದೆ. ಸ್ವರಕ್ಷಣೆ ಎಂದರೆ ಸೋಲದೇ ಇರುವದು, ಕೊಲ್ಲುವದು, ಇಲ್ಲವೇ ಸ್ವತಃ ಸಾಯುವದು, ಎನ್ನುವ ಒಂದು ತಾರ್ಕಿಕತೆಯಾಗಿ ಬಿಡುತ್ತದೆ. ಅಂದಾಗ ಇದನ್ನು ಸ್ವರಕ್ಷಣೆ ಎನ್ನುವದು ಹೇಗೆ? ಇದರಲ್ಲಿ ಯಾವ ರಕ್ಷಣೆಯಾಯಿತು? ಯಾರ ರಕ್ಷಣೆಯಾಯಿತು?.

ನಾನು ಹಿಂಸೆಯ ಮುಕ್ತಾಯವನ್ನು ಈ ರೀತಿಯಾಗಿ ಮಾಡಬಹುದು ಎನ್ನುತ್ತೇನೆ. ಮತ್ತು ಇದನ್ನು ಸ್ವರಕ್ಷಣೆ ಎಂದು ಕರೆಯುತ್ತೇನೆ. ಅದೇನೆಂದರೆ ಹಿಂಸೆಗೆ ಪ್ರತ್ಯುತ್ತರವನ್ನು ನೀಡದೇ ಇರುವದು. ಜೀಸಸ್ ಕ್ರೈಸ್ತನನ್ನು ಶಿಲುಬೆಗೆ ಏರಿಸಿದ ರೋಮ್‌ದ ಪಾಂಟಿಯಸ್ ಪಿಲೆಟ್, ಹಾಗೆ ಜೀಸಸ್‌ನನ್ನು ಕೊಲ್ಲುವುದರ ಮೂಲಕ ತಾನು ಗೆದ್ದೆ ಎಂದು ತಿಳಿದುಕೊಂಡಿದ್ದ. ಅದು ತಪ್ಪು. ಆ ವಿಚಾರದೊಂದಿಗೆ ನನ್ನ ಸಹಮತವಿಲ್ಲ. ಆಗ ಗೆದ್ದದ್ದು ಲಾರ್ಡ್ ಜೀಸಸ್. ಇದು ಪ್ರಪಂಚಕ್ಕೇ ಗೊತ್ತಿರುವ ಮಾತು. ಶಾಶ್ವತವಾದ ಯಶಸ್ಸನ್ನು ಸಾಧಿಸುವಾಗ ಈ ದೇಹವನ್ನು ಕಳೆದುಕೊಳ್ಳುವಲ್ಲಿ ಯಾವ ತಪ್ಪೂ ಇಲ್ಲ. ಜೀಸಸ್‌ನಂತಹ ಆತ್ಮರಕ್ಷಣೆಯ ದಾರಿ ತುಳಿಯಬೇಕಾದರೆ ಬಹಳಷ್ಟು ನಿಗ್ರಹ ಮಾಡಿಕೊಳ್ಳಬೇಕಾಗುತ್ತದೆ.

ಇದು ನಿಜವಾದ ಆತ್ಮರಕ್ಷಣೆ. ಇದರಲ್ಲಿ ಸುದೈವಕ್ಕೆ ಕೆಲವೊಮ್ಮೆ ಯಾವ ಪ್ರಾಣಹಾನಿ ಆಗದೇ ಹೋಗಬಹುದು. ಆದರೆ ಮನುಕುಲದ ಬಹುಸಂಖ್ಯಾತ ಜನ ಇದನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲ. ಸ್ವಯಂ ನಮ್ಮ ಸತ್ಯಾಗ್ರಹ ಸಿದ್ಧಾಂತವೇ ಇನ್ನೂ ಪೂರ್ಣ ಪ್ರಮಾಣದಲ್ಲಿ ಪ್ರಯೋಗಕ್ಕೆ ಒಳಪಡದೇ ಹೋಯಿತು. ಪರಿಣಮಿಸದೇ ಹೋಯಿತು. ಈ ಕಾರಣಕ್ಕಾಗಿಯೇ ಇರಬಹುದೇನೋ. ಇಂದಿಗೂ ಹಿಂದೂ–ಮುಸ್ಲಿಂರ ಮಧ್ಯದ ಕೊಲೆ, ಗೆಲುವಿನ ಭಾಷೆ, ಆಕ್ರಮಣ, ಪ್ರಭುತ್ವದ ದುರಾಸೆ ನಿಲ್ಲುತ್ತಿಲ್ಲ.

ಖಂಡಿತವಾಗಿಯೂ ಗಾಂಧಿಯ ಈ ಮಾತುಗಳು ಅಥವಾ ಈ ಸಿದ್ಧಾಂತ ಅಪ್ರಾಯೋಗಿಕವಾದುದೇ. ಪ್ರತಿರೋಧದ ಭಾಷೆಯಷ್ಟು ಸಹಜವಾಗಿ ಇದು ನಮಗೆ ಮನವರಿಕೆಯಾಗುವುದಿಲ್ಲ. ಮನುಷ್ಯ ಬದುಕಿನ ಗುರಿ ಅಂತಿಮವಾಗಿ ಒಳಿತನ್ನು ಸಾಧಿಸುವುದು. ಹಿಂದುಗಳ ಪ್ರಕಾರ ಮೋಕ್ಷವನ್ನು ಪಡೆಯುವುದು, ಮುಸ್ಲಿಂರ ಪ್ರಕಾರ ಜನ್ನತ್ತನ್ನು ಸೇರುವದು ಎಂದು ಅಂದುಕೊಳ್ಳುವುದಾದರೆ ಗಾಂಧಿಯ ಅಹಿಂಸೆಯ ದಾರಿಯನ್ನು ಬಿಟ್ಟು ಯಾವುದಾದರೂ ಹೊಸ ದಾರಿಯನ್ನು ಇದುವರೆಗೂ ಮಾನವ ಇತಿಹಾಸದಲ್ಲಿ ಯಾವ ಚಿಂತಕನಿಗೂ ತೋರಿಸಲು ಸಾಧ್ಯವಾಗಲಿಲ್ಲ ಯಾಕೆ? ಇದು ಗಾಂಧಿಯ ದಾರಿ ಎಂದುಕೊಂಡಾಗ ಗಾಂಧಿಯನ್ನು ವಿರೋಧಿಸುವ ಅನೇಕರಿಗೆ ಇದು ಅಪ್ಯಾಯಮಾನವಾಗಲಿಕ್ಕಿಲ್ಲ. ಆದರೆ ಬುದ್ಧ, ಮಹಾವೀರ ಭಾರತದ ಭಕ್ತಿ ಚಳುವಳಿಯ ಅನೇಕ ಸಂತರು, ಸೂಫಿಗಳು ಹಾಗೂ ಅಂತಿಮವಾಗಿ ಸ್ವಯಂ ಸಾಮ್ರಾಟ ಅಶೋಕನೂ ಇದೇ ದಾರಿಯನ್ನು ಒಪ್ಪಿಕೊಂಡ ಎಂದು ತಿಳಿದುಕೊಂಡಿದ್ದರೆ ಒಬ್ಬ ಗೊಡ್ಸೆ ಇಲ್ಲವಾಗುತ್ತಿದ್ದ. ಗಾಂಧಿಯೆಂಬ ಬಡಪಾಯಿ ಮುದುಕ ನೂರಾ ಇಪ್ಪತ್ತೈದು ವರ್ಷಗಳ ಜೀವನದ ದೀರ್ಘ ದಾರಿಯನ್ನು ಕ್ರಮಿಸಿರುತ್ತಿದ್ದ. ಹೀಗಾಗುವುದಿಲ್ಲವಲ್ಲ. ಬಹುತೇಕ ಇತಿಹಾಸ ಹೆಪ್ಪುಗಟ್ಟುವದು ಎಂದರೆ ಇದೇ ಇರಬಹುದು.

ಇದು ಗಾಂಧಿಯ ದುರ್ದೈವವೆನ್ನಬೇಕೆ? ಬದುಕಿನ ಸಂಧ್ಯಾಕಾಲವನ್ನೆಲ್ಲಾ ಜೀವನದುದ್ದಕ್ಕೂ ತಾನು ಪ್ರತಿಪಾದಿಸಿದ ಮೌಲ್ಯಗಳ ವಿರುದ್ಧ ಹೋಗುವುದರಲ್ಲಿಯೇ ಕಳೆಯುವುದು ಅವನ ಪಾಲಿನ ದುರಂತ ನಾಟಕವೆನ್ನಬೇಕೆ? ಯಾವ ಬಿರ್ಲಾ ಯುದ್ಧ ಸಾಮಗ್ರಿಗಳನ್ನು ಪೂರೈಸಿ ಶ್ರೀಮಂತನಾದನೊ ಆತನ ಅರಮನೆಯ ಗಿಳಿಯಾಗಬೇಕಾಯಿತು

ಗಾಂಧಿ. ಯಾವ ಸುಹರವರ್ದಿ ಹಿಂದೂಗಳ ಮಾರಣಹೋಮವನ್ನೇ ಮಾಡಿದನೋ ಅದೇ ವ್ಯಕ್ತಿ ಬುರ್‍ರಾಬಜಾರ್‌ನಿಂದ ಒಂದು ಕೋಟಿ ರೂಪಾಯಿ ಪರಿಹಾರ ಧನ ಎತ್ತಿಕೊಡುವಾಗ ಕೈ ಚಾಚಬೇಕಾಯಿತು ಗಾಂಧಿ. ಯುನೈಟೆಡ್ ಸ್ಟೇಟ್ ಆಫ್ ಅಮೇರಿಕಾಕ್ಕೆ ರಾಷ್ಟ್ರದ ಎಲ್ಲಾ ಹಿರಿಯರನ್ನು ಬದಿಗೊತ್ತಿ ಕೇವಲ ಹದಿನೆಂಟು ವರ್ಷದ ಹುಡುಗಿ ವಿಜಯಲಕ್ಷ್ಮಿ ಪಂಡಿತ್ ರಾಜಧೂತಳಾಗಿ ಆಯ್ಕೆಯಾಗುವಾಗ ನೆಹರು ಕುಟುಂಬದ ಋಣಭಾರಕ್ಕೆ ಬಾಗಿದ ಗಾಂಧಿ ಬಾಯಿ ಮುಚ್ಚಿಕೊಂಡಿರಬೇಕಾಯಿತು. ಯಾವ ಐಷರಾಮಿ ಬದುಕು, ಕುಡಿತ, ಧೂಮಪಾನವನ್ನು ಆತ ನಿಷೇಧಿಸಿದ್ದನೋ ಅವುಗಳ ಮಹಾನ್ ಆರಾಧಕನಾಗಿದ್ದ ಜಿನ್ನಾನೊಂದಿಗೆ ಪ್ರಜಾಪ್ರಭುತ್ವದ ಮೌಲ್ಯಗಳ ಕುರಿತು ಚರ್ಚಿಸಬೇಕಾಯಿತು. ಇದೆಲ್ಲವೂ ಗಾಂಧಿ ಹಾಕಿಕೊಂಡ ಮಹಾತ್ಮ ಎನ್ನುವ ಮುಖವಾಡದ ಪ್ರತಿಫಲ ಎಂದು ಯುವಕರು ಹೀಗಳೆಯುವಷ್ಟು ಗಾಂಧಿ ಬದುಕಿರುವಾಗಲೇ ದ್ವಂದ್ವಕ್ಕೆ ಎಡೆಯಾಗಬೇಕಾಯಿತು.

ಆಗಸ್ಟ್ 22 ರಂದು ಯಾರು ತನ್ನನ್ನು ಕೇಳುತ್ತಿದ್ದರೊ ಇಲ್ಲವೊ, ಗಾಂಧಿ ಮಾತ್ರ ಮಾತಾಡುತ್ತಲೇ ಹೋದ. “ಕನಿಷ್ಠ ಒಂದು ಶತಮಾನದಿಂದ ನಮ್ಮ ದೇಶದ ಶಿಕ್ಷಣ ಒಂದೇ ನಿಶ್ಚಿತ ಉದ್ದೇಶಕ್ಕಾಗಿ ರೂಪಿತವಾದಂತಿದೆ. ಬಂಡವಾಳಷಾಹಿಯನ್ನು ಪ್ರೋತ್ಸಾಹಿಸುವ ಅದು ವಿದೇಶಿಗರಿಂದ ಪ್ರೋತ್ಸಾಹಗೊಂಡಿದೆ. ಹಳ್ಳಿಗಳು ಕಡೆಗಣಿಸಲ್ಪಟ್ಟು ನಗರಗಳ ಆರಾಧನೆ ನಡೆದಿದೆ. ಸಾಧ್ಯವಾದಷ್ಟು ನಗರದ ಅವಕಾಶಗಳಿಂದ ದೂರವಿರಸಲ್ಪಟ್ಟ ಇವುಗಳು ಕೊಳಗೇರಿಗಳಂತಾಗಿವೆ. ಹೀಗಾಗಿ ಈ ರೀತಿ ಉದ್ವಸ್ಥಗೊಂಡ ಸಮಾಜದ ಪರಿಚಾರಿಕೆಯಂತೆ ನಮ್ಮ ಶಿಕ್ಷಣ ಕೆಲಸಮಾಡುತ್ತಿದೆ.

ನಮ್ಮ ಭಾರತದ ಸಾಧ್ಯತೆ ಹಳ್ಳಿಗಳಿಂದ ಮಾತ್ರ. ಇಂಚು ಇಂಚಾಗಿ ಪ್ರಜಾಪ್ರಭುತ್ವದ ನಮ್ಮ ಮೌಲ್ಯಗಳು ಪರೀಕ್ಷೆಗೊಳಪಡಬೇಕಾಗಿದೆ. ಪ್ರಜಾಸತಾತ್ಮಕ ವಿವೇಕ ರಾಷ್ಟ್ರದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಜೀವನಗಳನ್ನು ಹಾಸುಹೋಗಬೇಕಾಗಿವೆ. ಹಳ್ಳಿಗರೊಂದಿಗೆ ವರ್ತಿಸಬೇಕಾದಾಗ ಪ್ರತಿಯೊಬ್ಬ ಭಾರತೀಯನು ಸಹನಶೀಲನಾಗಬೇಕಾಗಿದೆ, ಅಹಿಂಸಾವಾದಿಗಳಾಗಿರಬೇಕಿದೆ. ಹಳ್ಳಿಗರ ಮನಸ್ಸನ್ನು ಗೆಲ್ಲುವ ಮುಂಚೆ ಅನೇಕ ಕಷ್ಟಗಳಿಗೆ ಎದೆಯೊಡ್ಡಬೇಕಾಗಿದೆ. ಇದು ಸಾಧ್ಯವಾದರೆ ಮಾತ್ರ ಈ ದೇಶಕ್ಕೊಂದು ಭವಿಷ್ಯ ಸಾಧ್ಯ ಎನ್ನಬಹುದು.”

ದುರಂತವಿರುವುದೆ ಇಲ್ಲಿ. ಗಾಂಧಿ ಒಂದೆಡೆ ಹಳ್ಳಿಗಳ ಉದ್ಧಾರದ ಮಂತ್ರ ಜಪಿಸುತ್ತಿದ್ದರೆ ಇನ್ನೊಂದೆಡೆ ಅವರ ಮಾನಸ ಪುತ್ರ ನೆಹರು ನಗರೀಕರಣ, ಬೃಹತ್ ಕೈಗಾರಿಕೆಗಳು ಮತ್ತು ಶಸ್ತ್ರಸಜ್ಜಿತ ಭಾರತದ ಹಲವು ಯೋಜನೆಗಳ ಶಂಕುಸ್ಥಾಪನೆ ಮಾಡಿಯಾಗಿತ್ತು. ಇದೇ ದಿನ ಡಾ. ರಾಮ ಮನೋಹರ ಲೋಹಿಯಾ ಅವರಿಗೆ ಧೂಮಪಾನದ ದುಷ್ಪರಿಣಾಮಗಳನ್ನು ವಿವರಿಸುತ್ತಾ ಗಾಂಧಿ ಬರೆಯುತ್ತಾನೆ. “Smoking must be given up all at once, those who say they smoke moderately can not keep to a limit. If we workers do not have such will power, what work can be expected to do? And it is now that we have to do our real work.” ಲೋಹಿಯಾ ಗಾಂಧಿ ಪತ್ರಕ್ಕೆ ಯಾವ ಗೌರವ ಕೊಟ್ಟರೋ?

ಈ ದೇಶ ಕಂಡ ಅಪರೂಪದ ಚಿಂತಕರಲ್ಲಿ ಲೋಹಿಯಾ ಒಬ್ಬರು ಎಂಬ ಕಾರಣಕ್ಕಾಗಿಯೇ ಇರಬಹುದು. ಗಾಂಧಿ ಲೋಹಿಯಾರ ಚಟವನ್ನು ಕುರಿತು ಚಿಂತಿಸಬೇಕಾಯಿತು.

ಬದುಕಿರುವಾಗಲೂ ಒಂದು ರೀತಿಯ ಹಟವಾಗಿದ್ದ ಗಾಂಧಿ ಆ ನಂತರವೂ ನಮ್ಮನ್ನು ಕಾಡುವುದು ಹೀಗೆ. ಆತ ಕಟಿಬದ್ಧ. ಅನೇಕ ಬಾರಿ ಆತನ ಮಾತುಗಳು, ವಾದಗಳು ನಗೆ ತರಿಸುತ್ತವೆ. ಬುದ್ಧಿಗೇಡಿತನವೆನಿಸುತ್ತವೆ ಹಾಗೆಯೇ ಅವಾಸ್ತವ ಎಂದು ಕೂಡ ಅನಿಸುತ್ತವೆ. ಆದರೆ ನಮ್ಮ ಈ ಯಾವ ಆಪಾದನೆಗಳು ಬಹುತೇಕ ಅವನನ್ನು ಎಂದೂ ಬಾಧಿಸಲೇ ಇಲ್ಲ. ಆದರೆ ಆತ ಕೇಳಿದ ಕೆಲವು ಪ್ರಶ್ನೆಗಳು ಈಗಲೂ ಪ್ರಶ್ನೆಗಳಾಗಿಯೇ ಉಳಿದಿವೆ. 22 ಆಗಸ್ಟ್‌ರಂದು ಕಲ್ಕತ್ತಾದ ದೇಶಬಂಧು ಪಾರ್ಕ್‌ನಲ್ಲಿ ತನ್ನ ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಿದ ಹಾಗೂ ರಾಮನ ಭಜನೆಯಲ್ಲಿ ಪಾಲ್ಗೊಂಡ ಎಲ್ಲರನ್ನು ಆತ ಕೇಳುತ್ತಾನೆ. "ಬೊಅರ್‌ವಾರ್ ಸಂದರ್ಭದಲ್ಲಿ ಲಕ್ಷಾಂತರ ಸೈನಿಕರು ಸಾಗಿಹೋಗುವಾಗ ಅವರ ಬೂಟಿನ ಸದ್ದಿನಿಂದ ಸೃಷ್ಟಿಯಾಗುತ್ತಿದ್ದ ಸಂಗೀತವನ್ನು ನಾನು ಕೇಳಿದ್ದೇನೆ. ಸಂಗೀತ ಮನಃಶಾಂತಿಯ, ಮಾನವನ ವಿಕಾಸದ ಒಂದು ಮಹಾನ್ ಸಾಧನೆ ಎನ್ನುವುದಾದರೆ ಸೈನಿಕರ ಬೂಟಿನ ಸಪ್ಪಳ ಅದನ್ನೇಕೆ ಸಾಧಿಸಲಿಲ್ಲ? ಎರಡು ಮಹಾನ್ ಯುದ್ಧಗಳಲ್ಲಿ ಅದ್ಯಾಕೆ ಅಷ್ಟೊಂದು ಬದುಕುಗಳು ದುರ್ಗತಿಯ ದಾರಿಯನ್ನ ಹಿಡಿದವು. ಅದ್ಯಾಕೆ ಆರ್ಥಿಕ ದಿವಾಳಿಕೋರತನದಿಂದ ಜಗತ್ತು ನರಳಬೇಕಾಯಿತು? ಹಾಗಿರಲಿಕ್ಕಿಲ್ಲವಲ್ಲ. ಸಂಗೀತದ ಸ್ವರಕ್ಕಿಂತ ಅದು ಸಾಗಿ ಬರುವ ದಾರಿಯೂ ಮುಖ್ಯವಾಗಿರುತ್ತದೆ. ಸೈನಿಕರ ಬೂಟಿನ ಸಪ್ಪಳಿನಲ್ಲಿ ಸಿಗದ ನೆಮ್ಮದಿ ಖಂಡಿತವಾಗಿಯೂ ನನಗೆ ರಾಮನ ಭಜನೆಯಲ್ಲಿ ಸಿಕ್ಕಿದೆ. ಸಾಮೂಹಿಕವಾಗಿ ದೇವರ ನಾಮಸ್ಮರಣೆ ಮಾಡುವುದರಿಂದ ಅಗಾಧವಾದ ಶಾಂತಿ ಮತ್ತು ಸಂತೋಷಗಳು ಮನುಷ್ಯನಿಗೆ ಲಭ್ಯವಾಗುತ್ತವೆ. ಈ ಪ್ರಾರ್ಥನೆ ಯುದ್ಧದ ಸದ್ದಿನಂತೆ. ವಿನಾಶದ ದಾರಿಯಲ್ಲ. ರಾಮಭಜನೆ, ರಾಮಸ್ಮರಣೆಯಿಂದಲೆ ನೌಕಾಲಿ, ಬಿಹಾರ್, ಕಲ್ಕತ್ತಾ ಮತ್ತು ಪಂಜಾಬಗಳಲ್ಲಿ ನಾನು ಸಾಧಿಸಬೇಕಾದುದನ್ನು ಸಾಧಿಸಿದ್ದೇನೆ. ಆದಾಗ್ಯೂ ನನ್ನ ಪ್ರಾರ್ಥನೆ ಪೂರ್ಣ ಯಶಸ್ಸನ್ನು ಸಾಧಿಸಿಲ್ಲ. ಅಮೃತಸರದಿಂದ ಮುಸ್ಲಿಂರು, ಲಾಹೊರ್‌ನಿಂದ ಹಿಂದುಗಳು ಪ್ರಾಣ ಭೀತಿಯಿಂದ ಓಡಿಹೋಗುವುದನ್ನು ನೋಡಿದಾಗ ನನಗೆ ನಿಜಕ್ಕೂ ದುಃಖವೆನಿಸುತ್ತದೆ. ಕರಗಪುರದಲ್ಲಿ ಹಿಂದು ಅಧಿಕಾರಿಗಳು ಮುಸ್ಲಿಂರನ್ನು ದಂಡಿಸುತ್ತಿದ್ದಾರೆ. ಇದು ಅಮಾನವೀಯ ಅಲ್ವೆ?" ಎಂದು ಗಾಂಧಿ ಪ್ರಶ್ನಿಸಿದ.



ಅಲ್ಲಾ-ಹು-ಅಕ್ಬರ್ V/S ಸತ್-ಶ್ರೀ ಅಕಾಲ್

೧೫

ಆಗಸ್ಟ್ 23ರಂದು ಸಿಖ್‌ರನ್ನು, ಮುಸ್ಲಿಂರನ್ನು ಒಂದೆಡೆ ಸೇರಿಸಿ ಧರ್ಮಾಂಧರ ಬಾಯಲ್ಲಿ ಯುದ್ಧಘೋಷಣೆಗಳಾಗಿ ಮಾರ್ಪಾಡಾಗಿದ್ದ 'ಅಲ್ಲಾ–ಹು–ಅಕ್ಬರ್' ಮತ್ತು 'ಸತ್–ಶ್ರೀ–ಅಕಾಲ್' ಎನ್ನುವ ಹೇಳಿಕೆಗಳ ನಿಜವಾದ ಅರ್ಥಗಳನ್ನು ಗಾಂಧಿ ವಿವರಿಸಲು ಯತ್ನಿಸಿದ. ಅರೆಬಿಕ್‌ನಲ್ಲಿ ಅಲ್ಲಾ–ಹು–ಅಕ್ಬರ್ ಎಂದರೆ 'ದೇವನೊಬ್ಬನೆ ಶ್ರೇಷ್ಠ' ಎಂದು ಅರ್ಥ. ಹಾಗೆಯೇ ಸಿಖ್ ಜನಾಂಗದಲ್ಲಿ ಸತ್–ಶ್ರೀ–ಅಕಾಲ್ ಎಂದರೆ 'ಕಾಲಾತೀತನಾದ ದೇವರು ಅಸ್ಥಿತ್ವದಲ್ಲಿದ್ದಾನೆ' ಎಂದು ಅರ್ಥ. ಈ ಜಗವೆಲ್ಲವು ಅವನಲ್ಲದೆ ಮತ್ತೇನೂ ಅಲ್ಲ. ಇದು ಸತ್ಯ ಎನ್ನುವುದಾದರೆ ಈ ಘೋಷಣೆಗಳ ನಿಜವಾದ ಅರ್ಥಗಳು ಇವೇ ಎನ್ನುವುದಾದರೆ, ಇವುಗಳಿಗೆ ಮತೀಯ ಬಣ್ಣ ಎಲ್ಲಿಂದ ಬಂತು? ಸಿಖ್‌ರು ಅಲ್ಲಾ–ಹು–ಅಕ್ಬರ್ ಎನ್ನಲು, ಮುಸ್ಲಿಂರು ಸತ್–ಶ್ರೀ–ಅಕಾಲ್ ಎನ್ನಲು ಯಾಕೆ ಪರಸ್ಪರ ಭಯಪಡಬೇಕಾಯಿತು? ಇದು ಗಾಂಧಿಯ ಪ್ರಶ್ನೆ. ಧರ್ಮ ದಾರಿತಪ್ಪಿದರೆ ಮಾನವ

ಕುಲಕ್ಕೆ ಉಳಿಗಾಲವಿಲ್ಲ. ಅದೊಂದು ರೀತಿಯಲ್ಲಿ ಕುರುಡ ಧೃತರಾಷ್ಟ್ರ ಕೌರವರನ್ನು ನಡೆಸಿಕೊಂಡು ಹೋದ ಕಥೆಯ ಪುನರಾವರ್ತನೆಯಾಗುತ್ತದೆ. ಭಾರತವೆನ್ನುವುದು ನಿತ್ಯ ಕುರುಕ್ಷೇತ್ರವಾಗುತ್ತದೆ. ಈ ಅಪಾಯದಿಂದ ರಾಷ್ಟ್ರ ಬದುಕುಳಿಯಬೇಕು ಎನ್ನುವುದು ಗಾಂಧಿಯ ಹಂಬಲವಾಗಿತ್ತು.

ಎಲ್ಲವನ್ನು ಕ್ರಮಿಸಿಕೊಂಡು ಹೋದ ಗಾಂಧಿಗೆ ಅಂತಿಮವಾಗಿ ಯಾವ ಸಾಕ್ಷಿ? ಯಾರ ಬಂಧನ? ಸಮಕಾಲೀನ ವಿಶ್ಲೇಷಕರೊಬ್ಬರು ಬರೆಯುತ್ತಾರೆ– Bapu felt himself accountable to God every moment of his living, thinking and doing. ಇದು ಸತ್ಯವೇ ಇರಬಹುದು. ಆದರೆ ದೇವರ ಈ ಭಾಷೆಯನ್ನು ಸಾಮಾನ್ಯನಿಗೆ ತಿಳಿಸುವುದು ಹೇಗೆ? ಎಲ್ಲ ಮನುಷ್ಯರೊಂದಿಗಿನ ನನ್ನ ಸಂವಾದಗಳು ದೇವರೊಂದಿಗಿನ ಸಂಭಾಷಣೆಯೇ ಆಗಿರುತ್ತದೆ ಎಂದು ನಂಬಿದ ಗಾಂಧಿಗೆ ಕೆಲವು ಮನುಷ್ಯರು ದೇವರ ಆಯ್ಕೆ ಆಗಿರುವುದಿಲ್ಲ ಎಂದು ತಿಳಿಸುವುದು ಹೇಗೆ? ಗಾಂಧಿಗೂ, ಸುಹರ್‌ವರ್ದಿಗೂ ಸ್ನೇಹ ಸಂಪಾದನೆಯಾಗಿ ಹತ್ತಾರು ವರ್ಷಗಳೇನು ಉರುಳಿರಲಿಲ್ಲ. ಯಾವ ವ್ಯಕ್ತಿಯ ಕೈಯಲ್ಲಿ ಇನ್ನು ಮುಂದೆ ಹಿಂದುಗಳ ಬದುಕು ನಿರಾತಂಕ ಎಂದು ಗಾಂಧಿ ಹೇಳಿದ್ದರೋ, ಆ ವ್ಯಕ್ತಿ ಇದ್ದಕ್ಕಿದ್ದಂತೆ ಗಾಂಧಿಯೊಂದಿಗಿನ ತನ್ನ ಒಪ್ಪಂದವನ್ನು ಮತ್ತೆ ಮುರಿದುಕೊಂಡ. ಹಿಂದು–ಮುಸ್ಲಿಮರ ಮಧ್ಯ ಪೂರ್ಣ ಪ್ರಮಾಣದಲ್ಲಿ ಸಾಮರಸ್ಯ ಮೂಡುವವರೆಗೂ ಹೈದರೀಮಂಜಿಲ್‌ದಲ್ಲಿ ಗಾಂಧಿಯೊಂದಿಗೆ ವಾಸಿಸಲು ಒಪ್ಪಿಕೊಂಡಿದ್ದ ಸುಹರ್‌ವರ್ದಿ ಈಗ ಅದರಿಂದ ಪಲಾಯನಗೈದ. ಆತನ ಈ ಹೆಜ್ಜೆಗೆ ಟೀಕೆಗೊಳಗಾದವ ಮಾತ್ರ ಗಾಂಧಿ.

ಕಟುಕನೊಂದಿಗೆ ಒಪ್ಪಂದ ಮಾಡಿಕೊಂಡ ಗಾಂಧಿಗೆ ಬುದ್ಧಿ ಇಲ್ಲ ಎಂದು ಅನೇಕ ಯುವಕರ ವಾದವಾಗಿತ್ತು. ಇನ್ನು ಮುಂದೆ ಈ ಮೂರ್ಖ ಗಾಂಧಿಯನ್ನು ನಂಬಿ ಹಾಳಾಗುವುದಕ್ಕಿಂತಲೂ ನಮ್ಮ ದಾರಿಯನ್ನು ನಾವು ತುಳಿದುಬಿಡಬೇಕು ಎಂದು ಅವರ ನಿರ್ಧಾರವಾಗಿತ್ತು. ಸುಹ್ರವರ್ದಿಯ ಈ ಮಿತ್ರ ದ್ರೋಹವನ್ನು ಗಾಂಧಿಗೆ ಅನೇಕರು ಪ್ರಶ್ನಿಸಿದರು. ಆದರೆ ಗಾಂಧಿ ಹೇಳುತ್ತಿದ್ದುದು ಇಷ್ಟೆ, "ನಿಮ್ಮ ಈ ಆಪಾದನೆ ನನಗೆ ಹೊಸದೇನು ಅಲ್ಲ. ಆಕಸ್ಮಿಕವಾಗಿ ಆರಂಭಗೊಂಡ ನನ್ನ ಮತ್ತು ಸುಹ್ರವರ್ದಿಯ ಈ ಪ್ರಯತ್ನಕ್ಕೆ ಅನಿರೀಕ್ಷಿತವಾದ ಯಶಸ್ಸು ಸಿಕ್ಕಿದೆ. ಆದರೆ ಇದು ಮುಂದೊಂದು ದಿನ ಇದೆ ಹಂತವನ್ನು ತಲುಪುತ್ತದೆ ಎನ್ನುವುದು ನನಗೆ ತಿಳಿದಿತ್ತು. ಆದರೆ ಈ ಕುರಿತು ನಾನು ಯಾವುದೇ ಚರ್ಚೆಯನ್ನು ಮುಂಚೆಯೆ ಮಿತ್ರ ಶಹೀದ್ ಸುಹ್ರವರ್ದಿಯೊಂದಿಗೆ ನಾನು ಮಾಡಲಿಲ್ಲ. ನಾನು ಜನರನ್ನು ನಂಬುತ್ತೇನೆ. ನಂಬಿಕೆಯಿಂದ ಯಾವುದೇ ಭಯಂಕರ ಹಾನಿಯಾಗುತ್ತದೆ ಎಂದು ನಾನು ತಿಳಿದುಕೊಂಡಿಲ್ಲ. ನನ್ನನ್ನು ಜನರು ನಂಬಬೇಕು ಎಂದು ಹೇಗೆ ನಾನು ಆಶಿಸುತ್ತೇನೆಯೋ ಹಾಗೆಯೇ ನಾನು ಜನರನ್ನೂ ನಂಬುತ್ತೇನೆ. ನಂಬಿಕೆಯೇ ಮನುಷ್ಯರನ್ನು ಪ್ರೀತಿಸುವ ಸರಿಯಾದ ಪಥ ಎಂದು ನನ್ನ ತಿಳುವಳಿಕೆಯಾಗಿದೆ. ಯಾರು ಯಾರನ್ನೂ ನಂಬಿ ಮೋಸ ಹೋಗಲು ಸಾಧ್ಯವಿಲ್ಲ. ಮೋಸಗಾರನೇ ಮೋಸಗೊಳ್ಳುತ್ತಾನೆ. ಇಷ್ಟಾಗಿಯೂ ನಿಮಗೆಲ್ಲ ಗೊತ್ತಿರಲಿ ಶಹೀದ್‌ನನ್ನು ನಂಬಿಯೇ ನಾನು ನನ್ನ ಎಲ್ಲ ಯೋಜನೆಗಳನ್ನು ಪ್ರಾರಂಭಿಸಲಿಲ್ಲ. ಅವನಿಲ್ಲದೆಯೂ ನಾನು ಮುಂದೆ ಸಾಗಬೇಕಿದೆ."

ಆಗಸ್ಟ್ 24 ರಂದು ಪಂಜಾಬಿಗಳ ದೊಡ್ಡ ಗುಂಪೊಂದು ಗಾಂಧಿಯನ್ನು ಭೇಟಿಯಾಗಿ, ನಮ್ಮ ರಕ್ಷಣೆಗಾಗಿ ನೀವು ಪಂಜಾಬಿಗೆ ಬರಬೇಕು ಕಾಶ್ಮೀರವನ್ನು ರಕ್ಷಿಸಿದಂತೆ, ನಮ್ಮನ್ನೂ ರಕ್ಷಿಸಬೇಕು ಎಂದು ಪ್ರಾರ್ಥಿಸಿದರು.

ಅಂದು ರವಿವಾರ ಗಾಂಧಿ ಜನರ ಈ ಬೇಡಿಕೆಯನ್ನು ಪ್ರಧಾನಿ ನೆಹರುಗೆ ವಿಶ್ಲೇಷಿಸುತ್ತಾ ಪತ್ರ ಬರೆದ. ಕಲ್ಕತ್ತೆಯಲ್ಲಿರುವ ಪಂಜಾಬಿಗಳು ನಾನು ಪಂಜಾಬಿಗೆ ಹೋಗಬೇಕೆಂದು ಒತ್ತಾಯಿಸುತ್ತಿದ್ದಾರೆ. ಅಲ್ಲಿಯ ಭಯಾನಕ ಕಥೆಗಳನ್ನು ನನಗೆ ಹೇಳಿದ್ದಾರೆ. ಸಾವಿರಾರು ಜನರ ಕೊಲೆಯಾಗಿದೆ ಮತ್ತೆ ಕೆಲವು ಸಾವಿರ ಹುಡುಗಿಯರನ್ನು ಹಾಡು ಹಗಲೇ ಹೊತ್ತೊಯ್ಯಲಾಗಿದೆ. ಪಾಕಿಸ್ತಾನಕ್ಕೆ ಒಳಪಡುವ ಪಂಜಾಬದಲ್ಲಿ ಹಿಂದುಗಳು ವಾಸಿಸುವಂತಿಲ್ಲ. ಅದೇ ರೀತಿಯಾಗಿ ಭಾರತಕ್ಕೊಳಪಡುವ ಪಾಕಿಸ್ತಾನದ ಪ್ರದೇಶಗಳಲ್ಲಿ ಮುಸ್ಲಿಂರು ವಾಸಿಸುವಂತಿಲ್ಲ. ಎರಡೂ ದೇಶದ ಸೈನ್ಯಗಳು ತಮ್ಮ ತಮ್ಮ ಜನರ ಪರವಾದ ಕೆಲಸಗಳಲ್ಲಿ ತೊಡಗಿದ್ದಾರೆಯೇ ವಿನಃ ಮನುಷ್ಯತ್ವದ ಪರವಾದ ಸೈನಿಕರ ಕರ್ತವ್ಯವನ್ನು ನಿರ್ವಹಿಸುತ್ತಿಲ್ಲ. ಕಲ್ಕತ್ತಾ, ನೌಖಾಲಿ ಮತ್ತು ಬಿಹಾರಗಳಲ್ಲಿ ನಾನು ಸಾಧಿಸಬೇಕಾದುದು ಇನ್ನೂ ಇದೆ ಎಂದು ನನಗೆ ಗೊತ್ತಿದೆ. ಆದರೆ ಪಂಜಾಬಿಗೆ ಈ ವೇಳೆಯಲ್ಲಿ ನಾನು ಹೋಗಬೇಕೆಂದು ನೀವು ಬಯಸುವುದಾದರೆ ನಾನು ಹೋಗುತ್ತೇನೆ."

ವಿಚಿತ್ರವೆಂದರೆ ಪ್ರಧಾನಿ ನೆಹರು ಅವರಿಂದ ಗಾಂಧಿಗೆ ಯಾವ ಉತ್ತರವೂ ಬರಲಿಲ್ಲ. ಕಾಲ ಉರುಳುತ್ತಲೇ ಹೋಯಿತು. ಲಕ್ಷಾಂತರ ಜನರ ಕೊಲೆಯಾಯಿತು. ಕೊನೆಗೊಮ್ಮೆ ಗಾಂಧಿಗೆ ಅಲ್ಲಿಗೆ ಕಳುಹಿಸುವುದೇ ಅನಿವಾರ್ಯ ಎಂದು ನೆಹರುವಿಗೆ ಮನವರಿಕೆಯಾಯಿತು.

ಗಾಂಧಿಗೆ ಕಲ್ಕತ್ತೆಯಿಂದ ಬೀಳ್ಕೊಡುತ್ತಾ ಅಂದಿನ ಮೇಯರ್ ಎಸ್.ಸಿ.ರಾಯ್‌ಚೌದರಿ ಮನದುಂಬಿ ಹೇಳುತ್ತಾರೆ– "you are the symbol of truth and non-violence. You have freed Mother India from her bondage. You have conquered hatred and established peace in this city."

Sir, transcending the limits of time and space, you have now become a citizen of the whole world."

ಇದು ಇತಿಹಾಸ, ಯಾವ ಮಗ್ಗುಲಿನಿಂದ ನೋಡಿದರೂ ಸಂಪೂರ್ಣ ನಿರಾಕರಣೆಯ ಅಥವಾ ಪೂರ್ಣ ಸ್ವೀಕೃತಿಯ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿಯುತ್ತವೆ. ಬಹುತೇಕ ಕಾಲದ ಪ್ರಭಾವವೆಂದರೆ ಇದೇ ಇರಬಹುದು. ಅದು ಸಾಗಿಹೋದಂತೆ ಅದುವೇ ಒಂದು ಮಹಾನ್ ಪಾತ್ರವಾಗಿ ಮೈದಾಳಿ ಅದರ ಸುತ್ತಲಿನ ಎಲ್ಲ ಪಾತ್ರಗಳೂ ಗೌಣವಾಗಿ ಬಿಡುತ್ತವೆ. ಅದು ಗಾಂಧಿಯೇ ಆಗಿರಲಿ, ಬುದ್ಧನೇ ಆಗಿರಲಿ, ಜಿಸಸ್‌ನೇ ಆಗಿರಲಿ ಅಥವಾ ಪ್ರಪಂಚವನ್ನು ಗೆದ್ದೇ ತೀರಬೇಕೆಂದು ಹೊರಟ ನೆಪೋಲಿಯನ್ನನೇ ಆಗಿರಲಿ ಅಂತೆಯೇ ಅನ್ನುವದು ಕಾಲಾಯ ತಸ್ಮೈ ನಮಃ

ಆಗಸ್ಟ್ 26ರವರೆಗೂ ಗಾಂಧಿ ಪಂಜಾಬಿಗೆ ಹೋಗಬೇಕೋ ಬೇಡವೋ ಎನ್ನುವ ಅವರ ಪತ್ರಕ್ಕೆ ಪ್ರಧಾನಿ ನೆಹರೂರವರಿಂದ ಯಾವ ಪ್ರತಿಕ್ರಿಯೆಗಳೂ ಬರಲಿಲ್ಲ. ಅಲ್ಲಿ

ಕೊಲೆಯಾಗುತ್ತಿದ್ದ ಅಮಾಯಕರ ಕುರಿತ ಗಾಂಧಿಯ ತಲ್ಲಣಗಳಿಗೆ ಈಗ ಸ್ಪಂದಿಸಿದವಳು ಒಬ್ಬ ಮುಸ್ಲಿಂ ಹುಡುಗಿ ಮಾತ್ರ. ಅವಳ ಹೆಸರು ಆಮ್ತು ಸಲಾಂ. ಗಾಂಧಿಯ ಪ್ರತಿನಿಧಿಯಾಗಿ ತಾನು ರಕ್ತರಂಜಿತ ಪಂಜಾಬಿಗೆ ಹೋಗಿ ಮೃಗಗಳಾಗಿದ್ದ ಜನರನ್ನು ಮನುಷ್ಯರಾಗಿ ಪರಿವರ್ತಿಸಿಬಿಡುತ್ತೇನೆ ಎನ್ನುವ ಆಕೆಯ ಹುಮ್ಮಸ್ಸು ಅತ್ಯಂತ ಪ್ರಾಮಾಣಿಕವಾಗಿತ್ತು. ಆದರೆ ಆವೇಶಪೂರ್ಣವೂ ಆಗಿತ್ತು. ಅಂತೆ ಗಾಂಧಿ ಬರೆದ– "ನೀನು ಅವಸರ ಪಡುತ್ತಿರುವಿ. ಈ ಸ್ಥಿತಿಯಲ್ಲಿ ನೀನು ಪಂಜಾಬಿಗೆ ಹೋದರೆ ಏನನ್ನೂ ಸಾಧಿಸಲಾರೆ. ಅಷ್ಟಕ್ಕೂ ನೀನು ಪಂಜಾಬಿಗೆ ಯಾಕೆ ಹೋಗಬೇಕು? ನೌಖಾಲಿಯಲ್ಲಿ ನೀನೇನು ಖಾಲಿ ಕುಳಿತಿಲ್ಲವಲ್ಲ. ಪಂಜಾಬಿಗೆ ಹೋಗಬೇಕಾದವನು ನಾನೆ. ಆದರೆ ಸಮಯಕ್ಕಾಗಿ ಕಾಯುತ್ತಿದ್ದೇನೆ. ದೇವರ ಆಣತಿ ಅದೇನಿದೆಯೋ ಕಾದು ನೋಡಬೇಕು. ನೀನು, ಡಾ. ಸುಶಿಲಾ ನಯ್ಯರ್ ನೌಖಾಲಿಯಲ್ಲೇ ಉಳಿದುಕೊಂಡು ನನ್ನ ಕೆಲಸಗಳನ್ನು ಮುಂದುವರೆಸಿಕೊಂಡು ಹೋಗಬಹುದು. ನನಗೆ ಗೊತ್ತು ಸಾವಿನ ದವಡೆಯಲ್ಲಿ ನಿಮ್ಮನ್ನು ಬಿಟ್ಟು ಹೋಗುತ್ತಿದ್ದೇನೆಂದು. ಇಂಥ ಅರ್ಥಪೂರ್ಣ ಕಾರಣ–ಕ್ಕಾಗಿ ನಿಮಗೆ ಸಾವು ಬರುವುದಾದರೆ ಬರಲಿ, ನನಗೆ ಇದು ಬಿಟ್ಟು ನಿಮಗೆ ಸೂಚಿಸಲು ಬೇರೆ ಇನ್ನಾವ ದಾರಿಗಳೂ ಕಾಣುತ್ತಿಲ್ಲ. ಈಗ ಸುಶಿಲಾ 'ವಾ'ದಲ್ಲಿ ಇದ್ದಾಳೆ. ಇಷ್ಟರಲ್ಲೇ ನಿನ್ನನ್ನು ಸೇರಿಕೊಳ್ಳಬಹುದು."

ಗಾಂಧಿ ಆಗಸ್ಟ್ 26ರ ಸಾಯಂಕಾಲ ಮತ್ತೊಮ್ಮೆ ಅಪಾರ ಸಂಖ್ಯೆಯಲ್ಲಿ ಜನಸ್ತೋಮವನ್ನು ಕಂಡ. ಪುರುಷರು, ಸ್ತ್ರೀಯರು, ಮಕ್ಕಳು, ವಯೋವೃದ್ಧರನ್ನೂ ಒಳಗೊಂಡ ಕನಿಷ್ಠ ಮೂರು ಲಕ್ಷ ಜನ ಕಲ್ಕತ್ತೆಯ ಲೇಕ್ ಏರಿಯಾದಲ್ಲಿ ಸೇರಿದ್ದರು. ಕಲ್ಕತ್ತೆಯ ಲೇಕ್ ಪ್ರದೇಶ ನಮ್ಮ ಬೆಂಗಳೂರಿನ ಡಾಲರ್ಸ್ ಕಾಲನಿ ಇದ್ದ ಹಾಗೆ. ಅತ್ಯಂತ ಶ್ರೀಮಂತರಿಂದಲೇ ಕೂಡಿದ ಈ ಪ್ರದೇಶ ಗಾಂಧಿಯ ಜನಸ್ತೋಮದ ಮುಂದೆ ಎಷ್ಟೊಂದು ಬಡವಾಗಿ ಕಂಡಿತು. ಈ ಬರಿಗೈ ದಾಸ ಇತಿಹಾಸದ ಆ ಕ್ಷಣದಲ್ಲಿ ಪ್ರಪಂಚದ ಶ್ರೇಷ್ಠಾತಿಶ್ರೇಷ್ಠ ಯುದ್ಧವೀರರು, ಶ್ರೀಮಂತರು ನಾಚುವಷ್ಟು, ಅಂಜುವಷ್ಟು ಶ್ರೀಮಂತನಾಗಿಬಿಟ್ಟ. ಇದನ್ನೇ ಧಾರ್ಮಿಕ ಮನಸ್ಸಿನವರು ಗಾಂಧಿಯ ಆತ್ಮಬಲ ಎಂದರು.

ಇದ್ದಕ್ಕಿದ್ದಂತೆ ಗಾಂಧಿ ಪಂಜಾಬಿಗೆ ಹೋಗಿಯೇ ಬಿಡುತ್ತಾರೆ ಎನ್ನುವ ಸುದ್ದಿ ಕಲ್ಕತ್ತೆಯಲ್ಲಿ ಹಬ್ಬುತ್ತಲೆ ಅನೇಕರಲ್ಲಿ ಅನೇಕತರಹದ ಭಯ ಅಂಜಿಕೆ ಮನೆಮಾಡಿತು. ಆಗಸ್ಟ್ 15 ರಿಂದ ತಮ್ಮೊಂದಿಗಿದ್ದ ಗಾಂಧಿ, ಜೀವನದ ಕೊನೆಯ ಕ್ಷಣದವರೆಗೂ ಇಲ್ಲಿಯೇ ಇರಬೇಕೆಂಬುದು ನೌಖಾಲಿ ಜನರ ಆಸೆಯಾದರೆ, ಇಲ್ಲ ಅವರು ನಮ್ಮ ಹಳ್ಳಿಗಳಿಗೆ ಬರಬೇಕೆನ್ನುವುದು ಕಲ್ಕತ್ತೆಯ ಗ್ರಾಮೀಣ ಜನರ ಬಯಕೆ. ಇನ್ನೊಂದೆಡೆ ಇಂದು ಬರಬಹುದು ಗಾಂಧಿ, ನಾಳೆ ಬರಬಹುದು ಎಂದು ಬಿಹಾರಿಗಳು ಕಾಯುತ್ತಲೆ ಇದ್ದಾರೆ. ಕಲ್ಕತ್ತೆಯ ಪಂಜಾಬಿಗಳು ಬಾಪು ದಯವಿಟ್ಟು ನೀವು ಪಂಜಾಬಿಗೆ ಹೋಗಿ ಎಂದು ಅಂಗಲಾಚುತ್ತಲೆ ಇದ್ದಾರೆ. ಆದರೆ ಇದೆಲ್ಲಕ್ಕೂ ಮೀರಿದ ಸುದ್ದಿಯೊಂದು ಪೂರ್ವ ಪಾಕಿಸ್ತಾನದ ಸಿಲ್‌ಎಟ್‌ನಿಂದ ಗಾಂಧಿಗೆ ಬರುತ್ತದೆ. ಇಲ್ಲಿ 'ಮನುಷ್ಯ' ಎನ್ನುವ ಪದಕ್ಕೆ ಯಾವ ಅರ್ಥವೂ ಇಲ್ಲ. ಹೀಗಾಗಿ ನೀವು ಮೃಗಗಳಲ್ಲ ಮನುಷ್ಯರು ಎಂದು ತಿಳಿಸಿಕೊಡಲು ನೀವು ಸಿಲ್‌ಎಟ್‌ಗೆ ಬರಬೇಕು, ಎಂದು ಅಭಿಮಾನಿಯೊಬ್ಬ ಪತ್ರ ಬರೆಯುತ್ತಾನೆ. ಆದರೆ ಇದು ನೂರಾರು ಮೈಲಿಗಳ ದಾರಿ. ಗಾಂಧಿಯ ವಯಸ್ಸಿಗೂ ಭಾರ ಪಯಣಕ್ಕೂ ಭಾರ.

ಅದ್ಯಾವ ತಡೆ ಗಾಂಧಿಯನ್ನು ನಿಲ್ಲಿಸಿತೋ ಗೊತ್ತಿಲ್ಲ ಪಂಜಾಬಿಗೆ ಪತ್ರ ಮುಖೇನ ಸಂದೇಶಗಳನ್ನು ರವಾನಿಸುವಲ್ಲಿಯೇ ಸಮಯ ಉರುಳಿಹೋಗುತ್ತಿತ್ತು. ಆಗಸ್ಟ್ 27ರಂದು ತನ್ನ ಸಂದೇಶದಲ್ಲಿ ಪಂಜಾಬಿನ ಜನತೆಗೆ ಗಾಂಧಿ ತಿಳಿಸುತ್ತಾನೆ– "ನಾನು ನಿರಂತರವಾಗಿ ಪಂಡಿತ್ ಜವಹರಲಾಲ್ ನೆಹರೂರವರ ಸಂಪರ್ಕದಲ್ಲಿದ್ದೇನೆ. ಭಾರತದ ಇತರ ಪ್ರದೇಶಗಳಿಗೆ ಸಂಭಂಧಪಡುವಷ್ಟೇ ಗಾಢವಾಗಿ ನಾನು ಪಂಜಾಬಿಗೂ ಸಂಭಂಧಿಸಿದವನಾಗಿದ್ದೇನೆ.

Martial Law ಸಂದರ್ಭದಲ್ಲಿ ದೀರ್ಘವಾದ ಆರು ತಿಂಗಳುಗಳನ್ನು ನಾನು ಪಂಜಾಬಿನಲ್ಲಿ ಕಳೆದಿದ್ದೇನೆ. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ನಾನು ನಿಮ್ಮ ಮಧ್ಯ ಬರಲು ಇಚ್ಛಿಸುತ್ತೇನೆ. ಆದರೆ ಮಾಲ್ಡ್, ಶಿಯಾಲೆಟ್, ಮುರ್ಷಿದಾಬಾದ್ ಈ ಎಲ್ಲಾ ಪ್ರದೇಶಗಳಲ್ಲಿಯೂ ನಾನಿರಲೇಬೇಕೆಂದು ಅನೇಕರ ಒತ್ತಾಯವಾಗಿದೆ. ಆದರೆ ಒಬ್ಬ ಮನುಷ್ಯ ಏಕಕಾಲಕ್ಕೆ ಎಲ್ಲರನ್ನು ತೃಪ್ತಿಪಡಿಸಲು ಸಾಧ್ಯವೇ? ಸಾಮಾಜಿಕವಾಗಿ ಇದು ಆರೋಗ್ಯಕರವೇ? ದೇವರಿಂದ ಇದನ್ನು ನೀವು ನಿರೀಕ್ಷಿಸಬಹುದೇನೊ. ನನಗೆ ಗೊತ್ತು ಇದು ಅಸಹಾಯಕತೆಯ ಸಂಕೇತವಲ್ಲ. ಆದರೆ ನನ್ನನ್ನು ಹೊರತುಪಡಿಸಿ ಬಲವಾಗಿ ನೀವು ದೇವರ ಶಕ್ತಿಯನ್ನು ನಂಬುವುದಾದರೆ ನಿಮ್ಮ ತೊಂದರೆಗಳು ಇನ್ನಿಲ್ಲವಾಗುತ್ತವೆ."

ಇದೆ 27 ಆಗಸ್ಟ್‌ರಂದು ತಿರುವಾಂಕುರ್‌ನ ದಿವಾನರಾದ ಸರ್ ಸಿ.ಪಿ. ರಾಮಸ್ವಾಮಿ ಅಯ್ಯರ್‌ರವರ ಮೇಲೆ ದಾಳಿಯಾಯಿತು ಎಂದು ಗಾಂಧಿಗೆ ಗೊತ್ತಾಯಿತು. ಬ್ರಿಟಿಷ್ ಸಾಮ್ರಾಜ್ಯದ ಆರಾಧಕರಾದ ಇವರು ದೇಶ ಸ್ವತಂತ್ರದ ನಂತರವೂ ತಿರುವಾಂಕುರ್ ಸ್ವತಂತ್ರವಾಗಿರಬೇಕು ಎನ್ನುವ ಕಾರಣಕ್ಕೆ ಬಡಿದಾಡುತ್ತಿದ್ದರು. ಗಾಂಧಿಗೆ ಇದು ಪ್ರಶ್ನೆಯಲ್ಲ. ತನ್ನ ದಾರಿಯನ್ನು ಅನುಸರಿಸಿದವರನ್ನು ಮಾತ್ರ ಗಾಂಧಿ ಸಮರ್ಥಿಸಿದ ಎನ್ನುವ ಇತಿಹಾಸಕಾರರ ಅಭಿಪ್ರಾಯಕ್ಕೆ ವಿರುದ್ಧವಾದ ಕೆಲವು ನಿದರ್ಶನಗಳು ಇಂಥ ಸಂದರ್ಭದಲ್ಲಿ ಸಿಗುತ್ತವೆ. ತಿರುವಾಂಕೂರಿನ ದಿವಾನನ ಮೇಲೆ ದಾಳಿಯಾದಾಗ ಗಾಂಧಿ ಒಬ್ಬ ಮನುಷ್ಯನಾಗಿ ಅವನೊಂದಿಗೆ ಸ್ಪಂಧಿಸಿದ ರೀತಿ ಹೀಗಿತ್ತು–

"ಸನ್ಮಿತ್ರ,

ತಡವಾಗಿ ನಿಮಗೆ ಸ್ಪಂದಿಸಿದ್ದಕ್ಕಾಗಿ ಕ್ಷಮೆಯಿರಲಿ. ತಿರುವಾಂಕುರ್ ಕುರಿತಾದ ನಿಮ್ಮ ನಿಲುವಿನೊಂದಿಗೆ ನನ್ನ ಸಹಮತವಿಲ್ಲ. ಆದರೆ ದೇಶದ ಬಗ್ಗೆ ನಿಮ್ಮ ಗೌರವವನ್ನು ನಾನು ಸಂದೇಹಪಡುವುದಿಲ್ಲ. ನಿಮ್ಮ ಮೇಲೆ ದಾಳಿಯಾಯಿತೆಂದು ಕೇಳಿದೆ. ಅದು ಸಣ್ಣ ಪ್ರಮಾಣದಾಗಿರಬಹುದು ಎಂಬ ನನ್ನ ಗ್ರಹಿಕೆ ತಪ್ಪಾದದು ಎನ್ನುವುದನ್ನು ಕೃಷ್ಣ ಹುಸೇನ ಸಿಂಗ್ ಮತ್ತು ಮನಿಬೆನ್ ಪಟೇಲ್ ನನಗೆ ಸ್ಪಷ್ಟಪಡಿಸಿದ್ದಾರೆ. ಇಷ್ಟರಲ್ಲಿಯೇ ನಿಮ್ಮ ಆರೋಗ್ಯ ಸುಧಾರಿಸಲಿ ಎಂದು, ಮತ್ತೆ ನೀವು ಮೊದಲಿನಂತಾಗಲಿ ಎಂದು, ಆ ದೇವರಲ್ಲಿ ನಾನು ಪ್ರಾರ್ಥಿಸುತ್ತೇನೆ. ಮತ್ತೊಮ್ಮೆ ನನ್ನನ್ನು ಕ್ಷಮಿಸಿ.

ಧನ್ಯವಾದಗಳೊಂದಿಗೆ

ತಮ್ಮ ವಿಶ್ವಾಸಿ"

ಎಂ.ಕೆ ಗಾಂಧಿ



ಆಯ್ ಆ್ಯಮ್ ಎ ಭಂಗಿ

೧೬

27ರ ಸಾಯಂಕಾಲ ಗಾಂಧಿ ತನ್ನ ಪ್ರಾರ್ಥನೆಯನ್ನು ಮುಸ್ಲಿಂರಿಂದ ಆಕ್ರಮಣಗೊಂಡ ಬೇಲಿಘಾಟದ ಮೋತಿಯಾ ಬುರ್ಜ್ ಪ್ರದೇಶದ ಕ್ಲೈವ್ ಜೂಟ್ ಮಿಲ್ಸ್‌ನಲ್ಲಿ ನಡೆಸಿದ. ಎಂದಿನಂತೆಯೇ ಅಪಾರ ಸಂಖ್ಯೆ ಜನಸ್ತೋಮ. ದಿಂಜಾಪುರ್, ಮಾಲ್ಡಾ, ಮುರ್ಷಿದಾಬಾದ್‌ಗಳಿಂದ ದೊಡ್ಡ ಸಂಖ್ಯೆಯಲ್ಲಿ ಬಂದವರು ಹಿಂದೂಗಳು. ಅದೆಷ್ಟೇ ಸಂಖ್ಯೆಯಲ್ಲಿ ಬಂದಿದ್ದರೂ ಇಲ್ಲಿ ಮಾತ್ರ ಹಿಂದೂಗಳು ಅಲ್ಪಸಂಖ್ಯಾತರೆ. ಇಂದಿನ ಸಭೆಯಲ್ಲಿ ಮಾತನಾಡಿದವನು ಗಾಂಧಿಯಲ್ಲ ಸುಹರ್‌ವರ್ದಿ. ಎಲ್ಲಾ ನಾಟಕಗಳ ನಂತರವೂ ಮುಸ್ಲಿಂ ನಾಯಕನಾಗಿಯೇ ಉಳಿದುಕೊಂಡಿದ್ದ ಸುಹರ್‌ವರ್ದಿ ಹೇಳಿದ. 'ಅಲ್ಪಸಂಖ್ಯಾತರಾದ ಹಿಂದೂಗಳಿಗೆ ಈ ಪ್ರದೇಶ ಸಂಬಂಧ ಪಡುವುದಿಲ್ಲ. ಎಲ್ಲಾ ಲೆಕ್ಕಾಚಾರಗಳಿಂದಲೂ ಇದು ಮುಸ್ಲಿಂರಿಗೆ ಸೇರಬೇಕಾದ ಪ್ರದೇಶ, ಆದರೆ ರ್‍ಯಾಡ್‌ಕ್ಲಿಫ್ ಸೀಮಾರೇಖೆಯನ್ನ ಕಾಂಗ್ರೆಸ್ ಹಾಗೂ ಮುಸ್ಲಿಂ ಲೀಗ್‌ಗಳೆರಡು ಒಪ್ಪಿಕೊಂಡಿರುವುದರಿಂದ

ಎಲ್ಲವನ್ನೂ ಶಾಂತಿಯುತವಾಗಿಯೇ ಸರಿಪಡಿಸಿಕೊಳ್ಳಬೇಕಿದೆ ಎಂದು ಹೇಳಿದ. ಗಾಂಧಿಯೂ ಈ ದಿನ ಮಾತನಾಡಿದ ಆದರೆ ಅಲ್ಲಿ ಅಲ್ಪಸಂಖ್ಯಾತರಾಗಿದ್ದ ಹಿಂದೂಗಳ ಪರವಾದ, ರಕ್ಷಣೆಯ ಯಾವ ಮಾತನ್ನೂ ಅವನಾಡಲಿಲ್ಲ. ಬದಲಾಗಿ ಅಂದು ಹೊತ್ತಿ ಉರಿಯಬಹುದಾದ ವಿಷಯದ ದಿಕ್ಕನ್ನೇ ಬದಲಿಸಿದ. ಇವು ಗಾಂಧಿ ಎಂಬ ಪಲಾಯನವಾದಿಯ ರಣಹೇಡಿತನದ ಮಾತುಗಳಾಗಿದ್ದವು ಎಂದು ಅನೇಕರು ಅಂದುಕೊಳ್ಳದೇ ಇರಲಿಲ್ಲ. ಈ ಮಾತುಗಳನ್ನು ಕೇಳಿ– "ಶ್ರಮ ಬಹಳದೊಡ್ಡ ಸಮನ್ವಯಿ. ಇದನ್ನು ತಿಳಿದುಕೊಂಡು ನೀವೆಲ್ಲಾ ಮುಂದೊರೆಯಬೇಕು. ಬುದ್ದಿಯಿಲ್ಲದ ಶ್ರಮ ಬಂಡವಾಳಷಾಹಿತನಕ್ಕೆ ಕಾರಣವಾಗುತ್ತದೆ. ನಾನು ಮಹಾತ್ಮನಲ್ಲ, ಮೂಲಭೂತವಾಗಿ ನಾನೊಬ್ಬ ಶ್ರಮಿಕ. I am a Bhangi. ನನ್ನ ಗುರಿ ಮತ್ತು ಕಾಳಜಿಗಳು ನೀವೆ. ಗೊತ್ತಿರಲಿ ಹಿಂಸೆ ನಿಮ್ಮನ್ನು ರಕ್ಷಿಸುವುದಿಲ್ಲ. ಹಿಂಸೆ ಮತ್ತು ವಿನಾಶಗಳನ್ನು ನೀವು ಆಯ್ದುಕೊಂಡರೆ ಅಂತಿಮವಾಗಿ ನೀವು ಬಂಗಾರದ ಮೊಟ್ಟೆಯನ್ನಿಡುವ ಕೋಳಿಗಳನ್ನ ಕೊಲ್ಲುತ್ತೀರಷ್ಟೆ."

ಆಗಸ್ಟ್ 28 ರಂದು ಗಾಂಧಿ ಕೆಡ್ಡೆರ್‌ಪುರ್‌ದ ಮೋತಿಯಾ ಬಾಝಾರನ ಕಾರ್ಮಿಕರನ್ನುದ್ದೇಶಿಸಿ ಅವಾಸ್ತವದ ಮಾತೊಂದನ್ನ ಹೇಳಿದ– "ನಾನು ಕಾರ್ಮಿಕರ ಮತ್ತು ಬಂಡವಾಳಷಾಹಿಗಳ ಮಧ್ಯ ಸ್ವಯಂವರವನ್ನು ಇಚ್ಛಿಸುತ್ತೇನೆ. ಇಂಥ ಬಾಂಧವ್ಯದಿಂದ ಅದ್ಭುತಗಳನ್ನು ಸಾಧಿಸಬಹುದು. ಸಮಾನತೆ ಮತ್ತು ಗೌರವದ ಆಧಾರದ ಮೇಲೆ ನಾವು ಬಂಡವಾಳಷಾಹಿಗಳೊಂದಿಗೆ ಸ್ನೇಹ ಮಾಡಬಹುದಾಗಿದೆ."

ಗಾಂಧಿ ಎಷ್ಟೆಲ್ಲಾ ಮಾತನಾಡಿದ. ಆದರೆ ಯಾವ ಮಾತೂ ನೆಮ್ಮದಿಯನ್ನು ನೀಡಲಿಲ್ಲ. ಅವನ ಹೇಳಿಕೆಗಳು ಬರೀ ಸಾರ್ವಜನಿಕ ಭಾಷಣಗಳಾಗುತ್ತಿವೆ ಎನ್ನುವ ಸಂಶಯ ಅವನನ್ನೇ ಕಾಡಿರಬಹುದು. ಆದರೆ ಮಹಾತ್ಮನೊಬ್ಬನಿಗೆ ಇಂಥ ಒಂದು ಪೀಡೆ ಬಾಧಿಸುತ್ತಿದೆ ಎಂದು ಸಾಮಾನ್ಯರಿಗೆ ಗೊತ್ತುಪಡಿಸುವಂತಿರಲಿಲ್ಲ. ಈ ಹಂತದಲ್ಲಿ ಗಾಂಧಿಯ ಮನಃಸ್ಥಿತಿ ಏನಾಗಿತ್ತು? ಆತ ದ್ವಂದ್ವದ ಯಾವ ಸ್ಥಿತಿಯಲ್ಲಿದ್ದ ಎನ್ನುವುದನ್ನು ತಿಳಿಯಬೇಕೆನ್ನುವುದಾದರೆ ಆಗಸ್ಟ್ 28ರಂದು ರಾಜಕುಮಾರಿ ಅಮೃತ್ ಕೌರ್ ಅವರಿಗೆ ಬರೆದ ಪತ್ರವನ್ನು ಓದಬೇಕು. "ನನ್ನ ಪಾಲಿಗೆ ವರ್ತಮಾನ ಎಷ್ಟೊಂದು ಸಂಕಟಮಯವಾಗಿದೆ ಎಂದರೆ, ನನ್ನ ನಾಳೆ ಹೇಗಿರಬಹುದು ಎನ್ನುವುದೇ ನನಗೆ ಹೊಳೆಯುತ್ತಿಲ್ಲ. ಸಂಪುಟ ದರ್ಜೆಯಲ್ಲಿ ನೀನು ಆರೋಗ್ಯ ಸಚಿವೆ ಆಗಿರಬಹುದು, ಹಾಗಂಥ ನೀನು ನೈತಿಕ ಆರೋಗ್ಯದ ಸಚಿವೆಯೂ ಆಗಿರುವೆಯಾ? ನನ್ನ ಈ ಬರಹ ನನ್ನ ಹಿಂದಿನ ಪತ್ರಕ್ಕಿಂತಲೂ ಕಟುವಾಗಿದೆ. ನಾನೆಲ್ಲವನ್ನೂ ನೋಡುತ್ತಿದ್ದೇನೆ, ಕಾಯುತ್ತಿದ್ದೇನೆ ಮತ್ತು ಪ್ರಾರ್ಥಿಸುತ್ತಿದ್ದೇನೆ. ನಿಮಗೆಲ್ಲರಿಗೂ ನನ್ನ ಕೋರಿಕೆ ಇಷ್ಟೆ. ಯಾವ ಮಾತುಗಳನ್ನು ನಂಬಿಕೊಂಡು ನಿಮ್ಮ ಹೋರಾಟವನ್ನು ಶುರುಮಾಡಿದಿರೊ ಅದಕ್ಕೆ ದಯವಿಟ್ಟು ಕೊನೆಯವರೆಗೂ ಬದ್ದರಾಗಿರಿ. ನಮ್ಮ ಮನೆಯನ್ನು ಮತ್ತು ಮನಸ್ಸನ್ನು ನಿಯಮಿತವಾಗಿ ಸ್ವಚ್ಚಗೊಳಿಸಿಕೊಂಡರೆ ನಾವು ನಮ್ಮ ಕರ್ತವ್ಯವನ್ನು ಪೂರೈಸಿದಂತೆಯೇ."

ದೇಶದ ಸ್ವಾತಂತ್ರ್ಯ, ಮತೀಯ ಗಲಭೆ, ದಾರಿ ತಪ್ಪುತ್ತಿದ್ದ ರಾಜಕಾರಣ, ಹೊತ್ತು-ರಿಯುತ್ತಿದ್ದ ರಾಜ್ಯಗಳು ಇವೆಲ್ಲಾ ಒಂದೆಡೆಯಾದರೆ, ಇಂದೋ ನಾಳೆಯೋ, ಭೌತಿಕವಾಗಿ ಬಿದ್ದು ಹೋಗುತ್ತಿದ್ದ ಗಾಂಧಿ ಮತ್ತೆ ಮತ್ತೆ ಆಲೋಚಿಸಿದ್ದು ವಿದ್ಯಾರ್ಥಿಗಳನ್ನ ಕುರಿತು, ಸ್ವಾತಂತ್ರ್ಯಪೂರ್ವದಲ್ಲಿ ಅವರ ದಾರಿ ಒಂದಾಗಿದ್ದರೆ ಸ್ವಾತಂತ್ರ್ಯೋತ್ತರದಲ್ಲಿ ವಿದ್ಯಾರ್ಥಿಗಳ ಸಮಸ್ಯೆ ಮತ್ತೊಂದಾಗಿತ್ತು. ರಾಷ್ಟ್ರದ ಈ ಸಂಪತ್ತು ಕೆಟ್ಟದ್ದಕ್ಕೆ ಪರಭಾರೆಯಾಗಬಾರದೆಂದು ಇದೆ ಆಗಸ್ಟ್ 28 ರಂದು University Science College ಒಂದರಲ್ಲಿ ಗಾಂಧಿ ಹೇಳಿದ "ವಿದ್ಯಾರ್ಥಿಗಳಲ್ಲಿ ಅರಾಜಕತೆ ಮನೆ ಮಾಡಿದೆ, ಶಿಕ್ಷಕರನ್ನಾಗಲಿ, ಕುಲಪತಿಗಳನ್ನಾಗಲಿ ಅವರು ಗೌರವಿಸುತ್ತಿಲ್ಲ. ದೇಶದ ಮುಂದಿನ ನಾಯಕರಾಗುವ ಇವರು ಈ ರೀತಿ ವರ್ತಿಸುತ್ತಿರುವುದು ನನ್ನಲ್ಲಿ ಕಳವಳವನ್ನುಂಟುಮಾಡಿದೆ. ವಿದ್ಯಾರ್ಥಿಗಳಾದವರು ಯಾವಾಗಲೂ ವಿನಯಶೀಲರಾಗಿ ಬದುಕಬೇಕಾದುದು ಧರ್ಮ," ಎಂದು ಹೇಳುತ್ತಾ ಮಹಾಭಾರತದ ಕೃಷ್ಣನ ಉದಾಹರಣೆಯನ್ನು ನೀಡಿದ. ಧರ್ಮರಾಯ ಯಜ್ಞವನ್ನು ಮಾಡಿದಾಗ ಶ್ರೀ ಕೃಷ್ಣ ಬಂದ ಅತಿಥಿಗಳ ಪಾದ ಒರೆಸುವ ಕಾಯಕ ಕೈಗೊಂಡ. The Greatest of men remain great through being lowliest by choice.

ಚಂದ್ರಶೇಖರ್ ಆಜಾದ್, ಭಗತ್‌ಸಿಂಗ್, ನೇತಾಜಿ ಸುಭಾಷ್‌ಚಂದ್ರ ಭೋಸ್, ಡಾ. ಭೀಮರಾವ್ ಅಂಬೇಡ್ಕರ್ ಹೀಗೆ ಮುಂತಾದ ನಾಯಕರು ಮೂಲೆ ಗುಂಪಾದುದು ಗಾಂಧಿಯಿಂದಲೆ ಗಾಂಧಿಗಿರಿಯಿಂದ ಎನ್ನುವುದೊಂದು ಸಾಮಾನ್ಯ ವಿಮರ್ಶೆ. ಗಾಂಧಿಯನ್ನು ಪರಿಸ್ಥಿತಿಯ ಕೈಗೊಂಬೆಯಾಗಿ ನೋಡದ ಅನೇಕರ ಪಾಲಿಗೆ ಈ ಗಾಂಧಿ ಒಬ್ಬ ಖಳನಾಯಕನೆ. ಪ್ರತಿರೋಧ ಒಡ್ಡಬೇಕಾದ ಎಲ್ಲಾ ಸಂಧರ್ಭಗಳಲ್ಲಿಯೂ ಓಡಿ ಪ್ರಾರ್ಥನೆಗೆ ಹೋದ ಈತ ಒಬ್ಬ ಮಹಾ ಆಷಾಢಭೂತಿ ಮುದುಕ. ಆದರೆ ಇದೆಲ್ಲ ಸತ್ಯವೇ? ನೇತಾಜಿಯ ಆಕಸ್ಮಿಕ ನಿಧನದ ನಂತರ ಅನಾಥ ಪ್ರಜ್ಞೆಯನ್ನು ಅನುಭವಿಸುತ್ತಿದ್ದ ಅಜಾದ್-ಹಿಂದ್-ಫೌಜ್‌ಗೆ ಯಾವ ಪರಿಹಾರ ಸೂತ್ರ ಗಾಂಧಿಯ ಬಳಿಯಲ್ಲಿ ಇತ್ತು?

1947, ಆಗಸ್ಟ್ 29ರಂದು ಗಾಂಧಿ ಮಹತ್ವದ ಮಾತುಗಳನ್ನಾಡಿದ್ದಾನೆ "ಆಜಾದ್-ಹಿಂದ್-ಫೌಜನ ಸಂಸ್ಥಾಪಕರು, ದೇಶಭಕ್ತರು ಆದ ನೇತಾಜಿ ಭೌತಿಕವಾಗಿ ನಮ್ಮನ್ನಗಲಿದ್ದರೂ ಭಾರತದ ಪ್ರತಿ ಸೇವಕನಲ್ಲಿಯೂ ಅವರ ಆತ್ಮ ಹುದುಗಿಕೊಂಡಿದೆ. ಅವರು ಆಗಷ್ಟೇ ಇಂಗ್ಲೆಂಡಿನಿಂದ ಬಂದನಂತರ ಅವರೊಂದಿಗೆ ಕೆಲಸ ಮಾಡುವ ಭಾಗ್ಯ ನನ್ನದಾಗಿತ್ತು. ರಾಷ್ಟ್ರ ಸೇವೆಗಾಗಿ ತಮ್ಮ ಅತ್ಯಂತ ಯಶಸ್ವಿ ಬದುಕನ್ನೇ ಬಲಿದಾನ ಕೊಟ್ಟ ವೀರ ಅವರು. ದೇಶಬಂಧು ದಾಸ್ ಅವರಿಂದ ನನಗೆ ಸುಭಾಸರ ಸ್ನೇಹ ಸಾಧ್ಯವಾಯಿತು. ನೇತಾಜಿಯ ಧೈರ್ಯ ಈ ದೇಶದಲ್ಲಿ ಇನ್ನಾರಿಗೂ ಸಾಧ್ಯವಾಗಲಿಲ್ಲ. ಭಾರತದ ಎಲ್ಲಾ ಪ್ರದೇಶಗಳಿಂದ, ಜಾತಿಗಳಿಂದ, ಧರ್ಮಗಳಿಂದ, ಮಹಿಳೆ ಮತ್ತು ಪುರುಷರನ್ನು ಹುರಿದುಂಬಿಸಿ, ಸೈನ್ಯಕಟ್ಟಿದ ಅವರು ನಿಜವಾದ ನಾಯಕರು, ಶಿಸ್ತು ಮತ್ತು ವಿಧೇಯತೆ ಅವರು ಕಲಿಸಿದ ದಿವ್ಯ ಮಂತ್ರಗಳು. ನಮ್ಮ ಕಾಲದ ಮಹಾನ್ ಶಕ್ತಿ ಎನಿಸಿಕೊಂಡ ಬ್ರಿಟಿಷ್ ಸೈನ್ಯವನ್ನು ಮುಷ್ಠಿಯಷ್ಟು ಜನರನ್ನು ನಂಬಿಕೊಂಡು ಎದುರಿಸುವ ಪ್ರಯತ್ನ ಮಾಡುವುದು ಸಾಮಾನ್ಯ ಮಾತೆ?" ಎಂದು ಹೊಗಳಿದ ಗಾಂಧಿ ಆಜಾದ್-ಹಿಂದ್-ಫೌಜನ ಸೈನಿಕರು

ಭಾರತೀಯ ಸೈನ್ಯವನ್ನು ಸೇರುವುದನ್ನು ಮಾತ್ರ ಅನುಮೋದಿಸಲಿಲ್ಲ. ಸ್ವತಂತ್ರ ಭಾರತದಲ್ಲಿ ಆಜಾದ್-ಹಿಂದ್-ಫೌಜಿನ ಸೈನಿಕರೆಲ್ಲಾ ದೇಶದ ಏಳ್ಗೆಗಾಗಿ ಒಕ್ಕಲುತನಕ್ಕೆ ತೊಡಗಿಕೊಳ್ಳಬೇಕು ಎಂದು ಹೇಳಿದ. ಖಡ್ಗ ಹಿಡಿದ ಕೈಗಳು ನೇಗಿಲುಗಳನ್ನು ಹಿಡಿಯಲಿ, ಪ್ರತಿ ಸೈನಿಕನೂ ರೈತನಾಗಲಿ ಎಂದು ಗಾಂಧಿ ಆದೇಶಿಸಿದ.

ಆಗಸ್ಟ್ 29 ಶುಕ್ರವಾರದ ದಿನ ಹೈದರಿ ಮಂಜಿಲ್‌ನಲ್ಲಿದ್ದ ಗಾಂಧಿಗೆ ಕೆಲವು ಆಕ್ಷೇಪಣೆಗಳನ್ನು ಮಾಡುತ್ತಾ ಕಿಶೋರಿಲಾಲ್ ಮಶ್ರುವಾಲಾ ಪತ್ರ ಒಂದನ್ನು ಬರೆದಿದ್ದಾನೆ. ಅದು ಬಹುತೇಕ ದೇವರ ಕುರಿತಾದ ಅವರ ಮಧ್ಯದ ತಕರಾರಿಬಹುದು. ಮಶ್ರುವಾಲಾ ಕೇಳಿದ ಪ್ರಶ್ನೆಗೆ ಗಾಂಧಿಯಲ್ಲಿ ಸ್ಪಷ್ಟ ಉತ್ತರವಿಲ್ಲ. "ನಿನ್ನ ಪತ್ರ ನನ್ನ ಮುಂದಿದೆ. ನಮ್ಮ ದೃಷ್ಟಿಕೋನಗಳು ಭಿನ್ನವಾಗಿರಬಹುದು. ಆದರೆ ನಮ್ಮಿಬ್ಬರ ಗುರಿ ಒಂದೇ ಆಗಿದೆ. ಇದು ನಮ್ಮ ಹಳೆಯ ಕಥೆ. ನನ್ನ ಮುಂಜಾನೆಯ ಪ್ರಾರ್ಥನೆಯನ್ನು ಕುರಿತು ಆಕ್ಷೇಪ ಮಾಡಿರುವೆ. ನೀನು ಹೀಗೆ ಅಲ್ಲವೆ? ನಾನು ಪ್ರಾರ್ಥನೆಗಳಲ್ಲಿ ಹಲವು ಅರ್ಥಗಳನ್ನು ಕಾಣುತ್ತೇನೆ. ನೀನು ಆಕ್ಷೇಪಣೆಯನ್ನು ಕಾಣುತ್ತೀಯಾ. ದೇವರು ಮನುಷ್ಯನನ್ನು ಎಷ್ಟೇ ಗೊಂದಲಕ್ಕೀಡುಮಾಡಲು ಯತ್ನಿಸಿದರೂ, ಹಾಗಂಥ ಮನುಷ್ಯ ಅಂದುಕೊಂಡರೂ ನಾನು ದೇವರನ್ನಾಗಲಿ, ಸತ್ಯವನ್ನಾಗಲಿ ಕೈಬಿಡುವುದಿಲ್ಲ. ಇಂದಿಗೂ ಒಡೆಯಲಾಗದ ಮೌನವನ್ನು ನಾವು ತಿಳಿದುಕೊಳ್ಳದ ಹೊರತು ದೇವರ ದರ್ಶನ ನಮಗೆ ಸಾಧ್ಯವಿಲ್ಲ." ಇದೇ ದಿನ ಮೀರಾ ಬೆನ್ನಳಿಗೂ ಗಾಂಧಿ ಪತ್ರ ಬರೆದಿದ್ದಾನೆ. ತನ್ನ ಅನಿಶ್ಚಿತ ಬದುಕನ್ನು ಕುರಿತು ಚಿಂತೆ ವ್ಯಕ್ತಪಡಿಸಿದ್ದಾನೆ. ನಿನಗೀಗ ವಯಸ್ಸು ಐವತ್ತೈದು ಎಂದು ಆಕೆಯನ್ನು ಎಚ್ಚರಿಸಿದ್ದಾನೆ. ಹೊರಗಡೆ ಗುಬ್ಬಚ್ಚಿಗಳನ್ನು ನೋಡು, ಮರುಕ್ಷಣ ಅವು ಏನು ಮಾಡುತ್ತವೆ ಎನ್ನುವುದು ಅವುಗಳಿಗೇ ತಿಳಿದಿಲ್ಲ. ನಾವು ಹೀಗೆಯೇ ಈಗ ಕೇವಲ ಕ್ಷಣ-ಕ್ಷಣಕ್ಕಾಗಿ ಬದುಕಬೇಕಾಗಿದೆ. ಬದುಕೋಣ, ಎಂದು ನೋವಿನ ಧ್ವನಿ ಹಂಚಿಕೊಂಡಿದ್ದಾನೆ.

ಹೀಗಿತ್ತು ಆತನ ಕೊನೆಯ ದಿನಗಳ ಮನಃಸ್ಥಿತಿ. ಒಂದೆಡೆ ಆತ, ಮತ್ತೊಂದೆಡೆ ಆತನ ಭಗವದ್ಗೀತೆ, ಒಂದೆಡೆ ಹಿಂದೂಗಳು, ಮತ್ತೊಂದೆಡೆ ಆತನನ್ನು ನಂಬದ ಮುಸ್ಲಿಂರು, ಒಂದೆಡೆ ತಾನೇ ಎಲ್ಲವನ್ನು ಬಗೆಹರಿಸಬೇಕೆಂಬ ಹಠ, ಮತ್ತೊಂದೆಡೆ ಕೈಚೆಲ್ಲಿ ದೇವರಿಗೋ ದೈವಕ್ಕೋ ಮೊರೆಹೋಗುವ ಸ್ಥಿತಿ, ಒಂದೆಡೆ ತಾನು ದೇವರನ್ನು ಕಂಡೇ ಬಿಟ್ಟೆ ಎಂಬ ಖುಷಿ, ಮತ್ತೊಂದೆಡೆ ದೇವರೇಕೆ ಹೀಗೆ ಎಂದು ಹೇಳುವುದು ಕಷ್ಟ ಎಂದು ಕೈ ಚೆಲ್ಲುವ ಗಾಂಧಿ. ಒಬ್ಬ ಪ್ರಶ್ನಾತೀತ ನಾಯಕನಲ್ಲಿ ಅದೆಷ್ಟು ಪ್ರಶ್ನೆಗಳು!



ಪಂಜಾಬ ಪ್ರಕ್ಷುಬ್ಧ: ಫಕೀರ ಸಂದಿಗ್ಧ

೧೭

ಪಂಜಾಬನಲ್ಲಿ ಶಾಂತಿ ಸ್ಥಾಪನೆಯಾಗುವ ಯಾವ ಲಕ್ಷಣಗಳೂ ಇರಲಿಲ್ಲ. ಕಲ್ಕತ್ತೆಯಲ್ಲಿದ್ದ ಪಂಜಾಬಿಗಳ ಮುಖಂಡರಾದ ಸರ್ಧಾರ ಅಜೀತಸಿಂಗ್‌ರಿಗೆ ಗಾಂಧಿ ಇಂಥ ವೇಳೆಯಲ್ಲಿ ಅಲ್ಲಿಗೆ ಹೋಗಬೇಕೆಂಬ ಅದಮ್ಯ ಆಸೆ. ಪಂಚ ನದಿಗಳ ನಾಡು ಪಂಜಾಬ ಈಗ ರಕ್ತದ ಆರನೆಯ ನದಿಯನ್ನು ತನ್ನೊಂದಿಗೆ ಸೇರಿಸಿಕೊಂಡಿತ್ತು. ವಿನಾಶದ, ವಿಕೃತಿಯ ಈ ಪ್ರವಾಹ ಅಂತ್ಯವಾಗಲೇಬೇಕಿತ್ತು. ಅದು ಗಾಂಧಿ ಒಬ್ಬನಿಂದಲೇ ಸಾಧ್ಯವಿತ್ತು. ಕಾಶ್ಮಿರಕ್ಕೆ ಹೋಗುವ ಮುಂಚಿನ ದಿನಗಳಿಂದಲೂ ಗಾಂಧಿ ತನಗೆ ಪಂಜಾಬಗೆ ಹೋಗಬೇಕೆಂದು ಅನುಮತಿ ನೀಡಬೇಕೆಂದು ಪ್ರಧಾನಿ ನೆಹರೂಗೆ ನಿರಂತರವಾಗಿ ಕೇಳುತ್ತಲೇ ಇದ್ದರು. ಅದ್ಯಾವ ಕಾರಣಕ್ಕೆ ಗಾಂಧಿಯ ಈ ಕೋರಿಕೆ ಅವಗಣನೆಗೆ ಒಳಗಾಗಿತ್ತು ಎನ್ನುವುದನ್ನು ಇತಿಹಾಸವೇ ಉತ್ತರಿಸಬೇಕು. ಆದರೆ ಈಗ ಗಾಂಧಿಯ ಸಹನೆಯ ಕಟ್ಟೆಯೊಡೆಯಿತು. ಹೀಗಾಗಿ ತಮ್ಮ ಅಸಮಾಧಾನವನ್ನು ತೋಡಿಕೊಳ್ಳುತ್ತ ಆಗಸ್ಟ್ 29ರಂದು ಗಾಂಧಿ ನೆಹರೂಗೆ ಬರೆಯುತ್ತಾರೆ.

"ಪ್ರಧಾನಿ ನೆಹರು.

ಇದೀಗ ತಾನೆ ನನಗೆ ಕಲ್ಕತ್ತೆಯಿಂದ ಸರ್ಧಾರ ಅಜಿತ್‌ಸಿಂಗ್‌ರಿಂದ ಪತ್ರಬಂದಿದೆ. ಒಂದು ಕ್ಷಣವೂ ವಿಳಂಬಿಸದೇ ಈ ಕ್ಷಣದಲ್ಲಿ ನಾನು ಪಂಜಾಬಿಗೆ ಹೋಗಬೇಕೆಂದು ಹಾಗೂ ಅಲ್ಲಿಯ ರಕ್ತಪಾತವನ್ನು ನಿಲ್ಲಿಸಬೇಕೆಂದು ನನ್ನನ್ನು ಒತ್ತಾಯಿಸಿದ್ದಾರೆ. ನಾನೇನು ಮಾಡಬೇಕೆನ್ನುವುದನ್ನು ನೀನು ಚೆನ್ನಾಗಿ ಬಲ್ಲೆ. ನಿನ್ನ ನಿರ್ಧಾರದ ಮೇಲೆಯೇ ನನ್ನ ಮುಂದಿನ ದಾರಿ ನಿರ್ಬರವಾಗಿದೆ. ಬದುಕುಗಳು ವಿನಾಶವಾದ ಮೇಲೆ, ಆಸ್ತಿಪಾಸ್ತಿಗಳು ಲೂಟಿಯಾಗಿ, ಸಂಸಾರಗಳು ಬೀದಿಗೆ ಬಿದ್ದ ಮೇಲೆ ಪಂಜಾಬಗೆ ಹೋಗಿ ನಾನು ಮಾಡುವುದಾದರೂ ಏನು? ಅದು ಇತಿಹಾಸದಲ್ಲಿ ಒಂದು ವ್ಯಂಗ್ಯವಾಗಿ ದಾಖಲಾಗುತ್ತದೆ ಅಷ್ಟೆ. ಆರೋಗ್ಯ ಸಚಿವೆಯಾದ ರಾಜಕುಮಾರಿ ಅಮೃತಾ ಕೌರ್ ಸಂದೇಶವೊಂದನ್ನು ಕಳುಹಿಸಿದ್ದಾರೆ. 'ಬಾಪೂ ನೀವ್ಯಾಕೆ ಇಷ್ಟೊಂದು ಆತಂಕಗೊಳಗಾಗುವುದು ಎಂದು ಕೇಳಿದ್ದಾರೆ. ಮನುಷ್ಯತ್ವದಲ್ಲಿ ನೀವು ವಿಶ್ವಾಸ ಕಳೆದುಕೊಳ್ಳುವ ಅವಶ್ಯಕತೆಯಿಲ್ಲ. ಮಾನವತೆ ಒಂದು ಮಹಾನ್ ಸಾಗರ. ಅದರೊಳಗಿನ ಕೆಲವು ಹನಿಗಳು ಕಲುಷಿತಗೊಂಡ ಮಾತ್ರಕ್ಕೆ ಇಡೀ ಸಾಗರವೇ ಕಲುಷಿತಗೊಳ್ಳುವುದಿಲ್ಲ.' ಆದರೆ ಇಂತಹ ಸಾಲುಗಳು ನನ್ನನ್ನು ಸಮಾಧಾನಿಸಲಾರವು. ನಾನು ಸುಮ್ಮನೆ ಎಲ್ಲವನ್ನೂ ನೋಡುತ್ತ ಕುಳಿತುಕೊಳ್ಳಲಾಗದು.

ಇಂತಿ ನಿನ್ನ
ಬಾಪು

ಈಗಲೂ ಅಷ್ಟೇ, ಮತ್ತೆ ಅದೇ ಮೌನ. 30 ಆಗಸ್ಟ್‌ರಂದು ಕಲ್ಕತ್ತೆಯಲ್ಲಿ ಗಾಂಧಿ ಮಾಡಿದ ಸಾಧನೆಯನ್ನು ಶ್ಲಾಘಿಸುತ್ತ ಲಾರ್ಡ್ ಮೌಂಟ ಬ್ಯಾಟನ್ ಗಾಂಧಿಗೊಂದು ಪತ್ರ ಬರೆದ. ಆದರೆ ಮೌಂಟ್ ಬ್ಯಾಟನ್‌ರ ಅಭಿನಂದನೆಯನ್ನು ಸ್ವೀಕರಿಸುವ ಸ್ಥಿತಿಯಲ್ಲಿ ಗಾಂಧಿ ಇರಲಿಲ್ಲ. ಬದಲಾಗಿ ಪಂಜಾಬನಲ್ಲಿಯ ದೊಂಬಿಗಳು ಗಾಂಧಿಯ ನೆಮ್ಮದಿಯನ್ನೇ ನುಂಗಿ ಹಾಕಿದ್ದವು. ಮೌಂಟ್ ಬ್ಯಾಟನ್‌ರಿಗೆ ಬರೆದ ಪತ್ರದಲ್ಲಿ ಗಾಂಧಿಗಿದ್ದ ಆ ಸಿಟ್ಟು, ಸೆಡವು ಎಲ್ಲವೂ ವ್ಯಕ್ತವಾಗಿವೆ.

ಆತ್ಮೀಯ ಸ್ನೇಹಿತ,

ನಿಮ್ಮ ಪತ್ರಕ್ಕಾಗಿ ಅನಂತ ಧನ್ಯವಾದಗಳು.ಶಹೀದ ಸಾಹೇಬ ಮತ್ತು ನಾನು ನಿಮ್ಮ ಅಭಿನಂದನೆಗೆ ಅದೆಷ್ಟರ ಮಟ್ಟಿಗೆ ಯೋಗ್ಯರೋ ನನಗೆ ಗೊತ್ತಿಲ್ಲ. ಬಹುತೇಕ ನಾವು ಈ ಅಭಿನಂದನೆಗೆ ಪಾತ್ರರಾಗಲು ಕಾರಣವಾಗುವ ಒಂದಿಷ್ಟು ಸಿದ್ಧತೆ ಅಲ್ಲಿ ಮೊದಲೇ ಆಗಿತ್ತು. ಹೀಗಾಗಿ ಅದರ ಸಹಜ ಲಾಭ ನಮಗಾಗಿರಬಹುದು ಎಂದು ನಾನು ಭಾವಿಸುತ್ತೇನೆ. ಪಂಜಾಬದಲ್ಲಿಯೂ ನಾನು ಇದನ್ನೇ ಸಾಧಿಸಬೇಕೆನ್ನುವದು ನಿಮ್ಮ ಅಭಿಲಾಷೆಯಲ್ಲವೆ? ನಾನೂ ಇದನ್ನೇ ಪಂಡಿತ ನೆಹರೂ ಹಾಗೂ ಸರ್ದಾರ ವಲ್ಲಭಭಾಯಿಯವರೊಂದಿಗೆ ನಿರಂತರವಾಗಿ ಚರ್ಚಿಸುತ್ತಿದ್ದೇನೆ. ನಿಮ್ಮ ಹೊಸ ಆಫೀಸು, ನೀವು ಭಾರತದ ವ್ಹಾಯಿಸ್‌ರಾಯ ಆಗಿರುವಾಗಿದ್ದಷ್ಟು ಅದ್ಭುತವಾಗಿರಲಿಕ್ಕಿಲ್ಲ. ಆ ಕುರಿತು ನನಗೆ ಖೇದವಿದೆ. ನಿಮ್ಮ ಪತ್ನಿ ಲೇಡಿ ಮೌಂಟ್‌ಬ್ಯಾಟನ್ ಪಂಜಾಬಗೆ ಹೋದ ಕುರಿತು ನನಗೆ ತುಂಬಾ ಸಂತೋಷವಾಗಿದೆ. ಅವಳು ಈ ಕೆಲಸಕ್ಕೆ ಯೋಗ್ಯಳಾದ ಮಹಿಳೆ.

ತಮ್ಮ ವಿಶ್ವಾಸಿ,
ಎಂ.ಕೆ. ಗಾಂಧಿ

ಗಾಂಧಿ ಪಂಜಾಬಗೆ ಹೋಗಲು ಕೋರಿದ, ಲೇಡಿ ಮೌಂಟ್‌ಬ್ಯಾಟನ್ ಪಂಜಾಬಗೆ ಹೋದಳು. ಇವು ಇತಿಹಾಸದ ಎರಡೇ ಸಾಲುಗಳು. ಯಾಕೆ ಗಾಂಧಿ ಪಂಜಾಬಿಗೆ ಹೋಗುವುದನ್ನು ತಡೆಯಲಾಯಿತು ಎನ್ನುವದು ಸ್ಪಷ್ಟವಾಗಲೇ ಇಲ್ಲ. ಗಾಂಧಿ ಪತ್ರದ ಮೇಲೊಂದು ಪತ್ರ ಬರೆದು ಸ್ವತಂತ್ರ ಭಾರತದ ರಾಜಕಾರಣದ ಈ ಗಳಿಗೆಯಲ್ಲಿ ತನ್ನ ಪಾಲಿನ ಸೇವೆ ಏನು ಎಂಬುವುದನ್ನು ಕೇಳುತ್ತಲೇ ಇದ್ದ. ಆದರೆ ಆತ ಅವಜ್ಞೆಗೊಳಗಾಗುತ್ತಿದ್ದ ಎನ್ನುವದು ಇತಿಹಾಸದ ಖಾಲಿ ಸ್ಥಳಗಳನ್ನು ಓದುವವನಿಗೆ ವೇದ್ಯವಾಗುತ್ತದೆ. ಲೇಡಿ ಮೌಂಟ್‌ಬ್ಯಾಟನ್ ಅಂತಿಮವಾಗಿ ಪಂಜಾಬಗೆ ಹೋದಳು. ಇನ್ನು ತಾನು ಅಲ್ಲಿಗೆ ಹೋಗಬೇಕಾಗಿಲ್ಲ ಎನ್ನುವದು ಸ್ಪಷ್ಟವಾದ ಮೇಲೆ ತುಂಬ ದುರ್ಬಲವಾದ ಒಂದು ಪತ್ರವನ್ನು ಗಾಂಧಿ ನೆಹರೂಗೆ ಬರೆದಿದ್ದಾರೆ.

"ನಿನ್ನ ಮತ್ತು ವಲ್ಲಬಭಾಯಿಯ ವಿಚಾರಕ್ಕೆ ವಿರುದ್ಧವಾಗಿ ನಾನು ಪಂಜಾಬಗೆ ಹೋಗಲಾರೆ. ಸರಿ, ಪಂಜಾಬಗೆ ನಾನು ಹೋಗುವುದಿಲ್ಲ ಎನ್ನುವದು ಸ್ಪಷ್ಟವಾದ ಮೇಲೆ ಒಬ್ಬ ಸಲಹೆಗಾರನಾಗಿ, ಸಂದರ್ಶಕನಾಗಿ ಅಥವಾ ಸ್ನೇಹಿತನಾಗಿ ದೆಹಲಿಗಾದರೂ ಬರಬಹುದೆ? ಅದು ಕೂಡ ನನಗೆ ಯೋಗ್ಯ ಪಾತ್ರವಲ್ಲ ಎಂದು ನಿಮಗೆ ಅನಿಸಿರಬಹುದು. ಒಂದು ನಿಶ್ಚಿತ ಕಾರ್ಯದಲ್ಲಿ ಕ್ರಿಯಾಶೀಲನಾಗದ ಹೊರತು ನಾನು ಯಾರಿಗೂ ಸಲಹೆಗಳನ್ನು ನೀಡುವವನಲ್ಲ. ನನಗೆ ಗೊತ್ತಿದೆ, ನಾನು ಆಹಾರ, ಆರೋಗ್ಯ, ಬಟ್ಟೆ ಮತ್ತು ಸೈನ್ಯವನ್ನು ಕುರಿತು ಮಾತನಾಡಿಯೂ, ಸಲಹೆ ನೀಡಿಯೂ ಕೆಲವರಿಗೆ ಬೇಸರವಾಗಿದ್ದೇನೆ. ಕ್ಷಮಿಸಿ, ಹೆಚ್ಚು ವಿಚಾರಿಸಿದಷ್ಟೂ ಸಮಸ್ಯೆಗಳು ಉದ್ಭವಿಸುತ್ತವೆ. ಆದರೆ ಹೆಚ್ಚು ಆಲೋಚಿಸಿದಷ್ಟು ಈ ಅಭಿವೃದ್ಧಿಯ ಹಿಂದಿನ ಸತ್ಯ ಸ್ಪಷ್ಟವಾಗುತ್ತದೆ. ನಾನು ಪಂಜಾಬಿಗೆ ಹೋಗಬಹುದಾಗಿತ್ತು ಎನ್ನುವ ಅಭಿಪ್ರಾಯದ ಪತ್ರವೊಂದು ಮೌಂಟ್‌ಬ್ಯಾಟನ್ ನನಗೆ ಬರೆದಿದ್ದಾರೆ. ನಿಮ್ಮ ಯಾರ ಅನುಮತಿಯಿಲ್ಲದೆಯೂ ನಾನು ಅಲ್ಲಿಗೆ ಹೋಗಬಹುದಿತ್ತು. ಆದರೆ ಹಾಗೆ ಮಾಡುವುದಿಲ್ಲ.

ಇಂತಿ
ನಿಮ್ಮ ಬಾಪು

ಗಾಂಧಿ ಪಂಜಾಬಿಗೆ ಹೋಗಲೇಬಾರದು ಎನ್ನುವ ಅಥವಾ ಅವರು ಅಲ್ಲಿಗೆ ಹೋಗುವುದನ್ನು ಪಟೇಲ ಮತ್ತು ನೆಹರು ತಪ್ಪಿಸುವುದನ್ನು ನಕಾರಾತ್ಮಕವಾಗಿಯೇ ಓದಬೇಕಿಲ್ಲ. ಹಿಂದೊಮ್ಮೆ ಕಾಶ್ಮೀರದಿಂದ ಬರುವ ವೇಳೆ ಪಂಜಾಬದ ರೈಲು ನಿಲ್ದಾಣಗಳಲ್ಲಿ ಅದೆಷ್ಟೇ ಅಭೂತಪೂರ್ವ ಸ್ವಾಗತ ಬಂದಿದ್ದರೂ ಹಿಂದೂ ಮುಲಭೂತವಾದಿಗಳಿಗೆ ಅಲ್ಲಿ ಗಾಂಧಿ ಬೇಡವಾದ ವಸ್ತುವೇ ಆಗಿದ್ದ. ಮುಸ್ಲಿಂ ಲೀಗ್ ಮತ್ತು ಅದರ ಮಾರಣಾಂತಿಕ ಹಲ್ಲೆಗಳಿಗೆ ಜೀವತೆತ್ತ ಸಾವಿರಾರು ಜನಗಳು ಗಾಂಧಿಯ ಯಾವ ಉಪದೇಶಗಳನ್ನು ಕೇಳುವ ಸ್ಥಿತಿಯಲ್ಲಿರಲಿಲ್ಲ. ಗಾಂಧಿ ಎನ್ನುವ ಈ ಗಾಂಧಿ ಮೇಲೆಯೂ ದಾಳಿ ಯಾವ ಕಾಲಕ್ಕೂ ಸಾಧ್ಯವಿತ್ತು. 30 ಆಗಸ್ಟ್ ಗಾಂಧಿ ಬೇಲಿಘಾಟದಿಂದ 16 ಕಿ.ಮೀ ದೂರದ ಬರ್‌ಸಾತ್‌ನಲ್ಲಿ

ಸಾರ್ವಜನಿಕ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುವುದು ಎಂದು ನಿಶ್ಚಯವಾಯಿತು. ಅದು ಹಾಗೆ ನೋಡಿದಲ್ಲಿ ಶಹೀದ ಸುಹ್ರವರ್ದಿಯ ಮತಕ್ಷೇತ್ರ. ಆ ದಿನ ಬರ್‌ಸಾತ್ ಹೈಸ್ಕೂಲಿನ ಆ ಮೈದಾನದಲ್ಲಿ ಮುಸ್ಲಿಂ ಲೀಗಿನ ಒಂದೇ ಒಂದು ಭಾವುಟವೂ ಕಾಣಿಸಲಿಲ್ಲ. ಗಾಂಧಿಗೆ ಅಚ್ಚರಿಯಾಯಿತು. ಸುಹರ್‌ವರ್ದಿ ಎಂದರೆ ಮುಸ್ಲಿಂ ಲೀಗ್, ಮುಸ್ಲಿಂ ಲೀಗ್ ಎಂದರೆ ಸುಹರ್‌ವರ್ದಿ ಎನ್ನುವ ಕಾಲ ಒಂದಿತ್ತು. ಈಗ ಸುಹರ್‌ವರ್ದಿ ಅಲ್ಲಿದ್ದೂ ಮುಸ್ಲಿಂ ಲೀಗಿನ ಬಾವುಟ ಇಲ್ಲ ಎನ್ನುವುದು ಅಚ್ಚರಿಯಲ್ಲದೆ ಮತ್ತೇನು? ಕೇವಲ ಭಾರತದ ತ್ರಿವರ್ಣ ಧ್ವಜ ಮಾತ್ರ ಹಾರುತ್ತಿತ್ತು.

ಭಾಷಣವನ್ನು ಪ್ರಾರಂಭಿಸಿದ ಗಾಂಧಿ ಯಾವ ಅರ್ಥದಲ್ಲೂ ಪೂರ್ಣನಾಗಿರಲಿಲ್ಲ. ಆತನ ಮೊದಲ ಪ್ರಶ್ನೆಯೇ ಇದು. "ಈ ಪ್ರದೇಶದ ಹಿಂದೂಗಳಿಗೇನಾಗಿದೆ? ಭಾರತದ ಬಾವುಟದೊಂದಿಗೆ ಪಾಕಿಸ್ತಾನದ ಬಾವುಟವನ್ನೂ ಇಲ್ಲಿ ಹಾರಿಸಿದರೆ ಯಾವ ದೊಡ್ಡ ಹಾನಿಯಾಗುತ್ತಿತ್ತು? ಯಾವ ಘನತೆಗೆ ದಕ್ಕೆ ಬರುತ್ತಿತ್ತು? ಪಾಕಿಸ್ಥಾನದ ಬಾವುಟವನ್ನು ಹಾರಿಸುವುದೆಂದರೆ ಇಲ್ಲಿಯ ಅಲ್ಪಸಂಖ್ಯಾತ ಮುಸ್ಲಿಂರು ನಮ್ಮ ಮೇಲೆ ಒತ್ತಡವನ್ನು ಹೇರುತ್ತಿದ್ದಾರೆ ಎಂದರ್ಥವಲ್ಲ. ನಾನು ಇದೇ ರೀತಿಯ ಪ್ರಶ್ನೆಗಳನ್ನು ಬಹುಸಂಖ್ಯಾತ ಮುಸ್ಲಿಂರ ಪ್ರದೇಶಗಳಲ್ಲಿಯೂ ಕೇಳುತ್ತೇನೆ. ಅಂಥ ಪ್ರದೇಶಗಳಲ್ಲಿ ಒಬ್ಬಳೇ ಒಬ್ಬ ಹಿಂದೂ ಯುವತಿ ವಾಸವಾಗಿದ್ದರೂ ಆಕೆಗೆ ಎಲ್ಲ ರಕ್ಷಣೆಯನ್ನು ನೀಡುತ್ತಾ ಹೊರ ಕರೆದು, ಆಕೆಯ ಕೈಯಿಂದ ಭಾರತದ ತ್ರಿವರ್ಣಧ್ವಜವನ್ನು ಹಾರಿಸಬೇಕಾದುದು ಮುಸ್ಲಿಂರ ಆದ್ಯ ಕರ್ತವ್ಯವಾಗಿದೆ. ಅವಳಿಂದ ಮರ್ಯಾದ ಪುರುಷೋತ್ತಮ ರಾಮನ ಪ್ರಾರ್ಥನೆಯನ್ನು ಮಾಡಿಸಿ ಆ ಪ್ರಾರ್ಥನೆಯಲ್ಲಿ ಎಲ್ಲರೂ ಇರಬೇಕಾದುದು ಅತ್ಯಾವಶ್ಯಕವಾಗಿದೆ." ಇವು ಗಾಂಧಿಯ ಆದರ್ಶಗಳು. ಭಾವನಾತ್ಮಕವಾಗಿ ಒಂದು ಕ್ಷಣ ಗಲಿಬಿಲಿಗೊಂಡಿದ್ದ ಹಿಂದೂ–ಮುಸ್ಲಿಂರಿಗೆ ಆ ಕ್ಷಣದಲ್ಲಿ ಇವೆಲ್ಲವೂ ಅದ್ಭುತವಾಗಿ ಕಂಡವೇನೊ ಆದರೆ ಆಚರಣೆಗಳಾಗಲಿಲ್ಲ.

ಇದೇ ಆಗಸ್ಟ್ 30ರಂದು ಗೂರ್ಖಾ ಲೀಗದ ನಾಯಕನಿಂದ ಪತ್ರವೊಂದು ಬಂತು. ಪತ್ರ ಬರೆದಿದ್ದ ನಾಯಕನಿಗೆ ಭಾರತದ ಅತ್ಯಂತ ಸುಂದರ ಪ್ರದೇಶವಾದ ಡಾರ್ಜಲಿಂಗ್‌ಗೆ ವಿಮಾನಗಳ ಮೂಲಕ ಹೊರಗಿನಿಂದ ಜನಗಳು ಬರುತ್ತಾರೆ ಹಾಗೂ ಅವರು ಆ ಪ್ರದೇಶಗಳನ್ನು ಶಾಶ್ವತವಾಗಿ ಆಕ್ರಮಿಸಿಕೊಂಡು ಬಿಡುತ್ತಾರೆ ಎನ್ನುವುದು ಆತಂಕವಾಗಿತ್ತು. ಅಲ್ಲದೆ ತಮ್ಮ ಆ ಪ್ರದೇಶಕ್ಕೆ ಯಾರಿಗೂ ಬರಲು ಅವಕಾಶ ನೀಡಲಾರೆವು ಎಂದು ಗಾಂಧಿಗೆ ತಿಳಿಸುವುದು ಅವನ ಪತ್ರದ ಉದ್ದೇಶವಾಗಿತ್ತು.

ಆದರೆ ವಾಸ್ತವವೇ ಬೇರೆ ಇತ್ತು. ಆ ಸಂದರ್ಭದ ಇನ್ನೊಬ್ಬ ಮಹತ್ವದ ಸ್ವಾತಂತ್ರ್ಯ ಹೋರಾಟಗಾರ ಮೇಜರ್ ಜಯಪಾಲ್‌ಸಿಂಗ್ ತನ್ನ ಆತ್ಮಕಥೆಯಲ್ಲಿ ಬರೆಯುವ ಹಾಗೆ ದೇಶಬಿಟ್ಟು ಹೊರಟಿದ್ದ ಬ್ರಿಟಿಷರು ಭಾರತದಲ್ಲಿ ಅರಾಜಕತೆಯನ್ನು ಸೃಷ್ಟಿಸುವುದೇ ತಮ್ಮ ಆಡಳಿತದ ಕೊನೆಯ ದಿನಗಳ ಮುಖ್ಯ ಕ್ರಿಯೆಯಾಗಿಸಿಕೊಂಡಿದ್ದರು. ಆತ ಬರೆಯುತ್ತಾನೆ– "ಸ್ವಾತಂತ್ರ್ಯ ಚಳುವಳಿಯ ತೀವ್ರತೆ ಹೆಚ್ಚಾಗತೊಡಗಿತು. ಬ್ರಿಟಿಷರು ಈ ದೇಶವನ್ನು ಬಿಟ್ಟು

ಹೋಗುವುದು ಅನಿವಾರ್ಯವೆಂಬ ಪರಿಸ್ಥಿತಿ ನಿರ್ಮಾಣವಾಗಿತ್ತು. ಆದರೆ ಬ್ರಿಟಿಷರು ಈ ದೇಶ ಬಿಡುವ ಸಂದರ್ಭ ಬಂದಾಗ ನಮ್ಮ ದೇಶಕ್ಕೆ ಅವರು ಮಾಡಿದ ದ್ರೋಹಕ್ಕೆ ಇತಿಹಾಸ ಅವರನ್ನು ಎಂದಿಗೂ ಕ್ಷಮಿಸಲಾರದು. ದೇಶವನ್ನು ಧರ್ಮದ ಆಧಾರದ ಮೇಲೆ ಒಡೆಯುವ ದ್ರೋಹದ ಕೆಲಸದ ಜೊತೆಗೆ ನಮ್ಮ ದೇಶದ ಈಶಾನ್ಯ ಭಾಗದಲ್ಲಿರುವ ವಿವಿಧ ಬುಡಕಟ್ಟಿನ, ವಿವಿಧ ಜಾತಿಗಳನ್ನು ದೇಶದ ವಿರುದ್ಧ ಎತ್ತಿಕಟ್ಟಿ ಪ್ರತ್ಯೇಕತಾವಾದಿ ಶಕ್ತಿಗಳನ್ನು ಪ್ರೋತ್ಸಾಹಿಸಲು ಬೇಕಾದ ರಹಸ್ಯ ಕಾರ್ಯಸೂಚಿಯನ್ನು ಮತ್ತು ಅದರ ನೀಲ ನಕ್ಷೆಯನ್ನು ಬ್ರಿಟಿಷರು ಗುಟ್ಟಾಗಿ ರೂಪಿಸಿ ಕಾರ್ಯಗತೆ ಮಾಡಲು ಸಿದ್ಧತೆ ನಡೆಸುತ್ತಿದ್ದರು."

ಒಂದೆಡೆ ದಾರ್ಜಲಿಂಗ್‌ನಲ್ಲಿ ನಡೆದುದು ಇಂಥದೇ ಒಂದು ಕ್ರಿಯೆ. ಗೂರ್ಖಾಗಳು ಗಾಂಧಿಯ ಮುಂದೆ ವ್ಯಕ್ತಪಡಿಸಿದ ಆತಂಕ ಸಹಜವಾದುದೆ ಆಗಿತ್ತು. ಆದರೆ ಇನ್ನೊಂದೆಡೆ ಅಲ್ಲಿಗೆ ಬರುತ್ತಿರುವವರು ವ್ಯಾಪಾರಿ ಉದ್ದೇಶದ ಭಾರತೀಯ ಮಾರ್ವಾಡಿಗಳಲ್ಲದೆ ಇನ್ಯಾರು ಆಗಿರಲಿಲ್ಲ. ಗಾಂಧಿ ಇದನ್ನು ಚೆನ್ನಾಗಿ ಬಲ್ಲವನಾದುದ್ದರಿಂದ ಗೂರ್ಖಾಗಳ ಪ್ರತ್ಯೇಕತಾವಾದವನ್ನು ಆತ ಸಮರ್ಥಿಸಲಿಲ್ಲ. ಹೀಗಾಗಿ ಆತ ಹೇಳಿದ. "No one in India should dare to migrate to any province to cause injury to it; and no one should use force to attain an end, however legitimate it may be."



ಹಾಲು-ನೀರಿನ ವ್ಯವಹಾರವಲ್ಲ ರಕ್ತದ ಪ್ರಶ್ನೆ

೧೮

ಗಾಂಧಿಯಲ್ಲಿ ಯಾವುದೂ ಸ್ಪಷ್ಟವಾಗಿರಲಿಲ್ಲ ಅಥವಾ ಅವನ ಸ್ಪಷ್ಟತೆ ಜನಸಾಮಾನ್ಯರಿಗೆ ನಿಲುಕುವಂತಿರಲಿಲ್ಲ. 'ಹರಿಜನ' ಪತ್ರಿಕೆಯಲ್ಲಿಯ ಅಹಿಂಸೆ ಕುರಿತಾದ ಗಾಂಧಿಯ ಬರಹವನ್ನು ಕುರಿತು ವ್ಯಕ್ತಿಯೊಬ್ಬ ಪ್ರಶ್ನೆಮಾಡಿದ. "ನೌಖಾಲಿಯ ನಿಮ್ಮ ಅಹಿಂಸಾ ತತ್ವದ ವೈಫಲ್ಯ ಎನ್ನುವದು ನನ್ನ ಗ್ರಹಿಕೆಯ ಅಹಿಂಸಾ ತತ್ವದ ವೈಫಲ್ಯವೇ ವಿನಃ ಒಟ್ಟು ಅಹಿಂಸಾ ಸಿದ್ಧಾಂತದ ವೈಫಲ್ಯವಲ್ಲ ಎನ್ನುವುದಾದರೆ ಕಲ್ಕತ್ತೆಯೊಳಗಿನ ನಿಮ್ಮ ಸಾಧನೆ ನಿಮ್ಮದೇ ಅಹಿಂಸೆಯ ಸಾಧನೆ ಎನ್ನಬೇಕೆ?" ಈ ಪ್ರಶ್ನೆಗೆ ಗಾಂಧಿ ನೀಡಿರುವ ಉತ್ತರ ದಾಖಲಾರ್ಹವಾಗಿದೆ. ಆತನಿಗೆ ತನ್ನ ಸಿದ್ಧಾಂತಗಳಲ್ಲಿದ್ದ ಅಚಲವಾದ ನಂಬಿಕೆಯನ್ನು ಸ್ಪಷ್ಟಪಡಿಸುತ್ತದೆ. ಗಾಂಧಿಯ ಮೊದಲ ವಾಕ್ಯ ಹೀಗಿದೆ– "Ahimsa is always infallible. ಅದು ವಿಫಲಗೊಂಡಿದೆ ಎಂದು ಎಂದಾದರೂ ನಮಗೆ ಅನ್ನಿಸಿದರೆ ಅದು ನಮ್ಮ ಅನುಸರಣೆಯಲ್ಲಿನ ವೈಫಲ್ಯ. ಹೀಗಾಗಿ ನೌಖಾಲಿಯಲ್ಲಿನ ಅಹಿಂಸೆ

ಸೋತಿತು ಎಂದಾಗಲೀ, ಅಥವಾ ಗೆದ್ದಿತು ಎಂದಾಗಲೀ ನಾನು ಹೇಳುವುದಿಲ್ಲ. ನೌಖಾಲಿಯ ವಿಷಯದಲ್ಲಿ ಹೇಳುವ ಈ ಮಾತುಗಳೇ ಕಲ್ಕತ್ತೆಗೂ ಅನ್ವಯವಾಗುತ್ತವೆ. ಮತೀಯ ಗಲಭೆಗಳ ವಿಷಯದಲ್ಲೂ ಅಷ್ಟೆ, ನನ್ನ ಅಹಿಂಸಾವಾದ ಅದ್ಭುತವಾದುದೇನನ್ನೊ ಸಾಧಿಸಿತು ಎಂದು ನಾನು ಒಪ್ಪಿಕೊಳ್ಳುವುದಿಲ್ಲ. ಒಂದಂತೂ ಸತ್ಯ, ನಾನು ಮತ್ತು ಸುಹರ್‌ವರ್ದಿ ಅಹಿಂಸೆಯಲ್ಲಿ ಬಲವಾಗಿ ನಂಬಿಕೆ ಇಟ್ಟವರು. ಅದರ ವಿಜ್ಞಾನ ಮತ್ತು ಅನ್ವಯಿಸುವಿಕೆ ನಮಗೆ ತಿಳಿದಿದೆ ಎನ್ನುವುದಾದರೆ ಇಂದಿಲ್ಲ ನಾಳೆ ನಾವು ಗೆದ್ದೇ ಗೆಲ್ಲುತ್ತೇವೆ."

ಶನಿವಾರ ಮುಂಜಾನೆ ಚಿತ್‌ಪೂರ್ ರೋಡಿನ ಗ್ರ್ಯಾಂಡ್ ಹೋಟೆಲ್‌ನಲ್ಲಿ ಹಿಂದೂ-ಮುಸ್ಲಿಂರ ಐಕ್ಯತಾ ಸಭೆಯಲ್ಲಿ ಗಾಂಧಿ ಹಾಜರಾದ. ಅದು ಸಂಪೂರ್ಣ ಶ್ರೀಮಂತ ಮುಸ್ಲಿಂರನ್ನು ಒಳಗೊಂಡ ಪ್ರದೇಶ. ಅವರುಗಳ ಮುಂದೆ ಕೈಯೊಡ್ಡುತ್ತಲೇ ಗಾಂಧಿ ಹೇಳಿದ್ದು ಹೀಗೆ, "ನನ್ನ ಓದಿನ ದಿನಗಳ ನಂತರ ಶ್ರೀಮಂತರ ಮುಂದೆಯಾಗಲೀ, ಬಡವರ ಮುಂದೆಯಾಗಲೀ ಕೈಯೊಡ್ಡಿ ಭಿಕ್ಷೆ ಬೇಡುವ ವಿಶೇಷ ಹಕ್ಕು ಮತ್ತು ಅಧಿಕಾರ ನನಗಿದೆ ಎಂದು ನಾನು ತಿಳಿದುಕೊಂಡೆ, ಬಂಧುಗಳೇ, ಆ ವಿಶ್ವಾಸದಿಂದಲೇ ಇಂದು ನಿಮ್ಮ ಮುಂದೆ ಕೈಯೊಡ್ಡಿದ್ದೇನೆ. ಮತ್ತು ಇದು ವ್ಯರ್ಥವಾಗುವುದಿಲ್ಲ ಎಂದು ನಂಬಿದ್ದೇನೆ. ಈ ಸಮಾಜವನ್ನು ಎರಡು ರೀತಿಯಿಂದ ಕಟ್ಟಬಹುದು, ಒಂದು ಸರ್ಕಾರಿ ಹಣದಿಂದ, ಇನ್ನೊಂದು ನಿಮ್ಮ ಪ್ರೀತಿ-ವಿಶ್ವಾಸಗಳಿಂದ ಸರ್ಕಾರಿ ಹಣದಿಂದ ಸಮಾಜ ಕಟ್ಟುವುದರಲ್ಲಿ ಯಾವ ವಿಶೇಷತೆಯೂ ನನಗೆ ಕಾಣಿಸುವುದಿಲ್ಲ. ಆದರೆ ಸ್ವಯಂ ಪ್ರೇರಿತರಾಗಿ ನೀವುಗಳು ನೀಡುವ ಹಣದಿಂದ ಸಮಾಜ ಕಟ್ಟಿದಲ್ಲಿ ಅಲ್ಲಿ ಮನುಷ್ಯ ಸೌಂದರ್ಯದ ದರ್ಶನವಾಗುತ್ತದೆ, ದೇವರ ದರ್ಶನವಾಗುತ್ತದೆ ಮತ್ತು ಅದು ಹಿಂದೂ ಮುಸ್ಲಿಂರ ಮಧ್ಯದ ವಿಶ್ವಾಸಕ್ಕೆ ಸಾಕ್ಷಿಯಾಗುತ್ತದೆ."

ಗಾಂಧಿ ಹೀಗೆ ಬಡಬಡಿಸುತ್ತಾ ಏಕಮುಖಿಯಾಗಿ ಹೊರಟಿದ್ದ. ಇನ್ನೇನೂ ಎಲ್ಲವೂ ಸರಿಹೋಯಿತು ಎಂದು ಗಾಂಧಿ ಮತ್ತು ಕಮಲಕೃಷ್ಣರಾಯ್ ನಂಬುವುದರೊಳಗಾಗಿ ಮತ್ತೆ ಬೆಂಕಿ ಹೊತ್ತಿಕೊಂಡಿತು. ಸೆ. 1ರಂದು ಕಲ್ಕತ್ತೆಯ ಸೆಂಟ್ರಲ್ ಮತ್ತು ಉತ್ತರ ಭಾಗಗಳಲ್ಲಿ ಮತೀಯ ಗಲಭೆಗಳು ಶುರುವಾದವು. ಜೋರ್ ಸಾಂಕೊ, ಆ್ಯಮ್‌ಹರೆಸ್ಟ್ ಸ್ಟ್ರೀಟ್, ಬುರ್ರಾಬಾಜಾರ್, ಮುಚಿಪಾರಾ, ಶಾಮ್ ಪುಕುರ್, ಮತ್ತು ಪಾರ್ಕ್ ಸ್ಟ್ರೀಟ್‌ಗಳಲ್ಲಿ ಜನ ಪರಸ್ಪರರನ್ನು ಕೊಚ್ಚಲಾರಂಭಿಸಿದರು. ವೆಸ್ಟ್‌ಬೆಂಗಾಲದ ಗವರ್ನರ್ ರಾಜಗೋಪಾಲಾಚಾರಿ ಗಾಂಧಿಯ ಅಕ್ಬರೀ ಮಂಜೀಲ್‌ದ ಮುಂದೆ ಕೈ ಚೆಲ್ಲಿ ಕುಳಿತುಕೊಂಡ. ಆದರೆ ಗಾಂಧಿ ಮಾತನಾಡುತ್ತಲೇ ಇದ್ದ. "ನೋಡು, ನಮ್ಮನ್ನೇ ನಾವು ಪರೀಕ್ಷಿಸಿಕೊಳ್ಳುವ ಒಂದು ದಾರಿಯನ್ನು ನಾನು ನಿನಗೆ ತಿಳಿಸುತ್ತೇನೆ. ಮನಸ್ಸು ವಿಹ್ವಲಕ್ಕೊಳಗಾದಾಗ ನಿನ್ನ ಜೀವಮಾನದಲ್ಲೇ ನೀನು ಕಂಡ ಅತ್ಯಂತ ಬಡವ ಮತ್ತು ದುರ್ಬಲ ವ್ಯಕ್ತಿಯನ್ನು ಸ್ಮರಿಸಿಕೋ. ಜೊತೆಗೆ ಇಂದು ಈ ಕ್ಷಣದಲ್ಲಿ ನೀನು ಮಾಡುವ ಕ್ರಿಯೆ ಆತನ ಬದುಕಿಗೆ ಏನನ್ನಾದರೂ ಸೇರಿಸುವುದೇ ಎಂದು ಪ್ರಶ್ನಿಸಿಕೋ. ನಿನ್ನ ಪ್ರಯತ್ನಗಳಿಂದಾಗಿ ಆತ ಏನನ್ನಾದರೂ ಪಡೆಯಬಲ್ಲನೇ? ಅವನ ಬದುಕು ಮತ್ತು ದೈವದಲ್ಲಿ ಏನಾದರೂ ಬದಲಾಗುವುದೇ? ಇನ್ನೊಂದು ಅರ್ಥದಲ್ಲಿ ಆಧ್ಯಾತ್ಮಿಕ ಹಸಿವಿನಿಂದ ನರಳುವ ಮಿಲಿಯನ್‌ಗಟ್ಟಲೇ ಜನಗಳನ್ನು ನಾವು ಸ್ವರಾಜ್ಯದೆಡೆಗೆ ನಡೆಸುತ್ತಿರುವೆವೋ ಎಂದು ಪ್ರಶ್ನಿಸಿಕೊಂಡರೆ ನೀನು ಕುಳಿತಲ್ಲೇ ಕರಗಿ ಹೋಗುತ್ತಿರುವುದು ನಿನಗೆ ಸ್ಪಷ್ಟವಾಗುತ್ತದೆ."

ಹೊರಗಡೆ ದೊಂಬಿ, ಕತ್ತಿ, ಮಚ್ಚು, ಲಾಂಗ್‌ಗಳು ಝಳಪಿಸುತ್ತಿರುವಾಗ ಗಾಂಧಿ ಹೀಗೆ ಮಾತನಾಡುತ್ತಿರುವುದನ್ನು ಕಂಡು ರಾಜಗೋಪಾಲಾಚಾರಿ ಬೆಕ್ಕಸಬೆರಗಾದರಷ್ಟೆ. ಅತ್ತ 'ಗಾಂಧಿಯೊಬ್ಬರೇ ನನ್ನ ಸೈನ್ಯ' ಎಂಬ ಮೌಂಟ್ ಬ್ಯಾಟನ್‌ರು ಮಾತು ಗಾಂಧಿಯನ್ನು ಲೇವಡಿಸುತಿತ್ತು. ಯಾರೋ ಕಿಡಿಗೇಡಿಗಳು ಗಾಂಧಿ ವಾಸವಾಗಿದ್ದ ಹೈದರಿಮಂಜಿಲ್‌ದ ಮೇಲೆ ಆಕ್ರಮಣ ಮಾಡಿ ಕಿಡಕಿಯ ಗಾಜುಗಳನ್ನು ಒಡೆದು ಹಾಕಿದರು. ವಿದ್ಯುತ್ ತಂತಿಗಳನ್ನು ಕತ್ತರಿಸಿದರು. ಇಟ್ಟಿಗೆಯ ತುಂಡು ಮತ್ತು ಕಲ್ಲುಗಳನ್ನು ಎಸೆದು ಗಾಂಧಿಯನ್ನು ದೃತಿಗೆಡಿಸಲು ನೋಡಿದರು. ಸ್ವಲ್ಪದರಲ್ಲಿಯೇ ಗಾಂಧಿ ಸಾವಿನಿಂದ ಪಾರಾಗಿದ್ದ. ಆತ ಹೀಗೆಯೇ ಪ್ರತಿಕ್ಷಣವೂ ಸಾವಿನಿಂದ ಪಾರಾಗುತ್ತಲೇ ಇದ್ದ. ಗಾಂಧಿ ಹೇಳಿದ, ಇಂದಿನ ಈ ಘಟನೆ ನನಗೆ ಒಂದು ರೀತಿಯಲ್ಲಿ ದೇವರು ನೀಡಿದ ಎಚ್ಚರಿಕೆ. ನೌಖಾಲಿಗೆ ಹೋಗಬೇಕೆನ್ನುವ ನನ್ನ ಆಲೋಚನೆಯನ್ನು ನಾನು ಕೈಬಿಟ್ಟಿದ್ದೇನೆ. ಈ ಕಲ್ಕತ್ತ ಹೊತ್ತು-ರಿಯುವಾಗ ಇನ್ನೆಲ್ಲಿಗೋ ಹೋಗುವುದನ್ನು ನಾನು ಊಹಿಸುವುದು ಕಷ್ಟವಾಗಿದೆ. ಇದೆಲ್ಲದಕ್ಕೆ ಪ್ರತಿಯಾಗಿ ಉಪವಾಸ ಒಂದೇ ದಾರಿ ಎಂದು ನಾನು ಕಂಡುಕೊಂಡಿದ್ದೇನೆ." ಎಂದು ಹೇಳುತ್ತಾ ಸೆಪ್ಟಂಬರ್ 2 ಮಂಗಳವಾರ 8–15 ನಿಮಿಷಕ್ಕೆ ಗಾಂಧಿ ಉಪವಾಸವನ್ನು ಪ್ರಾರಂಭಿಸಿಬಿಟ್ಟ. ಇದನ್ನು ಒಪ್ಪಿಕೊಳ್ಳುವ ಸ್ಥಿತಿಯಲ್ಲಿಲ್ಲದ ರಾಜಗೋಪಾಲಾಚಾರಿ ಧಾವಿಸಿ ಬಂದು ಕೇಳಿದ, "ಗುಂಡಾಗಳ ವಿರುದ್ಧ ಉಪವಾಸದ ನಿಮ್ಮ ಹುಚ್ಚು ಉಪಯುಕ್ತವೇ?" ಪ್ರತಿಯಾಗಿ ಮುಗುಳ್ನಕ್ಕು ಗಾಂಧಿ ಹೇಳಿದ, "ಗೂಂಡಾಗಳನ್ನು ಸೃಷ್ಟಿಸಿದವರೇ ನಾವು. ನಮ್ಮ ಸಹಕಾರವಿಲ್ಲದ ಯಾವ ಗೂಂಡಾಗಿರಿಯೂ ತಲೆ ಎತ್ತಲು ಸಾಧ್ಯವಿಲ್ಲ. ಈ ಗೂಂಡಾಗಳ ಹಿಂದಿರುವ ಜನರ ಹೃದಯಶಿವನೊಂದಿಗೆ ನಾನು ಮಾತಾಡಬೇಕಿದೆ."

79 ವರ್ಷದ ಈ ಹಟಮಾರಿ ಮುದುಕನನ್ನು ಯಾರೂ ತಡಿಯುವಂತಿರಲಿಲ್ಲ. "ಒಂದಿಷ್ಟು ಕಾಲ ಕಾಯ್ದುನೋಡಲಾಗದೇ? ಎಂದು ರಾಜಾಜಿ ಕೇಳಿದ." ಬಾಪು ಹೇಳಿದ, "ಹಾಗಾಗುವುದಾದರೇ ಒಬ್ಬ ಮುಸ್ಲಿಂನೂ ಇಲ್ಲಿ ಬದುಕುಳಿಯಲಾರ. ನನ್ನ ಉಪವಾಸ ಏನನ್ನಾದರು ಸಾಧಿಸುವುದಾದರೆ ಅದು ಮೊದಲು ಮುಸ್ಲಿಂರನ್ನು ರಕ್ಷಿಸಬೇಕಿದೆ. ಕಲ್ಕತ್ತೆಯನ್ನು ನಿಯಂತ್ರಿಸದ ನಾನು ಪಂಜಾಬದ ಬೆಂಕಿಯನ್ನು ನಂದಿಸುವದೆಂತು? ಇದು ಹೀಗೆ ಹಬ್ಬುತ್ತಲೇ ಹೋಗುತ್ತದೆ. ನಾವೆಲ್ಲಾ ಬರೀ ಮೂಕಸಾಕ್ಷಿಯಾಗಬೇಕಾಗುತ್ತದೆ. ನಾನು ದೇವರನ್ನು ನಂಬಿದ್ದೇನೆ. ಆತ ನಮ್ಮನ್ನು ರಕ್ಷಿಸುತ್ತಾನೆ."


ಗಾಂಧಿಯ ಈ ಮಾತಿನಿಂದ ರಾಜಾಜಿ ಸಿಡಿಮಿಡಿಗೊಂಡ. "ಅಂತಿಮವಾಗಿ ದೇವರೇ ನಿಮ್ಮನ್ನು ರಕ್ಷಿಸುವುದಾದರೇ ಈ ನಿಂಬೆಹಣ್ಣಿನ ರಸವನ್ನಾದರೂ ಏಕೆ ಕುಡಿಯುತ್ತೀರೀ? ದೇವರಿದ್ದಾನಲ್ಲ ನಿಮ್ಮನ್ನು ರಕ್ಷಿಸಲು?" ಗಾಂಧಿ ಸೋಲರಿಯದ ಜೀವ. ತಣ್ಣಗೆ ಉತ್ತರಿಸಿದ, "ನಿನ್ನ ವಾದ ಸರಿಯಾಗಿದೆ, ಆದರೆ ತನ್ನ ಗೆಲುವನ್ನು ನೋಡಲು ಸತ್ಯಾಗ್ರಹಿಯೊಬ್ಬ ಕೊನೆಯವರೆಗೂ 'ಬದುಕಲು' ಹೋರಾಡಬೇಕಾಗಿದೆ, ಅದೂ ದೇವರ ಇಚ್ಛೆಯಾಗಿದೆ. ಸಾವು ನಿಶ್ಚಿತ, ಆದರೆ ಸೋಲಲ್ಲ."ಗಾಂಧಿಯ ಈ ವಾದ ದೇವರನ್ನೂ ಮೆಚ್ಚಿಸಿರಬಹುದು. ಮರುದಿನವೇ ಬೇಲಿಘಾಟದ ಹಿಂದೂ ನಾಯಕರುಗಳಾದ ಡಾ. ಶ್ಯಾಮ್‌ಪ್ರಸಾದ್ ಮುಖರ್ಜಿ, ಮಿ.ಎನ್.ಸಿ. ಚಟರ್ಜಿ, ಹಾಗೂ ಇತರರು ಗಾಂಧಿಯನ್ನು ಕಂಡು ಈ

ದಂಗೆಯನ್ನು ನಿಲ್ಲಿಸುವ ನೈತಿಕ ಜವಾಬ್ದಾರಿಯನ್ನು ಹೊತ್ತರು. ಉಪವಾಸವನ್ನು ನಿಲ್ಲಿಸುವಂತೆ ಕೋರಿಕೊಂಡರು. ಆದರೆ ಗಾಂಧಿ ಒಪ್ಪಲಿಲ್ಲ. ಬದಲಾಗಿ ಸರ್ದಾರ್ ಪಟೇಲರಿಗೊಂದು ಪತ್ರ ಬರೆದ. "ನಾನು ಉಪವಾಸ ಮಾಡದಂತೆ ಮನವೊಲಿಸಲು ರಾಜಾಜಿ ತುಂಬಾ ಪ್ರಯತ್ನಪಟ್ಟರು, ಆದರೆ ನನ್ನ ಕರ್ತವ್ಯ ಏನು ಎನ್ನುವುದು ನನಗೆ ಸ್ಪಷ್ಟವಾಗಿ ಹೋಗಿದೆ. ನೀನಾಗಲೀ, ಇನ್ನ್ಯಾರೇ ಆಗಲೀ ನನ್ನ ಕುರಿತು ಚಿಂತಿಸಬೇಕಿಲ್ಲ. ಚಿಂತೆ ಸಹಾಯವಲ್ಲ. ಜನನಾಯಕರು ಪ್ರಾಮಾಣಿಕರಾಗಿದ್ದರೆ ದಂಗೆಗಳು ನಿಂತುಹೋಗುತ್ತವೆ. ಜೀವಗಳು ಹೊತ್ತು-ರಿಯುವಾಗ ನಾನು ಬದುಕಿಯಾದರೂ ಏನು ಪ್ರಯೋಜನ? ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಾಗದ ನನಗೆ ಮಾಡಲು ಉಳಿದಿರುವುದಾದರೂ ಏನು? ದೇವರು ನನ್ನ ಸೇವೆಯನ್ನು ಇಚ್ಛಿಸುವುದಾದಲ್ಲಿ ಆತ ಜನರ ಹೃದಯಾಗ್ನಿಯನ್ನು ನಂದಿಸಿ ನನ್ನ ಜೀವವನ್ನು ಉಳಿಸುತ್ತಾನೆ. ನಾನು ದೇವರ ಹೆಸರಿನಲ್ಲಿ ಈ ನಿರ್ಧಾರವನ್ನು ಕೈಗಿತ್ತಿಕೊಂಡಿದ್ದೇನೆ. ನಾನು ಕಲ್ಕತ್ತೆಯನ್ನು ಬಿಡಬೇಕೋ ಅಥವಾ ಇಲ್ಲಿಯೇ ಉಳಿಯಬೇಕೋ ಎನ್ನುವುದು ನನ್ನ ಉಪವಾಸದ ಫಲಿತಾಂಶವನ್ನು ಆದರಿಸಿದೆ. ಈ ವಿಚಾರವನ್ನು ಜವಾಹರ್‌ಲಾಲನಿಗೂ ತಿಳಿಸು. May God Keep all of you Safe. In this holocoust, no one else can do anything, Blessings from Bapu."

ಭಾರತದ ಇತಿಹಾಸದ ಪುಟಗಳಿಂದ ಮರೆಯಾಗಬಹುದಾಗಿದ್ದ ಪಾತ್ರವೊಂದು ಈಗ ಗಾಂಧಿಯ ಮುಂದೆ ಕಾಣಿಸಿಕೊಳ್ಳುತ್ತದೆ. ತನ್ನ ತಮ್ಮನ ಏಳ್ಗೆಯನ್ನು ಸಹಿಸದ, ತನ್ನ United Bengal ಎನ್ನುವ ಕಲ್ಪನೆಯನ್ನು ಸಮರ್ಥಿಸದ, ಗಾಂಧಿಯನ್ನೇ ನೋಡುವುದು ಬೇಡ ಎಂದು ಶಾಶ್ವತವಾಗಿ ದೂರವಾಗಿ ಹೋಗಿದ್ದ ಸುಭಾಷ್‌ಚಂದ್ರ ಬೋಸರ ಹಿರಿಯಣ್ಣ ಶರತ್‌ಚಂದ್ರ ಬೋಸ್, ಗಾಂಧಿಯ ಉಪವಾಸದ ನಿರ್ಧಾರವನ್ನು ಕೇಳುತ್ತಲೇ ಹೈದರಿ ಮಂಜಿಲ್‌ಗೆ ಬಂದರು. ಗಾಂಧಿ ನೇರವಾಗಿ ಪ್ರಶ್ನಿಸಿದ. "ಶರತ್‌ಚಂದ್ರರೇ, ಕಲ್ಕತ್ತೆಯ ಇತ್ತೀಚಿನ ದಂಗೆಗಳಲ್ಲಿ Forward Blockನ ಜನರ ಕೈವಾಡವಿದೆ ಎಂದು ಹಿಂದೂ ಮಹಾಸಭೆಯ ಮುಖಂಡರುಗಳು ಹೇಳುತ್ತಿದ್ದಾರೆ. ನನಗೆ ಈ ಹಿಂಸೆ, ನಿಲ್ಲಬೇಕಿದೆ. ಶರತ್ ಚಂದ್ರ ಭೋಸ್ ಅಷ್ಟೇ ನೇರನುಡಿಯ ವ್ಯಕ್ತಿ. ಆತ ಹೇಳಿದಿಷ್ಟೇ, "ನೀವು ನಂಬುವುದಾದರೆ ಆ ಮಾತುಗಳನ್ನು ನಂಬಬಹುದು, ಆದರೆ ಈ ದಂಗೆಗಳಲ್ಲಿ ತೊಡಗಿಕೊಂಡವರು ಹಿಂದೂ ಮಹಾಸಭೆಯ ಮುಖಂಡರುಗಳೆ. ಅವರು ಸಿಖ್‌ರನ್ನು ಈ ಹಿಂಸಾಕ್ರಿಯೆಗಾಗಿ ಪ್ರೋತ್ಸಾಹಿಸುತ್ತಿದ್ದಾರೆ. ಇಡೀ ಪಂಜಾಬ್ ಮುಸ್ಲಿಂರು ಹೊತ್ತಿಸಿದ ಬೆಂಕಿಯಲ್ಲಿ ಹೊತ್ತಿ ಉರಿಯುತ್ತಿರುವಾಗ ನೀವು ಹೀಗೆ ಕುಳಿತುಕೊಳ್ಳುವುದು ಹೇಡಿತನವಲ್ಲವೇ? ಎಂದು ಸಿಖ್ಖರನ್ನು ಛೇಡಿಸುತ್ತಿದ್ದಾರೆ. ಅವರು ಯಾರು ಎಂದು ನಾನು ಹೆಸರು ಸಮೇತ ತಿಳಿಸಬಲ್ಲೆ." ಗಾಂಧಿ ಮೌನವಾದ, ಶಾಂತಿ ಎನ್ನುವುದು ಬರೀ ಹಾಲು ನೀರಿನ ವ್ಯವಹಾರವಲ್ಲ. ಇದು ರಕ್ತದ ಪ್ರಶ್ನೆ ಎಂದು ಗೋಗರೆದ. ಪ್ರತಿಯಾಗಿ ಶರತ್‌ಚಂದ್ರ ಬೋಸರಿಂದ ಈ ಬೆಂಕಿಯನ್ನು ನಂದಿಸಲು ಸಹಕಾರವನ್ನು ಕೋರಿದ.

ಅತ್ತ ಪಿ.ಸಿ. ಘೋಷ್, ಡಾ. ಮೆಹತಾ, ಗಾಂಧಿಗೆ ಉಪವಾಸವನ್ನು ಕೈಬಿಡುವಂತೆ ಕೋರಿಕೊಳ್ಳುತ್ತಲೇ ಇದ್ದರು. ಬೆಂಗಾಲದ ಮುಸ್ಲಿಂ ಲೀಗ್‌ದ ನಾಯಕರುಗಳು ಕಣ್ಣೀರು ಹಾಕುತ್ತಾ ಬಂದು ಗಾಂಧಿಯನ್ನು ಉಪವಾಸ ಕೈಬಿಡುವಂತೆ ಪ್ರಾರ್ಥಿಸಿದರು. Your mere presence is an asset to us. Please stop it. ಎನ್ನುವ ಸರಳ ಇಂಗ್ಲಿಷ್ ಗಾಂಧಿಗೆ ಅರ್ಥವಾಗಲೇ ಇಲ್ಲ. ಪಿ.ಸಿ ಘೋಷ್ ಅಂತೂ ಸಿಟ್ಟಿಗೆದ್ದು ನಿಮ್ಮ ಈ ಉಪವಾಸದ ನಾಟಕ ನಮಗೆ ಈ ದಂಗೆಗಳಿಗಿಂತಲೂ ಭಾರವಾಗಿ ಹೋಗಿದೆ, ಎಂದು ರೇಗಾಡಿದ. ಆದರೆ ಗಾಂಧಿಯ ಉತ್ತರ ಕಾಯ್ದ ಹೆಬ್ಬಂಡೆಯ ಮೇಲೆ ತಣ್ಣಗೆ ಮಳೆ ಬಿದ್ದಂತೆ. ಸಿಡಿಮಿಡಿಗೊಂಡಿದ್ದ ಘೋಷನಿಗೆ ಗಾಂಧಿ ಉತ್ತರಿಸಿದ್ದು ಹೀಗೆ, “Referring to my fast as a weight upon you, is a wrong way of looking at the thing. My fast is in fact intended to strengthen your hands and to spur everybody to greater activity. You are done for, if you regard my fast as an oppression.”

ನಮ್ಮ ಇತಿಹಾಸದ ಈ ಕಾಲಘಟ್ಟವನ್ನು ನೀವು ಗಮನಿಸಬೇಕು. ಗಾಂಧಿ ಭಾರತ ಎನ್ನುವ ಸನಾತನ ಮನೆಯೊಂದರಲ್ಲಿ ವಯಸ್ಸಿನಿಂದ ಜರ್ಜರಿತನಾಗಿ, ನಿರಾಯುಧನಾಗಿ ಕುಳಿತ ಒಂದು ಹತಾಶ ಪಾತ್ರವಾಗಿ ಕಾಣಿಸುತ್ತಾನಷ್ಟೆ. ಆದರೆ, ಭಾರತೀಯರ ಎಲ್ಲ ಸಣ್ಣತನ, ಜಗಳ, ಕ್ಷುಲಕತನಕ್ಕೆ ಆತನೇ ಸಾಕ್ಷಿಯಾಗುವುದು ಒಂದು ವಿಪರ್ಯಾಸ.



ಗಾಂಧಿ ಉಪವಾಸ: ರಜನೀಶ್ ಆಕ್ರೋಶ

೧೯

ಇದು ಗಾಂಧಿಯ ಉಪವಾಸದ ಮುಂದುವರೆದ ಭಾಗ. ಉಪವಾಸ ಎನ್ನುವುದು ವ್ಯಕ್ತಿಯೊಬ್ಬನ ವೈಯುಕ್ತಿಕ ಸ್ವಾರ್ಥಸಾಧನೆಯ ಅಸ್ತ್ರವಲ್ಲ ಎನ್ನುವುದು ಗಾಂಧಿಯದೇ ಬಲವಾದ ವಾದ. ಆದರೆ ಅಂಬೇಡ್ಕರ್ ವಿರುದ್ಧ, ನೇತಾಜಿಯ ವಿರುದ್ಧ, ಹೀಗೆ ಅನೇಕರ ಅನೇಕ ಸಂದರ್ಭಗಳಲ್ಲಿ ಗಾಂಧಿ ಇದೇ ಉಪವಾಸದ ಅಸ್ತ್ರವನ್ನು ಬಳಸಿದ್ದಾನೆ. ಈ ಕುರಿತು ರಜನೀಶ್ ಹೇಳುತ್ತಾನೆ, ಈ ಗಾಂಧಿಗೆ ಉಪವಾಸದ ಅರ್ಥ ಗೊತ್ತಿರಲಿಲ್ಲ. ಇದು ಆತನ ಬಹಳ ದೊಡ್ಡ ನಾಟಕವಾಗಿತ್ತು. ಈ ರಜನೀಶನೋ ಬಿಡಿ, ಹಾಗೆ ನೋಡಿದರೆ ಗಾಂಧಿಯ ಮೇಲೆ ಆಪಾದನೆಗಳ ಮಹಾಪೂರವನ್ನೇ ಹರಿಸಿದ್ದಾನೆ. 'ಗೀತೆ'ಯನ್ನು ನೀವು ತಾಯಿ ಎಂದು ಒಪ್ಪಿಕೊಳ್ಳುವುದಾದರೆ 'ಖುರಾನ್'ನನ್ನು ನಿಮ್ಮ ತಂದೆಯೆಂದು ಒಪ್ಪಿಕೊಳ್ಳುತ್ತೀರಾ? ಎಂದು ಲೇವಡಿ ಮಾಡಿದ್ದಾನೆ. ನೀವು ಅಹಿಂಸಾವಾದಿಗಳು ಎಂದು ಹೇಳಿಕೊಳ್ಳುತ್ತೀರಿ ಆದರೆ ಮತ್ತೊಂದೆಡೆ ಹಿಂಸೆಯ ಪರಾಕಾಷ್ಠೆಯಾದ 'ಗೀತೆ'ಯನ್ನು ಅದು ಹೇಗೆ ನಿಮ್ಮ ತಾಯಿ ಎನ್ನುತ್ತೀರಿ? ಸತ್ಯಾಗ್ರಹ ಎನ್ನುವ ನಿಮ್ಮ ಅಸ್ತ್ರವನ್ನು ಅಂಬೇಡ್ಕರ್‌ರಂಥ ನಿರಾಯುಧರ ಮೇಲೆ ಯಾಕೆ ಬಳಸುತ್ತೀರಿ? ಹೀಗಾಗಿ ನಿಮ್ಮ ಉಪವಾಸ ಒಂದು ಬ್ಲಾಕ್‌ಮೇಲ್ ತಂತ್ರವಷ್ಟೆ.

ಗಾಂಧಿಯ ಉಪವಾಸವನ್ನು ರಜನೀಶ್ ನೋಡುವುದು ಹೀಗೆ. " This is absolutely illogical. Because you convience people by fasting. It does not mean that you are right. It is blackmail, it is threatening. You can die because your death is not an argument. ಈತನ ವಾದ ಇಲ್ಲಿಗೇ ನಿಲ್ಲುವುದಿಲ್ಲ. ಮುಂದುವರೆದು ಹೇಳುತ್ತಾನೆ, ಧರ್ಮವನ್ನು ರಾಜಕೀಯ ದುರಾಸೆಗಳಿಗೆ ಬಳಸಿದವರಲ್ಲಿ ಗಾಂಧೀಜಿ ಮೊದಲಿಗ ಎನ್ನುತ್ತಾರೆ ರಜನೀಶ್. "Gandhi was pretending to be religious, he was not a religious man pretending to be a Hindu Saint, because Hindus were in the majority, They were going to rule the country. That's why he was insistent that India should remain Undivided, because in a undivided India, Hindus would be in power; nobody could take the power from the hands of Hindus because everybody else was in a minority. Nobody look at politician that he was using even religion for ugly ends" ವಾಸ್ತವದ ಅರಿವಿಲ್ಲದೆ, ಬಲಾತ್ಕಾರದೊತ್ತಡದಲ್ಲಿ ಸತ್ಯಾಗ್ರಹ, ಅಹಿಂಸೆಗಳನ್ನು ಬಳಸಿದ ಗಾಂಧೀಜಿ ಯಾವ ಪುರುಷಾರ್ಥ ಸಾಧನೆಗಾಗಿ ಈ ರೀತಿ ತೊಡಗಿಸಿಕೊಂಡಿದ್ದಾರೆನ್ನುವುದು ರಜನೀಶ ಒಡ್ಡುವ ಬಹುದೊಡ್ಡ ಪ್ರಶ್ನೆ. ಅತಿಸುಂದರಿಯಾದ ಯುವತಿಯ ಮನೆಯ ಮುಂದೆ, ಅತಿ ಕುರುಪಿಯೂ, ಮುದಿಯನೂ ಆದ ವ್ಯಕ್ತಿಯೊಬ್ಬ "ನೀನಿಲ್ಲದೆ ನನ್ನ ಬದುಕು ಅಪೂರ್ಣ, ನೀನು ನನ್ನನ್ನು ಮದುವೆಯಾಗು, ಇಲ್ಲದಿದ್ದರೆ ನಾನು ಉಪವಾಸ ಸತ್ಯಾಗ್ರಹ ಮಾಡುತ್ತೇನೆ" ಎಂದು ಚಾಪೆ ಹಾಸಿ ಮಲಗಿಯೇ ಬಿಡುತ್ತಾನೆ. ಹಾಗಂಥ ಮದುವೆ ಮಾಡಿಕೊಳ್ಳಲಾದೀತೇ? ಇದು ಹಿಂಸೆಯ ಇನ್ನೊಂದು ರೂಪ ಎನ್ನದೆ ಮತ್ತೇನೆನ್ನಲಾದೀತು? ಇಂಥ ವೇಳೆಯಲ್ಲಿ ಸಮಸ್ಯೆಗೆ ಸಿಲುಕುವ ಸುಂದರಿಯ ತಂದೆಗೆ, ನನ್ನ ಬಳಿ ಒಂದು ಉಪಾಯ ಇದೆ. ನಿರಶನ ಹೂಡಿದ ಮುದಿ ಕುರೂಪಿಯಷ್ಟೇ ಅಸಹ್ಯಳಾದ ವೇಶ್ಯೆಯೊಬ್ಬಳ ಕೈಯಲ್ಲಿ ಚಾಪೆ ಕೊಟ್ಟು ನೀನಿಲ್ಲದೆ ನನ್ನ ಬಾಳೂ ಅಪೂರ್ಣ. ನೀನು ನನ್ನನ್ನು ಮದುವೆಯಾಗು ಇಲ್ಲದೆ ಹೋದರೆ ನಾನು ನಿರಶನ ಹೂಡುತ್ತೇನೆ ಎಂದು ಹೇಳಿಸಿಬಿಡಿ, ಮರುದಿನ ಆ ಕುರೂಪಿ ಮನುಷ್ಯ ತನ್ನ ಚಾಪೆಯೊಂದಿಗೆ ನಾಪತ್ತೆಯಾಗುತ್ತಾನೆ ಎನ್ನುತ್ತಾರೆ ರಜನೀಶ.

ಆದರೆ ಗಾಂಧಿ ಅಚಲ. ಸೆಪ್ಟಂಬರ್ 4ರ ಮುಂಜಾವು ಡಾ. ದೀನ್–ಷಾ–ಮೆಹ್ತಾ ಗಾಂಧಿಯ ದೇಹವನ್ನು ಗಮನಿಸಿದಂತೆ ಆತ ತುಂಬಾ ದುರ್ಬಲನಾಗಿದ್ದ. ಆಗಲೆ ಎರಡು ದಿನಗಳು ಉರುಳಿ ಹೋಗಿದ್ದವು. ನೀರೊಂದೆ ಆಹಾರವಾಗಿತ್ತು. ಹೃದಯದ ಬಡಿತ ತೀವ್ರಗೊಂಡಿತ್ತು. ಆದರೆ ಗಾಂಧಿ ಹೇಳುತ್ತಿದ್ದ ತಾನು ಚೆನ್ನಾಗಿದ್ದೇನೆ, ಸ್ಥಿರವಾಗಿದ್ದೇನೆ. ನೀವ್ಯಾರೂ ನನ್ನನ್ನು ನೋಡಲು ಧಾವಿಸಿ ಬರಬೇಕಾಗಿಲ್ಲ. ಎಲ್ಲಿರುವಿರೊ ಅಲ್ಲೆಯೇ ಉಳಿದುಕೊಂಡು ನಿಮ್ಮ ನಿಮ್ಮ ಕರ್ತವ್ಯಗಳನ್ನು ಮಾಡಿ. ಕೇವಲ ಬದುಕುಳಿಯುವುದಕ್ಕೋಸ್ಕರ ನಾನೂ ಉಪವಾಸವನ್ನು ಬಿಡುವುದಿಲ್ಲ. ಅದೊಂದು ರೀತಿಯಿಂದ ದೇವರನ್ನೇ ಧಿಕ್ಕರಿಸಿದಂತೆ, ಹಠಮಾರಿ ಮುದುಕ ಪ್ರಕ್ಷುಬ್ಧಗೊಂಡ ಕಲ್ಕತ್ತೆಯಲ್ಲಿ, ನೀವು ಶಾಂತಿಗಾಗಿ ಹೋರಾಡುವುದಾದರೆ ಮಾತ್ರ ನಾನು ಉಪವಾಸ ಕೈಬಿಡುತ್ತೇನೆ ಇಲ್ಲದಿದ್ದರೆ ನನ್ನ ಉಪವಾಸ ಮುಂದುವರೆಯುತ್ತದೆ ಎಂದು ಹೇಳಿದ.

ಕಲ್ಕತ್ತೆಯ ಬಗೆಗೆ, ಬಂಗಾಳದ ಬಗೆಗೆ, ಗಾಂಧಿಗೆ ವಿಶೇಷವಾದ ಮೋಹವಿತ್ತು. ಆತನ ಹಿರಿಯ ಸೊಸೆ ಅಭಾ ಬಂಗಾಳದವಳು. ಆತನ ಕಾರ್ಯದರ್ಶಿ ನಿರ್ಮಲಕುಮಾರ್ ಬೋಸ್ ಬಂಗಾಳದವನು. ಕಬೀರ, ಶ್ರೀ ರಾಮಕೃಷ್ಣ ಪರಮಹಂಸ, ದೇಶ ಬಂಧು ಚಿತ್ತರಂಜನ ದಾಸ್,

ಗುರುದೇವ ಟ್ಯಾಗೋರ್ ಹೀಗೆ ಗಾಂಧಿ ಗೌರವಿಸುತ್ತಿದ್ದ, ಆರಾಧಿಸುತ್ತಿದ್ದ ಸಾಲು ಸಾಲು ಪ್ರತಿಭಾನ್ವಿತ ಜನಗಳು ಬಂಗಾಳದ ಮೂಲದವರು. ಹೀಗಾಗಿ ಆತನ ಉಪವಾಸದ ಮಹಾನ್ ಪ್ರಯೋಗಕ್ಕೂ ಆತ ಬಂಗಾಳವನ್ನೇ ಆರಿಸಿಕೊಂಡಿರಬೇಕು.

ಹಠಮಾರಿ ಗಾಂಧಿಯ ಹೆಜ್ಜೆಗಳು ಒಂದೆಡೆಯಾದರೆ ಪಶ್ಚಿಮ ಬಂಗಾಳದ ಗವರ್ನರ್ ಮಿಸ್ಟರ್ ಸಿ. ರಾಜಗೋಪಾಲಾಚಾರಿಯ ಗಮನ ಮತ್ತೊಂದೆಡೆ. ಹೀಗೆ ಗಾಂಧಿ ಉಪವಾಸಗೈದು ಕಲ್ಕತ್ತೆಯಲ್ಲಿ ಸತ್ತು ಹೋದರೆ ಅದನ್ನು ನೋಡುತ್ತ ನಿಲ್ಲುವ ಮನಃಸ್ಥಿತಿ ರಾಜಗೋಪಾಲಾಚಾರಿಗೆ ಇರಲಿಲ್ಲ. ಹೀಗಾಗಿ ಅಧಿಕೃತವಾಗಿ ರಕ್ತದೋಕುಳಿಯಲ್ಲಿ ತೊಡಗಿದ್ದ ಹಿಂದೂ, ಮುಸ್ಲಿಂ ಮತ್ತು ಸಿಖ್‌ರನ್ನು ಉದ್ದೇಶಿಸಿ ರಾಜಗೋಪಾಲಾಚಾರಿ ಪತ್ರವೊಂದನ್ನು ಬರೆದ.

'ಬಂಧುಗಳೇ,

ನಿಮ್ಮ ವೈರವನ್ನು ಶಾಂತಗೊಳಿಸಿಕೊಳ್ಳಿರಿ, ಮನಸ್ಸುಗಳನ್ನು ಮುಕ್ತವಾಗಿಸಿಕೊಳ್ಳಿರಿ. ಯಾರು, ಯಾವ ಜನಾಂಗ, ಯಾವ ಮತ ಎನ್ನುವ ಲೆಕ್ಕಾಚಾರಗಳನ್ನು ಬಿಟ್ಟು ಆಸ್ತಿ, ವ್ಯಕ್ತಿ, ಗೌರವಗಳನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಹೋರಾಡಿರಿ, ನೀವು ನಿಮ್ಮ ನಿಮ್ಮ ಭಯಗಳಿಗಾಗಿ, ಸ್ವಾರ್ಥ ಲಾಲಸೆಗಾಗಿ, ದುರಾಲೋಚನೆಗಳಿಗಾಗಿ ಕಡಿದಾಡುವುದಾದರೆ ಅದು ಗಾಂಧಿಯ ಹೃದಯಘಾತಕ್ಕೆ ಕಾರಣವಾಗುತ್ತದೆ. ಯಾವ ಸಂಸ್ಕೃತಿ ಮತ್ತು ಔದಾರ್ಯಕ್ಕಾಗಿ ಬಂಗಾಲ ಪ್ರಸಿದ್ಧವಾಗಿತ್ತೋ ಅದನ್ನು ಮತ್ತೆ ಮರುಸ್ಥಾಪಿಸಬೇಕಾದದ್ದು ನಿಮ್ಮ ಕರ್ತವ್ಯವಾಗಿದೆ. ಹಿಂದೂ ಮತ್ತು ಮುಸ್ಲಿಂ ನೀವು ಸಹೋದರರು. ನಿಮ್ಮ ಮಧ್ಯ ದ್ವೇಷವನ್ನು ಸುರಿಯುತ್ತಿರುವವನು ನಿಮ್ಮ ವೈರಿ. ದಯವಿಟ್ಟು ಗಾಂಧೀಜಿಯವರ ಮಾತುಗಳನ್ನು ಕೇಳಿ. ನಮ್ಮ ಪಾಲಿಗೆ ಆಗಸ್ಟ್ 15ರಂದು ಸ್ವರ್ಗದ ಬಾಗಿಲುಗಳು ತೆರೆದಿದ್ದರೆ ಅದು ಗಾಂಧಿಯೆಂಬ ಈ ಪುಣ್ಯಾತ್ಮನ ಹೋರಾಟದ ಫಲದಿಂದ ಅಷ್ಟೇ."

ರಾಜಗೋಪಾಲಚಾರಿ ಹೀಗೊಂದು ಮನವಿ ಮಾಡಿಕೊಳ್ಳದೇ ಹೋಗಿದ್ದರೆ ಅತ್ತ ಕಲ್ಕತ್ತೆಯ ಬೀದಿ ಬೀದಿಗಳಲ್ಲಿ ಅಮಾಯಕರ ಹತ್ಯೆಯೇ ನಿಲ್ಲುತ್ತಿರಲಿಲ್ಲ. ಇತ್ತ ಗಾಂಧಿಯನ್ನು ಸಾವಿನಿಂದ ಉಳಿಸಿಕೊಳ್ಳುವುದು ಸಾಧ್ಯವಿರಲಿಲ್ಲ.

ಏನೋ ಒಂದಾಯಿತು, ನಿರಂತರ 75 ಘಂಟೆಗಳ ಉಪವಾಸದ ನಂತರ ದಂಗೆ ಗಲಭೆಗಳಿಗೆ ಕಾರಣರಾದ ಮೂರು ಜನಾಂಗಗಳ ಮುಖಂಡರುಗಳ ಲಿಖಿತ ಭರವಸೆಯ ನಂತರ, ಕಾಂಗ್ರೆಸ್ ಅಧ್ಯಕ್ಷ ಆಚಾರ್ಯ ಕೃಪಲಾನಿ, ಗವರ್ನರ್ ರಾಜಗೋಪಾಲಚಾರಿ, ಮುಖಂಡ ಪಿ.ಸಿಘೋಶ್, ಶಾಂತಿ ಪಾಲನೆ ಪಡೆಯ ಶಹಿದ್ ಸುಹರ್‌ವರ್ದಿಗಳೆಲ್ಲರ ನಿರಂತರ ಗೋಗರೆಯುವಿಕೆಯ ನಂತರ ಗಾಂಧಿ ಉಪವಾಸ ನಿಲ್ಲಿಸಿದ.

ಇಲ್ಲೊಂದು ಮಾತು ಕೇಳಿ, "My fast isolates the forces of evil and makes them die" ಎಂದು ತನ್ನ ಉಪವಾಸದ ಬಗ್ಗೆ ಗಾಂಧಿ ಹೇಳಿಕೊಂಡಿದ್ದಾನೆ. ಯಾವುದಕ್ಕೆ ಯಾವ ಸಂಬಂಧ ಎಂದು ನಿಮಗೆ ನಗೆ ಬರಬಹುದು. ಒಂದು ಗ್ಲಾಸು ನಿಂಬೆಹಣ್ಣಿನ ರಸ ಹೀರುತ್ತ ಉಪವಾಸ ಮುಗಿಸೆದ್ದ ಗಾಂಧಿ ಬರೆಯುತ್ತಾನೆ–

"ಪಂಜಾಬಿಗಾಗಿ ಒಂದಿಷ್ಟು ಕೆಲಸ ಮಾಡುವುದಕ್ಕೋಸ್ಕರ ಕಲ್ಕತ್ತೆಯ ಉಪವಾಸವನ್ನು ನಿಲ್ಲಿಸುತ್ತಿದ್ದೇನೆ. ಅದೂ ನೀವು ಭರವಸೆ ನೀಡಿದ್ದರಿಂದಾಗಿ. ನಾನು ಬದುಕಲು ಆಶಿಸುತ್ತೇನೆ. ಅದಕ್ಕೂ ಮಿಗಿಲಾಗಿ ಜನರ ಸೇವೆ ಮಾಡಲು ಹಂಬಲಿಸುತ್ತೇನೆ. ಆದರೆ ಬದುಕುವುದಕ್ಕೋಸ್ಕರ

ನಾನು ಮೋಸ ಹೋಗಲು ಇಷ್ಟಪಡುವುದಿಲ್ಲ. ಇಲ್ಲಿಯ ಹಿಂದುಗಳು ಮುಸ್ಲಿಂರು ನಾನು ಮತ್ತೊಂದು ಉಪವಾಸ ಕೈಗೊಳ್ಳುವಂತೆ ಮಾಡುವುದಿಲ್ಲ ಎಂದು ಬಲವಾಗಿ ನಂಬಿದ್ದೇನೆ."

ಹೀಗೆ ಗಾಂಧಿ ಅಂದುಕೊಳ್ಳುವಾಗ ಕಲ್ಕತ್ತೆಯ ಬೇಲಿಘಾಟದ ಹೈದರ್ ಮಂಜಿಲ್‌ನ ತುಂಬಾ ದಂಡು ದಂಡಾಗಿ ದಂಡನಾಯಕರು, ರಾಜಕಾರಣಿಗಳು, ಏನೋ ಸಾಧಿಸಿದ ಧನ್ಯತೆ, ನಗೆ ತುಂಬಿ ತುಳುಕುತಿತ್ತು. ಸೆಪ್ಟಂಬರ್ 5ರ ಈ ದಿನ ಕಲ್ಕತ್ತೆಯ ಬೋವಾ ಬಜಾರ್, ಬುರ್ರಾ ಬಜಾರ್, ಹರೆಸ್ಟ್ರೀಟ್, ಮುಚಿಪಾರ ಗಲ್ಲಿಗಳಲ್ಲಿ ಜೀವನ ಯಥಾವತ್ತಾಗಿತ್ತು. ಮತ್ತೆ ಗಲ್ಲಿಗಳಲ್ಲಿ ಪೇಪರ್ ಹಾಕುವ ಪೋರ, ಹಾಲು ಮಾರುವ ಗೌಳಿ, ಮಿಠಾಯಿ ಹಂಚುವ ಮನುಷ್ಯ ಬದುಕನ್ನು ಆರಂಭಿಸಿದರು. ಹೂ ಮಾರುವ ಹುಡುಗಿ, ಮೀನು ಮಾರುವ ಮಹಿಳೆ ತಮ್ಮ ಗುಡಿಸಲುಗಳಲ್ಲಿ ದೀಪ ಹಚ್ಚಿಕೊಂಡರು.

ಆ ದಿನ ಸೇರಿದ್ದ ನಾಯಕರೆಲ್ಲರಿಗೂ ಸುಹರ್‌ವರ್ದಿ ಹೇಳಿದ್ದ. ಉಪವಾಸ ಬಿಡುವ ಮುಂಚೆ ಗಾಂಧೀಜಿ ಹಾಕಿದ ನಿಯಮಗಳಿಗೆ ನಾವೆಲ್ಲರೂ ಭರವಸೆ ನೀಡಿದ್ದೇವೆ. ಅವುಗಳಿಗೆ ನಾವು ನೈತಿಕವಾಗಿ ಜವಾಬ್ದಾರರಾಗಿದ್ದೇವೆ. ಇದನ್ನು ಮೀರಿಯೂ ಬೆಂಕಿ ಹೊತ್ತಿಕೊಂಡರೆ ನೈತಿಕ ಜವಾಬ್ದಾರಿಯನ್ನು ಹೊತ್ತು ನಾವೆಲ್ಲರೂ ಅದಕ್ಕಾಗಿ ಪ್ರಾಣಕೊಡಲೂ ಸಿದ್ಧರಿರಬೇಕು. ಈತ ಮಾತು ಮುಗಿಸುತ್ತಿದ್ದಂತೆ ಗಾಂಧಿ ಹೇಳಿದ ಶಾಂತಿ ಮತ್ತು ಸಾಮರಸ್ಯದಲ್ಲಿ ಕಲ್ಕತ್ತೆ ನೌಖಾಲಿಗೆ ದಾರಿಯನ್ನು ತೋರಿಸಬೇಕು. ಪಂಜಾಬಿಗೆ ದಾರಿಯನ್ನು ತೋರಿಸಬೇಕು. ಭಾರತಕ್ಕೆ ದಾರಿಯನ್ನು ತೋರಿಸಬೇಕು. ನಾವು ದೇವರ ಮಕ್ಕಳಂತೆ ಬಾಳಬೇಕು. ನಾವು ದೇವರ ಮಾರ್ಗಗಳಷ್ಟೆ, ಆತನ ಸಾಧನಗಳಷ್ಟೆ ಹೀಗಾಗಿ ಆತನ ಮೇಲಿನ ಪೂರ್ಣ ವಿಶ್ವಾಸದೊಂದಿಗೆ ನನ್ನ ಉಪವಾಸವನ್ನು ನಾನು ನಿಲ್ಲಿಸುತ್ತಿದ್ದೇನೆ. ಜನರು ದೊಂಬಿಗಳಲ್ಲಿ ಬಳಸಿದ ಆಯುಧಗಳೊಂದಿಗೆ ಗಾಂಧಿಯೆಡೆಗೆ ಬಂದರು. ಕತ್ತಿ, ಗುರಾಣಿ, ಮಚ್ಚು, ಚೂರಿ ಅಷ್ಟೇ ಅಲ್ಲ ಪಿಸ್ತೂಲ್ ಮತ್ತು ಸ್ಟೇನ್‌ಗನ್ನುಗಳನ್ನು ಗಾಂಧಿಯ ಪಾದದ ಮುಂದಿಟ್ಟು ತಣ್ಣಗಾದರು. ಗಾಂಧಿ ಬದುಕಿನಲ್ಲಿ ಮೊದಲಬಾರಿಗೆ ಸ್ಟೇನ್‌ಗನ್ನನ್ನು ನೋಡಿದ.

ರಾಜಗೋಪಾಲಾಚಾರಿ ಹೇಳಿದ, ಗಾಂಧಿ ಬದುಕಿನಲ್ಲಿ ಬಹಳಷ್ಟು ಸಾಧಿಸಿದ್ದಾರೆ. ಭಾರತದ ಸ್ವಾತಂತ್ರ್ಯವೂ ಅದರೊಳಗೊಂದು. ಆದರೆ ಈ ಕಾರಣಕ್ಕಾಗಿ ಗಾಂಧಿ ದೊಡ್ಡವರಾಗಬೇಕಿಲ್ಲ. ಅವರು ಇತಿಹಾಸದಲ್ಲಿ ಚಿರಸ್ಥಾಯಿಯಾಗುವುದು ಕಲ್ಕತ್ತೆಯೊಳಗಿನ ಈ ಶಾಂತಿ ಸಾಧನೆಗಾಗಿ.

ನೆನಪಿಸಿಕೊಳ್ಳಬೇಕು, ಯಾರೋ ಒಬ್ಬರು ಪ್ರಸ್ತುತ ರಾಜಕಾರಣದಲ್ಲಿ ಗಾಂಧಿಯ ಸ್ಥಾನವೇನು? ಎನ್ನುವ ಪ್ರಶ್ನೆಯನ್ನು ಹೆಸರಾಂತ ನಾಟಕಕಾರ ಜಾರ್ಜ್ ಬರ್ನಾಡ್ ಷಾಗೆ ಕೇಳಿದ್ದರು. ಈ ಪ್ರಶ್ನೆಗೆ ಷಾ ಕೊಟ್ಟ ಉತ್ತರ ತುಂಬಾ ಚೆನ್ನಾಗಿದೆ "I do not know. Ask somebody a century hence. I recollect Gandhi as a likable fellow from India." ಹೀಗೆ ಸೆಪ್ಟಂಬರ್ 7 ರಂದು ಗಾಂಧಿ ದೆಹಲಿಗೆ ಹೊರಟ.



ಸ್ವಾತಂತ್ರ್ಯದ ಹೊಸ್ತಿಲಲ್ಲಿ ಕಣ್ಣೀರಿಟ್ಟ ಶೂರರು

೨೦

ಗಾಂಧಿ ಕಲ್ಕತ್ತೆಯನ್ನು ಬಿಡುವ ಮುಂಚೆ ಆತನಿಗೆ ಗೌರವ ಸೂಚಿಸಲು ಓಡಿ ಬಂದ ಕಲ್ಕತ್ತೆಯ ಮೆಯರ್ ಮಿ.ಗಾಗ್ ಗೋವಿಯಾ ಸನ್ಮಾನ ಪತ್ರವೊಂದನ್ನು ಸಲ್ಲಿಸಿದ. ಆ ಕೆಲವು ಸಾಲುಗಳನ್ನು ಈ ತೆರನಾಗಿ ಕ್ರೋಡಿ ಕರಿಸಬಹುದೇನೋ. "ನಮಗೆ ಗೊತ್ತು, ನೀವು ಒಬ್ಬ ಮಹಾನ್ ದೇಶಭಕ್ತ, ಬದುಕೆಲ್ಲವನ್ನು ನೊಂದವರಿಗಾಗಿ, ತುಳಿತಕ್ಕೊಳಗಾದವರಿಗಾಗಿ ಸವೆಸಿದ್ದೀರಿ. ಒಬ್ಬ ಶ್ರೇಷ್ಠ ರಾಜಕಾರಣಿಯಾಗಿ ಅಧಮವಾದುದರೊಂದಿಗೆ ನೀವೆಂದೂ ರಾಜಿ ಮಾಡಿಕೊಂಡಿಲ್ಲ. ನೀವು ಇಷ್ಟೆಲ್ಲಾ ಇದ್ದಾಗ್ಯೂ ಮನುಕುಲದ ಸಾಮಾನ್ಯ ಸೇವಕನಂತೆ ನಮ್ಮ ಮಧ್ಯ ಇದ್ದೀರಿ, ನಮ್ಮ ತಲೆಮಾರಿನ ಸಾಧನೆಯೇನಾದರೂ ಇದೆ ಎನ್ನುವುದಾರೆ ಅದು ನಿಮ್ಮೊಂದಿಗೆ ಬದುಕಿದ ಈ ಅಮೂಲ್ಯ ಕ್ಷಣಗಳು. ತಲೆಮಾರುಗಳು, ಶತಮಾನಗಳು, ನಿಮ್ಮನ್ನು ಸ್ಮರಿಸಿಕೊಳ್ಳುತ್ತವೆ. ನಿಮ್ಮ ಕುರಿತು ಹಾಡುತ್ತವೆ. ಭರತಖಂಡದಲ್ಲಿ ಅಷ್ಟೇ ಅಲ್ಲ, ಇಡೀ ಪ್ರಪಂಚದಲ್ಲಿ.'

ಗಾಂಧಿ ಮುಗುಳ್ನಗುತ್ತಾ ಅದನ್ನು ಸ್ವೀಕರಿಸಿದನಷ್ಟೇ. ಈಗ ಕಲ್ಕತ್ತೆಯ ಯಾವ ನಿಲ್ದಾಣದಿಂದ ದೆಹಲಿಗೆ ಹೊರಡಬೇಕೆನ್ನುವುದೇ ಗಾಂಧಿಯ ಮುಂದಿರುವ ಪ್ರಶ್ನೆ. ಆತ ಹೌರಾ ನಿಲ್ದಾಣದಿಂದಲೇ ಹೊರಡಬಹುದು ಎಂದು ಆತನನ್ನು ಕೊನೆಯಬಾರಿ ನೋಡಿ ಕೃತಾರ್ಥರಾಗಬೇಕೆಂದು ಆಗಲೇ ಅಪಾರ ಸಂಖ್ಯೆಯಲ್ಲಿ ಜನಗಳು ಅಲ್ಲಿ ಜಮಾಯಿಸಿದ್ದರು. ಒಂದಂತು ನಿಶ್ಚಿತವಾಯಿತು, ಗಾಂಧಿ ರೈಲು ಭೋಗಿಯನ್ನೇನೋ ಹತ್ತಬಹುದು ಆದರೆ ರೈಲು ಹೊರಡಲು ಜನ ಬಿಡಬೇಕಲ್ಲ? ಹೀಗಾಗಿ ಸೆಪ್ಟಂಬರ್ 8 ರ ನಸುಕಿನಲ್ಲಿ ಗಾಂಧಿ ಪಶ್ಚಿಮ ಬಂಗಾಲದ ಬೇಲೂರು ರೈಲು ನಿಲ್ದಾಣದಿಂದ ತನ್ನ ಪ್ರವಾಸವನ್ನು ಪ್ರಾರಂಭಿಸಿದ. ದೆಹಲಿ ಇಲ್ಲಿಂದ 24 ಘಂಟೆಗಳ ದಾರಿ. ಅಷ್ಟಾಗಿಯೂ ಅದು ಹೇಗೊ ಜನತೆಗೆ ಗೊತ್ತಾಗಿ ಮುಂದಿನ ಪ್ರಮುಖ ರೈಲು ನಿಲ್ದಾಣಗಳಲ್ಲಿ ಜನ ಜಮಾಯಿಸಿಯೇ ಇದ್ದರು. ಗಾಂಧಿ ಕಿಡಕಿಯಿಂದ ಕೈ ಮಾಡುತ್ತಿದ್ದನಷ್ಟೆ.

ಎಷ್ಟೊಂದು ದಿನಗಳ ನಂತರ ಆತನಿಗೆ ಒಂದಿಷ್ಟು ಸಮಯ ಸಿಕ್ಕಿತ್ತು. ಈಗ ತಣ್ಣಗೆ ಕುಳಿತು ದೇಶವನ್ನು ಕುರಿತು, ಅಧಿಕಾರದ ಚುಕ್ಕಾಣಿ ಹಿಡಿದ ತನ್ನ ಅನುಯಾಯಿಗಳನ್ನು ಕುರಿತು ಚಿಂತಿಸಲಾರಂಭಿಸಿದ. ತನ್ನ ಅದೆಷ್ಟೋ ಕಾಂಗ್ರೆಸ್ ಮುಖಂಡರು ರಾಜಕಾರಣಿಗಳಾಗುತ್ತಿದ್ದಾರೆ. ಸರ್ಕಾರಿ ಕಛೇರಿಗಳನ್ನು ಸ್ವಹಿತಾಸಕ್ತಿಗಳಿಗೆ ಬಳಸಿಕೊಳ್ಳುತ್ತಿದ್ದಾರೆ ಎಂದು ಆತ ತಿಳಿದುಕೊಂಡಿದ್ದ. ಈಗಾಗಲೇ ಜನಸಾಮಾನ್ಯರ ಅದೆಷ್ಟೋ ಪತ್ರಗಳು ಈ ನಾಯಕರುಗಳ ಮುಖವಾಡಗಳನ್ನು ಬಿಚ್ಚಿಡುತ್ತಾ ಗಾಂಧಿಯ ಕೈ ಸೇರಿದ್ದವು. ಹೀಗಾಗಿ ಈ ರೈಲಿನೊಳಗಿನ ಬಿಡುವಿನ ಅವಧಿಯನ್ನು ಅವರನ್ನು ಸರಿಪಡಿಸುವುದಕ್ಕಾಗಿ ಎಂದು ಗಾಂಧಿ ನಿರ್ಧರಿಸಿಕೊಂಡಿದ್ದ. 'ಹರಿಜನ'ಕ್ಕಾಗಿ ಈ ನಾಯಕರುಗಳನ್ನು ಉದ್ದೇಶಿಸಿ Task Before Ministers ಎನ್ನುವ ಅಂಕಣ ಬರೆದ. ಅದರ ಸಾರರೂಪ ಹೀಗಿದೆ, "ನನ್ನ ಕೈಯಲ್ಲೀಗ ಅಪಾರ ಸಂಖ್ಯೆಯಲ್ಲಿ ಪತ್ರಗಳಿವೆ. ಬಹುಪಾಲು ಈ ಪತ್ರಗಳು ಕಾಂಗ್ರೆಸ್ ನಾಯಕರುಗಳ ವೈಭೊವೋಪೇತ ಜೀವನವನ್ನು ಟೀಕಿಸಿ ಬರೆದವುಗಳೇ ಆಗಿವೆ. ಜನತೆ ನಿಮ್ಮ ಸ್ವಜನಪಾತ, ವಿಲಾಸಿ ಜೀವನದ ಶೈಲಿಯಿಂದ ಬೇಸತ್ತು ಹೋಗಿದ್ದಾರೆ. ನನಗೆ ಗೊತ್ತು, ಇಲ್ಲಿಯ ಬಹುಪಾಲು ಆಪಾದನೆಗಳು ಸಾಮಾನ್ಯರ ಅಜ್ಞಾನದ ಪ್ರತಿಫಲಗಳಾಗಿವೆ. ಹೀಗಾಗಿ ನನ್ನ ಈ ಬರಹವನ್ನು ಯಾರೂ ತೀರ ವೈಯಕ್ತಿಕ ನೆಲೆಯಲ್ಲಿ ತೆಗೆದುಕೊಳ್ಳುವ ಅವಶ್ಯಕತೆಯಿಲ್ಲ. ಇದೊಂದು ವಿಮರ್ಶೆಯಾಗಿದ್ದರೂ ಕೂಡ ಅದನ್ನು ಸರಿಯಾದ ಅರ್ಥದಲ್ಲಿ ಗ್ರಹಿಸಿದ್ದರೆ ಸಾಕು.

ಜನರು ನಮ್ಮನ್ನು ನಾಯಕರನ್ನಾಗಿ ಆಯ್ದುಕೊಂಡಿರುವುದರಿಂದ ಅವರ ನಿರೀಕ್ಷೆಗಳು ಸ್ವಾಭಾವಿಕವಾಗಿರುತ್ತವೆ. ಸರಳತೆ, ಧೈರ್ಯ, ಪ್ರಾಮಾಣಿಕತೆ ನಿರಂತರ ಪರಿಶ್ರಮ ಇವುಗಳನ್ನು ಅವರು ನಮ್ಮಿಂದ ನಿರೀಕ್ಷಿಸುತ್ತಾರೆ. ಯಾವುದೇ ಕಾರಣಕ್ಕೂ ನಾವು ಬ್ರಿಟಿಷ್ ಆಳ್ವಿಕೆಯ ಪ್ರತಿನಿಧಿಗಳಾಗಬೇಕಿಲ್ಲ. ಇದು ನಮ್ಮೊಳಗೇ ಒಂದು ಬದಲಾವಣೆಯನ್ನು ತಂದುಕೊಳ್ಳುವ ಅದ್ಭುತ ಅವಧಿ, ನಮ್ಮ ಜನಗಳ ಸರ್ಕಾರವೇ ಇದೆ. ಭಾರತದ ಎಲ್ಲ ಪ್ರಾಂತಗಳೂ ಈಗ ಭಾರತೀಯರ ಕೈಯಲ್ಲಿಯೇ ಇವೆ. ಆದಾಗ್ಯೂ ಹೊಟ್ಟೆತುಂಬಾ ಅನ್ನ, ಮೈತುಂಬ ಬಟ್ಟೆ, ನೆಮ್ಮದಿಯ ನಾಳೆ ಸಾಧ್ಯವಾಗುತ್ತಿಲ್ಲ ಎನ್ನುವುದು ಅತ್ಯಂತ ಖೇದದ ಸಂಗತಿ.

ಕುಡಿತ ನಮ್ಮ ಜನರ ಮನೋಸ್ವಾಸ್ಥ್ಯವನ್ನು ಮತ್ತು ಸಾಮಾಜಿಕ ಸ್ವಾಸ್ಥ್ಯವನ್ನು ಹಾಳು ಮಾಡಿದೆ. ಇದು ಒಂದು ದಿನ ಅನಿಯಂತ್ರಣಕ್ಕೆ ಕಾರಣವಾಗುತ್ತದೆ. ವ್ಯಸನಗಳ ವಿಷಯದಲ್ಲಿ ಬಿಹಾರದ ಬಗೆಗಂತೂ ನನಗೆ ತುಂಬಾ ಚಿಂತೆಯಾಗಿದೆ.

1947, ಸೆಪ್ಟಂಬರ್ 9 ಗಾಂಧಿ ದೆಹಲಿಗೆ ಬಂದು ತಲುಪಿದ. ಅಂದು ಮಂಗಳವಾರ, ಇದು 10 ವಾರಗಳ ಕಾಲ ಕಲ್ಕತ್ತೆಯ ದೀರ್ಘ ವಾಸದ ನಂತರ ಗಾಂಧಿಯ ಭೇಟಿ. ಎಷ್ಟೊಂದು ಗೌರವ, ಆದರಕ್ಕೊಳಗಾಗಿದ್ದ ಗಾಂಧಿಗೆ ದೆಹಲಿಯಲ್ಲಿ ಸ್ವಾಗತಿಸಲು ಯಾರಲ್ಲೂ ಉತ್ಸುಕತೆ, ಚೈತನ್ಯ ಸಂಭ್ರಮವಿರಲಿಲ್ಲ. ಕೇವಲ 10 ವಾರಗಳಷ್ಟೇ. ಕಲ್ಕತ್ತೆಗೆ ಹೋಗಿದ್ದ ಗಾಂಧಿಗೆ ದೆಹಲಿಯ ವಾತಾವರಣ ವಿಚಿತ್ರವಾಗಿ ಕಂಡಿತು. ಆಕಾಶದ ತುಂಬ ಕಪ್ಪು ಮೋಡಗಳು, ಅಲ್ಲಷ್ಟು ಇಲ್ಲಷ್ಟು ಮಳೆ, ಇದರೊಂದಿಗೆ ಸಮಸ್ಯೆಗಳು.

ಗಾಂಧಿಗೆ ದೆಹಲಿಯಲ್ಲಿಯೂ ಕೆಟ್ಟ ವಾರ್ತೆಯೇ ಕಾಯ್ದಿತ್ತು. ಆತನ ಅತ್ಯಂತ ದೊಡ್ಡ ಭರವಸೆ, ಭಾರತದ ಉಕ್ಕಿನ ಮನುಷ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ಸರ್ದಾರ್ ವಲ್ಲಭಬಾಯ್ ಪಟೇಲ್ ಗಾಂಧಿಯ ಕೈಹಿಡಿದು ಬಿಕ್ಕಿ ಅಳಲಾರಂಭಿಸಿದ. ಅವು ಪಟೇಲರ ಕಣ್ಣೀರುಗಳಾಗಿರಲಿಲ್ಲ. ಸ್ವತಂತ್ರ ಭಾರತದ ಹೋಂ ಮಿನಿಸ್ಟರ್ ಒಬ್ಬನ ಅಸಹಾಯಕ ಕಣ್ಣೀರುಗಳಾಗಿದ್ದವು. ಗಾಂಧಿ ಕಳವಳಕ್ಕೊಳಗಾದ, ದೇಶ ಸ್ವತಂತ್ರವಾದರೆ ಸಾಕು, ಬ್ರಿಟಿಷರ ಹಂಗು ನಮಗಿನ್ಯಾಕೆ ಬೇಕು? ಎಂದು ಬೀಗುತ್ತಿದ್ದ ತನ್ನ ಶೂರರು ಸ್ವಾತಂತ್ರದ ಹೊಸ್ತಿಲಲ್ಲಿ ಕಣ್ಣೀರಿಡುತ್ತಿರುವುದು ಗಾಂಧಿಗೆ ಅಚ್ಚರಿಯನ್ನುಂಟು ಮಾಡಿತು. ವಿಷಯವಿಷ್ಟೆ, ದೆಹಲಿಯೂ ನಿಧಾನವಾಗಿ ಆದರೆ ವಿಕೃತವಾಗಿ ಕೋಮು ಗಲಭೆಯ ಬೆಂಕಿಗೆ ಬಿದ್ದಿತ್ತು. ಗಾಂಧಿಯ ಕಲ್ಕತ್ತೆಯಿಂದ ದೆಹಲಿಯ ಪ್ರವಾಸ ಬಾಣಲೆಯಿಂದ ಬೆಂಕಿಯ ಮಾತಾಗಿರಲಿಲ್ಲ, ಬೆಂಕಿಯಿಂದ ಬೆಂಕಿಯೆಡೆಗಿನ ಅನಾಹುತದ ದಾರಿಯಾಗಿತ್ತಷ್ಟೇ.

ದೇಶ ವಿಭಜನೆ ಎನ್ನುವ ವಿಚಿತ್ರ ಸಂಕಷ್ಟವನ್ನು ತಾವಾಗಿಯೇ ತಂದುಕೊಂಡಿದ್ದ ಜಿನ್ನಾ, ಪಟೇಲ್ ಮತ್ತು ನೆಹರೂ ಎಂಬ ರಾಜಕಾರಣಿಗಳಿಗೆ ಅದರ ಫಲಶೃತಿಯಾಗಿ ಅಪಾರ ಸಂಖ್ಯೆಯಲ್ಲಿ ಬರುತ್ತಿದ್ದ ನಿರಾಶ್ರಿತರನ್ನು ಸಂಭಾಳಿಸುವುದೇ ಅತೀ ದೊಡ್ಡ ತಲೆನೋವಾಗಿತ್ತು. ಸೆಪ್ಟಂಬರ್ 4 ರಿಂದ ದೆಹಲಿಯಲ್ಲಿ ಪ್ರಾರಂಭವಾದ ದಂಗೆಗಳು ಸೆಪ್ಟಂಬರ್ 9 ರೊಳಗಾಗಿ ಉಗ್ರರೂಪವನ್ನು ತಾಳಿದ್ದವು.

ಗಾಂಧಿಯನ್ನು ಬರಮಾಡಿಕೊಳ್ಳಲು ದೆಹಲಿಯ ರೈಲು ನಿಲ್ದಾಣಕ್ಕೆ ಬಂದ ಪಟೇಲ್ ಅಲ್ಲಿಂದ ಗಾಂಧಿಯನ್ನು ನೇರವಾಗಿ ದೆಹಲಿಯ ಭಂಗಿಕಾಲನಿಗೆ ಕರೆದುಕೊಂಡು ಒಯ್ಯಲಿಲ್ಲ. ಗಾಂಧಿ ಸಿಡಿಮಿಡಿಗೊಂಡ, ಆದರೆ ಅಗಣಿತ ಸಂಖ್ಯೆಯ ನಿರಾಶ್ರಿತರಿಂದ ತುಂಬಿಹೋಗಿದ್ದ ದೆಹಲಿಯ ಭಂಗಿ ಕಾಲೋನಿಯಲ್ಲಿ ಈಗ ಗಾಂಧಿಯ ಯಾವ ಶಿಸ್ತು ಇರಲಿಲ್ಲ. ಅದೊಂದು ನರಕಸದೃಶ್ಯ ನೆಲವಾಗಿತ್ತಷ್ಟೆ. ಗಾಂಧಿ ವಾಸ್ತವ್ಯ ಹೂಡಲು ಅಲ್ಲಿ ಸ್ಥಳವೂ ಇರಲಿಲ್ಲ. ಸಾಮೂಹಿಕ ಪ್ರಾರ್ಥನೆಗೊಂದು ದೊಡ್ಡ ಕೋಣೆಯೂ ಇರಲಿಲ್ಲ. ಹೀಗಾಗಿ ದೆಹಲಿ ಕೋಮುಗಲಭೆಯ ದಳ್ಳುರಿಯಲ್ಲಿ ಬೇಯುವಾಗ ಗಾಂಧಿ ಭಾರತದ ಅತ್ಯಂತ ದೊಡ್ಡ ಶ್ರೀಮಂತ ಕಟ್ಟಿಸಿದ ಬಿರ್ಲಾ ಹೌಸ್‌ನಲ್ಲಿ ವಾಸಿಸಬೇಕಾಯಿತು. ಕಲ್ಕತ್ತೆಯ ಹೈದರಿ

ಮಂಜಿಲ್‌ನಿಂದ ದೆಹಲಿಯ ಬಿರ್ಲಾ ಹೌಸ್‌ಗೆ, ಯಾಕೋ ಗಾಂಧಿಯ ಮನಸು ಒಪ್ಪುತ್ತಿಲ್ಲ, ಇದು ಸಾಮಾನ್ಯ ಭಾರತೀಯನೊಬ್ಬನ ಸಂಕಷ್ಟಗಳನ್ನು ನಿವಾರಿಸುವ ರೀತಿಯಲ್ಲ ಎಂದು ಆತನ ಕಳವಳ. ಆದರೆ ದೇಶ ವಿಭಜನೆಗೆ ಕಾರಣವೇ ಗಾಂಧಿ, ಅದನ್ನು ಅನುಮತಿಸಿದವನೇ ಗಾಂಧಿ ಎಂದು ಗಾಂಧಿಯನ್ನೇ ಖಳನಾಯಕನನ್ನಾಗಿಸಿದ, ಆಪಾದಿಸಿದ, ಯಾವುದೇ ಗುಂಪು ಗಾಂಧಿಯ ಮೇಲೆ ಆಕ್ರಮಣ ಮಾಡಬಹುದು ಎನ್ನುವ ಭಯದಿಂದಾಗಿ ಪಟೇಲ್ ಗಾಂಧಿಯನ್ನು ಭಂಗಿ ಕಾಲೋನಿಗೆ ಒಯ್ಯಲಿಲ್ಲ.

ಇನ್ನೂ ಅರ್ಧಗಂಟೆ ಕಳೆದಿರಲಿಲ್ಲ. ಭಾರತದ ತ್ರಿವರ್ಣಧ್ವಜವನ್ನು ಹೊತ್ತ ಪ್ರಧಾನಿ ಪಂಡಿತ್ ನೆಹರುವಿನ ಕಾರು ಬಿರ್ಲಾಹೌಸ್‌ಗೆ ಬಂತು. ಗಾಂಧಿಯ ಮುಂದೆ ಮುಖ ಕೆಳಗಿಳಿಸಿದ ನೆಹರೂ ಮೇಲೆತ್ತಲೇ ಇಲ್ಲ. ಭಾರತದ ಪ್ರಥಮ ಪ್ರಧಾನಿ ಸ್ವತಂತ್ರ ಹೋರಾಟದಲ್ಲಿ ಹಿಂದೆಂದೂ ಕಾಣದಷ್ಟು ದಣಿದಿದ್ದಾರೆ, ಬಳಲಿದ್ದಾರೆ ಅವರ ಕಣ್ಣುಗಳು ಅದೆಷ್ಟೋ ದಿನಗಳಿಂದ ವಿಶ್ರಾಂತಿಯನ್ನು ಪಡೆದಿಲ್ಲ ಎನ್ನುವುದನ್ನು ಸ್ಪಷ್ಟವಾಗಿಸುತ್ತಿವೆ. ದೆಹಲಿಯಲ್ಲಿ ಹುಟ್ಟಿದ ಬೆಂಕಿಯನ್ನು ಹೇಗೆ ನಂದಿಸುವುದು ಎನ್ನುವುದೇ ಆತನ ಮುಂದಿನ ಪ್ರಶ್ನೆ. ಕಾನೂನು ವ್ಯವಸ್ಥೆ ಕೈತಪ್ಪಿಹೋಗಿದೆ. ಪೊಲೀಸ್ ಸಾಕಾಗುತ್ತಿಲ್ಲ, ಆಗಲೇ ಸೈನ್ಯದ ಮೊರೆಹೋಗಲಾಗಿದೆ. 24 ಗಂಟೆಗಳ ಕರ್ಫ್ಯೂ ದಿಗ್ಬಂಧನೆಯನ್ನು ವಿಧಿಸಲಾಗಿದೆ. ಆದಾಗ್ಯೂ ನಿರಂತರ ಕೊಲೆ, ಅಪಹರಣ, ದೊಂಬಿ, ಬೆಂಕಿ ಅನಾಹುತಗಳು ವರದಿಯಾಗುತ್ತಲೇ ಇವೆ. ಸೋತ ಮುಖದಿಂದ ನೆಹರೂ ಗಾಂಧಿಯನ್ನು ಪ್ರಶ್ನಿಸಿದ. "ಬಾಪೂ, ದೆಹಲಿಯ ಬೀದಿಬೀದಿಗಳಲ್ಲಿ ಹೆಣಗಳು ಬಿದ್ದಿವೆ. ಎಲ್ಲಿ ನೋಡಿದರಲ್ಲಿ ಹಿಂಸೆ ತಾಂಡವವಾಡುತ್ತಿದೆ. ಲಾಹೋರ್ ಮತ್ತು ಪಂಜಾಬ್‌ಗಳಲ್ಲಿ ನಿಯಂತ್ರಿಸಲಾಗದ ಹಿಂಸೆಗಳಿಗಾಗಿ ಒಂದೊಮ್ಮೆ ನಾವು ಜಿನ್ನಾ ಮತ್ತು ಲಿಯಾಕತ್ ಆಲಿಯನ್ನು ದೂಷಿಸಿದ್ದೇವು. ಆದರೆ ಈಗ ನಮ್ಮ ಈ ಸ್ಥಿತಿಯೆಡೆಗೆ ನೋಡಿ ನಗುತ್ತಿರುವ ಪಾಕಿಸ್ತಾನಕ್ಕೆ ಏನೆಂದು ಉತ್ತರಿಸುವುದು?"

ಸೊರೆಕಾಯಿಯಂತಹ ತಲೆಯನ್ನು ಬಾಗಿಸಿಕೊಂಡು ಕೇಳುತಿದ್ದ ಗಾಂಧಿ, ಎಲ್ಲವನ್ನೂ ಶಾಂತಚಿತ್ತದಿಂದಲೇ ಕೇಳುತ್ತಿದ್ದ. ಈಗ ಮೆಲ್ಲಗೆ ಕೇಳಿದ, "ಸರಿ, ವ್ಯರ್ಥ ಸಿಟ್ಟಿನಿಂದ ಏನು ಪ್ರಯೋಜನ? ಅದರಿಂದ ಏನನ್ನು ತಾನೆ ಸಾಧಿಸಲಾದೀತು?" ನೆಹರೂವಿನ ಸಿಟ್ಟು ಕಡಿಮೆಯಾಗಲಿಲ್ಲ. ಆತ ಹೇಳಿದ, "ಹೌದು ನನಗೆ ಸಿಟ್ಟಾಗಿದೆ. ನನ್ನೊಂದಿಗೇ ನನಗೆ ಸಿಟ್ಟಾಗಿದೆ. ಶಾಸಕರುಗಳಾದ ನಾವೇ, ರಕ್ಷಣೆಯಿಲ್ಲದೆ ಹೊರಗೆ ತಿರುಗಾಡುವ ಸ್ಥಿತಿಯಿಲ್ಲ. ಇದು ನಾಚಿಕೆಗೇಡು ಅಲ್ಲವೇ ಬಾಪು. ಸಾಮಾನ್ಯರಿಗೆ ಏನಂತ ಉತ್ತರಿಸಲಿ ನಾನು ಬಾಪು. ನ್ಯಾಯಬೆಲೆ ಅಂಗಡಿಗಳೆಲ್ಲಾ ಲೂಟಿಯಾಗುತ್ತಿವೆ. ಹಣ್ಣು, ತರಕಾರಿ ಮಾರಾಟಮಾಡುವವರ ಪರಿಸ್ಥಿತಿಯಂತೂ ಇನ್ನೂ ಚಿಂತಾಜನಕವಾಗಿದೆ. ಮಕ್ಕಳ, ಮಹಿಳೆಯರ ಚಿತ್ರಣವಂತೂ ನನ್ನಿಂದ ಕೊಡಲಾಗದು." ಎಂದು ಬಿಕ್ಕಳಿಸಿ ನೆಹರೂ ಕೈಚೆಲ್ಲಿದರು.

ಗಾಂಧಿಗೆ ಇದು ಸಾಮಾನ್ಯ ಸಂಗತಿಯಲ್ಲ. ಹಿಂದೆ ಹೀಗೆಯೇ ಉರಿಯುತ್ತಿದ್ದ ಕಲ್ಕತ್ತೆಗೂ ಭಿನ್ನವಾದ ಪ್ರಯೋಗವೊಂದನ್ನು ಗಾಂಧಿ ಇಲ್ಲಿ ಮಾಡಬೇಕಾಗಿತ್ತು. ತಕ್ಷಣ ಗಾಂಧಿ ಕಾರ್ಯೋನ್ಮುಖನಾಗಿ ನಾಯಕರುಗಳ ಸಣ್ಣ ಸಭೆಯೊಂದನ್ನು ಏರ್ಪಡಿಸಿದ.

ಪತ್ರಿಕಾಗೋಷ್ಠಿಯನ್ನು ಕರೆದ. ತನ್ನ ದೃಢ ನಿರ್ಧಾರದ ಧ್ವನಿಯಲ್ಲಿ ಹೇಳಿದ, ಕಲ್ಕತ್ತೆಯಿಂದ ಬಂದ ಈ ಇಡೀ ದಿನ ದೆಹಲಿಯ ದಾರುಣ ಕಥೆಯನ್ನು ನಾನು ಕೇಳುತ್ತಿದ್ದೇನೆ. ನಾನು ನನ್ನ ಸಣ್ಣ ಪ್ರಯತ್ನವನ್ನು ಪ್ರಾರಂಭಿಸಲೇಬೇಕಿದೆ. ಮತ್ತೆ ನನ್ನ ಅದೇ ಹಳೆಯ ಅಸ್ತ್ರವನ್ನು ಬಳಸಬೇಕಿದೆ. ಸ್ವತಂತ್ರ ಭಾರತದ ಈ ರಾಜಧಾನಿಯ ಕಿವಿಯಲ್ಲಿ ಬ್ರಿಟಿಷರ ವಿರುದ್ಧ ನಾನು ಸಾರಿದ್ದ ಮಂತ್ರವನ್ನೇ ಪುನರುಚ್ಚರಿಸಬೇಕಿದೆ. ಇಷ್ಟೇ ಮಾತನಾಡಿದ ಗಾಂಧಿ ಒಂದು ಕ್ಷಣ ಕಣ್ಮುಚ್ಚಿ ಭಗವದ್ಗೀತೆಯ ಸಾಲುಗಳನ್ನು, ಜೀಸಸ್ ಕ್ರೈಸ್ಟ್‌ನ 'Sermonon on the mountain' ಭಾಗವನ್ನು, ಟಾಲ್‌ಸ್ಟಾಯ್‌ರ ಮಾನವೀಯ ಮೌಲ್ಯಗಳನ್ನು, ಜಾನ್‌ರಸ್ಕಿನ್ un to the Last ದೊಳಗಿನ 3 ಸಿದ್ಧಾಂತಗಳನ್ನು, ಇಸ್ಲಾಂ ಮತ್ತು ಝುರೊಸ್ಟಿಯನ್ ಧರ್ಮಗಳ ಪ್ರಾರ್ಥನೆಯನ್ನು ನೆನಪಿಸಿಕೊಂಡ.

ಮತ್ತೊಂದು ಕ್ಷಣಕ್ಕೆ ಮನಸ್ಸು ಕಲ್ಕತ್ತೆಯ ದೊಂಬಿಯ ಕಾಲದಲ್ಲಿ ತಾನು ಬರೆದಿದುದೆಲ್ಲವನ್ನು ನೆನಪಿಸಿಕೊಂಡಿತು. ಕಲ್ಕತ್ತೆಯ ಶಾಂತಿ ಸೇನಾದಳದ ಸೆಕ್ರೆಟರಿಯಾಗಿದ್ದ ದೇವತೋಷ್ ದಾಸ್ ಗುಪ್ತ ಅವರ ಕೋರಿಕೆಯ ಮೇರೆಗೆ ಗಾಂಧಿ 'My life is my message' ಎನ್ನುವ ಲೇಖನವನ್ನು ಮಾಡಿಕೊಟ್ಟ. ರಾಜಕಾರಣಿಯಲ್ಲದ, ಸಂತನಲ್ಲದ, ಧಾರ್ಮಿಕನಲ್ಲದ ಹೀಗೆ ಜಗತ್ತು ಸಾಮಾನ್ಯವಾಗಿ ಗಾಂಧಿಗೆ ಆಪಾದಿಸಿದ್ದ ಪದಗಳಿಂದ ಹೊರತಾದ ಗಾಂಧಿಯ ಅನಾವರಣವನ್ನು ಗಾಂಧಿ ಈ ಲೇಖನದಲ್ಲಿ ಪ್ರಯತ್ನಿಸಿದ್ದ.

ಪ್ರಚಾರ ಮತ್ತು ಪೂಜೆಯಿಂದ ಭಯಗ್ರಸ್ಥನಾಗಿದ್ದ ಗಾಂಧಿ, ಮುಂದೊಂದು ದಿನ ಇತಿಹಾಸದಲ್ಲಿ ತನ್ನ ಅವಜ್ಞೆಗೆ ಕಾರಣವಾಗಬಹುದು ಎನ್ನುವ ಸಣ್ಣ ಸಂಶಯವನ್ನೂ ವ್ಯಕ್ತಪಡಿಸಿದ್ದ. ಆದರೆ, ಆತ ಸಾಮಾನ್ಯನೆಂದು ಪ್ರತಿಪಾದಿಸಿಕೊಂಡಷ್ಟೂ ಅಸಾಮಾನ್ಯನಂತೆ ವ್ಯಾಖ್ಯಾನಿಸಲ್ಪಡುತ್ತಿದ್ದುದು ಆತನ ಮುಂದಿದ್ದ ದೊಡ್ಡ ಪ್ರಶ್ನೆಯಾಗಿತ್ತು.

ಎಷ್ಟೊಂದು ವಿಚಿತ್ರ ನೋಡಿ, ಮಾಂಸ ಮಜ್ಜೆಗಳ ಸಾಮಾನ್ಯ ಮನುಷ್ಯ ಗಾಂಧಿ, ಈ ದೇಹವನ್ನು ಭಂಗಿ ಕಾಲೋನಿಯಷ್ಟೇ ಸ್ವಚ್ಛವಿರಿಸಿಕೊಂಡ, ಶಿಸ್ತಿನಿಂದಿರಿಸಿಕೊಂಡ. ಆದರೆ ತನ್ನ ನಿಧನದ ನಂತರ ಐನ್‌ಸ್ಟೀನ್‌ರ ಮಾತುಗಳಲ್ಲಿಯೂ ಮಾಂಸಮುದ್ದೆಗಳಿದ್ದೂ ದಂತಗೋಪುರವಾದ. ಸೆ 10, ನಸುಕಿನ ಮೂರುವರೆಗೆ ಎದ್ದ ಗಾಂಧಿ ಬಹುತೇಕ ಆ ದಿನ ಎಲ್ಲೂ ಹೋಗದ ನಿರ್ಧಾರ ಮಾಡಿದಂತಿತ್ತು. ಮೈಗೆ ರಾಡಿ ಬಡಿದುಕೊಂಡು, ಮಣ್ಣು ಸ್ನಾನ ಮಾಡಿದ. ಆ ಸ್ಥಿತಿಯಲ್ಲಿಯೇ ಕೆಲವರೊಂದಿಗೆ ಮಾತು, ಹರಿಜನ ಪತ್ರಿಕೆಗೊಂದು ಲೇಖನಿ ಮತ್ತೆ ಸಾಯಂಕಾಲದ ಪ್ರಾರ್ಥನೆ, ವಿಹಾರ, ಪತ್ರಿಕಾಗೋಷ್ಠಿ ಹಾಗೂ ಚರ್ಚೆಗಳು. ಆತ ಬಳಲಿದ್ದ. ವಿಶ್ರಾಂತಿಯ ಅವಶ್ಯಕತೆಯಿತ್ತು. ನೆಪಮಾತ್ರದ ಊಟವನ್ನು ಮುಗಿಸಿ ಗಾಂಧಿ ನಿದ್ರೆಹೋದ. ಹೊರಗಡೆ ದೆಹಲಿ ಅರಚಾಡುತ್ತಲೇ ಇತ್ತು. ಎಣೆಯಿಲ್ಲದ ಕ್ರೌರ್ಯ ಅಟ್ಟಹಾಸಗೈಯ್ಯುತ್ತಲೇ ಇತ್ತು. ಆದರೆ ಗಾಂಧಿ ತನ್ನೊಳಗೆ ಸಿದ್ಧನಾಗಬೇಕಿತ್ತು. ಇತಿಹಾಸದ ಪುಟಗಳಲ್ಲಿ ಈ ದಿನ ಗಾಂಧಿ ನಿದ್ರೆಹೋದ ಪರಿಯನ್ನು ಈ ತೆರನಾಗಿ ವರ್ಣಿಸಲಾಗಿದೆ. "He slept practically like a warrier of Sparta would -ever visilantly on duty, with speare and shild and buckler by his side,"

ಮರುದಿನ ಮುಂಜಾನೆ 11 ಘಂಟೆಗೆ ಗಾಂಧಿ ಗಲಭೆಗೊಳಗಾದ ದೆಹಲಿಯ ಗಲ್ಲಿಗಳೊಳಗೆ ಹೋಗಬೇಕು. ಈಗ ತಾನಿರುವ ಸ್ಥಳದಿಂದ 40 ಮೈಲಿಗಳ ಪ್ರವಾಸ. ಆತ ಹೊರಟ ಮೊದಲ ಸ್ಥಳವೇ 'ಹೂಮಾಯನ್ ಟೊಂಬ್'. ಸಂಪೂರ್ಣ ಮುಸ್ಲಿಂರಿಂದ ಆವೃತವಾದ ಪ್ರದೇಶ. ಅಲ್ಲಿ ಹೋಗಿ ಆತ ಕಾಲಿಡುತ್ತಲೇ ಎರಡು ಗಂಟೆಯ ಆತನ ಈ ಪ್ರದೇಶದಲ್ಲಿಯ ವಾಸ್ತವ್ಯದಲ್ಲಿ ಎಷ್ಟೊಂದು ಕಥೆಗಳು ಬಿಚ್ಚಿಕೊಂಡವು. ಅಲ್ಲಿರುವ ಮುಸ್ಲಿಂರೆಲ್ಲರಿಗೂ ಪಾಕಿಸ್ತಾನಕ್ಕೆ ಹೋಗಲು ಅವಕಾಶವಿದೆ. ಆದರೆ ಅವರಿಗೆ ಮನಸ್ಸಿಲ್ಲ. ಮುಂದೆ ಜಾಮಿಯಾ ಮಿಲಿಯಾ ಪ್ರದೇಶಕ್ಕೆ ಬಂದ, ತಂದೆ-ತಾಯಿಗಳಿಬ್ಬರೂ ಕೊಲೆಯಾಗಿ ತಬ್ಬಲಿಯಾಗಿದ್ದ ಮಗುವೊಂದು ಆತನ ಮುಂದೆ ನಿಂತಿತು, ಹಾಗೆಯೇ ಅಲ್ಲಿಂದ ಹೊರಟು ಕಸ್ತೂರ್ ಬಾ ಬಾಲಿಕಾ ಆಶ್ರಮಕ್ಕೆ ಬಂದು ಸೇರಿದರೆ, ಅಲ್ಲಿ ಅಪಾರ ಸಂಖ್ಯೆಯಲ್ಲಿ ಹಿಂದು ನಿರಾಶ್ರಿತರು. ತಬ್ಬಲಿಗಳಾಗಿದ್ದ ಇಬ್ಬರು ಹುಡುಗಿಯರು ಗಾಂಧಿಯ ಮುಂದೆ ನಿಂತಿದ್ದರು. ಒಬ್ಬಳ ಸಂಪೂರ್ಣ ಬಂಧು ವರ್ಗವೇ ಮುಸ್ಲಿಂರಿಂದ ಕೊಚ್ಚಿ ಹಾಕಲ್ಪಟ್ಟಿದೆ. ಅಲ್ಲಿಂದ ಹೊರಟ ಗಾಂಧಿ ಚಾಂದಿನಿ ಚೌಕದಿಂದ ರೆಡ್‌ಫೋರ್ಟ್‌ಗೆ ಬಂದ. ಎಲ್ಲೆಲ್ಲೂ ಲೂಟಿಯಾದ ಅಂಗಡಿಗಳು, ಸುಟ್ಟ ಮನೆಗಳು, ಅರೆಬೆಂದ ಹೆಣಗಳು.

ಇದೇ ರೀತಿಯ ಕ್ರಿಯೆಗಳು ದೆಹಲಿಯ ದಿವಾನ್‌ಹಾಲ್, ಮೊವೆಲ್ ಕ್ಯಾಂಟೀನ್, ಕಿಂಗ್ಸ್ ವೇ ಕ್ಯಾಂಪ್‌ಗಳಲ್ಲಿ ಮುಂದುವರೆದಿದ್ದವು. ಕಿಂಗ್ಸ್ ವೆ ಕ್ಯಾಂಪ್‌ದಲ್ಲಂತೂ ಗಾಂಧಿಗೊಂದು ವಿಚಿತ್ರ ಅನುಭವವಾಗಿ ಹೋಯಿತು. ಗಾಂಧಿಯನ್ನು ನೋಡುತ್ತಲೇ ಬಿಕ್ಕಳಿಸುತ್ತಾ ತನ್ನ ಮೈಮೇಲಿನ ಗಾಯಗಳ ಪರಿವೆಯೂ ಇಲ್ಲದೇ ಬಂದ ವ್ಯಕ್ತಿಯೊಬ್ಬ ಹೇಳಿದ, ತಾನು ಗಾಂಧಿಯ ದರ್ಶನಕ್ಕೆ ಬರುತ್ತಿದ್ದೇನೆ ಎಂದು ಗೊತ್ತಿದ್ದೂ ತನ್ನ ಮೇಲೆ ಮಾರಣಾಂತಿಕ ಹಲ್ಲೆಗಳಾದವು. ಅಹಿಂಸೆಯ ಪೂಜಾರಿಯ ಭೇಟಿಗೂ ಇಷ್ಟೊಂದು ಹಿಂಸೆ, ಇದು ಯಾವ ನ್ಯಾಯ? ಗಾಂಧಿ ಮೃದುವಾಗಿ ಆ ವ್ಯಕ್ತಿಯ ಮೈದಡವಿದ, ಕಣ್ಣೀರೊರೆಸಿದ, ಶುಶ್ರೂಷೆಗೆ ಕಳಿಸಿದ.

ಸಾಯಂಕಾಲದ ಪ್ರಾರ್ಥನಾ ಸಭೆಯಲ್ಲಿ ಬಿರ್ಲಾ ಮಂದಿರಲ್ಲಿ ನಿಟ್ಟುಸಿರಿಟ್ಟು ಗಾಂಧಿ ಹೇಳಿದ, "ಸ್ವಾತಂತ್ರ್ಯವೆಂದರೆ ಸ್ವೇಚ್ಛಾಚಾರವಲ್ಲ," ಆದರೆ ಭಾರತೀಯರಿಗೆ ಇದು ಅರ್ಥವಾಗಿದೆ ಎಂದು ನನಗೆ ಅನ್ನಿಸಲಿಲ್ಲ. ಬದುಕು ಇಷ್ಟೊಂದು ದುಬಾರಿಯಾಗಬಾರದಿತ್ತು. ನಮ್ಮ ಜನನಾಯಕರು ಈ ಹುಚ್ಚುತನಕ್ಕೆ ಕೈಚೆಲ್ಲಿ ಕೂಡ್ರುವ ಬದಲು ಸಮಾಜವನ್ನು ಪುನಃ ಸ್ಥಾಪಿಸುವಲ್ಲಿ ಸಾಯುವುದೇ ಒಳಿತು."



ಹಿಂಸೆಯ ನಾವೆಯೊಳಗೆ ಅಹಿಂಸೆಯ ಪೂಜಾರಿ

೨೧

1947, ಸೆಪ್ಟೆಂಬರ್ 11 ರ ಪ್ರಮುಖ ಭೆಟ್ಟಿಯೇ ದೆಹಲಿಯ ಜಾಮಿಯಾ ಮಿಲಿಯಾ ವಿಶ್ವವಿದ್ಯಾಲಯ. ಮಾನವ ಕಾಳಜಿಗಳ ಡಾ. ಜಕೀರ್ ಹುಸೇನ್ ಕೋಮು ಗಲಭೆಯ ದಾಳಿಗೆ ಒಳಗಾಗಿದ್ದರು. ಗಾಂಧಿಗೆ ಅವರನ್ನು ಭೆಟ್ಟಿಯಾಗಿ ಸಂತೈಸುವ ಬಯಕೆ. ಆದರೆ ಈಗಾಗಲೇ ಸಾಕಷ್ಟು ಹಿಂದುಗಳ ಕೆಂಗಣ್ಣಿಗೆ ಗುರಿಯಾಗಿದ್ದ ಗಾಂಧಿ ಜಕೀರ ಹುಸೇನರನ್ನು ಭೇಟಿಯಾಗುವದು ಸರಳವೂ ಆಗಿರಲಿಲ್ಲ, ಅನೇಕ ಹಿಂದು ನಾಯಕರಿಗೆ ಇದು ಸ್ವಾಗತನೀಯವೂ ಆಗಿರಲಿಲ್ಲ.

ಡಾ. ಜಕೀರ್ ಹುಸೇನ್ ಪಂಜಾಬದ ಜಲಂಧರಗೆ ಭೆಟ್ಟಿಕೊಟ್ಟಿದ್ದರು. ಜಲಂಧರನಿಂದ ಹೊರಟು ದೆಹಲಿಗೆ ಬರುವ ಮಾರ್ಗಮಧ್ಯದಲ್ಲಿ ಅವರ ಕುರಿಗಡ್ಡ, ಶೇರವಾನಿ ಹಾಗೂ ಟೋಪಿಯನ್ನು ನೋಡುತ್ತಲೇ ಇವನ್ನೊಬ್ಬ ಮುಸ್ಲಿಂನೆಂದು ಸಿಖ್ ಮತಾಂದ ಯುವಕರು ಝಕೀರ ಹುಸೀನ್‌ರ ಮೇಲೆ ಮಾರಣಾಂತಿಕ ದಾಳಿಯನ್ನು ಮಾಡಿದರು. ಸಾವಿನೊಂದಿಗೆ

ಮುಖಾಮುಖಿಯಾಗಿ ನಿಂತ ಆ ಕ್ಷಣದಲ್ಲಿ ಝಕೀರ ಹುಸೇನ್‌ರಿಗೆ ಬದುಕು ದುಗ್ಗಾಣಿ ಬೆಲೆಯೂ ಇಲ್ಲದ ವಸ್ತು ಅನಿಸಿತು. ಆದರೆ ಅದು ಎಲ್ಲಿಂದ ಬಂದರೋ ಒಬ್ಬ ಸಿಖ್ ಕ್ಯಾಪ್ಟನ್, ಇನ್ನೊಬ್ಬ ಹಿಂದು ರೇಲ್ವೆ ಅಧಿಕಾರಿ, ದಾಳಿಕೋರರಿಂದ ಝಕೀರ್ ಹುಸೇನರನ್ನು ಮುಕ್ತ ಮಾಡಿ ಸಾವಿಗೆ ಎದೆಯೊಡ್ಡಿ ನಿಂತರು. ಹುಸೇನ್ ಮುಸ್ಲಿಂರಲ್ಲ. ಅವರೊಬ್ಬ ಮಾನವತಾವಾದಿ. ಅವರನ್ನು ಕೊಲ್ಲಲೇಬೇಕು ಎನ್ನುವವರು ನಮ್ಮನ್ನು ಕೊಂದೇ ಮುಂದೆಹೋಗಬೇಕೆಂದು ಸಾವಿನ ಮುಖಕ್ಕೆ ಹೊಡೆದಂತೆ ಮಾತನಾಡಿದರು. ಹೀಗೆ ಪ್ರಾಣಾಪಾಯದಿಂದ ಪಾರಾಗಿ ಸಣ್ಣಪುಟ್ಟ ಗಾಯಗಳೊಂದಿಗೆ ತಾವು ಬದುಕಿ ಬಂದ ಕಥೆಯನ್ನು ಝಕೀರ್ ಹುಸೇನ್ ಗಾಂಧಿಯ ಮುಂದಿಡುತ್ತಿದ್ದರು. ಅವರಿಗೂ ಅದೇ ದ್ವಂದ್ವ ಗಾಂಧೀಯ ಮುಂದೆ ಝಕೀರ್ ಕೇಳುವ ಪ್ರಶ್ನೆಗಳು ಗಾಂಧಿಯ ಪ್ರಶ್ನೆಗಳೇ. ಮನುಷ್ಯ ಮನುಷ್ಯನನ್ನು ಕೊಲ್ಲುವಷ್ಟು ಕ್ರೂರಿ ಯಾಕಾಗುತ್ತಾನೆ ಬಾಪು? ಸಾಯುವವನು ಹಿಂದುವೊ? ಮುಸ್ಲಿಂನೋ? ಅಥವಾ ಸಿಖ್‌ನೋ? ಆದರೆ ಸಾವಿನ ದಾರುಣತೆ ಒಂದೇ ಅಲ್ಲವೆ? ಈ ನೆಲದಲ್ಲಿ ಉಳಿದ ಅಲ್ಪಸ್ವಲ್ಪ ಸಂಸ್ಕೃತಿಯೂ ಕೂಡ ಹೀಗೇಕೆ ಮಣ್ಣಾಗುತ್ತಿದೆ? ಝಕೀರರ ಈ ಪ್ರಶ್ನೆಗಳು ಗಾಂಧಿಯ ಪ್ರಶ್ನೆಗಳಷ್ಟೇಯಲ್ಲ ಪ್ರತಿಯೊಬ್ಬ ಮನುಷ್ಯನ ಪ್ರಶ್ನೆಗಳು.

ಗಾಂಧಿ, ಇಲ್ಲೊಂದು ತನ್ನ ತಪ್ಪು ಗ್ರಹಿಕೆಯನ್ನು ಸರಿಪಡಿಸಿಕೊಳ್ಳಲು ಯತ್ನಿಸುತ್ತಾನೆ. ಆತನಿಗೆ ಗೊತ್ತಿದೆ ಬ್ರಿಟಿಷ್ ಆಗಮನಕ್ಕೂ ಪೂರ್ವದಿಂದಲೂ ಭಾರತದ ಇತಿಹಾಸದಲ್ಲಿ ಹಿಂದೂ, ಮುಸ್ಲಿಂ, ಸಿಖ್‌ರು ಸಾಮರಸ್ಯದಿಂದ ಬಾಳಿದ ಉದಾಹರಣೆಗಳಿವೆ. ಈ ಎರಡೂ ಧರ್ಮಗಳು ಸೇರಿಕೊಂಡೇ ಹೊಸ ಆಲೋಚನೆಗಳಿಗೆ ಹುಟ್ಟು ನೀಡಿದ ಸಂದರ್ಭಗಳಿವೆ. ಬಹುತೇಕ ಬ್ರಿಟೀಷ್ ಆಡಳಿತವೇ ಭಾರತದಲ್ಲಿ ಹಿಂದೂ–ಮುಸ್ಲಿಂರ ಮಧ್ಯದ ತಿಕ್ಕಾಟಗಳಿಗೆ ಕಾರಣವಾಗಿದೆ. ಬ್ರಿಟಿಷ್‌ರು ಈ ದೇಶವನ್ನು ಬಿಟ್ಟು ತೊಲಗಿದ ಮರುಕ್ಷಣದಿಂದಲೇ ಹಿಂದೂ–ಮುಸ್ಲಿಂರು ಸಹೋದರರಂತೆ ಬಾಳುತ್ತಾರೆ ಎನ್ನುವ ತನ್ನ ನಂಬಿಕೆಯನ್ನು ಗಾಂಧಿ ಸಂಪೂರ್ಣ ಕಳೆದುಕೊಂಡಿದ್ದಾನೆ. ಇತಿಹಾಸದ ತನ್ನ ಗ್ರಹಿಕೆ ಬಹಳ ತಪ್ಪಾಗಿತ್ತು ಎನ್ನುವ ಸಾಮಾಜಿಕ ಅರಾಜಕತೆ ತನ್ನ ಎದುರೇ ನಿಂತುಕೊಂಡಿದೆ. ಈಗ ಗಾಂಧಿಗೆ ಕಾಡುವ, ಮತ್ತೇ ಮತ್ತೇ ಪೀಡಿಸುವ ಪ್ರಶ್ನೆಗಳೆಂದರೆ ಪಾಕಿಸ್ಥಾನದ ನಿರ್ಮಾಣದ ನಂತರವೂ, ನೌಕಾಲಿ, ಕಲ್ಕತ್ತಾ, ದೆಹಲಿ ಮತ್ತು ಅಮೃತಸರಗಳಲ್ಲಿ ಸಾವಿರಾರು ಹಿಂದೂ–ಮುಸ್ಲಿಂರ ಕೊಲೆಯ ನಂತರವೂ, ಒಂದು ಸಹಜ ಶಾಂತಿ ಈ ಸಮಾಜದಲ್ಲಿ ಏಕೆ ಸಾಧ್ಯವಾಗುತ್ತಿಲ್ಲ? ಹಾಗಾದರೆ ಇದು ಸತ್ಯ ಎನ್ನುವುದಾದರೆ ಇತಿಹಾಸದ ತನ್ನ ಅರ್ಥೈಸಿಕೊಳ್ಳುವಿಕೆ ತಪ್ಪಾಗಿತ್ತೆ? ಗಾಂಧಿಗೆ ಏನೊಂದೂ ಅರ್ಥವಾಗುತ್ತಿಲ್ಲ.

ಸೆಪ್ಟೆಂಬರ್ 12 ರಂದು ಗಾಂಧಿ ದೆಹಲಿಯ ಅನೇಕ ನಾಯಕರನ್ನು ಬೆಟ್ಟಿಯಾದರು. ಪ್ರಮುಖವಾಗಿ ಗವರ್ನರ್ ಜನರಲ್, ಪ್ರಧಾನಿ, ಹಣಕಾಸು ಮಂತ್ರಿ ಶ್ರೀ ಆರ್. ಎಸ್ ಷಣ್ಮುಖಂ ಶೆಟ್ಟಿ, ಡಾ. ರಾಮಮನೋಹರ್ ಲೋಹಿಯಾ, ಲಾರ್ಡ್ ಲಿಸ್ಟೋ ವೆಲ್, ಮಿಸ್ಟರ್ ಜೌಹೀದ ಹುಸೇನ ಹಾಗೂ ಕರಾಚಿಯ ಕಮೀಷನರ್– ಎಲ್ಲರನ್ನೂ ಗಾಂಧಿ ಸಂದರ್ಶಿಸಿದ್ದ. ನಿರಾಶ್ರಿತರು ತಮ್ಮ ತಮ್ಮ ಸ್ಥಳಗಳಿಗೆ ಮರಳಿ ಹೋಗಲೇಬೇಕು ಎಂದು ಅನುರೋಧಿಸಿದ. ಆದರೆ ಆತನ ಮಾತುಗಳೆಲ್ಲ ಗಾಳಿಗಿಟ್ಟ ದೀಪಗಳಂತಾಗಿತ್ತು. ದೆಹಲಿಯ

ಜುಮ್ಮಾ ಮಸಜೀದ್ ಪಕ್ಕದಲ್ಲಿ ಮೂವತ್ತು ಸಾವಿರಕ್ಕೂ ಹೆಚ್ಚು ನಿರಾಶ್ರಿತರು ಬಂದು ನೆಲೆಸಿಯಾಗಿತ್ತು. ಇವರ ಮಧ್ಯ ಸಾಗಿಹೋಗಿ ಅವರ ನೋವು ನಲಿವುಗಳನ್ನು ಕೇಳುವದು ಗಾಂಧಿಯ ಇಚ್ಛೆಯಾಗಿತ್ತು. ಆದರೆ ಪೊಲೀಸ್ ಅಥವಾ ಮಿಲಿಟರಿ ರಕ್ಷಣೆಯಿಲ್ಲದೇ ಗಾಂಧಿ ಒಬ್ಬನನ್ನೇ ಒಂಟಿಯಾಗಿ ಅಲ್ಲಿಗೆ ಕಳುಹಿಸುವ ಇಚ್ಛೆ ಪ್ರಧಾನಿ ನೆಹರೂಗೆ ಇರಲಿಲ್ಲ.

ಸೇರಿದ ಜನಸಾಗರದ ಮಧ್ಯ ಎಷ್ಟೊಂದು ಧಾರುಣ ಚಿತ್ರಗಳು! ಮನುಷ್ಯ ಕ್ರೌರ್ಯದ ಮುಂದೆ ಮನುಷ್ಯನ ಬಾಳಿನ ವಿಶ್ವಾಸ ನಲುಗಿ ಹೋಗಿತ್ತು. ಯಾರೋ ಅಳುತ್ತಿದ್ದಾರೆ, ಇನ್ನಾರೊ ಎದೆ ಬಡಿದುಕೊಂಡು ಕೂಗುತ್ತಿದ್ದಾರೆ. ಮತ್ತೆ ಕೆಲವರು ಕೈ ಮುಗಿದುಕೊಂಡು ನಿಂತಿದ್ದಾರೆ. ಹಲವರು ಬಂದು ಗಾಂಧಿ ಕಾಲುಗಳಿಗೆ ಎರಗುತ್ತಾರೆ. ಬದುಕನ್ನೇ ಮುರಿದುಕೊಂಡ ವ್ಯಕ್ತಿಯೊಬ್ಬ ಹೇಳಿದ "ಕಳೆದ ಅನೇಕ ದಿನಗಳಿಂದ ಹೊಟ್ಟೆ ಖಾಲಿಯಿದೆ. ಈ ಕೊರೆವ ಛಳಿಯಲ್ಲಿ ಹೊದ್ದುಕೊಳ್ಳಲು ತುಂಡು ಬಟ್ಟೆಯೂ ಇಲ್ಲ. ನಮ್ಮ ಮಕ್ಕಳಿಗೆ ಕುಡಿಯಲು ನೀರು ಸಿಗುತ್ತಿಲ್ಲ. ನಮ್ಮ ಹೆಂಡಂದಿರು ನಮ್ಮ ಬಳಿಯಲ್ಲಿ ಇಲ್ಲ. ನಾವೇನು ಮಾಡಬೇಕು? ಸಾವು ಈ ಬದುಕಿಗಿಂತಲೂ ಉತ್ತಮವೆನಿಸುತ್ತದೆ." ಗಾಂಧಿ ಎಲ್ಲದಕ್ಕೂ ಮೌನವಾಗಿದ್ದ. ಒಂದು ಸಾಂತ್ವನ ಭರಿತ ನೋಟ, ಮಾತು, ಸ್ಪರ್ಶ, ಮತ್ತು ಪ್ರಾರ್ಥನೆ ಎಲ್ಲ ರೋಗಗಳಿಗೂ ಅವನ ಬಳಿಯಿದ್ದ ಔಷಧಿಯಷ್ಟೇ.

ಗಾಂಧಿ ಎಲ್ಲಿಯೂ ನಿಲ್ಲುವಂತಿರಲಿಲ್ಲ. ಅಹಿಂಸೆಯ ಪೂಜಾರಿ ಹಿಂಸೆಯ ಕಡಲಿನಲ್ಲಿಯೇ ಯಾತ್ರೆಯನ್ನು ಮುಂದುವರೆಸಬೇಕಾಗಿತ್ತು. ಈಗ ಆತ ನಿಜಾಮನ ವಾಸ್ತವ್ಯವಿರುವ ಕನ್ನಾಟ್ ಸರ್ಕಸ್ ಪ್ರದೇಶಕ್ಕೆ ಬಂದ. ಅದೊಂದು ರೀತಿಯಲ್ಲಿ ದೆಹಲಿ ಸತ್ತ ಅಥವಾ ಸಾಯುತ್ತಿರುವ ರೀತಿಗೊಂದು ಸಾಕ್ಷಿಯಾದ ಪ್ರದೇಶ. ಎಲ್ಲಿ ನೋಡಿದರಲ್ಲಿ ಪೋಲಿಸ್‌ರು, ಸೈನಿಕರು, ನಿರ್ಜನವಾದ ರಸ್ತೆಗಳು, ಸುಟ್ಟಬಾಗಿಲುಗಳು, ರಸ್ತೆಯ ತುಂಬಾ ಗಾಜಿನ ಚೂರುಗಳು ಇವೆಲ್ಲ ಮಹಾನ್ ಭಾರತೀಯರ ವಿಕೃತಿಯ ಕಥೆಯನ್ನು ಸಾರುವಂತಿದ್ದವು. ಗಾಂಧಿ ಈಗ ಅವರ ಪಾಲಿನ ಆಶಾಕಿರಣ. ತಮ್ಮ ಸಾಮಾನು, ಸರಂಜಾಮುಗಳೊಂದಿಗೆ ಬದುಕಿಗಾಗಿ ಒಂದು ನಿಶ್ಚಿತ ನೆಲೆಯನ್ನು ಹುಡುಕುತ್ತಿದ್ದ ಜನಗಳು ಕೊನೆಗೆ ಗಾಂಧಿಯಿಂದಾದರೂ ಏನಾದರೂ ಒಂದು ಪರಿಹಾರ ದೊರೆತೀತು ಎಂದು ಕಾಯ್ದುಕೊಂಡಿದ್ದರು. ಈ ಗಾಂಧಿ ಬಂದಾದರೂ ಬರಲಿ ಈತ ಜೀವನದುದ್ದಕ್ಕೂ ಮರೆಯಲಾರದ ಪ್ರಶ್ನೆಯೊಂದನ್ನು ಕೇಳಿಯೇ ಬಿಡುತ್ತೇನೆ ಎಂದು ಸಾಮಾನ್ಯ ಮುಸ್ಲಿಂ ಮಹಿಳೆಯೊಬ್ಬಳು ಕುದಿಯುತ್ತಿದ್ದಳು. ಗಾಂಧಿ ಬಂದ, ಆಕೆಯ ಪ್ರಶ್ನೆಗಳ ಸುರಿಮಳೆ ಪ್ರಾರಂಭವಾಯಿತು. "ನಾವು ನಮ್ಮ ಪಾಲಿಗೆ ಸಂಸಾರ ಸಂತೃಪ್ತಿಗಳೊಂದಿಗೆ ತಣ್ಣಗಿದ್ದೆವು. ಈಗ ನೋಡು ಜನ ಬೆತ್ತಲೆಯಾಗಿ ನಮ್ಮ ಮೇಲೆ ಎರಗಿದ್ದಾರೆ. ಕತ್ತಲೆ ನಮ್ಮನ್ನು ಕೊಳ್ಳೆ ಹೊಡೆದಿದೆ. ಎಲ್ಲಿ ಏನಿದೆ? ಎನ್ನುವುದನ್ನು ಗೊತ್ತಿಲ್ಲದ ಮುಗ್ಧ ಜನ ನೀವು ತೋರಿಸಿದ ರಾಷ್ಟ್ರಗಳ ಕಡೆಗೆ ಹೊರಟು, ಬಂಧುವರ್ಗವನ್ನು ಕಳೆದುಕೊಂಡು ಕೊನೆಗೆ ಪ್ರಾಣವನ್ನೂ ರಕ್ಷಿಸಿಕೊಳ್ಳಲಾಗದೇ ಕೊಲೆಯಾಗಿದ್ದಾರೆ. ನನ್ನನ್ನು ನೋಡು ಬಾಪು, ನಾನು ಗಂಡನನ್ನ ಕಳೆದುಕೊಂಡಿದ್ದೇನೆ. ಸಂಬಂಧಿಗಳನ್ನು ಕಳೆದುಕೊಂಡಿದ್ದೇನೆ. ಆಸರೆಯಾಗಿ ಉಳಿದಿದ್ದ ಮಕ್ಕಳನ್ನೂ ಕಳೆದುಕೊಂಡಿದ್ದೇನೆ. ಈ ಮುಪ್ಪಿಗೆ ಯಾರ ಬಳಿ ಹೋಗುವುದು, ಯಾರ

ಆಸರೆ ಬಯಸುವದು. ನನ್ನಂತೆ ಇಲ್ಲಿ ನೂರಾರು ಕುಟುಂಬಗಳ ಗೋಳು. ಬಾಪು ನೀನೇ ಹೇಳು ನಾವು ಎಂದಾದರೂ ಇಂತಹ ಸ್ವಾತಂತ್ರ್ಯ, ಇಂತಹ ಪಾಕಿಸ್ಥಾನಕ್ಕಾಗಿ ಕೇಳಿದ್ದೆವೋ? ಯಾವ ತಪ್ಪಿಗಾಗಿ ನಮಗೆ ಇಂತಹ ಘೋರ ಶಿಕ್ಷೆ? ಈಗ ನಾವು ಯಾರ ನಂಬಿ ಬದುಕಬೇಕು"?

ಗಾಂಧಿ ಅವಳೊಂದಿಗೆ ಅಳುತ್ತಲೇ ಇದ್ದ. ಇದು ಗಾಂಧಿಯೊಳಗಿನ ಗಾಂಧಿಯೊಬ್ಬನ ತಾಕಲಾಟವೂ ಆಗಿತ್ತು. ತನ್ನ ಅತ್ಯಂತ ವಿನೀತ ನಿಸ್ರೋತ ಧ್ವನಿಯಲ್ಲಿ ಆ ತಾಯಿಯ ಕೈ ಹಿಡಿದು ಗಾಂಧಿ ಹೇಳಿದ "ಹೌದು ಮಾಯಿ, ನೀನು ನಿನ್ನ ಗಂಡ ಮತ್ತು ಕುಟುಂಬವನ್ನು ಕಳೆದುಕೊಂಡಿದ್ದಿಯಾ. ಆದರೆ ಖುದಾನನ್ನು ಮರೆಯುತ್ತೀಯಾ? ಆತ ನಮ್ಮನ್ನೆಲ್ಲ ಆಳುತ್ತಿದ್ದಾನೆ. ಆತನೇ ನಮಗೆ ರಕ್ಷಣೆಯನ್ನು ನೀಡಬೇಕಿದೆ. ನಾವು ಎಲ್ಲವನ್ನೂ ಕಳೆದುಕೊಂಡಾಗಲೂ ಆತನೊಬ್ಬನೇ ನಮ್ಮೊಂದಿಗಿರುತ್ತಾನೆ. ಖುದಾ ಇದ್ದಾನೆ ಮಾಯಿ. ಆತ ನಮಗೆ ಇದೆಲ್ಲವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ನೀಡುತ್ತಾನೆ." ಹೀಗೆ ಹೇಳುವಾಗ ಗಾಂಧಿ ತನ್ನ ಪಕ್ಕದಲ್ಲಿದ್ದ ಜಮಾತ್ ಉಲ್ ಉಲೆಮಾದ ನಾಯಕರುಗಳಾದ ಮೌಲ್ವಿ ಹಿಫ್ಜರ್ ರಹೆಮನ್, ಮೌಲಾನಾ ಹಾಜಿ ಮಹ್ಮದ ನಾಸಿಂ, ಮತ್ತು ಮೌಲಾನ ಝೂಪ್ರಿಯೆಡೆಗೆ ಪಿಳಿಪಿಳಿ ಕಣ್ಣು ಬಿಟ್ಟು ನೋಡುತ್ತಿದ್ದ. ಆತನ ಮಾತುಗಳಿಗೆ ಧರ್ಮದ ಒಂದಿಷ್ಟು ಬೆಂಬಲ ಬರಲಿ. ಅಧಮ ಧರ್ಮವೆಂದರೆ ಇದುವೇ ಎನ್ನುವದು ಧ್ವನಿಸಲಿ ಎಂಬುವರು ಗಾಂಧೀಯ ನೋಟದ ನಿರೀಕ್ಷೆಯಾಗಿರಬಹುದು.

ಸಾಯಂಕಾಲವಾಗಿತ್ತು, ಗಾಂಧಿ ದೆಹಲಿಯ ಪಶ್ಚಿಮ ಭಾಗವನ್ನು ಸುತ್ತಿಕೊಂಡು ಪ್ರಾರ್ಥನೆಗೆ ಹೋದ. ಸಾಯಂಕಾಲದ ತನ್ನ ಪ್ರಾರ್ಥನೆಯಲ್ಲಿ ಹಿಂದುಗಳ ಮುಂದೆ ಗಾಂಧಿಯಿಟ್ಟ ಪ್ರಶ್ನೆ ಹೀಗಿತ್ತು. "ನಮಗೆ ನೋವಾಗಿದೆ. ಖಂಡಿತವಾಗಿಯೂ ನಮಗೆ ನೋವಾಗಿದೆ. ಆದರೆ ಪ್ರತಿಕಾರ ಈ ನಮ್ಮ ನೋವನ್ನು ಶಮನಗೊಳಿಸಬಹುದೆ? ನನ್ನ ಹಿಂದು ಬಂಧುಗಳೇ, ನಮ್ಮ ಬಂಧುಗಳ ಕೊಲೆ ಪಾಕಿಸ್ಥಾನದಲ್ಲಿ ನಡೆಯಿತು ಎನ್ನುವ ಕಾರಣಕ್ಕಾಗಿ ಇಲ್ಲಿ ನಾವು ಮುಸ್ಲಿಂರನ್ನೇಕೆ ಕೊಲ್ಲಬಾರದು? ಎನ್ನುವ ಪ್ರಶ್ನೆಯನ್ನು ಹಾಕಿಕೊಳ್ಳಬಹುದೆ? ಗೊತ್ತಿರಲಿ ದೌರ್ಜನ್ಯವನ್ನು ದೌರ್ಜನ್ಯದಿಂದಲೇ ಕೊನೆಗಾಣಿಸಲಾಗದು. ರಕ್ತಪಾತದಲ್ಲಿ ತೊಡಗಿಕೊಳ್ಳವದು ನಮ್ಮನ್ನು ಮತಿಹೀನರನ್ನಾಗಿ ಮಾಡುತ್ತದೆ. ನಾನು ಈ ಅನುಭವವನ್ನು ಯಾವುದೇ ಪುಸ್ತಕದಿಂದ ಎತ್ತಿಕೊಂಡು ಹೇಳುತ್ತಿಲ್ಲ. ನನ್ನ ಬದುಕಿನ ಅನುಭವದ ಹಿನ್ನೆಲೆಯಲ್ಲಿ ಹೇಳುತ್ತಿದ್ದೇನೆ. ಕೆಡುಕನ್ನು ಒಳಿತಿನಿಂದಷ್ಟೇ ಗೆಲ್ಲಬಹುದಾಗಿದೆ."

ಗಾಂಧಿ ಮಾತಾಡುತ್ತಿದ್ದ. ಈ ಸಂದರ್ಭದಲ್ಲಿ ಆತನ ಮಾತುಗಳು ಒಳಗಿಳಿಯುವಷ್ಟು ಬಹುತೇಕ ಕಾಲದ ನೆಲ ಹದಗೊಂಡಿರಲಿಲ್ಲ.



ಆಯುಧಗಳನ್ನು ಕೊಡಿ: ಕೊಡುವೆ ಶಾಂತಿ ಕೈಪಿಡಿ

೨೨

ಸೆಪ್ಟಂಬರ್ 13 ಗಾಂಧಿ ತನ್ನ ಪ್ರಾರ್ಥನೆ ಸಂಧರ್ಭದಲ್ಲಿ, ದೆಹಲಿಯ ಒಟ್ಟು ಕೋಮುಗಲಭೆಯನ್ನು ಗಮನದಲ್ಲಿಟ್ಟುಕೊಂಡು ಬಿರ್ಲಾಹೌಸ್‌ನಲ್ಲಿ ಒಂದು ಕಥೆ ಹೇಳುತ್ತಾನೆ. ಅದು ಆತನ ಬಾಲ್ಯದ ಬದುಕಿನಿಂದ ಎತ್ತಿ ತೆಗೆದುಕೊಂಡ ಒಂದು ಘಟನೆಯಷ್ಟೆ. ಆತನ ಮಾತಿನ ಪ್ರಸ್ಥುತತೆ ಮತ್ತು ಅಪ್ರಸ್ಥುತತೆಯ ಆಲೋಚನೆಯನ್ನು ಆನಂತರ ಮಾತಾಡೋಣ. ಆದರೆ ಆತ ನಿಂತು ಮಾತನಾಡುವ ನೆಲೆಯನ್ನು ಪ್ರಶ್ನಿಸುವದು ಅಪರಾಧವೆನ್ನಿಸುತ್ತದೆ ನನಗೆ. ಯಾಕೆಂದರೆ ಅದು ಆತನ ಬದುಕೆ.

ಗಾಂಧಿ ಹೇಳುತ್ತಾನೆ “ನನಗಾಗ ಹತ್ತು ವರ್ಷವಿರಬಹುದು. ನನ್ನ ಹಿರಿಯ ಅಣ್ಣ ಅಜಾರಿ ಬಿದ್ದ. ಹುಚ್ಚನೇ ಆದ ಅಂದುಕೊಳ್ಳಿ. ಹುಚ್ಚುಹುಚ್ಚಾಗಿ ಆಡುತ್ತಿದ್ದ ಎಲ್ಲರೂ ಆತನ ಸ್ಥಿತಿಯನ್ನು ನೋಡಿ ಮರುಗಿದರು. ಆತನನ್ನು ಅನೇಕ ವೈದ್ಯರಲ್ಲಿ ಕಳುಹಿಸಿಕೊಟ್ಟರು. ನೆನಪಿರಲಿ ಅಣ್ಣನನ್ನು ನಾವು ಜೈಲಿಗೆ ಕಳುಹಿಸಲಿಲ್ಲ. ನನ್ನ

ತಂದೆ ಆಗ ಏನೂ ಮಾಡಬಹುದಾಗಿತ್ತು. ಆದರೆ ಯಾಕೆ ಹಾಗೇ ಮಾಡಲಿಲ್ಲ. ಹಾಗೆಯೇ ಎಲ್ಲ ಜನತೆಯೂ. ಸಜ್ಜನರು, ಲಫಂಗರು, ದುರುಳರು, ಹುಚ್ಚರು ಎಲ್ಲರೂ ನನ್ನ ಮಕ್ಕಳೇ ಅಥವಾ ನನ್ನ ಸಹೋದರರೆ. ಮುಸ್ಲಿಂರನ್ನ ನನ್ನ ವೈರಿಗಳೆಂದು ಪರಿಗಣಿಸುವಂತಿಲ್ಲ. ದೇಶವಿಭಜನೆಯಾದ ಮಾತ್ರಕ್ಕೆ ಮುಸ್ಲಿಂರು ನಮ್ಮ ವೈರಿಗಳಾಗಬಾರದು. ಪಾಕಿಸ್ಥಾನಕ್ಕೆ ಹೋಗಲಾಗದೆ ಹಿಂದೆ ಉಳಿದವರನ್ನು ಕೊಲ್ಲುವದು ಸಾಧುವಲ್ಲ. ಪಂಜಾಬದಿಂದ ಯಾವನೋ ಒಬ್ಬ ಹಿಂದೂ ಅಥವಾ ಸಿಖ್ ತನ್ನ ತಮ್ಮ, ತಂಗಿ ಅಥವಾ ತಂದೆ ಮುಸ್ಲಿಂರಿಂದ ಕೊಲೆಯಾಗಿದ್ದಾರೆ. ಅದಕ್ಕಾಗಿ ನಾನು ಪ್ರತಿಕಾರ ತೀರಿಸಿಕೊಳ್ಳುತ್ತೇನೆ ಎನ್ನುವುದಾದರೆ ಆತನಿಗೆ ನಾನು ಹೇಳುವುದಿಷ್ಟೇ, ಬಂಧುವೇ ಅವರೆಲ್ಲರೂ ನನ್ನವರೇ ಆಗಿದ್ದರು.

ನಾನೂ ಒಬ್ಬ ಮನುಷ್ಯ, ಸಿಟ್ಟು ನನಗೂ ಬರುತ್ತದೆ. ನಾನದನ್ನ ನುಂಗಿಕೊಳ್ಳುತ್ತೇನೆ. ಅದು ಶಕ್ತಿಯಾಗಿ ಮಾರ್ಪಾಡುತ್ತದೆ. ಕೆಡುಕನ್ನು ಒಳಿತಿನಿಂದ ಮಾತ್ರ ಗೆಲ್ಲಲು ಸಾಧ್ಯ. ಯಾವುದನ್ನು ಮಾಡುವುದರಿಂದ ನಾವು ಆನಂತರ ಕುಳಿತು ಪಶ್ಚಾತಾಪ ಪಡಬೇಕಾಗುತ್ತದೆಯೋ ಆ ಕಾರ್ಯವನ್ನು ನಾವು ಯಾಕೆ ಮಾಡಬೇಕು?"

ಇಂತಹ ಮಾತುಗಳಿಂದ ಗಾಂಧಿ ಕೆಲವು ಕಡೆ ದೇವರಾಗುತ್ತಿದ್ದ. ಒಂದೆಡೆ ಆತ ತಿರಸ್ಕಾರಕ್ಕೆ ಒಳಗಾಗುತ್ತಿದ್ದರೆ, ಮತ್ತೇ ಕೆಲವೆಡೆ ಆತ ಆರಾಧನಾ ಮೂರ್ತಿಯಾಗುತ್ತಿದ್ದ. ಇದೆಲ್ಲವೂ ಅಪಾಯದ ಸೂಚನೆಯೇ ಆಗಿತ್ತು, ಹುತಾತ್ಮತೆಯ ಸಂಕೇತವಾಗಿತ್ತು. ಆದರೆ ಗಾಂಧಿಗೆ ತನ್ನನ್ನು ಇಡಿಯಾಗಿ ಒಪ್ಪಿಕೊಳ್ಳುವ ಕೆಲವೇ ಕೆಲವು ಸಾಮಾನ್ಯರ ಅವಶ್ಯಕತೆಯಿತ್ತು. ಅಚ್ಚರಿಯ ವಿಷಯವೆಂದರೆ ಬಾಂಬೆಯಲ್ಲಿ ಕೆಲವು ಜನ ಗಾಂಧಿಯ ಮೂರ್ತಿಯನ್ನು ಸ್ಥಾಪಿಸುವುದು ಎಂದು ನಿರ್ಧಾರ ಮಾಡಿ 10 ಲಕ್ಷ ರೂಪಾಯಿ ಜನರಿಂದ ಸಂಗ್ರಹಿಸುವ ಯೋಜನೆಯನ್ನು ಹಾಕಿಕೊಂಡಾಗಿತ್ತು. ಅಷ್ಟೇ ಸಂಖ್ಯೆಯಲ್ಲಿ ಈ ನಿರ್ಧಾರವನ್ನು ವಿರೋಧಿಸುವ, ಟೀಕಿಸುವರ ಗುಂಪೂ ಹುಟ್ಟುಕೊಂಡಿತ್ತು. ಇದಕ್ಕಾಗಿ ವಾದ-ವಿವಾದಗಳು, ಚರ್ಚೆಗಳು ಪ್ರಾರಂಭವಾಗಿಬಿಟ್ಟವು. ಗಾಂಧಿಗೆ ಇದ್ಯಾವುದೂ ಇಷ್ಟವಿರಲಿಲ್ಲ. ಹೀಗಾಗಿ ಸಪ್ಟೆಂಬರ್ 13 ರಂದು ಹರಿಜನ ಪತ್ರಿಕೆಗೆ ಗಾಂಧಿ ಬರೆದು ತಿಳಿಸಿದ.

"ಬಂಧುಗಳೇ,

ನನಗೆ ಈ ಎಲ್ಲ ಚರ್ಚೆಗಳಿಂದ ನೋವಾಗಿದೆ. ಅತ್ಯಂತ ಕಟು ಶಬ್ದಗಳಿಂದ ನನ್ನನ್ನು ಟೀಕಿಸಿ ಬರೆದ ಅನೇಕ ಪತ್ರಗಳನ್ನು ಮುಂದಿಟ್ಟುಕೊಂಡು ನಾನು ಈ ಮಾತನ್ನು ಹೇಳುತ್ತಿದ್ದೇನೆ. ಕೆಲವರಂತೂ ನಾನೇ ಕುಳಿತು ಇದೆಲ್ಲವನ್ನು ಮಾಡಿಸುತ್ತಿದ್ದೇನೆ ಎಂದು ಕಿಡಿ ಕಾರಿದ್ದಾರೆ. ಆದರೆ ಗೊತ್ತಿರಲಿ ನನಗೆ ಫೋಟೋ ತೆಗೆಸಿಕೊಳ್ಳುವುದೂ ಕೂಡ ಅಪ್ರಿಯವಾದ ವಿಷಯ. ಆದಾಗ್ಯೂ ನನ್ನ ಫೋಟೋಗಳನ್ನು ತೆಗೆಯಲಾಯಿತು. ಕಲಾವಿದನೊಬ್ಬನಿಗೆ ಮಾಡಲ್ ತರಹ ನಾನು ಅನೇಕ ಬಾರಿ ಕುಳಿತುಕೊಳ್ಳಬೇಕಾಯಿತು ಎನ್ನುವುದೇ ನನಗೆ ಖೇದದ ವಿಷಯವಾಗಿರುವಾಗ ನನ್ನ ಹೆಸರಿನಲ್ಲಿ ಒಂದು ಮೂರ್ತಿ ಸ್ಥಾಪನೆಯಾಗುವುದನ್ನು ನಾನು ಒಪ್ಪಿಕೊಳ್ಳುವದು ಹೇಗೆ ಸಾಧ್ಯ? ಜೀವನದುದ್ದಕ್ಕೂ ನಾನು ದುಂದುವೆಚ್ಚವನ್ನ ವಿರೋಧಿಸಿ, ಪ್ರಚಾರವನ್ನು ವಿರೋಧಿಸಿ, ಸರಳ ಬದುಕನ್ನು ಬಾಳುತ್ತ ಬಂದವನು. 10 ಲಕ್ಷ ರೂಪಾಯಿಯೆಂದರೆ ದೊಡ್ಡ ಮೊತ್ತ. ಒಂದು ಕ್ಷಣ ಕಲ್ಪನೆ ಮಾಡಿಕೊಳ್ಳಿರಿ ಇಷ್ಟು ದೊಡ್ಡ ಹಣದಲ್ಲಿ ಅದೆಷ್ಟು ಜೀವಗಳಿಗೆ ಅನ್ನ ಸಿಗಬಹುದು. ಬೆಳೆ ಬೆಳೆಯಬಹುದು, ಬದುಕನ್ನು ಕಟ್ಟಿಕೊಡಬಹುದು!"

ಗಾಂಧಿ ಗೊಂದಲದಲ್ಲಿದ್ದ. ವಾಲ್ಜಿ ದೇಸಾಯಿಗೆ ಬರೆದ ಪತ್ರದಲ್ಲಿ ಈಗ ತನ್ನ ಸ್ಥಿತಿ ಯಾವ ರೀತಿ ಇದೆ ಎನ್ನುವುದನ್ನು "My cart has got stuck in a wood" ಎನ್ನುವ ಸುಂದರ ಇಂಗ್ಲಿಷ್ ಸಾಲಿನಲ್ಲಿ ಚಿತ್ರಿಸಿಟ್ಟಿದ್ದಾನೆ.

ದೆಹಲಿಯಲ್ಲಿ ಗಾಂಧಿಯ ಯಾವ ಮಾತೂ ನರಮೇಧವನ್ನು ನಿಲ್ಲಿಸುವಲ್ಲಿ ಯಶಸ್ವಾಗಲಿಲ್ಲ. ಕರ್ಫ್ಯೂ ಇದೆ. ಪೋಲಿಸರಿದ್ದಾರೆ. ಎಲ್ಲವೂ ಸೈನ್ಯವೇ ನಿಭಾಯಿಸುತ್ತಿದೆ. ಚಾಂದನಿ ಚೌಕ, ತುರ್ಕ್‌ಮನ್ ಗೇಟ್ ಎಲ್ಲವೂ ಸ್ಮಶಾನಗಳಾಗಿ ಮಾರ್ಪಟ್ಟಿವೆ. ಈ ದೃಶ್ಯವನ್ನು ನೋಡುವ ಎದೆಗಾರಿಕೆ ಯಾವ ಭಾರತೀಯ ಮುಖಂಡನಿಗೂ ಇಲ್ಲ.

ಲಾರ್ಡ್ ಮೌಂಟ್‌ಬ್ಯಾಟನ್ ತನ್ನ ಪತ್ನಿ ಲೇಡಿ ಮೌಂಟ್ ಬ್ಯಾಟನ್‌ಗಳೊಂದಿಗೆ ದೆಹಲಿಯ ಪುರಾನಾ ಕಿಲ್ಲಾದ ಗಸ್ತು ತಿರುಗುತ್ತಿದ್ದಾನೆ. ಜೀವ ಬೆದರಿಕೆಯಲ್ಲಿರುವ ಈ ಪ್ರದೇಶಗಳ ಮುಸ್ಲಿಂರಲ್ಲಿ ಮತ್ತೆ ಭರವಸೆಯನ್ನು ಹುಟ್ಟಿಸುವದಕ್ಕಾಗಿ ಗಾಂಧಿ ದಿವಾನ್ ಚಮನ್ ಲಾಲ್ ಮತ್ತು ಡಾಕ್ಟರ್ ದೀನ ಶಾ ಮೆಹತಾ ಅವರೊಂದಿಗೆ ತಿರುಗಾಡುತ್ತಿದ್ದಾನೆ. ಅವನಿಗೆ ಈಗ ಯಾವ ರಾಜಮರ್ಯಾದೆಯೂ ಇಲ್ಲ. ಹಲವು ಕಡೆಯಂತೂ ಬೈಗುಳಗಳ ಸುರಿಮಳೆಯೇ. ಆದರೆ ಗಾಂಧಿಯ ಘೋಷವಾಕ್ಯ ಒಂದೇ "I shall eihther put matters right here or I shall die in the process. Let the Hindus and the Sikhs invite every Muslim driven out to return to his home. This alone is right."

ಗಾಂಧಿಯ ಈ ಮಾತು ಮುಸ್ಲಿಂರಿಗೇನೊ ಭರವಸೆ ಹುಟ್ಟಿಸಿತು. ಆದರೆ ಹಿಂದುಗಳಲ್ಲಿ ಗಾಂಧಿಯ ಬಗೆಗಿದ್ದ ವಿಶ್ವಾಸ ಉಡುಗಿಹೋಯಿತು. ಗಾಂಧಿ ಬಹುಸಂಖ್ಯಾತ ಹಿಂದೂಗಳ ವಿರೋಧಕ್ಕೆ ಗುರಿಯಾದ. ಈ ಮಾತಿನ ಮೂಲಕ ಆತ ಸಾವಿಗೆ ಸಮೀಪನಾದ. ಸರಿ, ಮುಸ್ಲಿಂರಾದರೂ ಗಾಂಧಿಯ ಈ ಸಾಂತ್ವಾನವನ್ನೇ ನಂಬಿ ಬದುಕಿದ್ದರೋ? ಖಂಡಿತವಾಗಿಯೂ ಇಲ್ಲ. ಭಯ, ಸಂಶಯ, ಅಪನಂಬಿಕೆ ಅವರನ್ನು ಆಂತರಿಕವಾಗಿ ಉಗ್ರಗಾಮಿಗಳನ್ನಾಗಿ ಬದಲಾಯಿಸುತ್ತಾ ಇತ್ತು. ಹಳೇ ದೆಹಲಿಯ ಜುಮ್ಮಾ ಮಸಜಿದ್, ಅಜ್ಮೀರ್ ಗೇಟ್, ತುರ್ಕಮನ್ ಗೇಟ್, ದರಿಯಾ ಗಂಜ್ ಮತ್ತು ದೆಹಲಿ ಗೇಟುಗಳು ಮಾರಕಾಸ್ತ್ರಗಳ ಶೇಖರಣಾ ಸ್ಥಳಗಳಾಗಿ ಮಾರ್ಪಟ್ಟವು. ರೈಫಲ್‌ಗಳು, ಸ್ಟೇನ್‌ಗನ್‌ಗಳು ಮತ್ತು ಮಶೀನ ಗನ್‌ಗಳು ಕಾಳಸಂತೆಯಿಂದ ನೇರವಾಗಿ ಮುಸ್ಲಿಂರ ಕೈಗೆ ದೊರೆಯಲು ಆರಂಭಿಸಿದವು. 'ನಿರಾಶ್ರಿತರಿಗಾಗಿ ಆಹಾರ' ಎನ್ನುವ ಲೇಬಲ್‌ಗಳಿರುವ ಪೆಟ್ಟಿಗೆಗಳ ತುಂಬ ಆಯುಧಗಳು ಬಂದು ನಿರಾಶ್ರಿತರ ಕ್ಯಾಂಪಗಳನ್ನು ಸೇರಿಕೊಂಡವು. ಇದಕ್ಕೆ ಸಾಕ್ಷಿ ಎನ್ನುವಂತೆ ಚಾರ್ಟಡ್ ಬ್ಯಾಂಕ್ ಆಫ್ ಇಂಡಿಯಾದ ದೆಹಲಿ ಬ್ರ್ಯಾಂಚ್‌ನ ಸಬ್ ಏಜೆಂಟ-ರಾಗಿದ್ದ ಮಿಸ್ಟರ್ ಜಾನ್ ಐರವಿನ್‌ನ ಕೊಲೆಯಾಯಿತು. ಆತ ಮುಂಜಾನೆ ಎದ್ದು ಆಫೀಸ್‌ಗೆ ಹೋಗುವ ವೇಳೆ ದಂಗೆಕೋರರು ಆತನ ಮೇಲೆ ಗುಂಡಿನ ಮಳೆಗರೆದರು. ಹಾಗೆ ಅದೇ ಸಂದರ್ಭದಲ್ಲಿ ಕೆಲವರು ಅಂಗಡಿಗಳ ಲೂಟಿಮಾಡಿದರು.

ಸಪ್ಟೆಂಬರ್ 14 ರ ಮುಂಜಾನೆ ಗಾಂಧಿ ಯಮುನಾ ನದಿಯ ಪಶ್ಚಿಮಕ್ಕಿರುವ ಈದ್ಗಾ ಮೈದಾನಕ್ಕೆ ಬೆಟ್ಟಿಕೊಟ್ಟ. ಅದೊಂದು ನರಕದ ಕೂಪ. 45000 ಮುಸ್ಲಿಂ ಕುಟುಂಬಗಳು

ಅಲ್ಲಿ, ನಿರಾಶ್ರಿತರ ತಾಣಗಳಲ್ಲಿ ಬದುಕಿಗಾಗಿ ಬಡಿದಾಡುತ್ತಿದ್ದವು. ಮುರಿದ ಟಾಂಗಾಗಳು, ಅವಸರದಲ್ಲಿ ತೆಗೆದುಕೊಂಡು ಬಂದಿದ್ದ ಬಂಡಿಗಳು, ಸೈಕಲ್‌ಗಳು ಎಲ್ಲಿ ನೋಡಿದರಲ್ಲಿ ಬಿದ್ದುಕೊಂಡಿದ್ದವು. ಗಾಂಧಿಗೆ ಒಂದು ಕ್ಷಣ ಅನ್ನಿಸರಬೇಕು 30 ವರ್ಷಗಳ ಹಿಂದಿನ ದೆಹಲಿ ಈಗ ಉಳಿದುಕೊಂಡಿಲ್ಲ. ಆ ಶಾಂತಿ, ಪ್ರೀತಿ ವಿಶ್ವಾಸಗಳು ಈಗ ಉಳಿದುಕೊಂಡಿಲ್ಲ.

ಒಂದು ಕಾಲಕ್ಕೆ ಇದೇ ಸ್ಥಳದಲ್ಲಿ ಸುಪ್ರಸಿದ್ಧ ಹಕೀಮರಾಗಿದ್ದ ಅಜಮಲ್ ಖಾನ್, ಯುನಾನಿ ಪಂಡಿತರಾಗಿದ್ದ ಡಾ. ಅನ್ಸಾರಿ ಹಾಗೂ ಅವರ ಮಗಳಾಗಿದ್ದ ಜೋಹರಾ ಈ ಪ್ರದೇಶದಲ್ಲಿ ವಾಸವಾಗಿದ್ದರು. ಡಾ. ಅನ್ಸಾರಿಯವರ ಕುಟುಂಬವನ್ನಂತೂ ಒಬ್ಬ ಹಿಂದೂ ವಾಚಮನ್ ತನ್ನ ಪ್ರಾಣವನ್ನು ಬಲಿಕೊಟ್ಟು ರಕ್ಷಿಸಿದ್ದ. ಅವರ ಮರ್ಯಾದೆ ಮತ್ತು ಆಸ್ತಿಗಳನ್ನು ಕಾಯ್ದಿದ್ದ. ಈ ಇಬ್ಬರು ವೈದ್ಯ ಮಹನೀಯರ ಅವಧಿಯಲ್ಲಿ ಈ ಪ್ರದೇಶ ಸರ್ವ ಜನಾಂಗಗಳ ಶಾಂತಿಯ ತೋಟವಾಗಿತ್ತು. ಆದರೆ ಇದ್ದಕ್ಕಿದ್ದಂತೆ ಈಗ ಏನಾಯಿತು ಈ ಜನರಿಗೆ? ನಿರಾಶ್ರಿತರ ಬಳಿ ನಿರಾಯುಧನಾಗಿ ಕುಳಿತು ಗಾಂಧಿ ಒಂದು ಪ್ರಶ್ನೆ ಕೇಳಿದ "ಪೋಲಿಸ್‌ರು ನಮ್ಮವರೇ, ಸೈನಿಕರು ನಮ್ಮವರೇ. ಇವರ್‍ಯಾರೂ ಬ್ರಿಟೀಷರಲ್ಲ. ಆದರೂ ನಿಮ್ಮೆಲ್ಲರ ಬಳಿ ಆಯುಧಗಳಿವೆಯಲ್ಲ ಯಾಕೆ ಹೀಗೆ? ನಿಮಗೀಗ ಬೇಕಿರುವದು ಅನ್ನ ಮತ್ತು ವಸ್ತ್ರವೋ ಅಥವಾ ಪರಸ್ಪರರ ರಕ್ತವೊ? ನನಗೊಂದೂ ಅರ್ಥವಾಗುತ್ತಿಲ್ಲ."

ಅಂದ ಹಾಗೆ ಗಾಂಧಿಗೆ ಅದು ಅರ್ಥವಾಗುವ ಹಾಗೂ ಇರಲಿಲ್ಲ. ಭಾವನಾತ್ಮಕವಾಗಿ ಇನ್ನೂ 30 ವರ್ಷಗಳಷ್ಟು ಹಿಂದೆಯೇ ಉಳಿದಿದ್ದ ಗಾಂಧಿಗೆ ನಮ್ಮ ಭಾರತೀಯರು ಬದಲಾದ ಪರಿಯೇ ಗೊತ್ತಿರಲಿಲ್ಲ. ಅವರು ಈಗ ಹಿಂದುಗಳಾಗಿದ್ದರು, ಮುಸ್ಲಿಂರಾಗಿದ್ದರು, ಸಿಖ್‌ರಾಗಿದ್ದರು. ಭಾರತೀಯತೆ ಅವರಿಗೀಗ ಬೇಸರವಾಗಿದ್ದ ಮುಖವಾಡ. ಐಕ್ಯತೆ ಚಲವಾಣೆ ಕಳೆದುಕೊಂಡ ನಾಣ್ಯ. ದೇಶ ಸ್ವತಂತ್ರ್ಯವಾಗಿದೆ. ಅವರಿಗೀಗ ರಾಜಕೀಯದ ಕನಸು ಬಿದ್ದಿದೆ. ಅಧಿಕಾರದ ಹಂಬಲವಿದೆ. ಪ್ರಾದೇಶಿಕತೆಯ ಪ್ರಜ್ಞೆ ಬಂದಿದೆ. ಆದರ್ಶಗಳು ಈಗ ಹಳತಾದ ಬಟ್ಟೆಗಳು. ಅಧಿಕಾರ ಗ್ರಹಣದ ದಾರಿಯನ್ನು ತೋರಿಸದ ಮೈಲುಗಲ್ಲುಗಳು. ಆದರೂ ಗಾಂಧಿ ಹೊರಟಿದ್ದಾನೆ, ನಂಬಿಕೆಯನ್ನೇ ನಂಬಿ.

ಮಧ್ಯಾಹ್ನ ಗಾಂಧಿ ನಿರಂತರ ಒಂದು ಗಂಟೆಗಳವರೆಗೆ ಗವರ್ನರ್ ಜನರಲ್ ಮೌಂಟ್‌ಬ್ಯಾಟನ್, ಸರ್ದಾರ್ ಪಟೇಲ್, ಆಚಾರ್ಯ ಕೃಪಲಾನಿ ಮತ್ತು ಮಿಸ್ಟರ್ ಶಂಕರರಾವ್ ಅವರನ್ನು ಕೂಡಿಸಿಕೊಂಡು ಪಾಠ ಹೇಳುತ್ತಿದ್ದ. ಜನರಿಗೆ ಮತಿಯನು ಕೊಡು ಎಂದು ದೇವರಲ್ಲಿ ಪ್ರಾರ್ಥಿಸುತ್ತಿದ್ದ.



ದೇವರೆ ನನ್ನನ್ನು ಕ್ಷಮಿಸು

೨೩

ಸೆಪ್ಟೆಂಬರ್ 15 ರಂದು ಮದ್ರಾಸಿನ ಲೆಜಿಸ್ಲೇಟಿವ್ ಅಸೆಂಬ್ಲಿ ಶ್ರೀ ಜೆ. ಶಿವಶಣ್ಮುಗಂ ಪಿಳ್ಳೈ ಹಾಗೂ ಡಾ. ಪಿ. ಸುಬ್ಬರಾಯನ್ ಇವರ ನೇತೃತ್ವದಲ್ಲಿ ರಾಷ್ಟ್ರಪಿತ ಗಾಂಧಿಗೆ ಒಂದು ಗೌರವವನ್ನು ಸಲ್ಲಿಸುವದು ಎಂದು ನಿರ್ಧರಿಸಿತು. ಮುಯ್ಯಿಗೆ ಮುಯ್ಯಿ, ಕೊಲೆಗೆ ಕೊಲೆ ಎನ್ನುವ ಪ್ರತಿಕಾರದ ಉರಿಯಲ್ಲಿ ದೇಶ ತತ್ತರಿಸುತ್ತಿರುವಾಗ ಗಾಂಧಿ ಎಂಬ ಈ ಮನುಷ್ಯ ಅಹಿಂಸೆಯ ಮೂಲಕ ಏನೆಲ್ಲವನ್ನೂ ಸಾಧಿಸುತ್ತಿರುವುದು ಅವರ ಈ ನಿರ್ಧಾರಕ್ಕೆ ಕಾರಣವಾಗಿತ್ತು.

ಮದ್ರಾಸ್ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿಯ ವಿರೋಧ ಪಕ್ಷದ ನಾಯಕ ಡಾ. ಮಹ್ಮದ ಇಸ್ಲಾಂಯಿಲ್ ಸಾಹೇಬ್ ಕೂಡ ಗಾಂಧಿಗೆ ಸಲ್ಲಿಸಬೇಕಾದ ಈ ಗೌರವಕ್ಕೆ ಸಂಪೂರ್ಣ ಬೆಂಬಲವನ್ನು ಘೋಷಿಸಿದ. ಜೊತೆಗೆ ಕಲ್ಕತ್ತೆಯಲ್ಲಿ ಗೆದ್ದಂತೆ ಗಾಂಧಿ ದೆಹಲಿಯಲ್ಲಿಯೂ ಗೆಲ್ಲಬೇಕು ಎಂದು ಆಶಯವನ್ನೂ ವ್ಯಕ್ತಪಡಿಸಿದ. ಹೀಗೊಂದು ಆಲೋಚನೆ ಇಲ್ಲಿ ನಡೆಯುತ್ತಿರುವಾಗ ಗಾಂಧಿ ದೆಹಲಿಯಲ್ಲಿ ಕಣ್ಣೀರಲ್ಲಿ ನೊಂದು ಹೋಗಿದ್ದ.

ಗಾಂಧಿಯ ಈ ದುಃಖಕ್ಕೆ ಕಾರಣವಿಲ್ಲದೇ ಇರಲಿಲ್ಲ. ದೆಹಲಿಯಲ್ಲಿ ಇದ್ದಕ್ಕಿದ್ದಂತೆ ಮಳೆ ಶುರುವಿಟ್ಟುಕೊಂಡಿತು. ಸುಮಾರು 40 ಸಾವಿರ ನಿರ್ಗತಿಕರು ನಿರಾಶ್ರಿತರ ತಾಣಗಳಲ್ಲಿ ತೊಯ್ದು ತೊಪ್ಪಡಿಯಾಗಿದ್ದರು. ಶೀತಲ ಗಾಳಿ, ಮಳೆ, ಸಿಡಿಲು, ಗುಡುಗು ಮಕ್ಕಳು, ಮಹಿಳೆಯರು, ವೃದ್ಧರು ಎಂಬ ಯಾವ ಬೇಧವೂ ತೋರದೆ ನಿಷ್ಕರುಣಿಯಾಗಿ ಎಲ್ಲರನ್ನೂ ಅನಾಥರನ್ನಾಗಿಸಿತ್ತು. ಕೆಲವು ಅಶಕ್ತರಂತು ತೀರಿಯೆ ಹೋದರು. ದೆಹಲಿಯ ಪಹಾಡ ಗಂಜ್, ಸದರ ಬಜಾರ ಮತ್ತು ಬಹದ್ದೂರ ಗಂಜ್ ಪ್ರದೇಶಗಳಲ್ಲಿ ಮುಸ್ಲಿಂರ ಪರಿಸ್ಥಿತಿಯಂತೂ ತುಂಬಾ ಗಂಭೀರವಾಗಿತ್ತು. ಇಂತಹ ಪ್ರಕೃತಿ ವಿಕೋಪ ಮತ್ತು ನಿಸ್ಸಾಹಯಕತೆಯ ಮಧ್ಯದಲ್ಲೂ ಹಿಂದೂ-ಮುಸ್ಲಿಂರ ಕೊಲೆ ನಿರಂತರವಾಗಿತ್ತು. ಮತ್ತೆ ಗಾಂಧಿ 'ಮಾಡು ಇಲ್ಲವೇ ಮಡಿ' ಎನ್ನುವ ನಿರ್ಧಾರಕ್ಕೆ ಬಂದ. ಬಿರ್ಲಾ ಹೌಸ್‌ನಲ್ಲಿ ನಿದ್ರೆಗೆ ಜಾರಲಾಗದ ಗಾಂಧಿ ತನ್ನ ಕೆಲವು ಅನುಯಾಯಿಗಳನ್ನು ಸೇರಿಸಿಕೊಂಡು ಸಿಟ್ಟು, ನೋವು, ಬೇಸರಗಳೊಂದಿಗೆ ಹೀಗೆ ಹೇಳಲಾರಂಭಿಸಿದ–

"ನಾನು ಇದನ್ನು ಸರಿಪಡಿಸಲೆಂದೇ ಇಲ್ಲಿಗೆ ಬಂದಿದ್ದೇನೆ. ಸಾವಿನ ಭಯವಿಲ್ಲ ನನಗೆ. ಈ ಹುಚ್ಚುತನ ಹೀಗೆ ಮುಂದುವರಿಯುವದಾದರೆ ನಾನು ಇದನ್ನು ಸುಮ್ಮನೆ ನೋಡುತ್ತಾ ಕೂಡ್ರುವವನಲ್ಲ. ಇಂತಹ ಕ್ರಿಯೆಗೆ ನಾನು ಸಾಕ್ಷಿಯಾಗುವವನಲ್ಲ. ಹಿಂದೂಗಳು ಮುಸ್ಲಿಂರನ್ನಾಗಲಿ, ಮುಸ್ಲಿಂರು ಹಿಂದುಗಳನ್ನಾಗಲಿ ದೂಷಿಸುವ ಯಾವ ಪರಸ್ಪರ ನೈತಿಕ ಹಕ್ಕಿಲ್ಲ. ಇಬ್ಬರೂ ತಪ್ಪು ಎಸಗಿದ್ದಾರೆ. ತಪ್ಪಿನಲ್ಲಿಯೂ ಇವರಿಬ್ಬರೂ ಒಂದೆ. ದೇವರ ಬಳಿಗೆ ಹೋಗಲು ಎಲ್ಲರಿಗೂ ಅರ್ಹತೆಗಳಿಲ್ಲ. ದೇವರ ಆಯ್ಕೆ ಎನ್ನುವದು ಒಂದಿದೆ. ಈ ಸತ್ಯ ಎಲ್ಲ ಧರ್ಮಗಳ ತಳಹದಿಯಾಗಿದೆ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ಮುಸ್ಲಿಂರು ಏನಾದರೂ ತಪ್ಪುಗಳನ್ನು ಮಾಡಿಕೊಳ್ಳಲಿ. ಅದಕ್ಕೆ ಪ್ರತಿಯಾಗಿ ನೀವು ಒಳ್ಳೆಯದನ್ನೇ ಮಾಡಿರಿ. ನಿಮಗೆ ಕೆಡುಕಿನ ಮೇಲೆ ಸೇಡು ತೀರಿಸಿಕೊಳ್ಳುವ ಬಯಕೆ ಇದೆಯೋ ಅದನ್ನು ಒಳಿತಿನಿಂದಲೇ ಸಾಧಿಸಿರಿ. ಇಷ್ಟನ್ನ ನಾವು ಮಾಡುತ್ತ ಹೋದರೆ ಸಾಕು. ನಮ್ಮ ಸರ್ಕಾರಕ್ಕೆ ನಾವು ಒಳ್ಳೆಯ ಬುನಾದಿಯನ್ನು ಹಾಕಿದಂತಾಗುತ್ತದೆ. ಇಲ್ಲದಾದ್ದಲ್ಲಿ ಎಲ್ಲವನ್ನೂ ಕಳೆದುಕೊಂಡು ಮತ್ತೆ ಪರಾಧೀನತೆಯನ್ನು ಅನುಭವಿಸಬೇಕಾಗುತ್ತದೆ. ಇದೆಲ್ಲವೂ ಮನಃಪರಿವರ್ತನೆಯಿಂದ ಮಾತ್ರ ಸಾಧ್ಯ.

ನಿನ್ನೆ ರಾತ್ರಿಯೆಲ್ಲ ನನಗೆ ನಿರಾಶ್ರಿತರ ಬಗ್ಗೆ ಚಿಂತೆಯಾಯಿತು. ನಮಗೆ ಬದುಕನ್ನು ನೀಡಬೇಕಾದ ಮಳೆ ಶಾಪವಾಗಿ ಪರಿವರ್ತನೆಯಾಯಿತು. ಮೊದಲೇ ಮನುಷ್ಯನ ಶಾಪಗ್ರಸ್ಥ ಕೈಗಳಿಂದ ನಿರಾಶ್ರಿತರಾಗಿದ್ದ ಜನರಿಗೆ ಮತ್ತಷ್ಟು ನಿರಾಶೆಯೇ ಆಕ್ರಮಿಸಿಕೊಂಡಿತು. ಇದೆಲ್ಲವು ಅನಿವಾರ್ಯವಾಗಿತ್ತೆ? ಇಲ್ಲ, ಖಂಡಿತವಾಗಿಯೂ ಇಲ್ಲ.

ಕಳೆದ 24 ಗಂಟೆಗಳಿಂದ ನನಗೆ ಈ ಪ್ರಶ್ನೆ ಕಾಡಿದೆ. ಮೌನವೊಂದೇ ನನ್ನ ಸಂಗಾತಿಯಾಗಿದೆ. ನಾನು ಸ್ವವಿಮರ್ಶೆ ಮಾಡಿಕೊಂಡಿದ್ದೇನೆ. ದೆಹಲಿಯ ಜನತೆಗೆ ಏನಾಗಿದೆ? ಹುಚ್ಚು ಹಿಡಿದಿದೆಯೋ? ಮನುಷ್ಯತ್ವ ಎನ್ನುವದು ಒಂದಿಷ್ಟೂ ಉಳಿದಿಲ್ಲವೇ? ದೇಶ, ಸ್ವಾತಂತ್ರ್ಯ, ಅವುಗಳಿಗಾಗಿನ ಹೋರಾಟ ಯಾವುದೂ ನೆನಪಿಲ್ಲವೆ? ಈ ವಿಷಯದಲ್ಲಿ ಹಿಂದುಗಳನ್ನು ಮತ್ತು ಸಿಖ್‌ರನ್ನು ನಾನು ಮೊದಲು ದೂಷಿಸುತ್ತೇನೆ. ತಿರಸ್ಕಾರದ ಈ ಹುಚ್ಚು ಹೊಳೆಯಲ್ಲಿ ಇವರ್‍ಯಾಕೆ ಕೊಚ್ಚಿಕೊಂಡು ಹೋಗುತ್ತಿದ್ದಾರೆ?

ಹಿಂದೂ ಮತ್ತು ಸಿಖ್‌ರು ಜೊತೆಯಾಗಿ ಮುಸ್ಲಿಂರನ್ನು ಅವರವರ ಮನೆಗೆ ಮರಳಿ ಬರುವಂತೆ ಯಾಕೆ ಕರೆಯಬಾರದು? ಎಲ್ಲ ರೀತಿಯಿಂದಲೂ ಸರಿಯಾಗಿರುವ ಇಂತಹ ಹೆಜ್ಜೆಯನ್ನು ತೆಗೆದುಕೊಳ್ಳುವ ಮೂಲಕ ನಿರಾಶ್ರಿತರ ಸಮಸ್ಯೆಯನ್ನು ಕ್ಷಣಾರ್ಧದಲ್ಲಿ ಬಗೆಹರಿಸಿಕೊಳ್ಳಬಹುದು, ಅಲ್ವೆ? ಆಗ ಅವರು ಪಾಕಿಸ್ಥಾನವನ್ನಷ್ಟೇ ಅಲ್ಲ. ಇಡೀ ವಿಶ್ವದ ಮನ್ನಣೆ ಗಳಿಸುತ್ತಾರೆ. ಭಾರತವನ್ನು ಮತ್ತು ದೆಹಲಿಯನ್ನು ಎಲ್ಲ ವಿನಾಶದಿಂದ ರಕ್ಷಿಸುತ್ತಾರೆ.

ದೇಶ ವಿಭಜನೆ ಎಂದ ತಕ್ಷಣ ಹೀಗೆಲ್ಲ ಹಿಂದೂ, ಸಿಖ್ ಮತ್ತು ಮುಸ್ಲಿಂರ ಬಟವಡೆ ಎಂದು ನಾನು ಎಂದಿಗೂ ಯೋಚಿಸಿರಲಿಲ್ಲ. ನಿಮ್ಮನ್ನು ನಂಬಿ ನಾನು ಮೋಸ ಹೋದೆ. ಇಂತಹ ಒಂದು ಕಲ್ಪನೆಯೇ ಮೂರ್ಖತನದ್ದು. ಪಾಕಿಸ್ಥಾನದ ಈ ತಪ್ಪನ್ನು ನಾವು ಮಾಡದೇ ಇರುವುದರ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಸಾಧ್ಯವಿದೆ. ಈ ವಿಷಯದಲ್ಲಿ ನನ್ನನ್ನು ಯಾರೂ ಸಮರ್ಥಿಸದಿದ್ದರೂ ಚಿಂತೆಯಿಲ್ಲ, ನಾನು ಒಂಟಿ ಧ್ವನಿಯಾದರೂ ಚಿಂತೆಯಿಲ್ಲ. ನಾನು ಶಾಂತಿಗೆ ಬದ್ಧನಾಗಿದ್ದೇನೆ. ಮುಸ್ಲಿಂರಿಗೂ ಕೂಡ ನಾನೊಂದಿಷ್ಟು ಹೇಳುವುದಿದೆ. ಬಂಧುಗಳೇ, ಭಯಮುಕ್ತರಾಗಿರಿ, ಆಯುಧಗಳನ್ನು ತ್ಯಜಿಸಿರಿ, ನಿಮ್ಮ ಸರ್ಕಾರವನ್ನು ನಂಬಿರಿ, ಅಲ್ಲಾಹನನ್ನು ನಂಬಿರಿ."

ಇದು ಯಾರು ಹೇಳಿದ್ದರೋ ಗೊತ್ತಿಲ್ಲ. ಕಲ್ಕತ್ತೆಯಲ್ಲಿ ಯಶಸ್ಸನ್ನು ಸಾಧಿಸಿದಂತೆ ದೆಹಲಿಯಲ್ಲಿ ಸಾಧಿಸಬೇಕಾದರೆ ಗಾಂಧಿ ತಮ್ಮ ವಾಸ್ತವ್ಯವನ್ನು ಬಿರ್ಲಾ ಹೌಸ್‌ನಿಂದ ದೆಹಲಿಯ ಮುಸ್ಲಿಂ ಪ್ರದೇಶದಲ್ಲಿಯ ಮಿಸ್ಟರ್ ಅಸಫ್ ಆಲಿಯವರ ಮನೆಗೆ ತಮ್ಮ ವಾಸ್ತವ್ಯವನ್ನು ಬದಲಿಸುವುದು ಒಳ್ಳೆಯದು ಎಂದು. ಸ್ವತಂತ್ರ ಹೋರಾಟಗಾರರು, ಅರುಣಾ ಎನ್ನುವ ಹಿಂದು ಮಹಿಳೆಯನ್ನು ಮದುವೆಯಾಗಿದ್ದ ಕಾಂಗ್ರೆಸ್ ನಾಯಕರೂ ಆಗಿದ್ದ ಜನಾಬ ಆಸಫ್ ಆಲಿಯವರ ಮನೆ ಮುಸ್ಲಿಂರಿಂದ ಆವೃತವಾದ ಪ್ರದೇಶದಲ್ಲಿತ್ತು. ಅಸಫ್ ಅಲಿಯವರ ಹೆಂಡತಿ ಅರುಣಾ ಈಗ ಯುನೈಟೆಡ್ ಸ್ಟೇಟ್‌ನಲ್ಲಿ ಭಾರತದ ರಾಯಭಾರಿಯಾಗಿದ್ದಳು. ಆದರೆ ಗಾಂಧಿ ತಮ್ಮ ವಾಸ್ತವ್ಯವನ್ನು ಬದಲಿಸುವ ತಮ್ಮ ಈ ಯೋಜನೆಯನ್ನು ಸರ್ದಾರ ಪಟೇಲ ಸಮರ್ಥಿಸಲಿಲ್ಲ. ಗುಂಡಿನ ಚಕಮಕಿ ನಡೆದ ಆ ಪ್ರದೇಶದಲ್ಲಿ ಗಾಂಧಿಯ ಜೀವವನ್ನು ಪಣ–ಕ್ಕೊಡ್ಡುವುದು ಅವನಿಗೆ ಇಷ್ಟವಿರಲಿಲ್ಲ. ಹೀಗಾಗಿ ಗಾಂಧಿ ಬಿರ್ಲಾ ಮಂದಿರಲ್ಲಿಯೇ ಮುಂದುವರಿಯಬೇಕಾಯಿತು.

ಈಗ ಗಾಂಧಿ ಧರ್ಮ ಮಿಮಾಂಸೆಯಲ್ಲಿ ತೊಡಗಿದ್ದ. ಯಾವುದರಿಂದ ಬೆಂಕಿ ಹುಟ್ಟಿಕೊಂಡಿತೋ ಅದರಿಂದಲೇ ಅದನ್ನು ನಂದಿಸಬೇಕೆನ್ನುವದು ಆತನ ಹಟ. ಧರ್ಮದ

ವಿಷಯಕ್ಕೆ ಬಂದಾಗ ತಾನು ವೈಚಾರಿಕನಾಗಿದ್ದೇನೆ, ವೈಜ್ಞಾನಿಕವಾಗಿದ್ದೇನೆ ಎನ್ನುವುದೇ ಆತನ ವಾದ. ಇದನ್ನು ವಿಶ್ಲೇಷಿಸುತ್ತ ಸಂಸ್ಕೃತ ಶ್ಲೋಕವನ್ನು ಉದ್ಧರಿಸುತ್ತ ರಾಜಕುಮಾರಿ ಅಮೃತಾ ಕೌರ್‌ಗೆ ಗಾಂಧಿ ಬರೆದಿದ್ದಾನೆ. "Know that to be true to religion, which the wise, and the good, and those who are ever free from passion and hate, follow, and which appeals to the heart." ಗಾಂಧಿಯ ಪ್ರಕಾರ ಜನಸಾಮಾನ್ಯ ಸಾಧು-ಸಂತರು, ಸೂಫಿಗಳು ನಿಜವಾದ ಧರ್ಮಶ್ರದ್ಧೆಯನ್ನು ಉಳ್ಳುವವರು. ಉಳಿದವರೆಲ್ಲರೂ ಧರ್ಮವನ್ನು ಬಂಡವಾಳವಾಗಿಸಿಕೊಂಡವರು, ಧರ್ಮಲಂಡರು.

ಆಂತರಿಕ ವಿಪತ್ತಿನ ಇಂತಹ ಘಳಿಗೆಯಲ್ಲಿ ಸೆಪ್ಟಂಬರ್ 16 ರಂದು ಗಾಂಧಿ ಧರ್ಮವನ್ನು ಕುರಿತು ಆಲೋಚಿಸುತ್ತಿರುವದು ಎಷ್ಟರ ಮಟ್ಟಿಗೆ ಔಚಿತ್ಯಪೂರ್ಣ ಎಂದು ಪ್ರಶ್ನೆ ಉದ್ಭವಿಸುವದು ಸಾಮಾನ್ಯ. ಆದರೆ ಇದೇ ವೇಳೆಯಲ್ಲಿ ಗಾಂಧಿ ಎನ್ನುವ ಈ ನಾಣ್ಯ ಎಷ್ಟರ ಮಟ್ಟಿಗೆ ಈ ರಾಷ್ಟ್ರದಲ್ಲಿ ಚಲಾವಣೆಯಲ್ಲಿತ್ತು ಎನ್ನುವುದನ್ನು ಪ್ರಶ್ನಿಸಿಕೊಳ್ಳುವದೂ ಕೂಡ ಅನಿವಾರ್ಯ.

ಇತಿಹಾಸಕಾರರ ಪ್ರಕಾರ ಧರ್ಮದ ಆಧಾರದ ಮೇಲೆ ಪಾಕಿಸ್ಥಾನ ಮತ್ತು ಭಾರತದ ಮಧ್ಯ ಜನರ ಹಂಚಿಕೆಯನ್ನು ಮಾಡುವದು ಗಾಂಧಿ ಬಲವಾಗಿ ವಿರೋಧಿಸಿದ್ದ. ಆದರೂ ಆತನ ಉಪಸ್ಥಿತಿಯಲ್ಲಿಯೇ ಲಾಹೋರಿನಲ್ಲಿ ಎರಡೂ ದೇಶಗಳ ಪ್ರಧಾನಿಗಳು ಜನರನ್ನು ಹಂಚುವದೆಂದೇ ನಿರ್ಧಾರ ಕೈಗೊಂಡರು. ಗಾಂಧಿ ಈಗ ಮೂಕ ಸಾಕ್ಷಿಯಷ್ಟೇ. ಇತಿಹಾಸಕಾರರು ಬರೆಯುವಂತೆ He had most forcefully made his view known that both India and Pakistan had to be nations in which the minorities could live in assured security and lasting peace. And his words had gone forlorn, lost in unearing, sweeping winds- a voice let go in a vast waste and arid wilderness.

If the Government of the day manned by his own trusted disciples like Jawaharalal and Vallabhai would not listen to him, what could he expect of the masses? was there any point at all in making heartfelt a appeals if they fell on stoney ears?

ಗಾಂಧಿಯ ಕೈಯಿಂದ ಎಲ್ಲವೂ ಕೊಸರಿ ಹೋಗುತ್ತಿತ್ತು ಎನ್ನುವುದಕ್ಕೆ ಸಾಕ್ಷಿ ಆತನೇ ಬರೆದ ಪತ್ರದ ಈ ಸಾಲುಗಳು ಕೂಡ. ಈ ಪತ್ರವನ್ನು ಆತ ಪಾಕಿಸ್ಥಾನದ ಹೈ ಕಮಿಷನರಾಗಿದ್ದ ಮಿಸ್ಟರ್ ಜಾಹೀದ್ ಹುಸೇನರಿಗೆ ಬರೆದಿದ್ದಾನೆ. ಈ ಜಾಹೀದ್, ಗಾಂಧಿ ಅನಾರೋಗ ಪೀಡಿತನಾಗಿದ್ದಾಗ ಕರಾಚಿಯಿಂದ ಬಂದು ಯೋಗಕ್ಷೇಮವನ್ನು ಕೇಳಿ ಹೋಗಿದ್ದ. ಈಗ ಹುಸೇನ ಅನಾರೋಗ್ಯಪೀಡಿತನಾಗಿದ್ದಾಗ ಗಾಂಧಿ ಬರೆಯುತ್ತಾನೆ-

"ಪ್ರಿಯ ಹುಸೇನ,

ನೀನೀಗ ಅಜಾರಿಗೆ ಬೀಳುವುದೆಂದರೇನು? ದೇಶದ ಸಂದಿಗ್ಧ ಸ್ಥಿತಿಯಲ್ಲಿ ನಿಮ್ಮಂತವರೆಲ್ಲರ ಆರೋಗ್ಯ ಗಟ್ಟಿಯಾಗಿ ಇರಬೇಕಾದುದೇ ಮುಖ್ಯ. ದೇವರು ನಿನ್ನ ಆರೋಗ್ಯವನ್ನು ಸುಧಾರಿಸಲಿ. ನಿನಗೆ ಭರವಸೆ ನೀಡಿದಂತೆ ಇಂದು ಸಾಯಂಕಾಲ ನಾನು ಎಲ್ಲವನ್ನೂ ಚರ್ಚಿಸಿದ್ದೆ, ಆದರೆ ಪ್ರತಿಯಾಗಿ ಏನೂ ಆಗಲಿಲ್ಲ. ನನ್ನನ್ನು ಕ್ಷಮಿಸು."



ಆರ್.ಎಸ್.ಎಸ್. V/S ಗಾಂಧಿ

೨೪

ದೆಹಲಿಯಲ್ಲಿ ನಿರಂತರ ಹಿಂಸಾ ಚಟುವಟಿಕೆಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ತಂಡ ತೊಡಗಿಕೊಂಡಿದೆ ಎನ್ನುವ ಸುದ್ದಿಯನ್ನು ಗಾಂಧಿ ಪಡೆದುಕೊಂಡ. ಆದರೆ ಪರಧರ್ಮ ಸಹಿಷ್ಣುತೆ ಮತ್ತು ಶಿಸ್ತಿಗೆ ಪ್ರಸಿದ್ಧವಾಗಿರುವ ತಮ್ಮ ಸಂಘಟನೆ ಇಂಥ ಕಾರ್ಯವನ್ನು ಮಾಡಲು ಸಾಧ್ಯವೇ ಇಲ್ಲ ಎಂದ ಆರ್.ಎಸ್.ಎಸ್. ಮುಖಂಡರು ಇದನ್ನು ಒಪ್ಪಲೇ ಇಲ್ಲ. ಆರ್.ಎಸ್.ಎಸ್.ನ ನಾಯಕರು ಇದನ್ನೇ ವಿರೋಧಿಸಿ ದೆಹಲಿಯ ಭಂಗಿ ಕಾಲೋನಿಯಲ್ಲಿ ರ್‍ಯಾಲಿಯನ್ನು ಕೂಡ ಹಮ್ಮಿಕೊಂಡರು. ಈ ಸಭೆಯಲ್ಲಿ ಗಾಂಧಿ ಆರ್.ಎಸ್.ಎಸ್‌ನೊಂದಿಗೆ ಹಂಚಿಕೊಂಡ ತನ್ನ ಒಂದು ನೆನಪನ್ನು ಬಿಚ್ಚಿದ್ದ.

ಬಹಳ ಹಿಂದೆ ವಾರ್ಧಾದಲ್ಲಿ ಆರ್.ಎಸ್.ಎಸ್. ಸಂಸ್ಥಾಪಕ ಹೆಗಡೆವಾರ್ ಹಮ್ಮಿಕೊಂಡ ಆರ್.ಎಸ್.ಎಸ್ ಸಭೆಯೊಂದಕ್ಕೆ ಸೇಠ್ ಜಮುನಾಲಾಲ್ ಬಜಾಜ್‌ರೊಂದಿಗೆ ಗಾಂಧಿಯೂ ಹೋಗಿದ್ದ. ಅಲ್ಲಿಯ ಶಿಸ್ತು,

ಜಾತ್ಯತೀತ, ಸರಳತೆಗಳನ್ನು ಕಂಡು ಗಾಂಧಿ ಮೆಚ್ಚುಗೆಯ ಮಾತುಗಳನ್ನಾಡಿದ್ದ. ಅದನ್ನು ನೆನಪಿಸಿಕೊಂಡ ಗಾಂಧಿ ಆಗ ಹೇಳಿದ್ದ– ನಿಷ್ಪಕ್ಷಪಾತವಾದ, ನಿಸ್ವಾರ್ಥದಿಂದ ಕೂಡಿದ ಇಂಥ ಸಂಘಟನೆಗಳು ಬೆಳೆಯುತ್ತಲೇ ಇರಬೇಕು. ಆದರೆ ಈ ನಿಸ್ವಾರ್ಥತೆ ಮತ್ತು ಬಲಿದಾನಗಳು ಆತ್ಮ ಪರಿಶುದ್ಧಿ ಮತ್ತು ನಿಜವಾದ ಜ್ಞಾನದೊಂದಿಗೆ ಬೆರೆತುಕೊಂಡಿರಬೇಕು. ಜ್ಞಾನವಿಲ್ಲದ, ಆತ್ಮಶುದ್ಧಿಯಿಲ್ಲದ ಬಲಿದಾನ ಸಮಾಜವನ್ನು ಬಲಿತೆಗೆದುಕೊಳ್ಳುತ್ತದೆ. ಅದುವೆ ಮೂರ್ಖತೆ ಮತ್ತು ಮತಾಂಧತೆ ಆಗುತ್ತದೆ.

ಆರ್.ಎಸ್.ಎಸ್ ಮುಖಂಡರನ್ನು ಉದ್ದೇಶಿಸಿ ಗಾಂಧಿ ಹೇಳುತ್ತಾನೆ. ತಾನೂ ಒಬ್ಬ ಸನಾತನ ಹಿಂದು, ಹಿಂದುಯಿಸಂ ಎಲ್ಲಾ ಕಾಲಕ್ಕೂ ಶ್ರೇಷ್ಠವಾದುದು ಎಂಬುದನ್ನು ಬಲವಾಗಿ ನಂಬಿದವ. ಯಾಕೆಂದರೆ ಜಗತ್ತಿನಲ್ಲಿ ಶ್ರೇಷ್ಠವಾದುದೆಲ್ಲವನ್ನು ಹಿಂದು ಧರ್ಮ ತನ್ನದಾಗಿಸಿಕೊಂಡಿದೆ. ಹೀಗಾಗಿ ಅನ್ಯಧರ್ಮೀಯರೊಂದಿಗೆ ಆತ ಹಿಂಸೆಗೆ ಇಳಿಯಲಾರ, ಅಷ್ಟೇ ಅಲ್ಲ ಅಸ್ಪೃಶ್ಯತೆಯನ್ನು ಹೊಡೆದು ಹಾಕದ ಹೊರತು ಹಿಂದೂ ಧರ್ಮಕ್ಕೆ ಭವಿಷ್ಯವಿಲ್ಲ. ಈ ದೇಶ ಬರಿ ಹಿಂದೂಗಳಿಗಾಗಿ ಎನ್ನುವ ಸಂಕುಚಿತ ವಿಚಾರದ ಹಿಂದೂಗಳು, ಹಿಂದೂ ಧರ್ಮಕ್ಕೆ ಹೊಸದೇನನ್ನು ಸೇರಿಸಲಾರರು. ಇದು ಇಡಿಯಾಗಿ ಹಿಂದುತ್ವದ ಬಗ್ಗೆ ಗಾಂಧಿ ಹೊಂದಿದ ಅಭಿಪ್ರಾಯ ಆದರೆ ಈ ವಿಚಾರಗಳನ್ನು ಕೇಳಲು ಹಿಂದುಗಳು ಸಿದ್ಧರಿರಲಿಲ್ಲ.

ಸಾಯಂಕಾಲದ ಪ್ರಾರ್ಥನೆಯ ವೇಳೆಯಲ್ಲಿ ರೊಚ್ಚಿಗೆದ್ದ ಹಿಂದುಗಳು ಗಾಂಧಿ ವಿರುದ್ಧ ಘೋಷಣೆಗಳನ್ನು ಕೂಗಲಾರಂಭಿಸಿದರು. Kings way camp ಏರಿಯಾದಲ್ಲಿ ನಡೆಯಬೇಕಿದ್ದ ಗಾಂಧಿಯ ಪ್ರಾರ್ಥನೆಯನ್ನು ಭಯಂಕರವಾಗಿ ವಿರೋಧಿಸಿದ್ದರು. ಮತ್ತೆ ಕೆಲವರಂತೂ ಗಾಂಧಿಯ ಮೇಲೆ ದಾಳಿಯನ್ನೇ ಮಾಡಲು ಯತ್ನಿಸಿದರು. ಆದರೆ ಗಾಂಧಿ ಇದ್ಯಾವುದಕ್ಕೂ ಮಣಿಯುವವನಾಗಿರಲಿಲ್ಲ. ಸಾಮಾನ್ಯವಾಗಿ ಗಾಂಧಿಯ ಪ್ರಾರ್ಥನಾ ಸಭೆಯೆಂದರೆ ಅಲ್ಲಿ ಎಲ್ಲ ಧರ್ಮಗಳ ಪ್ರಾರ್ಥನೆಯನ್ನು ಹಾಡುವುದೆಂದೇ ಅರ್ಥ. ಒಂದು ಕಾಲಕ್ಕೆ ಇಂಥ ಒಂದು ವಿಶೇಷವಾದ ಪ್ರಯೋಗದಿಂದಲೇ ಭಾರತದ ಎಲ್ಲ ಜನಾಂಗದ ಜನರನ್ನು ಗಾಂಧಿ ಒಗ್ಗೂಡಿಸಲು ಸಾಧ್ಯವಾಗಿತ್ತು. ಆದರೆ ಸ್ವಾತಂತ್ರ್ಯ ಸಿಕ್ಕ ಮರುಕ್ಷಣವೆ ಈ ಯೋಜನೆ ಜನರಿಗೆ ಬೂಟಾಟಿಕೆ ಎನಿಸಲಾರಂಭಿಸಿತು. ಆದರೆ ಗಾಂಧಿಗೆ ಈಗಲೂ ತನ್ನ ಈ ಪ್ರಾರ್ಥನಾ ರೀತಿಯಲ್ಲಿಯೇ ಬಲವಾದ ನಂಬಿಕೆ ಮತ್ತು ಗೌರವ.

ಸೆಪ್ಟಂಬರ್ 17 ರ Kings way camp ನ ಪ್ರಾರ್ಥನೆಯಲ್ಲಿ ಆದದ್ದೂ ಕೂಡ ಇದೆ ಸಮಸ್ಯೆ. ಎಂದಿನಂತೆ ಗಾಂಧಿ ಎಲ್ಲ ಧರ್ಮಗಳ ಪ್ರಾರ್ಥನೆಗಳನ್ನು ಹೇಳಿಸುತ್ತಾ ನಡೆದ. ಮುಸ್ಲಿಂರ ಧರ್ಮಗ್ರಂಥವಾದ ಖುರಾನಿನ ಅಲ್ಲಾ ಹೋ ಅಕ್ಬರ್ ಎನ್ನುವ ಸಾಲುಗಳನ್ನು ಹೇಳುತ್ತಿರುವಂತೆಯೇ ಹಿಂದುಗಳು ತಟ್ಟನೆ ಸಿಡಿದೆದ್ದರು. ಪಶ್ಚಿಮ ಪಂಜಾಬ್, ದೆಹಲಿಗಳಲ್ಲಿ ಮುಸ್ಲಿಂರಿಂದ ಬಲಾತ್ಕಾರಕ್ಕೆ ಒಳಗಾಗಿದ್ದ ಕುಟುಂಬಗಳು ಗಾಂಧಿಯನ್ನು ಕೊಂದೇಬಿಡಬೇಕು ಎನ್ನುವಷ್ಟು ಕುದಿದುಹೋದವು. ಅಲ್ಲಾ–ಹೋ–ಅಕ್ಬರ್ ಎನ್ನುವ ಸಾಲು ಮುಸ್ಲಿಂರ ಯುದ್ಧಘೋಷಣೆಯ ವಾಕ್ಯವಾಗಿ ಅವರ ಹೃದಯಗಳ ಬಡಿತವನ್ನೇ ನಿಲ್ಲಿಸಿಬಿಡುವಂತಹ ಅನುಭವ ಹಿಂದುಗಳಿಗಾಗುತ್ತಿತ್ತು. ಆ ಒಂದು ಸಾಲು ಹಿಂದುಗಳು ಕಳೆದುಕೊಂಡ, ಕೊಲೆಯಾದ

ಬಲಾತ್ಕಾರಕ್ಕೊಳಗಾದ, ಬಲವಂತವಾಗಿ ತಳ್ಳಲ್ಪಟ್ಟ, ಪರಾಧೀನತೆಗೆ ಕಾರಣವಾದ ತಮ್ಮೆಲ್ಲ ಬಂಧು–ವರ್ಗಗಳನ್ನು ನೆನಪಿಗೆ ತರುತ್ತಿತ್ತು. ಹಾಗೆ ನೋಡಿದರೆ Kings way ಕ್ಯಾಂಪಿನ ಈ ಪ್ರಾರ್ಥನೆ ಗಾಂಧಿಯ ಆಲೋಚನೆಯಲ್ಲಿಯೇ ಇರಲಿಲ್ಲ. ಇದನ್ನು ಸೂಚಿಸಿದವರೇ ಅಂದಿನ ಕಾಂಗ್ರೆಸ್ ಅಧ್ಯಕ್ಷ ಆಚಾರ್ಯ ಕೃಪಲಾನಿಯ ಹೆಂಡತಿ ಸುಚಿತ್ರಾ ಕೃಪಲಾನಿ. ಈಗ ಗಾಂಧಿಯ ವಿರುದ್ಧ ಘೋಷಣೆಗಳು ಪ್ರಾರಂಭವಾದವು. ಅದು ಸುಚೇತಾ ಕೃಪಲಾನಿಯ ನಿಯಂತ್ರಣವನ್ನೂ ಮೀರಿ ಹೋಯಿತು. ಗಾಂಧಿಯ ಮನಸ್ಸಿಗೆ ಬೇಸರವಾಯಿತು.

ಗಾಂಧಿ ಅಂದುಕೊಂಡಿದ್ದ ಕೋಮು ಗಲಭೆಯ ರೋಗದಿಂದ ನರಳುತ್ತಿರುವ ಜನರ ಬಾಯಿಗೆ ತಾನು ಔಷಧಿಯನ್ನು ಹಾಕುತ್ತಿದ್ದೇನೆ ಎಂದು. ಆದರೆ ಜನರು ಔಷಧಿ ಮತ್ತು ವಿಷದ ಮಧ್ಯದ ವ್ಯತ್ಯಾಸವನ್ನು ಗುರುತಿಸದಷ್ಟು ಮೂರ್ಖರಾಗಿದ್ದರು ಎಂದು ಆತನಿಗೆ ಗೊತ್ತಾಗಲಿಲ್ಲ. ಕೆಲವು ಯುವಕರಂತು ಗಾಂಧಿಯ ವಿರುದ್ಧ ಏನೆಲ್ಲಾ ಕೂಗಲು ಸಾಧ್ಯವಿದೆಯೋ ಅದೆಲ್ಲವನ್ನೂ ಕೂಗಿದರು. ಈ ವರ್ತನೆ ಒಂದು ದಿನ ನಿಮ್ಮನಷ್ಟೇ ಅಲ್ಲ ಇಡೀ ದೇಶವನ್ನೇ ದುರಂತದ ಅಂಚಿಗೆ ತಂದು ನಿಲ್ಲಿಸುತ್ತದೆ ಎಂದು ಗಾಂಧಿ ಹೇಳುತ್ತಲೇ ಇದ್ದ. ಸಿಟ್ಟನ್ನು ಗೆಲ್ಲದವರು, ಇನ್ನೇನನ್ನೂ ಸಾಧಿಸಲಾರರು ಎಂದು ತಿಳಿಸಿದ. ಆದರೆ ಆತನ ಭಾಷಣವನ್ನು ಯಾರೂ ಕೇಳುವ ಸ್ಥಿತಿಯಲ್ಲಿರಲಿಲ್ಲ.

ಬಡಪಾಯಿ ಗಾಂಧಿಗೆ ಈ ರಾತ್ರಿ ನಿದ್ರೆಯೇ ಬರಲಿಲ್ಲ. ಆತನಿಗೆ ಮೊದಲಬಾರಿಗೆ ನಾನು ಸಂಪೂರ್ಣವಾಗಿ ಜನರಿಂದ ಒಪ್ಪಿಕೊಳ್ಳಲ್ಪಟ್ಟಿಲ್ಲ, ಅಪ್ಪಿಕೊಳ್ಳಲ್ಪಟ್ಟಿಲ್ಲ ಎನ್ನುವುದು ಸ್ಪಷ್ಟವಾಗಿ ಹೋಯಿತು. ಆತ ಮತ್ತೆ ಮತ್ತೆ ಕೇಳಿಕೊಂಡ ಖುರಾನಿನ ಸಾಲುಗಳು ಪ್ರಾರಂಭವಾಗುವ ಮುಂಚೆ ಜನರು ತನ್ನನ್ನು ವಿರೋಧಿಸಿಲ್ಲ. ಅಂದರೆ ಅಷ್ಟರಮಟ್ಟಿಗೆ ತಾನು ಅವರ ಪರಿಗಣನೆಯಲ್ಲಿ ಇದ್ದೇನೆ ಎಂದು ಅರ್ಥವಾಯಿತು. ಆದರೆ ತಾನು ಜನರಿಗೆ ಬೇಕಾದರೆ ಪೂರ್ಣವಾಗಿಯೇ ಬೇಕಾಗಬೇಕು ಇಲ್ಲದೆ ಹೋದಲ್ಲಿ ಪೂರ್ಣವಾಗಿಯೇ ತಿರಸ್ಕರಿಸಲ್ಪಡಬೇಕು ಎಂಬುದು ಗಾಂಧಿಯ ದೃಢ ನಿರ್ಧಾರವಾಯಿತು. ಸೆಪ್ಟಂಬರ್ 17 ರಂದು ದರಿಯಾಗಂಜ್‌ನ ತನ್ನ ಪ್ರಾರ್ಥನೆಯ ವೇಳೆಯಲ್ಲಿ ಗಾಂಧಿ ಇದನ್ನು ಪ್ರಕಟಿಸಿದ. ಆತ ಹೇಳಿದ "If there was even one single individual in the asembly who had objection to the proceedure he could state it" ಇದರ ಅರ್ಥ ತಾನು ಮಾತ್ರ ಖುರಾನಿನ ತನ್ನ ಪ್ರಾರ್ಥನೆಯನ್ನು ಮುಂದುವರಿಸಿಯೇ ತೀರುತ್ತೇನೆ ಎಂದು.

ದರಿಯಾ ಗಂಜಿನಲ್ಲಿ ಗಾಂಧಿ ತನ್ನ ಹಟವನ್ನೇನೋ ಸಾಧಿಸಿದ. ಖುರಾನಿನ ಪಠಣವೂ ಆಯಿತು. ಕೆಲವು ಕ್ಷಣಗಳವರೆಗೆ ಯಾವ ಗೊಂದಲಗಳೂ ಸೃಷ್ಟಿಯಾಗಲಿಲ್ಲ. ಆದರೆ ಗಾಂಧಿ ದುಃಖದಲ್ಲಿಯೇ ಇದ್ದ. ಅವನಿಗೆ ಗೊತ್ತಿತ್ತು, ಇದೆಲ್ಲವು ಕೇವಲ ಒತ್ತಡದಿಂದ ಮಾತ್ರ ಸಾಧಿಸಿದ್ದು ಎಂದು. ಆತ ಮತ್ತೆ ಮತ್ತೆ ಕೇಳಿಕೊಂಡ ತಾನೇಕೆ ಮಿಸ್ಟರ್ ಆಸಿಫ್ ಆಲಿಯವರ ಮನೆಗೆ ಹೋಗಿ ತಂಗಲಿಲ್ಲ? ಸರ್ದಾರ್ ಪಟೇಲ್ ತಾನು ಅಲ್ಲಿಗೆ ಹೋಗುವುದನ್ನು ಏಕೆ ವಿರೋಧಿಸಿದ? ಯಾವುದೋ ಒಂದು ಒತ್ತಡಕ್ಕೆ ಮಣಿದು ಸುಮ್ಮನಿರುವ ಹಿಂದುಗಳು ಇದೆ ದೆಹಲಿ ನಗರವನ್ನು ಯುದ್ಧಭೂಮಿಯಂತೆ ಪರಿಗಣಿಸಿದರೆ ಮುಗ್ಧರ ಜೀವನಗಳಿಗೆ ಯಾರು ಹೊಣೆಗಾರರು? ಬಿರ್ಲಾ ಹೌಸಿನ ಕಿಡಕಿಗಳಿಂದ ದೆಹಲಿಯನ್ನು ನೋಡುತ್ತಾ ನಿದ್ರೆಗಾಣದೆ ತಿರುಗಾಡುತ್ತಿದ್ದ ಗಾಂಧಿ

ದೆಹಲಿ ಸ್ಮಶಾನವಾಗಿರುವುದನ್ನು ಕಂಡ. ನಾಗರೀಕತೆ ಎನ್ನುವ ಪದ ಅದೆಷ್ಟೋ ವರುಷಗಳ ಹಿಂದೆಯೇ ಈ ನಗರವನ್ನು ಬಿಟ್ಟುಹೋಗಿದೆ ಎನ್ನುವ ಹಾಗೆ ಅಲ್ಲಿಯ ಸ್ಥಿತಿ ಇತ್ತು.

ಸೆಪ್ಟಂಬರ್ 18 ರ ಮುಂಜಾವು ದೆಹಲಿಯ ದರಿಯಾಗಂಜ್‌ನಲ್ಲಿ ಗಾಂಧಿ ತಿರುಗಾಡುವಾಗ ಮತ್ತೆ ಅದೇ ಯಾತನೆ, ನರಕದ ಬಾಳು, ಜನರ ಗೋಳು, ಬೆಳಗಾಗುತ್ತಲೇ ಆರೇಳು ವರ್ಷದ ಮುಸ್ಲಿಂ ಹೆಣ್ಣುಮಗುವೊಂದು ತನ್ನ ವಯಸ್ಸಾದ ಅಜ್ಜನೊಂದಿಗೆ ಬಂದು ಗಾಂಧಿಯ ಮುಂದೆ ಕೈಯೊಡ್ಡಿ ಅಭಯವನ್ನು ಕೇಳಿದಳು, ಬದುಕಿನ ಭಿಕ್ಷೆಯನ್ನು ಕೇಳಿದಳು. ಆದರೆ ಗಾಂಧಿಯ ಕೈ ಖಾಲಿಯಾಗಿತ್ತು. ನೀವು ಇನ್ನೂ ಮನುಷ್ಯರನ್ನು ನಂಬಿರಿ ಎನ್ನುವ ಭಾಷೆ ಯಾವ ಕಾಲಕ್ಕೂ ಯಾರಿಗೂ ಅರ್ಥವಾಗುವುದಿಲ್ಲ ಎಂದು ಗಾಂಧಿಗೆ ಅನಿಸಿರಬೇಕು. ಎಲ್ಲಾ ವಯಸ್ಸಿನ, ಭಯಾನಕ ಅನುಭವಗಳ, ಮುಸ್ಲಿಂರು ಗಾಂಧಿಯನ್ನು ಸುತ್ತುವರಿದು ಜೀವನವನ್ನು ಕೇಳುವಾಗ ಗಾಂಧಿ ಹೇಳಿದ್ದಿಷ್ಟೇ. "Yes, You have to be brave. You must never leave your homes. Whatever may happen, you have to look to God, and to none other for your protection and safety."

ಸೆಪ್ಟಂಬರ್ 18ರ ತನ್ನ ಪ್ರಾರ್ಥನಾ ಸಭೆಯಲ್ಲಿ ಗಾಂಧಿ ತನಗೆ ತಾನೇ ಹೇಳಿಕೊಂಡ. ತಾನು ಮತ್ತೆ ನೌಖಾಲಿ ಮತ್ತು ಕಿಲಾಫತ್ ಚಳುವಳಿಯ ಸಂದರ್ಭದಲ್ಲಿ ತೆಗೆದುಕೊಂಡ ನಿರ್ಧಾರಗಳನ್ನೇ ಈಗಲೂ ತೆಗೆದುಕೊಳ್ಳಬೇಕೆಂದು ತಾನು ಹಿಂದುಗಳ ಬಂಧು ಆಗಿರುವಷ್ಟೇ ಪ್ರಾಮಾಣಿಕವಾಗಿ ಮುಸ್ಲಿಂರ ಬಂಧುವು ಕೂಡ ಆಗಿದ್ದೇನೆ. ಇಲ್ಲಿರುವ ಮುಸ್ಲಿಂರು ಈ ದೇಶಕ್ಕೆ ನಿಷ್ಠರಾಗಿರಬೇಕು. ಹಾಗೆಯೇ ಹಿಂದುಗಳು ಮತ್ತು ಸಿಖ್‌ರು ಅಭಯಕೋರಿ ಬಂದವರನ್ನು ರಕ್ಷಿಸಬೇಕು. ಅಷ್ಟಕ್ಕೂ ಈ ದೇಶವನ್ನು ಬಿಟ್ಟು ಹೋಗಬೇಕೆನ್ನುವ ಮುಸ್ಲಿಂರನ್ನು ತಡೆಯುವ ಅವಶ್ಯಕತೆ ಇಲ್ಲ. ಆದರೆ ಹಿಂದುಗಳ ಬಲಾತ್ಕಾರದಿಂದಾಗಿ ದೇಶವನ್ನು ಬಿಡಬೇಕಾಯಿತು ಎಂದು ಭಾರವಾದ ಉಸಿರನ್ನು ಅವರು ಹಾಕುವಂತಾಗಬಾರದು ಎಂದು ಗಾಂಧಿ ಹೇಳಿದ. ಗಾಂಧಿಯ ಈ ಮಾತುಗಳಲ್ಲಿ ಬರಿ ಭಾವನಾತ್ಮಕತೆಯನ್ನು ಹುಡುಕುವುದು ಒಂದು ಮೂರ್ಖತನವೆ. ನಿನ್ನೆ ಮೊನ್ನೆಯಷ್ಟೇ ಕಣ್ಣು ತೆರೆದುಕೊಂಡ ಎರಡು ರಾಷ್ಟ್ರಗಳು ಹಾಗೆಯೇ ಸಾಗಬೇಕಾಗಿದ್ದ ಅನಿವಾರ್ಯತೆಯನ್ನು ಗಾಂಧಿ ಒತ್ತಿ ಹೇಳುತ್ತಿದ್ದ ಎನ್ನುವುದನ್ನು ನಾವಿಲ್ಲಿ ಗಮನಿಸಬೇಕು. ಆತ ಒಂದೆಡೆ ಬರೆಯುತ್ತಾನೆ "If India and Pakistan are to be perpetual enemies and go to war against each other, it will ruin both and our hard won freedom will be lost. I do not wish to live to see that day."

ಸೆಪ್ಟಂಬರ್ 18 ರಂದು ಗಾಂಧಿ ಪಾಕಿಸ್ಥಾನದಿಂದ ನಿರಾಶ್ರಿತರಾಗಿ ಬಂದ ಹಿಂದು ನಿರಾಶ್ರಿತರನ್ನು ಕಾಣಲು ಕುಚತಾರಾಚಂದ್ ಪ್ರದೇಶಕ್ಕೆ ಹೋದ. ಇದು ದೆಹಲಿಯ ಫೈಜ್ ಬಜಾರ್‌ನಲ್ಲಿ ಬರುವ ಹಿಂದುಗಳಿಂದ ತುಂಬಿದ ಒಂದು ಸಣ್ಣ ಪ್ರದೇಶ. ಒಂದರ್ಥದಲ್ಲಿ ಇಲ್ಲಿಯ ಹಿಂದುಗಳೆಲ್ಲ ಮುಸ್ಲಿಂ-ರಿಂದ ಆವರಿಸಲ್ಪಟ್ಟಿದ್ದರು. ಅಲ್ಲಿಂದ ನೇರವಾಗಿ ಗಾಂಧಿ ಪಟೌಡಿ ಹೌಸಿನ ಅನಾಥಾಲಯಕ್ಕೆ ಹೋದರು. ಒಂದುನೂರಕ್ಕೂ ಮೇಲ್ಪಟ್ಟು ಅನಾಥ ಮಕ್ಕಳು ಇಲ್ಲಿ ವಾಸವಾಗಿದ್ದರು. ಅಲ್ಲಿಂದ ಮುಂದುವರೆದು ಕತ್ರಾ ಭವಾನಿ ಪ್ರದೇಶದ ಒಂದೇ ಒಂದು ಹಿಂದು ಮನೆಯಾಗಿದ್ದ ಭಾರ್ಗವ ಸೇಠನ ಮನೆಗೆ ಗಾಂಧಿ ಭೇಟಿ ಕೊಟ್ಟ.



ನಿರಾಶ್ರಿತರ ನೋವಿಗೆ ನಿಡುಸುಯ್ದ ನೇತಾರ

೨೫

ಅಲ್ಲಿಂದ ಬರುವಾಗ ಗಾಂಧಿಯ ಜೊತೆ ಇದ್ದವರು ಮೌಲಾನ ಅಬ್ದುಲ್ ಕಲಾಂ ಆಜಾದ್ ಮತ್ತು ಶಹೀದ ಸುಹರವರ್ದಿ. ಗಾಂಧಿ ಯಾರೊಂದಿಗೂ ಮಾತನಾಡದೆ ಮೌನವಾಗಿದ್ದ. ದೇವರಿಗೆ ಪ್ರಾರ್ಥಿಸಿಕೊಳ್ಳುತ್ತಿದ್ದ. ಈ ಹಿಂದೂಗಳು ಮುಸ್ಲಿಂರು ಒಂದಾಗಿ ಅಂದವಾಗಿ ಬದುಕುವುದನ್ನು ಕಣ್ತುಂಬ ನೋಡುವಂತೆ ಮಾಡು ಇಲ್ಲದೆ ಹೋದರೆ "Take me away and save me from witnessing the aweful tragedy of one part of India being inhabited by muslims, and the other by non-muslims." ಒಟ್ಟು ಈ ಅವಧಿಯೇ ಗಾಂಧಿಯ ಬದುಕಿನಲ್ಲಿ ತಳಮಳದ, ನೋವಿನ, ಹಿಂಸೆಯ, ಅಪನಂಬಿಕೆಯ, ಘಟ್ಟ ಎನ್ನಬೇಕು. ಆತ ಇದಾವುದರಿಂದಲೂ ವಿಚಲಿತನಾಗಿರಲಿಲ್ಲ, ಭಯಗ್ರಸ್ಥನಾಗಿರಲಿಲ್ಲ ಎಂದು ಹೇಳುವುದು ಅವನನ್ನು ದೇವರನ್ನಾಗಿಸುವ ಕ್ರಿಯೆಯಾದೀತು. ಆದರೆ ಒಂದಂತು ಸತ್ಯ, ಆತನ ದಿನಚರಿಯಲ್ಲಿ

ಯಾವ ಬದಲಾವಣೆಯೂ ಆಗಿರಲಿಲ್ಲ ಅದು ಭಗವದ್ಗೀತೆಯಿಂದ ಆಯ್ದ ಶ್ಲೋಕಗಳನ್ನು ಪಠಿಸುವುದಾಗಿರಬಹುದು, ಮುಂಜಾನೆ ಮತ್ತು ಸಾಯಂಕಾಲದ ವಾಯುವಿಹಾರ ಇರಬಹುದು. ಚರಕ ನೂಲುವುದಿರಬಹುದು, ಆತ ತೆಗೆದುಕೊಳ್ಳುತ್ತಿದ್ದ ಪ್ರಕೃತಿ ಚಿಕಿತ್ಸೆಯಾಗಿರಬಹುದು, ಮಿತ ಆಹಾರ, ಆಗೊಮ್ಮೆ, ಈಗೊಮ್ಮೆ ಹಣ್ಣಿನ ರಸ, 'ಹರಿಜನ' ಪತ್ರಿಕೆಗೆ ಲೇಖನ, ಎಲ್ಲವೂ ಸೂರ್ಯನಷ್ಟೇ ಕರಾರುವಕ್ಕಾಗಿ ನಿಯಮಿತವಾಗಿದ್ದವು. ಈ ಗಾಂಧಿ ಇನ್ನಾವುದಕ್ಕೂ ಮನುಕುಲಕ್ಕೆ ಆದರ್ಶವಾಗದೆ ಹೋದರು ಚಿಂತೆಯಿಲ್ಲ ಇಷ್ಟಕ್ಕಾದರೂ ನೆನಪುಳಿಯುವುದಾದರೂ ಅದು ಮನುಷ್ಯತ್ವದ ಅಸ್ತಿತ್ವವನ್ನು ಸೂಚಿಸುತ್ತದೆ.

ಈ ಮಧ್ಯ ನೌಖಾಲಿಯಲ್ಲಿ ತನ್ನ ಪ್ರತಿನಿಧಿಯಾಗಿ ಹಿಂದೆ ಉಳಿದುಕೊಂಡಿದ್ದ ಪ್ಯಾರೆಲಾಲರಿಗೆ ಗಾಂಧಿ ಬರೆಯುತ್ತಾನೆ– "ನಾನೀಗಲೆ ಮತ್ತೆ ನೌಖಾಲಿಗೆ ಬರುವ ಕುರಿತು ಏನನ್ನೂ ಹೇಳಲಾರೆ. ಅದು ಅನಿಶ್ಚಿತ, ಇಲ್ಲಿಯ ಕೆಲಸ ಬಹಳ ಜವಾಬ್ದಾರಿಯದಾಗಿದೆ. ನನಗೆ ಗೊತ್ತು ನೀನೊಬ್ಬನೇ ಅಲ್ಲಿ ಬಹಳ ಕಷ್ಟಪಡುತ್ತಿದ್ದೀಯಾ, ಆದರೆ ನಮ್ಮಲ್ಲಿರುವ ಶಕ್ತಿ ಹಾಗೂ ದೇವರಲ್ಲಿಯ ನಂಬಿಕೆ ನಮಗೆ ಗೊತ್ತಾಗುವುದೇ ಈ ಕಷ್ಟದ ಸಂದರ್ಭಗಳಲ್ಲಿ. ದೇವರಿಗಾಗಿ ಸಮಗ್ರವಾಗಿ ತಮ್ಮನ್ನೇ ತಾವು ತೊಡಗಿಸಿಕೊಳ್ಳುವವರೊಂದಿಗೆ ಇರುವುದೇ ಒಂದು ದೊಡ್ಡ ಖುಷಿ, ಎಲ್ಲವು ಅವನಾಜ್ಞೆಯಂತೆ ನಡೆಯಲಿ."

ಅತ್ತ ಸುಶೀಲ ನಯ್ಯರ್ ಈ ಎಲ್ಲ ಅರಾಜಕತೆ ನೋಡಿ ಗಲಿಬಿಲಿಗೊಂಡಿದ್ದಾರೆ. ಗಾಂಧಿಯ ಇಚ್ಛೆಗೆ ವಿರುದ್ಧವಾಗಿ ಪಶ್ಚಿಮ ಪಾಕಿಸ್ಥಾನದಲ್ಲಿಯಂತೆಯೇ ಈಗ ಪೂರ್ವ ಪಾಕಿಸ್ಥಾನದಿಂದಲೂ ಹಿಂದುಗಳು ಕಾಲ್ಕೀಳುವಂತೆ ಪಾಕಿಸ್ಥಾನ ಸರ್ಕಾರ ಒತ್ತಡ ಹೇರುತ್ತಿದೆ. ಗಾಂಧಿ ಪಾಕಿಸ್ತಾನದ ಕಿವಿಗೆ ಇದರಿಂದ ಆಗಬಹುದಾದ ಅನಾಹುತಗಳನ್ನು ತಿಳಿಸಿ ಹೇಳುವ ವ್ಯಕ್ತಿಗಾಗಿ ತಡಕಾಡುತ್ತಿದ್ದಾರೆ. ಈಗ ಮತ್ತೆ ಸಹಾಯಕ್ಕೆ ಬಂದದ್ದು ಅದೇ ಶಹಿದ್ ಹುಸೇನ್ ಸುಹರ್‌ವರ್ದಿ. ಆತ Constituent asembly of Pakisftanದ ಸ್ಥಾಪಕ ಸದಸ್ಯರುಗಳಲ್ಲಿ ಒಬ್ಬ. ಆತನಿಂದಲೆ ಏನಾದರು ಮಾಡಿಸಬೇಕು. ಗಾಂಧಿಯನ್ನು ಕಾಣಲು ಆತ ದೆಹಲಿಗೆ ಬಂದ. ಗಾಂಧಿ ಆತನನ್ನು ಕೂರಿಸಿ ತಿಳಿಹೇಳಿದ. ಮುಸ್ಲಿಂರನ್ನ, ಸಿಖ್‌ರನ್ನ, ಹಿಂದುಗಳನ್ನ ದೇಶ ವಿಭಜನೆ ಎನ್ನುವ ಮೂರ್ಖ ಕಾರಣಕ್ಕಾಗಿ ಭಾರತದಿಂದ ಪಾಕಿಸ್ಥಾನಕ್ಕೆ, ಪಾಕಿಸ್ತಾನದಿಂದ ಭಾರತಕ್ಕೆ ಸ್ಥಳಾಂತರಿಸುವುದು ಜಾಣ ಕ್ರಿಯೆಯಲ್ಲ. ಈ ಎರಡೂ ಸರ್ಕಾರಗಳು ತಮ್ಮ ತಮ್ಮ ದೇಶದಲ್ಲಿಯ ಅಲ್ಪಸಂಖ್ಯಾತರುಗಳನ್ನು ಹೊರಹಾಕುವ ಮುಂಚೆ ಯಾವ ಪೂರ್ವ ತಯಾರಿಗಳನ್ನೂ ಮಾಡಿಕೊಂಡಿಲ್ಲ. ಹೊರ ಹೋಗುತ್ತಿರುವವರಿಗೆ ಯಾವ ಪರಿಹಾರದನವನ್ನು ನೀಡುತ್ತಿಲ್ಲ, ಭರವಸೆಗಳಿಲ್ಲ. ಇದು ಇಂದು ಮತೀಯ ಕಲಹದ ಸ್ವರೂಪದಲ್ಲಿದೆ. ಮುಂದೊಂದು ದಿನ ನಿನ್ನೆ–ಮೊನ್ನೆಯಷ್ಟೇ ಕಣ್ಣು ತೆರೆದ ಭಾರತ–ಪಾಕಿಸ್ತಾನಗಳ ಮಧ್ಯ ಇದು ಯುದ್ಧಕ್ಕೂ ಕಾರಣವಾಗುತ್ತದೆ.

ಕರಾಚಿ ಸರ್ಕಾರ ಈಗಾಗಲೇ ಯುದ್ಧಕ್ಕೆ ಪ್ರೇರಣೆ ಕೊಡುವ ಒಂದು ವಾಕ್ಯವನ್ನು ಹೇಳಿಬಿಟ್ಟಿದೆ. ಕೇವಲ ಪೂರ್ವ ಪಂಜಾಬದಲ್ಲಿರುವ ಮುಸ್ಲಿಂರು ಮಾತ್ರ ಪಾಕಿಸ್ತಾನಕ್ಕೆ ಬರಬೇಕು. ಭಾರತದ ಸಿಕ್ಕ ಸಿಕ್ಕ ಮೂಲೆಗಳಿಂದ ಬರುವ ಮುಸ್ಲಿಂರನ್ನು ಪಾಕಿಸ್ತಾನ ವಿರೋಧಿಸುತ್ತದೆ ಎಂದು "ಬಂಧು, ಸುಹರ್‌ವರ್ದಿ ಈಗ ದೇವರು ನಿನಗೊಂದು ಅವಕಾಶ

ಕೊಟ್ಟಿದ್ದಾನೆ. ಈ ವ್ಯವಹಾರವನ್ನು ನೀವು ಸರಿಪಡಿಸುವುದಾದರೆ ನಾನು ನಿನಗೆ ಸಹಕರಿಸುತ್ತೇನೆ. ನಿನ್ನಲ್ಲಿ ಯಾವುದೇ ಪೂರ್ವಗ್ರಹಗಳು ಇಲ್ಲ ಎನ್ನುವುದಾದರೆ ನೀನು ಕರಾಚಿಗೆ ಹೋಗು. ನಿನ್ನ ಗೆಳೆಯ ಖೈದ್-ಎ-ಆಜಂ, ಮಿಸ್ಟರ್ ಜಿನ್ನಾ ನಿನ್ನೊಂದಿಗಾದರು ಈ ಕುರಿತು ಸ್ನೇಹದಿಂದ ಮಾತನಾಡಬಲ್ಲರೋ, ಭಾರತದ ಮುಸ್ಲಿಂರ ದುಗುಡಗಳನ್ನು ಅರಿತುಕೊಳ್ಳಬಲ್ಲರೋ ಪರೀಕ್ಷಿಸು. ಆನಂತರ ಮುಂದಿನದನ್ನು ಕುರಿತು ಆಲೋಚಿಸೋಣ."

ಈ ಮಧ್ಯದಲ್ಲಿ ಪಾಕಿಸ್ತಾನದ ಲಾಹೋರ್‌ನಿಂದ ಅಲ್ಲಿ ಹಿಂದುಗಳಿಗಾಗುತ್ತಿರುವ ಹಿಂಸೆಯನ್ನು ಕುರಿತು ರಾಮೇಶ್ವರಿ ನೆಹರು ಗಾಂಧಿಗೊಂದು ಪತ್ರ ಬರೆದಿರುತ್ತಾಳೆ. ಅವಳು ಗಾಂಧಿ ಪಾಕಿಸ್ತಾನಕ್ಕೆ ಬಂದು ಹಿಂದುಗಳ ಗೋಳನ್ನ ಕೇಳಬೇಕು, ಅಲ್ಲಿಯ ಬೆಂಕಿಯನ್ನು ನಂದಿಸಬೇಕು ಎನ್ನುತ್ತಾಳೆ. ಆದರೆ ಇದು ಗಾಂಧಿಗೆ ಸಾಧ್ಯವೇ? ಗಾಂಧಿ ಹೇಳುವುದಿಷ್ಟೇ. "ನನ್ನ ಸ್ಥಿತಿ ನಿನಗೆ ಅರ್ಥವಾಗುವುದಿಲ್ಲ. ಇದ್ದ ನೆಲದಲ್ಲಿಯೇ ಹತ್ತಿ ಉರಿಯುವುದನ್ನು ತಪ್ಪಿಸಲಾಗದ ನಾನು ಪಾಕಿಸ್ತಾನದಲ್ಲಿ ಏನಾದರು ಸಾಧಿಸುತ್ತೇನೆ ಎನ್ನುವುದು ಮೂರ್ಖತನ ರಾಮೇಶ್ವರಿ. You must do what you can, surrendering every thing to god. ಎಲ್ಲವು ಅದರಷ್ಟಕ್ಕೆ ಸರಿ ಹೋಗುತ್ತದೆ. ಬಾಪಾ ಮತ್ತು ಜವಹರಲಾಲ್ ಹೇಳುತ್ತಿದ್ದರು ನೀನಿಷ್ಟರಲ್ಲಿಯೇ ದೆಹಲಿಗೆ ಬರುತ್ತೀಯಾ ಎಂದು. ಆದರೆ ನನಗೇಕೋ ನೀನು ಅಲ್ಲಿಯೇ ಇದ್ದು, ಅನ್ಯ ಮನಸ್ಕಳಾಗದೆ ಶಾಂತವಾಗಿ ಪರಿಸ್ಥಿತಿಯನ್ನು ಎದುರಿಸಬೇಕು ಅನಿಸುತ್ತಿದೆ. ನೀನಲ್ಲಿದ್ದು ಏನೂ ಮಾಡದೆ ಉಳಿಯುವುದಾದರೆ ಅದು ಬೇರೆ ಮಾತು. ನಿನ್ನ ಆತ್ಮದ ಮಾತನ್ನ ಕೇಳು. ನನ್ನ ಬಗ್ಗೆ ಚಿಂತೆ ಬೇಡ. ನನ್ನೊಂದಿಗೆ ಸುಹರ್‌ವರ್ದಿ ಇದ್ದಾರೆ."

ಅದೇ ಸಾಯಂಕಾಲದ ತನ್ನ ಪ್ರಾರ್ಥನಾ ಸಭೆಯಲ್ಲಿ ಯಾರೋ ಅನಾಮಿಕನೊಬ್ಬ ಬರೆದ ಪತ್ರವನ್ನು ಗಾಂಧಿ ಓದಿದ. ಅದು ಪತ್ರವಾಗಿರದೆ ಗಾಂಧಿಗೆ ಕೊಟ್ಟ ಎಚ್ಚರಿಕೆಯ ಮಾತಿನಂತಿತ್ತು. ಪಾಕಿಸ್ಥಾನದಲ್ಲಿ ಹಿಂದುಗಳಿಗೆ ಇರಲು ಅವಕಾಶ ನೀಡದೆ ಹೋದರೆ ಭಾರತದಲ್ಲಿ ಯಾವುದೇ ಕಾರಣಕ್ಕೂ ಮುಸ್ಲಿಂರಿಗೆ ಉಳಿದುಕೊಳ್ಳುವ ಅವಕಾಶವನ್ನು ನಾವು ನೀಡುವುದಿಲ್ಲ ಎನ್ನುವ ಎಚ್ಚರಿಕೆಯ ಮಾತುಗಳು. ಗಾಂಧಿ ಇದಕ್ಕೆ ಅತ್ಯಂತ ಸಹನೆಯ, ತಣ್ಣಗಿನ ಉತ್ತರವನ್ನು ನೀಡಬೇಕಿತ್ತು. ಎಲ್ಲೊ ಹೊತ್ತಲು ಅಣಿಯಾಗಿದ್ದ ದಂಗೆಯ ಬೆಂಕಿಯನ್ನು ಅದರ ಹುಟ್ಟಿನಲ್ಲಿಯೇ ನಂದಿಸಬೇಕಿತ್ತು. ಹೀಗಾಗಿ ಆತ ಕೇಳಿದ- "ಯಾವನೋ ಒಬ್ಬ ತಪ್ಪು ಕಾರ್ಯವನ್ನು ಮಾಡುತ್ತಿದ್ದಾನೆ ಎನ್ನುವುದರ ಅರ್ಥ ನಾವು ಅದನ್ನೇ ಮಾಡಬೇಕಂದಲ್ಲ. ಪಾಕಿಸ್ತಾನ ಮತ್ತು ಇಸ್ಲಾಂ ಎನ್ನುವ ಪದಗಳ ಅರ್ಥ ಮುಸ್ಲಿಂರಲ್ಲದವರನ್ನು ದ್ವೇಷಿಸುವುದು ಎಂದು ಅಲ್ಲ. ಮುಸ್ಲಿಂರಲ್ಲದವರು ಅಲ್ಲಿ ಸಹನೆಯಿಂದ ಬಾಳಲಾರರು ಎನ್ನುವುದು ಮೂರ್ಖ ಕಲ್ಪನೆ. ಇಸ್ಲಾಂನ ಸಾಮ್ರಾಜ್ಯ ಬಹಳ ದೊಡ್ಡದು. ಕಳೆದು 1300 ವರ್ಷಗಳಿಂದ ಅದು ವಿಶಾಲವಾಗಿ ಹಬ್ಬಿಕೊಂಡಿದೆ. ಇಸ್ಲಾಂದ ಮೌಲ್ಯಗಳಿಗಾಗಿ ಅನೇಕ ತ್ಯಾಗ ಮತ್ತು ಬಲಿದಾನಗಳನ್ನು ಮಾಡಲಾಗಿದೆ. ಇಂಥದರ ಮಧ್ಯ ಅಸಹನೆಗಾಗಿ ಹೆಸರಾಗುವ ಇಸ್ಲಾಂ ಒಂದು ಹುಟ್ಟಿಕೊಳ್ಳುವುದಾದರೆ ಅದು ಅಸಹ್ಯ. It wouldn't be acceptable to true muslims at all.

ಈ ಕುರಿತು ಆಲೋಚಿಸಿ ನೋಡಿ ನಿಜವಾದ ಭಾರತ ಎಂದರೆ ಬರಿ ಹಿಂದೂಗಳಿಗಾಗಿ ಎಂದೇನಲ್ಲ. ನಿಜವಾದ ಕ್ರೈಸ್ತ ಧರ್ಮ ಎನ್ನುವುದು ಬರಿ ಕ್ರಿಶ್ಚಿಯನ್ನರಷ್ಟನ್ನೇ ಒಪ್ಪಿಕೊಳ್ಳುವುದಿಲ್ಲ. ಜಗತ್ತು ಇಂಥ ಅಸಹನಾ ಸ್ವರೂಪದ ಧರ್ಮಗಳನ್ನು ಆದರಿಸಬೇಕಾಗಿಲ್ಲ. ಆದರಿಸಿಯೂ ಇಲ್ಲ. ಹೊಸ ಇತಿಹಾಸ ನಮ್ಮಿಂದೇಕೆ ಸೃಷ್ಟಿಯಾಗಬಾರದು? Let us not ruin India and Let us not allow Pakistan to be ruined. ಯಾವುದೇ ನಿಜವಾದ ಧರ್ಮ, ರಾಷ್ಟ್ರ, ನಾಶವಾಗುವುದನ್ನು ನೋಡುತ್ತಿರಲು ನಾವು ಬದುಕಿರಬೇಕಿಲ್ಲ. ನಾನು ಪ್ರಾರ್ಥಿಸಿಕೊಳ್ಳುವುದಿಷ್ಟೆ, ಕೆಟ್ಟದನ್ನು ಕಿತ್ತೆಸೆಯಲು ನಮ್ಮ ಪ್ರಾಣವನ್ನು ಬೇಕಾದರು ಕಳೆದುಕೊಳ್ಳೋಣ."

ಈ ಮಧ್ಯ ಗಾಂಧಿ ಬಿಡುವಿಲ್ಲದಂತಾದ. ಕೆಲವೊಮ್ಮೆ ಕೆಲವು ಪತ್ರಗಳಿಗೆ, ಸಭೆಗಳಿಗೆ ಪ್ರತಿಕ್ರಿಯಿಸಲು ಈಗ ತನ್ನ ಮೊಮ್ಮಗಳಾದ ಮನು ಗಾಂಧಿಯನ್ನು ಗಾಂಧಿ ಆಶ್ರಯಿಸಬೇಕಾಗುತ್ತಿತ್ತು. ಒಂದು ಉದಾಹರಣೆಯನ್ನು ಇಲ್ಲಿ ಸೂಚಿಸಬಹುದೇನೋ. ಗೋ-ಶಾಲೆಯನ್ನ ಕುರಿತು ಸೇವಾ ಗ್ರಾಮದ ಆಶ್ರಮದಿಂದ ಶ್ರೀ ಬಲವಂತ ಸಿನ್ಹಾ ಗಾಂಧಿಗೆ ಪತ್ರ ಬರೆಯುತ್ತಾನೆ. ಆದರೆ ಮತಾಂಧರನ್ನು ಮನುಷ್ಯರನ್ನಾಗಿಸುವ ಕ್ರಿಯೆಯಲ್ಲಿ ತೊಡಗಿಕೊಂಡಿದ್ದ ಗಾಂಧಿಗೆ ಪ್ರತಿಕ್ರಿಯಿಸಲು ಸಮಯವಿಲ್ಲ. ಹೀಗಾಗಿ ಗಾಂಧಿಯ ಮಾತುಗಳಲ್ಲಿಯೇ ಈಶವಾಶ್ಯ ಉಪನಿಷತ್ತನ ಸಾಲುಗಳನ್ನು ಉದ್ಧರಿಸುತ್ತಾ ಸಿನ್ಹಾರಿಗೆ ಮನು ಗಾಂಧಿ ಪತ್ರ ಬರೆಯುತ್ತಾಳೆ.

"ಆತ್ಮೀಯ ಸಿನ್ಹಾಜಿ, ಹಳೆಯದೆಲ್ಲವನ್ನು ಮರೆತುಬಿಡಿ. ಗೋ-ಶಾಲೆಯ ಬಗ್ಗೆ ಚಿಂತೆ ಮಾಡಬೇಡಿ. ಈ ಪ್ರಪಂಚದಲ್ಲಿ ನಮ್ಮದು ಎಂದು ಹೇಳಿಕೊಳ್ಳಲು ಯಾವುದೂ ಇಲ್ಲ. ಎಲ್ಲವೂ ದೇವರದ್ದು. ಆಕಳ ಹಾಲನ್ನು ಕುಡಿಯುವುದನ್ನು ಮರೆಯಬೇಡಿ. ಆ ಹಳ್ಳಿಯಲ್ಲಿ ನಿಮಗೆ ಆಕಳು ಹಾಲು ಸಿಗುತ್ತಿರುವುದೇ ನಿಮ್ಮ ಭಾಗ್ಯ. ಅವುಗಳ ಸಂಖ್ಯೆ ಹೆಚ್ಚುವಂತೆ ನೋಡಿಕೊಳ್ಳಿ. ಆ ಊರನ್ನ ತೊರೆದು ಹೋಗುವ ಯಾವ ವಿಚಾರವೂ ಬೇಡ. ನೀವು ನಿಮ್ಮ ಕರ್ತವ್ಯವನ್ನು ನಿರ್ವಹಿಸುವಾಗ ಅಲ್ಲಿಯೇ ಸಾವು ಬಂದು ಅಪ್ಪಳಿಸುವುದಾದರೆ ಅದನ್ನು ಸ್ವೀಕರಿಸಬೇಕೆಂದು ಬಾಪು ಅವರ ಆಜ್ಞೆಯಾಗಿದೆ. ಮೇಕೆಯ ಹಾಲು ಆಕಳ ಹಾಲಿಗೆ ಪರ್ಯಾಯವಲ್ಲ. ಇನ್ನೂ ಸಾಕಷ್ಟು ಕೆಲಸಗಳಿವೆ.

ಇಂತಿ ತಮ್ಮ

ಮನು."



ಮೇರಾ ಘರ್: ಸಾರಾ ಸಂಸಾರ್

೨೬

ಪ್ರಪಂಚದ ಇತಿಹಾಸದ ಎಲ್ಲ ದುರಂತ ನಾಯಕರು ಗಾಂಧಿಗೆ ಈಗ ಮಾನಸಿಕವಾಗಿ ಹತ್ತಿರವಾದರೇನೋ. 1947 ರ ಸೆ. 20 ರ ಸುಮಾರಿಗೆ ಆತ ನಡೆಸಿದ ಅನೇಕ ಪತ್ರ ವ್ಯವಹಾರಗಳಲ್ಲಿ ಈ ಅಂಶ ಸ್ಪಷ್ಟವಾಗಿದೆ. ಈ ಸಂದರ್ಭದ ಆತನ ಮಾತುಗಳೆಲ್ಲವೂ ಕ್ಯಾಂಟರ್‌ಬರಿಯ ದುರಂತ ಧರ್ಮ ನಾಯಕ ಥಾಮಸ್ ಬೆಕೆಟ್‌ನ ಉಪದೇಶದಂತಿವೆ. ಕ್ಯಾಂಟರ್ ಬರಿಯ ಕೆಥಡ್ರಲ್‌ನಲ್ಲಿ ತನ್ನ ನಂಬಿಗಸ್ಥರಿಂದಲೇ ಕೊಲೆಯಾದ ಥಾಮಸ್ ಬಕೆಟ್‌ನ ಬಗ್ಗೆ ಮತ್ತೆ ವಿವರಿಸಿ ಹೇಳಬೇಕಿಲ್ಲ.

ಇದೇ ವೇಳೆ ಗಾಂಧಿಯ ಪ್ರಯತ್ನದ ಫಲವೋ ಏನೋ ಅನ್ನುವಂತೆ ಹಿಂದೂಗಳ ನರಮೇಧವನ್ನು ತಡೆಯಲಾಗುವುದು ಎಂದು ದೆಹಲಿಯ ಅನೇಕ ಮುಸ್ಲಿಂ ನಾಯಕರ ಭರವಸೆಯೂ ದೊರೆಯಲಾರಂಭಿಸಿತು. ಮುಖ್ಯವಾಗಿ ಮುಸ್ಲಿಂ ನಿರಾಶ್ರಿತ ಶಿಬಿರಗಳ ಸೆಕ್ರೆಟರಿ ಡಾ. ಹಾಫಿಜ್ ಸಯ್ಯದ್ ಅಜೀಜ್, ಹುರಿಯತ್‌ನ ಸಂಪಾದಕ ಮಿ. ಅಫ್ತಾಬ್ ಅಹ್ಮಮದ್ ಖಾನ್, ಜಮಾತುಲ್ ಉಲೇಮಾದ ಮಿ. ಜಿಯಾಉಲ್ ಹಕ್, ಎಲ್ಲರೂ ಸೇರಿ ಗಾಂಧಿಗೆ ಶಾಂತಿ ಭರವಸೆಯ ಲಿಖಿತ ಪತ್ರವೊಂದನ್ನು ನೀಡಿದರು. ಈ ಹಿಂದೆ ಪಶ್ಚಿಮ ಪಂಜಾಬ್‌ನಲ್ಲಿ ಹಾಗೂ ರಾಷ್ಟ್ರದ ಅನೇಕ ಮೂಲೆಗಳಲ್ಲಿ ಪ್ರಚೋದನಾಕಾರಿ ಹಾಗೂ ಜೀವವಿರೋಧಿ ಭಾಷಣಗಳನ್ನು ಮಾಡಿದ್ದ ಮುಸ್ಲಿಂ ಲೀಗ್‌ನ ನಾಯಕರ ಮಾತುಗಳು ಮಾನವ ಸಮಾಜದ ಮೇಲಿನ ಕಪ್ಪು ಚುಕ್ಕೆ ಎಂದು ಹೇಳಿದರು. ಇತಿಹಾಸದಲ್ಲಿ ತಾವು ಮೋಸಹೋದೆವು. ಹಿಂದೂಗಳಿಂದ ತಮಗೆ ಅನ್ಯಾಯವಾಯಿತು ಎನ್ನುವ ಹುಚ್ಚು ಭ್ರಮೆಯಲ್ಲಿ ನಾವು ಪಾಕಿಸ್ತಾನವನ್ನು ಸಮರ್ಥಿಸಿದೆವು ಮತ್ತು ಅದರ ನಿರ್ಮಾಣಕ್ಕೆ ಕಾರಣವಾದೆವು. ಆ ತಪ್ಪಿನ ಅರಿವು ನಮಗೀಗಾಗಿದೆ. ನಾವೀಗ ಭಾರತದಲ್ಲಿಯೇ ಶಾಂತಿ ಮತ್ತು ಸಹನೆಯಿಂದ ಬಾಳಬೇಕಾಗಿದೆ. ಇನ್ನೆಂದಿಗೂ ಭಾರತದ ಮುಸ್ಲಿಂರು ಭಾರತಕ್ಕೆ ಅಥವಾ ಹಿಂದೂಗಳಿಗೆ ಮೋಸಮಾಡಲಾರರು ಎಂದು ಮುಸ್ಲಿಂ ನಾಯಕರು ಭರವಸೆಯನ್ನು ನೀಡಿದರು.

27ರಂದು ಮತ್ತೆ ಮರಳಿ ಭಾರತಕ್ಕೆ ಬರಬೇಕಾಗಿದ್ದ ಶಹೀದ ಸುಹರ್‌ವರ್ದಿ ಪಾಕಿಸ್ತಾನದಲ್ಲಿ ಭಾರತೀಯರ ಮಾನ–ಪ್ರಾಣಗಳ ರಕ್ಷಣೆಗಾಗಿ ಮುಸ್ಲಿಂ ಶಾಂತಿ ಪಾಲಕರ ಪಡೆಯೊಂದಿಗೆ ಲಾಹೋರಿಗೆ ಹೋದ. ಡಾ. ರಾಮ ಮನೋಹರ್ ಲೋಹಿಯಾ ಮತ್ತು ಡಾ. ದಿನ್‌ಶಾ ಮೆಹತಾ ಹಿಂದೂ ಮತ್ತು ಸಿಖ್ ನಾಯಕರುಗಳ ಮನವೊಲಿಸಿ ಇತ್ತ ಭಾರತದಲ್ಲಿ ಮುಸ್ಲಿಮರ ಕೊಲೆಯಾಗದಂತೆ ನೋಡಿಕೊಳ್ಳುವ ಪ್ರಯತ್ನವನ್ನು ಮುಂದುವರಿಸಿದರು. ಮೌಲಾನ್ ಅಹಮ್ಮದ್ ಸಯ್ಯದ, ಮಿ. ಹಾಫೀಜ್ ಹಸರ್ ಬಕುಮಿ, ಮೌಲಾನ್ ಅಫಜಲ್ ಅಹಮಾನ್, ಮಿ. ಹಾಫಿಜ್ ಮೊಹಮದ್ ನಸೀನ್ ಭೂತನ್‌ವಾಲಾ, ಖಾನ್ ಬಹದ್ದೂರ್ ಹಬೀಬುರ್ ರೆಹಮಾನ್ ಮತ್ತು ಮಿಸ್ಟರ್ ಡಿ.ಎಂ. ಮಲ್ಲಿಕ್ ಹೀಗೆ ಎಲ್ಲ ಮುಸ್ಲಿಂ ನಾಯಕರು ಗಾಂಧಿ ಕೈಗೊಂಡ ಸೌಹಾರ್ದ ಯಾತ್ರೆಯಲ್ಲಿ ಸಹಭಾಗಿಗಳಾಗಿ ಸಹಕರಿಸಿದರು.

ಸೆಪ್ಟಂಬರ್ 20 ರ ಸಾಯಂಕಾಲದ ಪ್ರಾರ್ಥನೆಯಲ್ಲಿ ಪ್ರಧಾನಿ ನೆಹರೂ, ಸರ್ದಾರ್ ಪಟೇಲ್, ಮೌಲಾನ್ ಅಬುಲ್ ಕಲಾಮ್ ಆಜಾದ್, ಆರೋಗ್ಯ ಸಚಿವೆ ರಾಜಕುಮಾರಿ ಅಮೃತಾ ಕೌರ್, ಎಲ್ಲರೂ ಹಾಜರಿದ್ದರು. ಪುರಾಣದ ಮಂತ್ರಗಳನ್ನು ಪಠಿಸಲಾಯಿತು. ಈ ಪ್ರಾರ್ಥನೆಯ ನಂತರ ಗಾಂಧಿ ಒಂದು ಪ್ರಶ್ನೆಯನ್ನೆತ್ತಿಕೊಂಡ, "ನಾವೆಲ್ಲರೂ ದೇವರಲ್ಲಿ ಪ್ರಾರ್ಥಿಸಬೇಕು, ಅವನಲ್ಲಿ ವಿಶ್ವಾಸ ಇಡಬೇಕು ಎನ್ನುವ ವಿಚಾರ ಎಲ್ಲರಿಗೂ ಮನವರಿಕೆಯಾಗಿಲ್ಲ. ನಾವ್ಯಾಕೆ ದೇವರನ್ನು ಪ್ರಾರ್ಥಿಸಬೇಕು? ದೇವರೆಲ್ಲಿದ್ದಾನೆ? ನಮ್ಮ ಯಾವ ಕಷ್ಟಗಳಿಗೆ ಆತ ಸ್ಪಂದಿಸುತ್ತಾನೆ?" ಎಂದು ಪ್ರಶ್ನಿಸುತ್ತಾರೆ. ಇಂತಹದರಲ್ಲಿ ಮುಸ್ಲಿಂರು ಇದ್ದಾರೆ. ಆದರೆ ಎಲ್ಲ ಪ್ರಶ್ನೆಗಳನ್ನು ತಪ್ಪಾಗಿ ತಿಳಿಯಲಾಗಿದೆ. ಮಾನವ ಇತಿಹಾಸದ ಈ ವಿಷಮ ಘಳಿಗೆಯಲ್ಲಿ ಖುದಾ, ಅಲ್ಲಾ, ಈಶ್ವರ ಮತ್ತು ರಾಮರನ್ನು ನಾವೀಗ

ಸ್ಮರಿಸಿಕೊಳ್ಳಬೇಕಿದೆ. ದೇವರು ಖಂಡಿತವಾಗಿಯೂ ನಮಗೆ ಸಹಕರಿಸುತ್ತಾನೆ. ಸಹಾಯ ಮಾಡುತ್ತಾನೆ. ಈ ಕೈಗಳಿಂದ ನಾವಾತನನ್ನು ಮುಟ್ಟಲಾಗದು, ಕಣ್ಣಿಂದ ನೋಡಲಾಗದು. ಆತ ನಮ್ಮ ಭೌತಿಕ ಜಗತ್ತಿನಿಂದ ದೂರದಲ್ಲಿದ್ದಾನೆ. ಆದರೆ ಆತ ಸತ್ಯವಾಗಿದ್ದಾನೆ. ನಾವು ಜೀವಂತವಾಗಿರುವಾಗಲೇ ನಾವು ಬದುಕಿರುವುದು ಸುಳ್ಳಾಗಿದೆ ಎನ್ನುವುದನ್ನು ನಾವು ನಂಬುವುದಾದರೂ ಹೇಗೆ? ಇದು ಕೆಲವರ ಪ್ರಶ್ನೆ. ನನ್ನ ಉತ್ತರವಿಷ್ಟೆ, ನಾನು ಇಂದು ಜೀವಂತವಾಗಿದ್ದೇನೆ ನಾಳೆ...? ನಾಳೆ ನನ್ನ ಜೀವಿತದ ಬಗ್ಗೆ ಯಾರಾದರು ಖಂಡಿತವಾಗಿ ಹೇಳಲು ಸಾಧ್ಯವಿದೆಯೇ? ಹೀಗೆ ಈ ಸುಳ್ಳಿನಲ್ಲಿಯೇ 28 ವರ್ಷಗಳನ್ನು ಬಳಸಿದ್ದೇನೆ. ನಾನು ಹೀಗೆಯೇ ಪ್ರತಿ ನಾಳೆಗಳನ್ನು ಕುರಿತು ಅಚ್ಚರಿ ಹೊಂದಿದವನಾಗಿದ್ದೇನೆ. ನಾನು ಇನ್ನು ಕೆಲವು ದಿನ ಬದುಕಬಹುದು, ಕೆಲವು ವರ್ಷ ಬದುಕಬಹುದು, ಆದರೆ ಈ ಕ್ಷಣದಲಿ ಬದುಕಿದ ಮನುಷ್ಯ ಮುಂದಿನ ಕ್ಷಣದಲ್ಲಿಯೂ ಬದುಕುತ್ತಾನೆಂದು ಭರವಸೆ ನೀಡಲಾದೀತೆ? ಅದಕ್ಕಾ-ಗಿಯೇ ನಾನು ಹೇಳುವುದು, We are all unreal, God alone can be real, what lives forever is the reality of God. ಇಂದು ಆತನ ಇರುವಿಕೆಯನ್ನು ನಾವು ಸಂಶಯಿಸುವುದಾದರೆ, ಆತ ಸಾಧ್ಯವೇ ಇಲ್ಲ ಎಂದು ಸಿಟ್ಟಿಗೇಳುವುದಾದರೆ ಅದು ಮೂರ್ಖತನವಷ್ಟೇ. ಆತ ಎಲ್ಲವನ್ನೂ ನಿರ್ದೇಶಿಸಬಲ್ಲ. He is Rama, The Saviour, and Raheem, the mercyful. ಆತನ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಹೀಗಾಗಿ ಎಲ್ಲ ಧರ್ಮಗಳು ಒಂದೇ, ಮತಗಳು ಒಂದೇ, ಮನುಷ್ಯರು ಒಂದೇ. ಇದನ್ನು ಸಾಧಿಸುವುದೇ ನನ್ನ ಬದುಕಿನ ಗುರಿಯಾಗಿದೆ. ನಾನು ಬದುಕಬೇಕೆಂಬ ಆಸೆಯ ಬೆನ್ನುಲುಬಾಗಿದೆ. ಇದು ಸಾಧ್ಯವಾಗದೇ ಹೋಗುವುದಾದರೆ, I wish that he takes me away.

ಇವು ಗಾಂಧಿಯ ಮಾತುಗಳು. ಸಂದರ್ಭದ ಪ್ರಾಮಾಣಿಕ ಹಿನ್ನೆಲೆಯಿಂದ ಈ ಮಾತುಗಳನ್ನು ಓದಿದಾಗ ಇವುಗಳಲ್ಲಿಯೂ ಒಂದು ಅಪ್ರಾಮಾಣಿಕತೆಯನ್ನು ಹುಡುಕುವುದು ಮೂರ್ಖತನವೆನಿಸುತ್ತದೆ. ಆದರೆ ಗಾಂಧಿಯ ಯಾವ ಪ್ರಾಮಾಣಿಕತೆಯನ್ನೂ ಸಾರಾಸಗಟಾಗಿ ಒಪ್ಪಿಕೊಂಡ ಚಾರಿತ್ರಿಕ ಸಂದರ್ಭಗಳು ಸಿಗುವುದು ಕೂಡ ಅಷ್ಟೇ ವಿರಳವಾಗಿವೆ.

ನಟಲ್‌ನಿಂದ ಬಂದ ಮೇಲೆ ಭಾರತದ ರಾಜಕೀಯದಲ್ಲಿ ಗಾಂಧಿ ಕಳೆದ ಅವಧಿ ಸರಿಸುಮಾರು 54 ವರ್ಷಗಳು ಇರಬಹುದು. ರಾಜಕಾರಣದ ಆತನ ಈ ಧೀರ್ಘದಾರಿ ನಂಬಿಕೆ ಅಪನಂಬಿಕೆಗಳು ಮಧ್ಯೆವೇ ಸಾಗಿಹೋಯಿತು. ವೈಸರಾಯ್, ಲಾರ್ಡ್ ವಿಲಿಂಗ್ಡನ್ ಗಾಂಧಿಯನ್ನು ಕುರಿತು 1933ರಲ್ಲಿ ಬರೆಯುತ್ತಾನೆ, "ನಾವು ಕಾಣುವ ಗಾಂಧಿ 'Not what he poses to be.' ಲಾರ್ಡ್ ವೆವೆಲ್‌ಕೂಡ ಇದೇ ವಾದದವನಾಗಿದ್ದಾನೆ. ಆತನ ಪ್ರಕಾರ ಈ ಗಾಂಧಿ 'exceedingly shrewd, obstinate, double-tounged single minded politician.' ಗಮನಿಸಬೇಕಾದುದಿಷ್ಟೇ, ಇವರಿಬ್ಬರ ದೃಷ್ಟಿಯಲ್ಲಿಯೂ ಗಾಂಧಿ ಒಬ್ಬ ಕಪಟ ನಾಟಕ ಸೂತ್ರಧಾರಿ. ಈತ ಮಹಾತ್ಮನಲ್ಲ. ಇತಿಹಾಸದಲ್ಲಿ ಮಹಾತ್ಮನಾದ ಗಾಂಧಿಯನ್ನು ಮರೆತು ಆರೇಳು ದಶಕಗಳ ದಾರಿಯನ್ನು ನಾವು ಕ್ರಮಿಸಬಹುದೇನೋ. ಆದರೆ ಈ ಮೇಲಿನ ಉಲ್ಲೇಖಗಳಲ್ಲಿ ಚರ್ಚಿತನಾದ ಗಾಂಧಿ ಎಂಬ ರಾಜಕಾರಣಿಯನ್ನು ನಾವು ಮರೆಯಲಾಗುವುದಿಲ್ಲ.

ಇವರ ಆಲೋಚನೆಗಳೇನೇ ಇರಲಿ, ಗಾಂಧಿ ಮಾತ್ರ ಅಹಿಂಸೆಯ ಮಂತ್ರವನ್ನು ಜಪಿಸುತ್ತ ದೆಹಲಿಯ ರಸ್ತೆಯ ಇಕ್ಕೆಲ್ಲಗಳಲ್ಲಿ ಬಿದ್ದ ಹೆಣಗಳ ಮಧ್ಯ ಸಾಗಿ ಹೊರಟಿದ್ದ. ಜಾತಿ, ಮತ, ಭೇದಗಳಿಲ್ಲದ ಹದ್ದು, ಕಾಗೆಗಳು ಮಾತ್ರ ಮೃಷ್ಟಾನ್ನದ ಸುಖದಲ್ಲಿದ್ದವು. ಅವುಗಳಲ್ಲಿಯೂ ಒಂದಷ್ಟು ಜಗಳವಿತ್ತು. ಅದು ಆಹಾರಕ್ಕಾಗಿ ಮಾತ್ರ, ದೇವರಿಗಾಗಿ ಅಲ್ಲ. ಮಹಾತ್ಮ ಗಾಂಧಿಕಿ ಜೈ, ಮಹಾತ್ಮಾ ಗಾಂಧಿ ಜಿಂದಾಬಾದ್ ಎಂದು ಘೋಷಿಸುವ ಯಾರೂ ಕೂಡ ತಮ್ಮ ಬಳಿಯಲ್ಲಿ ಬಚ್ಚಿಟ್ಟುಕೊಂಡ ಆಯುಧಗಳನ್ನು ಆತನಿಗಾಗಿ ಕೊಟ್ಟು ಬಿಡಬೇಕಾದ ಒತ್ತಡದಲ್ಲಿದ್ದರು.

ಸೆ.21 ರಂದು ಗಾಂಧಿ ಸಂದರ್ಶಿಸಿದ್ದು ಕುತುಬ್‌ರೋಡ್, ಸದರ್ ಬಝಾರ್, ಘುಲ್‌ಮೆತಾಯಿ ಮತ್ತು ಘುಲ್ ಬಂಗೇಶ್ ಪ್ರದೇಶಗಳನ್ನು. ಇಲ್ಲಿ ಗಾಂಧಿ ಮಿ.ಅಬ್ದುಲ್ ಲಾಲ್‌ಥೆರ್‌ವಾಲಾ ಎನ್ನುವ ಮುಸ್ಲಿಂ ಬಂಧುವಿನ ಮನೆಗೆ ಸಂದರ್ಶನ ಕೊಟ್ಟ. ಆತನ ಮನೆಯ ಬಾಲ್ಕನಿಯಲ್ಲಿ ನಿಂತು ಮಾತನಾಡಿದ ಗಾಂಧಿ ಎರಡು ಸಾವಿರ ಜನ ಮುಸ್ಲಿಂರಿಗೆ ಸಾಂತ್ವನ ಹೇಳಿದ. ಮನೆಯ ಮಾಳಿಗೆಗಳ ಮೇಲೆ ಕುಳಿತ ಮಹಿಳೆಯರು, ರಸ್ತೆಗಳ ಮೇಲೆ ನಿಂತ ಪುರುಷರು ಈತನಲ್ಲಿ ಒಬ್ಬ 'Father of Nation' ನನ್ನ ಕಂಡುಕೊಂಡರು. ಇನ್ನು ಕೆಲವರಿಗೆ ಈತ 'Pride of India.' ಸಲ್ವಾರ್ ಪೈಜಾಮಿನಲ್ಲಿದ್ದ ಅರೆ ಮುಪ್ಪಿನ ಮನುಷ್ಯ ಓಡಿ ಬಂದು ಗಾಂಧಿಯ ಪಾದ ಮುಟ್ಟಿ 'ನಿನ್ನ ಮಾತುಗಳಿಂದ ನಾವು ಧನ್ಯರಾದೆವು. ನಮ್ಮ ಹಿಂದು ಸಹೋದರರೊಂದಿಗೆ ನಮಗೀಗ ಶಾಂತಿ ಬೇಕಿದೆ. ನಾವು ಮತ್ತೆ ಕೂಡಿ ಬಾಳುತ್ತೇವೆ, ಎಂದು ಹೇಳಿದ.

ದೆಹಲಿಯ ಪಹಾರಿ ಧೀರಜ್‌ನಲ್ಲಿಯೂ ಇಂಥದೇ ಘಟನೆ ಪುನಾರಾವರ್ತನೆಯಾಯಿತು. ಈಗ ಗಾಂಧಿ ದೇವರಾಗುತ್ತಾ ಹೊರಟಿದ್ದ. ಆದರೆ ಅವನ ವಿರುದ್ಧದ ಧ್ವನಿಗಳು ತಣ್ಣಗಾಗಿರಲಿಲ್ಲ. ಅನಾರೋಗ್ಯ ಪೀಡಿತರಾಗಿದ್ದ ಡಾ. ಬಾಬುರಾಜೇಂದ್ರ ಪ್ರಸಾದರ ಮನೆಗೆ ಹೋಗಿ ನೋಡಿಕೊಂಡು ಬಂದು ಸಾಯಂಕಾಲದ ಪ್ರಾರ್ಥನೆಗೆ ಕುಳಿತು ಗಾಂಧಿ ಬಿರ್ಲಾಮಂದಿರಿನ ಹುಲ್ಲುಗಾವಲಿನಲ್ಲಿ 'ಅಲ್ಪ ಪತೇಹಾ' ಮುಸ್ಲಿಂ ಪ್ರಾರ್ಥನೆಯನ್ನು ಹಾಡಿಸುತ್ತಿದ್ದರೆ, ಯುವಕನೊಬ್ಬ ಎದ್ದು ನಿಂತು ನಾನು ಈ ಪ್ರಾರ್ಥನೆಯನ್ನು ವಿರೋಧಿಸುತ್ತೇನೆ ಎಂದ. ತಣ್ಣನೆಯ ಧ್ವನಿಯಲ್ಲಿ ಗಾಂಧಿ ಹೇಳಿದ– "ನಿನ್ನ ಸಿಟ್ಟು ನನಗೆ ಅರ್ಥವಾಗುತ್ತದೆ. ನಾನು ನಿನ್ನ ಕಾರಣಕ್ಕಾಗಿ ಈಗ ಇಲ್ಲಿ ಪ್ರಾರ್ಥನೆಯನ್ನು ಮುಂದುವರಿಸುವುದಿಲ್ಲ ಅಂದ ಮಾತ್ರಕ್ಕೆ ನಾನು ಪ್ರಾರ್ಥನೆಯನ್ನು ಬಿಟ್ಟುಬಿಡುತ್ತೇನೆ ಎಂದು ತಿಳಿದುಕೊಳ್ಳಬೇಡ" ಎಂದು ಹೇಳಿ ಕೋಣೆಯೊಳಗಡೆ ಹೋಗಿ ಪ್ರಾರ್ಥನೆಗೆ ಕುಳಿತುಕೊಂಡ.

ತನ್ನೊಳಗೆ ಇಳಿದ ಗಾಂಧಿ ತನ್ನೆದಿರು ಕುಳಿತುಕೊಂಡ ನಾಲ್ಕೇ ನಾಲ್ಕು ಜನರೆದುರು ಆತ ಹೇಳಿದ, "ಇಂದು ಮುಂಜಾನೆ ನಾನು ಹೋದಲ್ಲೆಲ್ಲ ಜನರು ನನ್ನ ಜಯಘೋಷ ಮಾಡಿದರು. ಆದರೆ ಆ ಜಯಘೋಷ ಹಾಕುವವರಿಗೆ ನಾನು ಯಾವ ಪರಿ ಸೋತು ಹೋಗಿದ್ದೇನೆ ಎಂಬುದು ತಿಳಿದಿರಲಿಕ್ಕಿಲ್ಲ. ನನಗೆ ಬದುಕುವ ಇಚ್ಛೆ ಬತ್ತಿ ಹೋಗಿದೆ. ಹಿಂದು, ಸಿಖ್, ಮುಸ್ಲಿಂರು ಶಾಂತಿಯನ್ನು ಕಾಯ್ದುಕೊಳ್ಳದೆ ಅಪಚಾರ ಮಾಡುತ್ತಿದ್ದಾರೆ. ಒಕ್ಕಟ್ಟಿನ

ಗುಟ್ಟು ಅವರಿಗೆ ತಿಳಿಯುತ್ತಿಲ್ಲ. ವಿಘಟನೆ ವಿನಾಶಕಾರಿ. ಹುಟ್ಟಿದ ಮರ ಫಲ ಕೊಡದೇ ಹೋದರೆ ಹೇಗೆ ಅದರ ಬಾಳು ವ್ಯರ್ಥವಾಗುತ್ತದೆಯೋ ಹಾಗೆ ನಾನು ಅಂದುಕೊಂಡದ್ದನ್ನು ಸಾಧಿಸದೇ ಹೋದರೇ ನನ್ನ ಬಾಳೂ ವ್ಯರ್ಥ. ಒಂದು ಶರೀರ ಉಪಯುಕ್ತವಾಗದೇ ಹೋದರೆ ಇನ್ನೊಂದು ಶರೀರವೂ ಅನುಪಯುಕ್ತವಾಗುತ್ತದೆ. ಯಾಕೆಂದರೆ ಆತ್ಮ ಶರೀರವನ್ನು ಬದಲಾಯಿಸುತ್ತಿರುತ್ತದೆ. ಆತ್ಮ ಶರೀರದ ಮೂಲಕವೇ ತನ್ನ ಮೋಕ್ಷವನ್ನು ಸಾಧಿಸಬೇಕು."

ಗಾಂಧಿಯ ಈ ಸ್ವಗತಗಳು ಸ್ವಗತಗಳಾಗದವಷ್ಟೇ. ನೌಖಾಲಿ, ಬಿಹಾರ್, ದೆಹಲಿ, ಪಂಜಾಬಗಳಲ್ಲಿ ಈ ಗಾಂಧಿಯೊಬ್ಬ ಭಟ್ಟಂಗಿ, ಮುಸ್ಲಿಂರನ್ನು ಓಲೈಸುವ ಮೂಲಕ ಮಹಾತ್ಮನಾಗುವ ಕನಸು ಕಾಣುತ್ತಿದ್ದಾನೆ ಎನ್ನುವ ಸಂಶಯ ಕ್ರಮೇಣ ಜನರಲ್ಲಿ ಗಟ್ಟಿಯಾಗತೊಡಗಿತು. ಇದನ್ನು ನಿವಾರಿಸಿಕೊಳ್ಳಲು ವಕೀಲನೊಬ್ಬ ಬಿರ್ಲಾ ಮಂದಿರಕ್ಕೆ ಹೋಗಿ, "ಮುಸ್ಲಿಂರು ಆಯುಧಗಳನ್ನು ತ್ಯಜಿಸುವವರೆಗೂ ಭಾರತದಲ್ಲಿ ಅವರ ಮರುಸ್ಥಾಪನೆ ಸಾಧ್ಯವಿಲ್ಲ. ಭಾರತದಿಂದ ಪಾಕಿಸ್ತಾನಕ್ಕೆ ಹೋಗುತ್ತಿರುವ ಮುಸ್ಲಿಂರ ಕೊಲೆ ಅಷ್ಟೇ ಅಲ್ಲ ಬದಲಾಗಿ, ಪಾಕಿಸ್ತಾನದಿಂದ ಭಾರತಕ್ಕೆ ಬರುತ್ತಿರುವ ಹಿಂದುಗಳ ಕೊಲೆಯೂ ಭಯಾನಕವಾಗಿ ನಡೆಯುತ್ತಿದೆ ಎಂದು ನಿನಗೆ ಸರಿಯಾಗಿ ಗೊತ್ತಿರಲಿ" ಎಂದು ಉಗ್ರವಾಗಿ ಹೇಳಿ ಬಂದ. ತಣ್ಣಗಿದ್ದ ಗಾಂಧಿ ಹೇಳಿದ "ಬಂಧುವೆ, ನನ್ನ ದೃಷ್ಟಿಯಲ್ಲಿ ಎಲ್ಲ ನಿರಾಶ್ರಿತರು ನಿರಾಶ್ರಿತರೇ. ನಾನು ಯಾರನ್ನೂ ಗೂಂಡಾಗಳೆಂದು ಜರಿಯಲು ಸಿದ್ಧನಿಲ್ಲ. ಒಂದು ಕಾಲಕ್ಕೆ ಶಹೀದ್ ಸಹರವರ್ದಿಯನ್ನು ಗೂಂಡಾ ಎಂದೇ ಕರೆಯಲಾಗಿತ್ತು. ಆದರೆ ಈಗಾತ ಶಾಂತಿಧೂತನಾಗಿ ಬದಲಾಗಿದ್ದಾನೆ. ಈ ಬದಲಾವಣೆ ಭರವಸೆಯಿಂದ ಮಾತ್ರ ಸಾಧ್ಯ."

ಗಾಂಧಿ ಗಾಭರಿಗೊಂಡದ್ದು ಭಾರತೀಯರ ಮನಃಸ್ಥಿತಿಗೆ. ಇಲ್ಲಿ ಬದುಕು ಮತ್ತು ಆಧ್ಯಾತ್ಮ, ವಿಚಾರ ಮತ್ತು ಆಚಾರ ಎರಡು ಭಿನ್ನ ಮಾರ್ಗಗಳು ರೈಲು ಹಳಿಗಳಂತೆ. ಅವು ಜೊತೆಯಾಗಿ ಹೋಗುತ್ತವೆ. ಆದರೆ ಪರಸ್ಪರ ಸೇರುವುದಿಲ್ಲ ಎಂದು ಆತನಿಗೆ ಈಗ ಅನ್ನಿಸಿರಬೇಕು. ಯಾಕೆಂದರೆ 'ಬ್ರಿಟಿಷ್' ಎಂಬ ಸಾಮಾನ್ಯ ವೈರಿ ಅವರ ಎದುರಿಗಿದ್ದಾಗ ಅವರನ್ನು ಬುಡಮೇಲುಗೊಳಿಸಲು ಜೊತೆಯಾಗಿ ಹೋರಾಡಿದ ಭಾರತೀಯರು ಇಂದು ಇದ್ದಕ್ಕಿದ್ದಂತೆ ಪರಸ್ಪರ ವೈರಿಗಳಾಗಲು ಕಾರಣವೇನಿರಬಹುದು? ಎಂಬುದು ಆತನಿಗೆ ಸ್ಪಷ್ಟವಾಗಿ ತೋಚಲಿಲ್ಲ. ಭಾರತದ ರಾಜಧಾನಿಯಾದ ದೆಹಲಿಯಲ್ಲಿ ಮುಂದುವರಿದ ಮುಸ್ಲೀಂರ ನರಮೇಧ ಕುರಿತು ಗಾಂಧಿ ಹೇಳಿದ – "ಈ ನಾಡಿನ ಅನ್ನ ತಿಂದು, ಗೌರವಾನ್ವಿತ ಹುದ್ದೆಗಳಲ್ಲಿದ್ದು, ನಮ್ಮ ಕತ್ತುಕೊಯ್ಯುವಂತೆ ವರ್ತಿಸುವ ವೈರಿಗಳು ಈ ದೇಶದ, ಸಮಾಜದ ಕಾಫರ್‌ರು. ಅವರು ಹಿಂದು, ಮುಸ್ಲಿಂ, ಸಿಖ್ ಯಾರೂ ಆಗಿರಬಹುದು. ಆದರೆ ಮುಸ್ಲಿಂರಷ್ಟೇ ಈ ದೇಶದ ವೈರಿಗಳು ಎಂದು ನಾ ಹೇಗೆ ಹೇಳಲಿ? ಅದೆಷ್ಟು ಹಿಂದುಗಳು, ಸಿಖ್ಖರು ಅಪ್ರಾಮಾಣಿಕರಾಗಿಲ್ಲ? ಕೇವಲ ನಾಲ್ಕೂವರೆ ಕೋಟಿ ಮುಸ್ಲಿಂರೇ ವಿಶ್ವಾಸಘಾತುಕರೇ? ಈ ರೀತಿ ಹೇಳುವ ಮೂಲಕ ನಾವು ಹೇಡಿ ಹಿಂದು ಅಥವಾ ಸಿಖ್ ಆಗಬಹುದೇ ವಿನಃ ನಿಜವಾದ ಹಿಂದುಗಳಾಗಲು ಸಾಧ್ಯವಿಲ್ಲ. ದೆಹಲಿಯಲ್ಲಿ ಶಾಂತಿ ಕಾಪಾಡುವ ಮೂಲಕ ನೀವು ರಾಷ್ಟ್ರ ಹಾಗೂ ಸಮಾಜಗಳನ್ನು ರಕ್ಷಿಸಬಹುದು. ಇದನ್ನು

ನೀವು ಗಾಂಧಿಯೊಬ್ಬ ಹೇಳುತ್ತಿದ್ದಾನೆ ಎಂದೂ ಮಾಡಬೇಕಾದುದಿಲ್ಲ. ನಿಮ್ಮೊಳಗೇ ಇಳಿದು ನೋಡಿ. ನಿಮ್ಮೆಲ್ಲರ ಹಂಬಲವೂ ಇದೇ ಆಗಿದೆ. ಇದನ್ನು ನೀವು ನಂಬುವುದಾದರೆ ಎಂಥ ದುಷ್ಟ ಮುಸ್ಲಿಂನೂ ನಿಮಗೇನೂ ಮಾಡಲಾರ. ಒಂದು ವೇಳೆ ಆತ ಅಯೋಗ್ಯವಾದುದೇನನ್ನಾದರೂ ಮಾಡಬಲ್ಲನಾದರೆ ಚಿಂತಿಸಬೇಡಿ, ದೇವರಿದ್ದಾನೆ. ಆತ ಸರ್ವಶಕ್ತ, ಸಮರ್ಥ. And every man must answer to God ultimately. God will protect us. I have no doubt of that in heart."

ದೇಶದ ಪ್ರಧಾನಿಯ ಕೃಪಾಕಟಾಕ್ಷದಲ್ಲಿರುವ ಈ ಮುದುಕ ಹೀಗೆ ಮಾತನಾಡುವುದು ಸಾಮಾನ್ಯ ಎಂದರು ಜನ. ರಸ್ತೆಯಲ್ಲಿ ಅಟ್ಟಾಡಿಸಿಕೊಂಡು ಕೊಲೆಯಾಗುತ್ತಿದ್ದ ಹಿಂದು – ಮುಸ್ಲಿಂರಿಬ್ಬರಿಗೂ ಗಾಂಧಿಯ ಈ ಹೇಳಿಕೆ ಖಂಡಿತ ಹಿತವೆನಿಸಲಿಲ್ಲ.

ಈ ಮಧ್ಯದಲ್ಲಿ ಗಾಂಧಿಯನ್ನು ಕಾಡಿದ ಇನ್ನೊಂದು ಪ್ರಶ್ನೆ ತನ್ನ ಪ್ರೀತಿಯ 'ಹರಿಜನ' ಪತ್ರಿಕೆಯನ್ನು ಮುಂದುವರಿಸಬೇಕೆ? ಅಥವಾ ನಿಲ್ಲಿಸಬೇಕೆ? ಎಂಬುದು. ಆತನಿಗೆ ಗೊತ್ತಿತ್ತು ತನ್ನ ನಂತರ ಈ ಪತ್ರಿಕೆ ಬದುಕದು ಎಂದು. ಹೀಗಾಗಿ ಅನೇಕರನ್ನು ಕರೆದು ಅವರ ಅಭಿಪ್ರಾಯಗಳನ್ನು ಕೇಳುವುದರಲ್ಲಿ ಗಾಂಧಿ ನಿರತನಾದ. ಬಹಳಷ್ಟು ಅಭಿಪ್ರಾಯಗಳು ಪತ್ರಿಕೆಯನ್ನು ಮುಂದುವರಿಸುವ ಪರವಾಗಿಯೇ ಬಂದವು. ಆದರೆ ಇವುಗಳೆಲ್ಲ ಕೇವಲ ಮುಖಸ್ತುತಿಯ ಅನ್ಯಮಾರ್ಗಗಳೇ ಎಂದು ಗಾಂಧಿಗೆ ತಿಳಿದಿತ್ತು. ನಾಲ್ಕೈದು ದಶಕಗಳ ಕಾಲ ಅಂಹಿಸೆಯ ಆರಾಧಕರಂತೆ ಬಂದ ಜನ ಈಗ ಇದ್ದಕ್ಕಿದ್ದಂತೆ ಹಿಂದು–ಮುಸ್ಲಿಂ ಎಂದು ಕಿತ್ತಾಡುವಾಗ ಈ ಜನರು 'ಹರಿಜನ' ವನ್ನು ಆ ನಂತರವೂ ಮುಂದುವರೆಸಿಕೊಂಡು ಹೋಗುತ್ತಾರೆ ಎನ್ನುವುದು ಭೂಟಾಟಿಕೆಯಾಗಿರದೆ ಇನ್ನೇನು ಆಗಲು ಸಾಧ್ಯ?



ಗಾಳಿಗಿಟ್ಟ ಸೊಡರು: ಗಾಂಧಿ

೨೭

ಗಾಂಧಿ ಎಲ್ಲರ ಅಭಿಪ್ರಾಯಗಳನ್ನು ಕೇಳಿದ ನಂತರ ಅದೇಕೊ ತನ್ನ ಜೀವನಾಂತ್ಯದ ಕುರಿತು ಹೀಗೆ ಬರೆದಿಟ್ಟ. "ಸಾವು ನನ್ನನ್ನು ಮೂರು ರೀತಿಯಲ್ಲಿ ಸಮೀಪಿಸಬಹುದು. ಒಂದು ವಯಸ್ಸು ಸಹಜವಾಗಿ ದೇಹವನ್ನು ತ್ಯಜಿಸುವುದು, ಇನ್ನೊಂದು ದೇಹ ಮತ್ತು ಮನಸ್ಸುಗಳು ಕ್ರಿಯಾಶೀಲವಾಗಿಯೂ ಸಾರ್ವಜನಿಕ ಚಟುವಟಿಕೆಯಿಂದ ದೂರಾಗಿ ಸಾಯುವುದು, ಮತ್ತೊಂದು ಯಾರೋ ಈಗಾಗಲೇ ಆತನಿಗೆ ಸೂಚಿಸಿರುವಂತೆ, ದೇಶ ಸ್ವತಂತ್ರವಾಗಿದೆ, ಸಾರ್ವಜನಿಕ ಸೇವೆಯ ಯಾವ ಅವಶ್ಯಕತೆಯೂ ಇಲ್ಲ. ಹೀಗಾಗಿ "ನವಜೀವನ ಟ್ರಸ್ಟ್"ಗಾಗಿ ಕೊನೆಯವರೆಗೂ ಹೋರಾಡಿ, ದುಡಿದು ಸಾಯುವುದು, ಈ ಮೂರು ನನ್ನ ಅಂತ್ಯದ ಸಾಧ್ಯತೆಗಳು."

ಇಂದು ಸೋಮವಾರ, ಬಿರ್ಲಾ ಮಂದಿರದ emerald lawn ಮೇಲೆ ಗಾಂಧಿಯ ಸಾಯಂಕಾಲದ ಪ್ರಾರ್ಥನೆ ಮುಗಿಯಿತು. ಆತನ ಖುರಾನ್ ಮಂತ್ರೋಚ್ಚಾರಣೆಗೆ ಯಾವ ಅಡ್ಡಿಯೂ ಆಗಲಿಲ್ಲ. ಇಂದು ಆತ ಮಾತನಾಡುವುದಿಲ್ಲ. ಅದೇ ಸಾಂಪ್ರದಾಯಿಕ ಮೌನಾಚರಣೆ ಆತನದು. ಗಾಂಧಿ ತನ್ನ ಈ ದಿನದ ಪ್ರಾರ್ಥನೆಯ ನಂತರ ಮಾಡಬೇಕಾದ ಭಾಷಣವನ್ನು ಬರೆದಿಟ್ಟಿದ್ದ. ಕುನಾಲ್ ಎಂಬ ಹುಡುಗ ಈ ಭಾಷಣವನ್ನು ಓದಲಾರಂಭಿಸಿದ–

"ನಮ್ಮ ಸಹನೆಯ ಸಂಸ್ಕೃತಿ ಎಷ್ಟು ಸುಸಂಸ್ಕೃತವಾಗಿರಬೇಕೆಂದರೆ, ಅತ್ಯಂತ ದಾರುಣವಾದುದನ್ನೆಲ್ಲ ಅದು ಸಹಿಸಿಕೊಳ್ಳಬೇಕು. ಅದು ಆಗದೆ ಹೋದರೆ ಅಂದೇ ಭಾರತಕ್ಕೆ ದುರಂತದ ದಿನ. ನಾವು ಸ್ವಾತಂತ್ರ್ಯಕ್ಕೆ ಅರ್ಹರಲ್ಲ ಎಂದು ಯಾವ ಕಾಲಕ್ಕೂ ಜನ ಆಡಿಕೊಳ್ಳುವಂತಾಗಬಾರದು ನಮ್ಮ ಗತಿ. ಭಾರತದ ಅಪಾರ ಅಭಿಮಾನಿಗಳನ್ನು, ನನ್ನನ್ನು, ಇದು ಹಿಂಸಿಸುತ್ತದೆ. ನಾನು ಅತ್ಯಂತ ಆತ್ಮವಿಶ್ವಾಸದಿಂದ ಈ ಮಾತು ಹೇಳುತ್ತಿದ್ದೇನೆ ಗೆಳೆಯರೆ. ``If India fails, Asia dies. Let India remain, and be the hope of all the exploited of the earth, in Asia, in Africa, and any other part of the world." ಗಾಂಧಿಯ ಈ ಮಾತುಗಳನ್ನು ನಾವೀಗ ಗಮನಿಸಬೇಕಲ್ಲವೆ?

ಗಾಂಧಿಯೊಬ್ಬ ಪ್ರವಾದಿಯಾಗಿದ್ದ ಎನ್ನಲು ಆತನ ಹೇಳಿಕೆಯೊಂದೇ ಸಾಕು. ಆದರೆ "ಪ್ರವಾದಿ" ಮನುಷ್ಯರ ಲೆಕ್ಕಾಚಾರ, ಸಣ್ಣತನ, ತಪ್ಪುಗಳಿಂದ ಮುಕ್ತನಾಗಿ ಯಾಕಿರಬೇಕು? ಎಂಬುದು ನನಗೆ ತಿಳಿಯುತ್ತಿಲ್ಲ. ಗಾಂಧಿ ಅಂದು ಇಂಥ ಒಂದು ಎಚ್ಚರಿಕೆ ಕೊಟ್ಟನೋಡಿ. ಇಂದು Global Politics ನಲ್ಲಿ ಈ ಮಾತಿಗೆ ಎಷ್ಟೊಂದು ಅರ್ಥ ಬಂದಿದೆ. ಗಾಂಧಿಯೊ, ಇನ್ನ್ಯಾರೊ, ಮನುಷ್ಯನೇ ವಿಚಿತ್ರ. ಆತ ಕೆಲವೊಮ್ಮೆ ಪ್ರವಾದಿಯಂತೆ ಮಾತನಾಡುತ್ತಾನೆ.

ಸೆಪ್ಟಂಬರ್ 23 ರಂದು ಗಾಂಧಿ ಈ ಕೋಮುಗಲಭೆಯನ್ನು ನಂದಿಸಲು ಸಜ್ಜಾದ ನಾಯಕರುಗಳಿಗೆ ಹೇಳಿದ. ಜನರ ಮಾತುಗಳನ್ನು ಕೇಳಿ ಕುಣಿಯುವವರು ನನಗೆ ಬೇಕಿರಲಿಲ್ಲ. ಆದರೆ ಅಂಥವರು ಬಂದು ನನ್ನ ಯೋಜನೆ ಈಗಾಗಲೇ ಹಾಳಾಗಿದೆ. ಯಾವುದನ್ನೋ, ಯಾವುದೋ ವ್ಯಕ್ತಿ ವಿಚಾರವನ್ನೋ ವಿರೋಧಿಸುವ ಸಲುವಾಗಿ ಅಥವಾ ಗುಂಪಿಗೆ ಶರಣಾಗಿ ಹೋಗುವ ನಾಯಕರು ತನಗೆ ಬೇಕಿಲ್ಲ. ಎಂಥ ಜನ ಸಾಗರದ ವಿರುದ್ಧವೂ ತಾನು ಮಾತಾಡಿ ಗೆಲ್ಲಬಲ್ಲೆ ಎಂಬ ಎದೆಗಾರಿಕೆಯ ಒಬ್ಬ ವ್ಯಕ್ತಿ ಸಾಕು. ನಮ್ಮ ಸಂಕಲ್ಪದ ಭಾರತವನ್ನು ಕಟ್ಟಬಹುದು ಎಂದು ನಂಬಿದ್ದ ಗಾಂಧಿ.

ಇದೇ ದಿನಕ್ಕೊಂದು ಸುದ್ದಿ. ಪಾಕಿಸ್ತಾನದ ಮಾಂಟಗೋಮೇರಿಯಿಂದ. ಬಂದ ವ್ಯಕ್ತಿಯೊಬ್ಬ ಗಾಂಧಿಯನ್ನು ಕಂಡು ತನ್ನ ಅಳಲು ತೋಡಿಕೊಂಡ. ಮಹಿಳೆಯರು, ಮಕ್ಕಳು, ವೃದ್ಧರನ್ನು ಒಳಗೊಂಡ ತಮ್ಮ ಒಂದು ಗುಂಪು ಪಾಕಿಸ್ತಾನದಿಂದ ಭಾರತಕ್ಕೆ ಬರುತ್ತಿರುವಾಗ ಅದರಲ್ಲಿ ಅನೇಕರನ್ನು ಮಾರ್ಗಮಧ್ಯದಲ್ಲಿಯೇ ಕೊಲ್ಲಲಾಯಿತು. ಮಹಿಳೆಯರನ್ನು ಹಾಡುಹಗಲೇ ಮಾನಭಂಗ ಮಾಡಲಾಯಿತು. ಒಬ್ಬ ಕ್ರೂರಿಯಂತೂ ಮುದುಕನೊಬ್ಬನ ಎದೆಯ ಮೇಲೆ ಕುಳಿತು ಅಮಾನವೀಯವಾಗಿ ಕತ್ತುಕೊಯ್ದ. ಯುವಕರ ಶಿಸ್ನಗಳನ್ನು

ಕತ್ತರಿಸಲಾಯಿತು. ತಾನು ಮಾತ್ರ ಹೇಗೋ ಪ್ರಾಣರಕ್ಷಿಸಿಕೊಂಡು ಬಂದಾಗಿದೆ. "ಬಾಪು, ನಾನು ಜೀವನವೆಲ್ಲವೂ ಅಹಿಂಸೆಯ ಪೂಜಾರಿ. ಆದರೆ ಈ ಅಹಿಂಸೆಯಿಂದ ತಾನು ಜೀವನದಲ್ಲಿ ಎಷ್ಟೊಂದು ಕೆಟ್ಟದ್ದನ್ನು ನೋಡಬೇಕಾಯಿತು." ಎಂದ ಅಳುತ್ತ ಹೇಳಿದರೆ, ಗಾಂಧಿ ಹೇಳುವುದಾದರೂ ಏನು? ತಣ್ಣಗೆ ತಲೆಯ ಮೇಲೆ ಕೈಯಾಡಿಸಿ ಹೇಳಿದ, "ಸಾವಿಗಿಂತ ಮಿಗಿಲಾಗಿ ಒಬ್ಬನ ಬಾಳಲ್ಲಿ ನಡೆಯುವುದಾದರೂ ಏನು? ಸಾವಿಗೆ ಯಾವ ಅರ್ಥವೂ ಇಲ್ಲ. ಇಂದೋ ನಾಳೆಯೋ ಎಲ್ಲರೂ ಸಾಯಲೇಬೇಕು. ಆದರೆ ಎಂಥ ಸಾವು ಸಾಯುವುದು? ಎನ್ನುವುದು ಪ್ರಶ್ನೆ. ವ್ಯಕ್ತಿ ತನ್ನ ನಂಬಿಕೆಗಾಗಿ, ದೇವರನ್ನು ಸ್ಮರಿಸುತ್ತಾ ಸಾಯುವುದು, ರೋಗರುಜಿನಿಗಳಿಂದ ಸಾಯುವುದಕ್ಕಿಂತ ಉತ್ತಮ. ನಾನಾಗಿದ್ದರೆ ಇದನ್ನೇ ಆಯ್ದುಕೊಳ್ಳುವುದು. 34 ಕೋಟಿ ಹಿಂದುಗಳು 4 ಕೋಟಿ ಮುಸ್ಲಿಂರಿಗೆ ಅಂಜುವುದು ಅಥವಾ ಅವರೇ ಕೊಲ್ಲುತ್ತಿದ್ದಾರೆ ಎಂಬುದು ನನಗ್ಯಾಕೋ ನಂಬಲಾಗುತ್ತಿಲ್ಲ." ಎಂದ.

ಸಿಖ್ ನಾಗರಿಕನೊಬ್ಬ ಎದ್ದು ನಿಂತು "ಪೂಜ್ಯನೀಯ ಬಾಪೂಜಿ. ನಾನು ಪಾಕಿಸ್ಥಾನದಲ್ಲಿ ವ್ಯಾಪಾರ ಮಾಡಿಕೊಂಡು ಇದ್ದವ. ನನ್ನಂತೆ, ನನ್ನ ಅನೇಕ ಸಿಖ್ಖ ಬಾಂಧವರು, ಅಥವಾ ಪಾಕಿಸ್ತಾನ ಜನಸಂಖ್ಯೆಯ ಐದು ಪ್ರತಿಶತ ಹಿಂದುಗಳು ಅಲ್ಲಿ ವ್ಯಾಪಾರದಲ್ಲಿ ತೊಡಗಿಕೊಂಡವರು. ನಮಗೆ ಮೊದಲು ನೀವು ಪಾಕಿಸ್ಥಾನದಲ್ಲಿ ಸರಿಯಾಗಿ ನೆಲೆಯಾಗುವಂತೆ ಮಾಡಿರಿ. ನಂತರ ನಾಲ್ಕು ಕೋಟಿ ಮುಸ್ಲಿಂರನ್ನು ಇಲ್ಲಿ ಸ್ಥಾಪಿಸಿರಿ." ಎಂದ. ಗಾಂಧಿ ಪ್ರತಿಯಾಗಿ ಹೇಳಿದ – "ಬಂಧು, ಕೇವಲ ಐದು ಪ್ರತಿಶತ ಹಿಂದುಗಳು ಮರಳಿ ಹೋಗುವುದು ಮತ್ತು ಪಾಕಿಸ್ತಾನದಲ್ಲಿ ನೆಲೆಯಾಗುವುದನ್ನು ಕುರಿತು ನೀನು ಹೇಳುತ್ತಿರುವಿ. ಆದರೆ ನನ್ನ ವಿಚಾರ ಅದಲ್ಲ. ಅದು ಸಾಕಾಗದು. ನನ್ನ ಪ್ರಕಾರ ಯಾರು ಯಾರು ಜೀವ ಭಯದಿಂದ ಪಾಕಿಸ್ತಾನವನ್ನು ಬಿಟ್ಟು ಬಂದರೋ ಅವರೆಲ್ಲರೂ ಅಲ್ಲಿಗೆ ಮರುಳುವಂತಾಗಬೇಕು. ಆದರೆ, ಅದಕ್ಕೂ ಮುಂಚೆ ಜೀವಭಯದಿಂದ ಭಾರತವನ್ನು ಬಿಟ್ಟುಹೋದ ಮುಸ್ಲಿಂರೆಲ್ಲರೂ ಮರಳಿ ಬರುವಂತಾಗಬೇಕು. ಅವರ ಬದುಕು ಇಲ್ಲಿ ಭದ್ರತೆಯನ್ನು ಕಂಡುಕೊಳ್ಳಬೇಕು. ಆಗ ನಾನೇ ನಿಮ್ಮನ್ನೆಲ್ಲ ಪಾಕಿಸ್ತಾನಕ್ಕೆ ಕರೆದುಕೊಂಡು ಹೋಗುತ್ತೇನೆ. 'ಪಾಕ್' ಎಂದರೆ ಪವಿತ್ರ, ಶುದ್ಧ. ಅದಕ್ಕೆ ತಕ್ಕಂತೆಯೇ ಪಾಕಿಸ್ತಾನ ನಡೆದುಕೊಳ್ಳಬೇಕಾಗುತ್ತದೆ. ಇಲ್ಲದೇ ಹೋದಲ್ಲಿ ಅದುವೇ ಅದರ ಅವನತಿಯ ದಾರಿಯನ್ನು ಕಂಡುಕೊಳ್ಳುತ್ತದೆ."

ಸಾರ್ವಜನಿಕ ಮಾತುಕತೆಗಳೇನೋ ನಡೆದು ಜಿಡುತ್ತಿದ್ದವು. ಆದರೆ ಗಾಂಧಿ ಒಳಗೊಳಗೇ ಬೇಚೈನ್ ಆಗಿದ್ದ. ನೆಮ್ಮದಿಯ ನಿದ್ರೆ ಹೊರಟುಹೋಗಿ ವರುಷಗಳೇ ಉರುಳಿದ್ದವು. ಸಾರ್ವಜನಿಕವಾದ ತನ್ನ ಮಾತುಗಳೆಲ್ಲ ಗಾಳಿಗಿಟ್ಟ ದೀಪಗಳಂತಾಗುತ್ತಿವೆ ಎಂದು ನೊಂದು ಈ ದಿನದ ತನ್ನ ಡೈರಿಯಲ್ಲಿ ಗಾಂಧಿ ಹೀಗೆ ಬರೆದುಕೊಂಡಿದ್ದಾನೆ. "I plead with at the earnestness at my command that Delhi should forget what they are doing in Pakistan and do in India only what is right. Then can India claim the proud privilege of having broken the viciou circle of revenge and retaliation." ಮುಂಬರುವ ಭಯಂಕರ ಸಾಮಾಜಿಕ ವಿಪ್ಲವದ ದಿನಗಳನ್ನು ನೆನೆದೇ ಗಾಂಧಿ

ಈ ಮಾತುಗಳನ್ನು ದಾಖಲಿಸುತ್ತಿದ್ದ. ಎಲ್ಲ ಲೆಕ್ಕಾಚಾರಗಳನ್ನು ಮೀರಿ ಪ್ರತಿಕಾರದ ಈ ಸರಣಿ ಆತನಿಗೆ ನಿಲ್ಲಬೇಕಾಗಿತ್ತಷ್ಟೆ.

ಈ ಮಧ್ಯ, ಹಿಂದು ಹುಡುಗರ ಗುಂಪೊಂದು ಗಾಂಧಿಯ ವಾಸ್ತವ್ಯಕ್ಕೆ ಹೋಗಿ ಆತನನ್ನು ವಾಚಾಮಗೋಚರವಾಗಿ ಬೈದು ಬಿಡಬೇಕೆ? ಮತ್ತೊಂದು ಮುಸ್ಲೀಂ ಯುವಕರ ಗುಂಪು ಇದೇ ಕ್ರಿಯೆಯನ್ನು ಪುನರಾವರ್ತಿಸಿದಂತೆ ಗಾಂಧಿ ಕನಸುಕಂಡ. ಇದಕ್ಕೆಲ್ಲ ಗಾಂಧಿ ಕಂಡುಕೊಳ್ಳುತ್ತಿದ್ದ ದಾರಿ ಮಾತ್ರ ವಿಚಿತ್ರವಾಗಿರುತ್ತಿತ್ತು. ತಾನು ಸಾವಿಗೆ ಸಂಪೂರ್ಣ ಶರಣಾಗತನಾಗದಿರುವುದೇ ಇದಕ್ಕೆಲ್ಲ ಕಾರಣ ಎಂದ. ಅಥವಾ ದೇವರ ಮೇಲಿನ ತನ್ನ ಶ್ರದ್ಧೆ ಅಚಲವಾಗಿರಲಿಕ್ಕಿಲ್ಲ ಎಂದು ತಿಳಿದ ಗಾಂಧಿ. “I feel that I have not attained that state; my striving is incomplete.” ಇಲ್ಲಿಯವರೆಗಿನ ಗಾಂಧಿಯ ಮಾತುಗಳು ಯಾರಿಗೂ ಪ್ರಶ್ನೆಯಲ್ಲ. ಆದರೆ ಈ ನಂತರ ಆತ ಹೇಳಿದ್ದು ಯಾರಿಗೂ ಪಥ್ಯವಾಗುವ ಸ್ಥಿತಿ ಇರಲಿಲ್ಲ. ನಿರಾಶ್ರಿತರಿಗೆ ಅಂತಿಮವಾಗಿ ಎಲ್ಲ ವಿಫಲವಾದಾಗ ಸಾವಿಗೆ ಶರಣಾಗಿರಿ ಎಂದು ಗಾಂಧಿ ಹೇಳಿದ. ಸಾವಿನ ದವಡೆಯಿಂದ ಪಾರಾಗಲು ಸಾವಿರಾರು ಮೈಲುಗಳ ಲೆಕ್ಕವಿಲ್ಲದೆ ಎಲ್ಲಿಂದ ಎಲ್ಲಿಗೊ ಬಂದ ಜನರಿಗೆ - “If people come to kill us, let us die. But let us die with courage, repeating the name of God. I have taught this to the girls also. I have told them of the art of dying with the name of God on one’s lips. I cannot give any other advice,’ ಗಾಂಧಿ ಈ ತೆರನಾಗಿ ಹೇಳಿದ್ದು. ಆದರೆ ಸಾಯಲು ದೆಹಲಿಗೆ ಬರಬೇಕಿತ್ತೆ? ಅದಕ್ಕೆ ಈತನ ಉಪದೇಶ ಬೇರೆ ಬೇಕೆ? ಈತನ ನಂಬಿ ನಾವು ಹಾಳಾದೆವು ಎಂದು ಜನ ಅಂದುಕೊಳ್ಳುವುದು ಸ್ವಾಭಾವಿಕವಾಗಿತ್ತು.

ಆದರೆ ಇಲ್ಲೊಂದು ಕ್ಷಣ ಆಲೋಚಿಸಬಹುದಾದು ಇದೆ. ಯಾಕೆ ಹೀಗೆ ಈ ಗಾಂಧಿ? ಅವನೇನೂ ಶತಮಾನಗಳಿಂದ ದಾಸ್ಯಕ್ಕೊಳಗಾದ ಜನಾಂಗದಿಂದ ಬಂದವನೊ ಅಲ್ಲ. ಬಡತನ ಆತನಿಗೆ ಗೊತ್ತೇ ಇಲ್ಲ. ಸಂಸ್ಥಾನ ಒಂದರ ಪ್ರಧಾನಿ ಮನೆತನದ ಹಿನ್ನಲೆಯಿಂದ ಬಂದಿರುವಾತ. ವಿದೇಶದಲ್ಲಿ ಶಿಕ್ಷಣ ಪಡೆದ ಇವನಿಗೆ ಸಂಸಾರ ಮಾಡಿಕೊಂಡು ಸುಖವಾಗಿ ಬಾಳುವ ಎಲ್ಲ ಅವಕಾಶಗಳು ಇದ್ದವಲ್ಲವೆ? ಆದರೂ ಈತ ಯಾಕೆ ಹೀಗೆ? ವಿದೇಶದಿಂದ ಭಾರತಕ್ಕೆ ಮರಳುತ್ತಲೇ ಆತನ ಸಹೋದರ ಎಷ್ಟೆಲ್ಲ ಶ್ರೀಮಂತಿಕೆಯನ್ನು ಗಳಿಸಿಯಾಗಿತ್ತು. ಉಂಡುಟ್ಟು ಇಲ್ಲೇ ಇರಬಹುದಾಗಿತ್ತಲ್ಲ? ವಕೀಲಿಕೆಗಾಗಿ ಸೌಥ್ ಆಫ್ರಿಕಾಗೆ ಹೋಗಬೇಕಾಗಿತ್ತೆ? ಇಂದು ನಮ್ಮ ಅದೆಷ್ಟೋ ಯುವಕ-ಯುವತಿಯರಿಗೆ ಅಮೇರಿಕಾ, ಕೆನಡಾಗಳು ಆಕರ್ಷಿಸುವಂತೆ ಗಾಂಧಿಗೆ ಇನ್ನಾವ ದೇಶವೂ ಕಾಣಲಿಲ್ಲವೆ? ಸರಿ, ಸೌಥ್ ಆಫ್ರಿಕಾದಲ್ಲೂ ಅಷ್ಟೆ, ಅವನು ಐಷಾರಾಮಿಯಾಗಿ ಇರಬಹುದಿತ್ತು ಅಲ್ಲವೆ? ವಕೀಲನಾಗಿ, ಸಾಮಾಜಿಕ ವ್ಯಕ್ತಿಯಾಗಿ ಗಾಂಧಿ ಅಲ್ಲಿ ಸಾಧಿಸಿದ ಹಿರಿಮೆ ಪ್ರಶ್ನಾತೀತವಾಗಿತ್ತು. ಆದರೆ ಗಾಂಧಿ ಎಂಬ ಈ ಅನಿಶ್ಚಿತ ಮನಸ್ಸು ಮತ್ತೆ ಭಾರತಕ್ಕೆ ಬಂದು ನಾಯಿ ಬಾಲದ ನಾಯಕರ ಮುಂದೆ, ಹಿಂದು-ಮುಸ್ಲಿಂರ ಮುಂದೆ ಗೋಗರಿಯುವ ಬಾಳು ಆಯ್ದುಕೊಳ್ಳಬೇಕಿತ್ತೆ? ಇದೆಲ್ಲ ಆತನಿಗಿದ್ದ ತೆವಲು ಎನ್ನುವವರನ್ನು, ಅಯ್ಯೋ ಆತಾ ‘ಮಹಾತ್ಮ’ ಬಿಡಿ ಎಂದು ಒಂದಕ್ಷರದ ಸೂತಕ ಕಳೆದುಕೊಳ್ಳುವವರನ್ನೇ ನಾನು ಅದೆಷ್ಟೋ ನೋಡಿದ್ದೇನೆ.

ಈ ಎಲ್ಲ ಏಳು–ಬೀಳಿನ ದಾರಿಯಲ್ಲಿ ಗಾಂಧಿಗೀಗ 78 ವರ್ಷ ಮುಗಿದು 79ನೇ ವರ್ಷದ ಆರಂಭ. ಅವನ ಬಾಳು ಮುಸ್ಸಂಜೆಯ ಪುಟಗಳಿಗೆ ಸೇರಿ ಆತ ಮರೆವಿನ ವಸ್ತುವಾಗುತ್ತಿರುವಂತೆಯೆ ದೇಶ, systematically practised, all scholarship and learning were bound to go vain ಎನ್ನುವ ಆತನ ಆಗ್ರಹ, ಅನುಯಾಯಿಗಳ ಅರಿವಿಗೆ ಬರಲಿಲ್ಲವೇನೊ. ಸುಹರ್‌ವರ್ಧಿಯಂಥ ವ್ಯಕ್ತಿಯನ್ನಿಟ್ಟುಕೊಂಡು ಅದ್ಭುತವನ್ನು ಸಾಧಿಸಿದ್ದ, ಕಲ್ಕತ್ತವನ್ನು ಶಾಂತಿವನವಾಗಿ ಬದಲಾಯಿಸಿದ್ದ ಗಾಂಧಿಗೆ ಇಲ್ಲಿ ದೆಹಲಿಯಲ್ಲಿ ಜಯಸಿಗಲಿಲ್ಲ ಎನ್ನುವುದಕ್ಕೆ ಕಾರಣ ಅನುಚರರಲ್ಲಿಯ ಅಪ್ರಾಮಾಣಿಕತೆ. ಆದರೂ ಶಾಂತಿಗಾಗಿದ್ದ ಗಾಂಧಿಯ ಪ್ರಾರ್ಥನೆಯನ್ನು "ಆಲ್ ಇಂಡಿಯಾ ರೇಡಿಯೋ" ಪ್ರಸಾರ ಮಾಡುತ್ತಲೇ ಇತ್ತು. ಒಂದಿಷ್ಟು ಗೆಲುವಾದ ಗಾಂಧಿ ಈ ಸಾಯಂಕಾಲ ಸ್ನೇಹಿತರೊಬ್ಬರಲ್ಲಿ ಹೇಳಿಕೊಂಡ – "ಕೇಳಿಲ್ಲಿ, ಪ್ರಾರ್ಥನೆ ಸಾಮಾನ್ಯವಾದುದಲ್ಲ. ನಮ್ಮ ನಿತ್ಯದ ವ್ಯಾವಹಾರಿಕ ಬದುಕಿನಲ್ಲಿ ಏನೆಲ್ಲ ಮಾಡುತ್ತೇವೆ, ಮಾತನಾಡುತ್ತೇವೆ. ಆದರೆ ಅದೆಲ್ಲವೂ ಒಳ್ಳೆಯದೇ ಆಗಿರಲು ಸಾಧ್ಯವಿಲ್ಲ. ಅಪರಾಧವೆಸಗುತ್ತೇವೆ, ಹಣದ ಹಿಂದೆ ಹುಚ್ಚರಾಗುತ್ತೇವೆ, ಮನಃಶಾಂತಿ ಹಾಳಾಗುತ್ತದೆ. ಮತ್ತೆ ಮುಕ್ತರಾಗಲು, ಮನುಷ್ಯರಾಗಲು ಒಂದಿಷ್ಟು ಪ್ರಾರ್ಥನೆ ಬೇಡವೆ? ಯಾವ ಕುಟುಂಬ, ರಾಷ್ಟ್ರ ಕೂಡಿ ಪ್ರಾರ್ಥಿಸುತ್ತದೆಯೊ ಅದು ಕೂಡಿ ಬಾಳುತ್ತದೆ." ಮುಂದೊರೆದು ಗಾಂಧಿ ಮತ್ತೆ ಹೇಳಿದ "ನನ್ನ ಪ್ರಾರ್ಥನಾ ಸಭೆಗಳಲ್ಲಿ ಅದೆಷ್ಟೋ ಬಾರಿ ಸಮಸ್ಯೆಗಳಾಗಿವೆ. ಖುರಾನ್ ಪಠಿಸುವ ವೇಳೆಯಂತೂ ಅನೇಕ ಬಾರಿ ಜಗಳವಾಗಿದೆ. ಆದರೆ ಅದು ಹಿಂದುಗಳನ್ನು ಅಮಾನವೀಯವಾಗಿ ಕೊಲೆ ಮಾಡಿದ ಮುಸ್ಲಿಂರ ವಿರುದ್ಧದ ಪ್ರತಿಭಟನೆಯೆ ವಿನಃ ಖುರಾನ್ ವಿರುದ್ಧ ಅಲ್ಲ, ಪ್ರಾರ್ಥನೆಯ ವಿರುದ್ಧ ಅಲ್ಲ. "Why should we grow angry over the Quran? What some Muslims are doing is not good, but what harm has the Quran done?" ಭಕ್ತ ಮಾಡಿದ ತಪ್ಪಿಗೆ ದೇವರನ್ನೇ ದೂರಬಹುದೆ? ಹಿಂದುಗಳು ಮಾಡುವ ಅಪರಾಧಗಳಿಗೆ "ಭಗವದ್‌ಗೀತೆ"ಯನ್ನು ಆಪಾದಿಸಬಹುದೆ? ಸಿಖ್‌ರ ಬುದ್ಧಿಗೇಡಿತನಕ್ಕೆ "ಗ್ರಂಥಸಾಹೀಬ"ನ್ನು ಮೂದಲಿಸಬಹುದೆ? ಧರ್ಮಗಳು "ನಿಷ್ಕಲ್ಮಶ ಮತ್ತು ಅಮರ".



ಲಡಕೆ ಲೇಂಗೆ ಪಾಕಿಸ್ಥಾನ

೨೮

ಗಾಂಧಿಗೆ ಪ್ರಾರ್ಥನೆ ಎನ್ನುವುದು ಸಹನೆ, ಕ್ಷಮೆ ಮತ್ತು ಆತ ನಂಬಿದ ಶಕ್ತಿಯಲ್ಲಿ ಅಚಲವಾದ ನಂಬಿಕೆ. ಇಂದು ಅಂದರೆ ಸೆಪ್ಟಂಬರ್ 27 ರಂದು ಲಾರ್ಡ್ ಮೌಂಟ್‌ಬ್ಯಾಟನ್ ಗಾಂಧಿಯನ್ನು ಕಾಣಲು ಬಂದ. ಒಂದು ಸುದೀರ್ಘ ಮಾತುಕತೆ ಇಬ್ಬರ ಮಧ್ಯದಲ್ಲಿ. ಈಗಾಗಲೇ ನೌಖಾಲಿ ಮತ್ತು ದೆಹಲಿಯಲ್ಲಿ ಎಲ್ಲಿಲ್ಲದ ಯಶಸ್ಸು ಸಾಧಿಸಿದ್ದ ಗಾಂಧಿಯ ಕುರಿತು ಮಂಟಬ್ಯಾಟನ್‌ರಿಗೆ ಎಲ್ಲಿಲ್ಲದ ಅಭಿಮಾನ. ಹೀಗಾಗಿ ಗಾಂಧಿಯನ್ನು ಅವರು ಯಾವಾಗಲೂ "One Man Boundary Force" ಎಂದೇ ಕರೆಯುತ್ತಿದ್ದರು. ಅವರೊಂದಿಗೆ ಪ್ರಧಾನಿ ನೆಹರೂ ಕೆಲವೇ ಹೊತ್ತಿನಲ್ಲಿ ಬಂದು ಸೇರಿಕೊಂಡರು. ಪಂಜಾಬದಲ್ಲಿ ನಾಯಕರು, ರಾಜಕೀಯ ವರಸೆಯ ಹೊಸ ಪಾಠಗಳನ್ನು ಕಲಿಯುತ್ತಿದ್ದಾರೆ. ಆತನ ಮುಂದೆಯೇ ಎಲ್ಲವೂ ನಡೆಯುತ್ತದೆ. ಎಲ್ಲರೂ ಆತನನ್ನು ಸಂದರ್ಶಿಸುತ್ತಾರೆ. ಆದರೆ ಆತನ ಮಾತುಗಳೇ

ಅವರಿಗೆ ಅರ್ಥವಾಗುವುದಿಲ್ಲ. ಇತಿಹಾಸಕಾರರು ಗುರ್ತಿಸುವಂತೆ "Things had changed vastly with the old glory departed. Gandhiji felt himself almost a stranger watching the proceedings of the CWC as if from a remote distance. Deference, he felt, was shown to him as a matter of courtesy and not because his advice counted any more."

ಪಾಕಿಸ್ತಾನ ಎನ್ನುವುದು ನನ್ನ ಹೆಣದ ಮೇಲೆ ಮಾತ್ರ ಸಾಧ್ಯವಾಗಬಹುದು ಎಂದು ಅಧಿಕಾರವಾಣಿಯಿಂದ ಮಾತಾಡಿದ್ದ ಗಾಂಧಿಗೆ ಈಗ ತನ್ನ ಕೈಯಿಂದ ರಾಜದಂಡ ಕೊಸರಿಹೋದದ್ದೇ ಗೊತ್ತಾಗಿರಲಿಲ್ಲ. ಬರೀಗೈ ದಾಸ ಯಾರೋ ತೆಗೆದುಕೊಂಡ ರಾಜಕೀಯ ನಿರ್ಧಾರಗಳಿಗೆ 'ಹೂಂ' ಎನ್ನದೇ ಗತ್ಯಂತರವಿರಲಿಲ್ಲ (?) ಇದೆಲ್ಲವನ್ನೂ ಒಂದು ಕ್ಷಣ ನೆನಪಿಸಿಕೊಂಡಿರಬಹದು ಗಾಂಧಿ. ಯಾಕೆಂದರೆ, 1947 ಸೆಪ್ಟಂಬರ್ 24 ರ ಸಾಯಂಕಾಲದ ಪ್ರಾರ್ಥನೆಯ ನಂತರ ಆತ ಮಾಡಿದ ಪುಟ್ಟ ಭಾಷಣ ಇದನ್ನು ಸಂಕೇತಿಸುತ್ತದೆ. – "ಈ ಪ್ರತಿಕಾರದ ದಳ್ಳುರಿಗೆ ಸಿಕ್ಕು ಬದುಕುಳಿದವರು ಯಾರೂ ಇಲ್ಲ. ದೆಹಲಿಯ ಹಿಂದುಗಳಿಗೆ, ಸಿಖ್ಖರಿಗೆ ಮುಸ್ಲಿಂರು ಇಲ್ಲಿರುವುದು ಇಷ್ಟವಿಲ್ಲ. ನನಗೆ ಗೊತ್ತಿದೆ, ಖಂಡಿತವಾಗಿಯೂ ಪಾಕಿಸ್ತಾನದಲ್ಲಿ ಹಿಂದುಗಳೊಂದಿಗೆ ಅಸಹನೀಯ ಅನ್ಯಾಯವಾಗಿದೆ. ತಮ್ಮ ಬಂಧುಗಳಿಗೆ ಅಲ್ಲಿ ಆಗುತ್ತಿರುವ ಅನ್ಯಾಯವನ್ನು ಸಹಿಸಿಕೊಂಡೂ ಇಲ್ಲಿ ಈ ಮುಸ್ಲಿಂರಿಗೆ ಯಾಕೆ ಎಲ್ಲಿಲ್ಲದ ಮಹತ್ವ? ಎಂದು ನೀವು ಕೇಳಬಹುದು. ಆದರೆ ನಡೆಯುತ್ತಿರುವ ಹೇಯ ಕಾರ್ಯಗಳಿಗೆ ಎಲ್ಲ ಮುಸ್ಲಿಂರೂ ಕಾರಣರಲ್ಲ. "ಲಡಕೆ ಲೇಂಗೆ ಪಾಕಿಸ್ತಾನ" ಎಂಬ ಘೋಷಣೆ ಮಾಡಿದವರು 'ಮುಸ್ಲಿಂ ಲೀಗ್'ನವರು. ಈಗ ಅಲ್ಲಿ 'ಮುಸ್ಲಿಂ ಲೀಗ್' ಹುನ್ನಾರದ ಕೈಗೊಂಬೆಯಾಗಿರುವ ಸರ್ಕಾರ ಇಂಥ ಅಮಾನುಷತೆಯನ್ನು ಮೆರೆಯುತ್ತಿದೆ. ಆದರೆ ನಾವು ಇಲ್ಲಿ ಸರಿ ಹೋದರೆ ಅಲ್ಲಿಯ ಜನರೂ ಆ ಸರ್ಕಾರಕ್ಕೆ ನಮ್ಮನ್ನು ಆದರ್ಶವಾಗಿಟ್ಟುಕೊಳ್ಳಲು ಸೂಚಿಸಬಹುದು. ಹೀಗಾಗಿ ನಾವು ಕಾನೂನನ್ನು ಪಾಲಿಸಬೇಕಿದೆ, ಗೌರವಿಸಬೇಕಿದೆ."

ಗಾಂಧಿ ತನ್ನ ಅನುಯಾಯಿಗಳು ಎಂದು ಹೇಳಿಕೊಂಡು ಬಂದವರಿಗೆ ಕಲಿಸಿದ್ದಿಷ್ಟೆ. ಎಷ್ಟು ದೊಡ್ಡ ಆಚಾರವನ್ನು ಮಾತನಾಡುತ್ತೇವೆ ಅಥವಾ ವಿಚಾರವನ್ನು ಓದಿದ್ದೇವೆ ಎನ್ನುವುದು ಮುಖ್ಯವಲ್ಲ. ಆದರೆ ಅದೆಷ್ಟನ್ನು ಅನುಸರಣೆಗೆ ತಂದಿದ್ದೇವೆ ಎಂಬುದು ಮುಖ್ಯ. ಈ ರೀಡಿಂಗ್ ಇಲ್ಲದ ಬದುಕು ನಿರರ್ಥಕ. ಆದರೆ ಇದು ಇರಲಿಲ್ಲ ಎಂಬುದೇ ಸತ್ಯ.

ಮಾಸ್ಟರ ತಾರಾಸಿಂಗ್ ಮುಸ್ಲೀಂ ದಂಗೆಗಳನ್ನು ಕುರಿತು ಮಾತನಾಡಿ ಸಮಸ್ಯೆಯಾಗಿದೆ. ಇನ್ನೊಂದೆಡೆ ಪಂಡಿತ ಹೃದಯನಾಥ ಕುಂಝ್ರು ಭಾರತದಲ್ಲಿ ಬ್ರಿಟಿಷರ ದುರಾಡಳಿತ ಕುರಿತು ಮಾತನಾಡಿ ಶಾಂತಿ ಕದಡಿದ್ದಾರೆ. ಇಬ್ಬರೂ ತಮ್ಮ ಕೃತ್ಯಗಳನ್ನು ಆಧಾರ ಸಮೇತ ಸಮರ್ಥಿಸಿಕೊಳ್ಳಬೇಕು ಇಲ್ಲವೆ ಸಾರ್ವಜನಿಕವಾಗಿ ಕ್ಷಮೆ ಯಾಚಿಸಬೇಕು ಇದು ಗಾಂಧಿಯ ಹಠ. ನೆಹರು ಗಾಂಧಿಯ ಮಾತುಗಳನ್ನು ಒಪ್ಪುತ್ತಿಲ್ಲ. ಪಂಡಿತ ಖುಂಝ್ರು ಒಟ್ಟು ಸರಕಾರವನ್ನೇ ದೂಷಿಸಿದ್ದಾರೆ ಬರೀ ಬ್ರಿಟಿಷರನಲ್ಲ. ಹೀಗಾಗಿ ಕ್ಷಮೆ ಕೇಳುವ ಪ್ರಮೇಯವೇ ಇಲ್ಲ ಎಂದು ನೆಹರು ವಾದ. ಇಷ್ಟರಲ್ಲಿ "ಹಿಂದುಸ್ತಾನ ಟೈಮ್ಸ್" ನ ಮಾಲಿಕರಾದ ಮಿಸ್ಟರ್

ಬಿರ್ಲಾ ತಮ್ಮ ಸಂಪಾದಕರಾದ ದೇವದಾಸ ಗಾಂಧಿಯೊಂದಿಗೆ ಅಲ್ಲಿ ಬಂದದ್ದರಿಂದ ಚರ್ಚೆ ನಿಂತುಹೋಯಿತು. ಮತ್ತೆ ಲೋಕಾಭಿರಾಮದ ಕ್ಷಣಗಳು. ಎಲ್ಲರೂ ನಿರ್ಗಮಿಸಿದ ಮೇಲೆ ಲಾರ್ಡ್ ಮೌಂಟ ಬ್ಯಾಟನರಿಗೆ ಗಾಂಧಿ ಹೇಳಿದ – "ನೀವು, ನಿಮ್ಮ ಸರ್ಕಾರ ಭಾರತದಲ್ಲಿ ಗಳಿಸಿರುವ ಒಳ್ಳೆಯ ಹೆಸರನ್ನು ಉಳಿಸಿಕೊಳ್ಳಬೇಕು ಎನ್ನುವುದಾದರೆ ತಕ್ಷಣ ನೀವು ಕ್ರಿಯಾಶೀಲರಾಗಬೇಕು. ಪಾಕಿಸ್ತಾನಕ್ಕೆ ಬುದ್ಧಿವಾದ ಹೇಳಿ ನಿರಾಶ್ರಿತರ ಬಾಳುಗಳನ್ನು ಪುನಃ ಸ್ಥಾಪಿಸಬೇಕು."

ಸತ್ಯಾಗ್ರಹ ಗಾಂಧಿ ಅನುಸರಿಸಿದ ಅತಿ ದೊಡ್ಡ ದಾರಿ. ಆದರೆ ಗಾಂಧಿಗೆ ಈ ಕುರಿತ ತಿಳುವಳಿಕೆ ಎಲ್ಲಿಂದ ಬಂತು ಎಂಬುದು ಮುಖ್ಯ ಪ್ರಶ್ನೆ ಅಲ್ವೆ? ಒಂದರ್ಥದಲ್ಲಿ ಇದು ಗಾಂಧಿಗೂ ಮೊದಲು ಈ ದೇಶದಲ್ಲಿ ರೂಢಿಯಲ್ಲಿದ್ದ ವಿಚಾರವೆ. ಆದರೆ ಅದನ್ನು ಸಾರ್ವಜನಿಕ ಏಳ್ಗೆಗಾಗಿ ಮೊದಲು ಬಳಸಿದ ವ್ಯಕ್ತಿ ಗಾಂಧಿ. ಸತ್ಯಾಗ್ರಹವನ್ನು ಆತ ಕಲಿತದ್ದು ಈ ದೇಶದ ಋಷಿ ಮುನಿಗಳಿಂದ, ಸಾಧು–ಸಂತರಿಂದ. ಅದೇ ರೀತಿಯಲ್ಲಿ ಆತನ ಅಹಿಂಸೆಯ ವಿಚಾರವೂ ಕೂಡಾ. ಅವನು ಹೇಳುವ ಪ್ರಕಾರ ಅಹಿಂಸೆ ಅಂದರೆ ತಪ್ಪಿತಸ್ಥನ ಮುಂದೆ ಶರಣಾಗತಿ ಅಥವಾ ಬಲಿಯಾಗುವುದು ಅಲ್ಲ ಬದಲಾಗಿ ಎಂಥ ಅಯೋಗ್ಯ ಹಾಗೂ ಕ್ರೂರಿ ಮತ್ತು ಆಯುಧಧಾರಿಯೊಡನೆಯೂ ಆತ್ಮಶಕ್ತಿ ಮತ್ತು ಇಚ್ಛಾಶಕ್ತಿಯೊಂದಿಗೆ ಹೋರಾಟ ನಡೆಸುವುದು ಎಂದು ಅರ್ಥ. ಸತ್ಯಾಗ್ರಹ ಭಾರತದ ಬಳಿ ಇರುವ ದೊಡ್ಡ ಅಸ್ತ್ರ. ಅದು ಈ ಅಸ್ತ್ರವನ್ನು ಬಳಸಿಕೊಂಡು ಜಗತ್ತಿನ ಯಾವುದೇ ಬಲಾಢ್ಯ ರಾಷ್ಟ್ರದೊಂದಿಗೆ ಹೋರಾಡಬಲ್ಲುದಾಗಿದೆ. ಆದರೆ ಆಯುಧಗಳ ಪೈಪೋಟಿಯಲ್ಲಿರುವ ರಾಷ್ಟ್ರಗಳು, ಜನಾಂಗಗಳು, ವ್ಯಕ್ತಿಗಳು, ಜಾತಿಗಳು ಗಾಂಧಿಯ ಈ ಮಾತುಗಳನ್ನು ಕೇಳುತ್ತಲೇ ದೂರ ಸರಿಯಲಾರಂಭಿಸಿದರು. ಈ ಮುದುಕನಿಗೆ ಅರಳುಮರಳು ಎಂದರು. ಇದಕ್ಕೆ ಸಾಕ್ಷಿ ಎನ್ನುವಂತೆ ಆಚಾರ್ಯ ಕೃಪಲಾನಿಗೆ ಗಾಂಧಿ ಬರೆದ ಈ ಸಾಲುಗಳನ್ನು ನೀವು ಓದಬೇಕು - "These days who listens to me? Mine is a lone voice. My advice to all of you is not to bother at all about me, I am here in Delhi to do what I can. Even in my prayers I have said that I am all alone. I keep thinking, where do I stand in all this? I have come here and am doing something. But I feel that I have become useless. I would like none of you to bother to see me, much less consult me. I work. But I do so fully aware of my limitations. I have become useless because I cannot make Pakistan do the right thing. But if normality is restored in Delhi I would like to go and die there in Pakistan. God alone knows if I will run away, If I am shot at or am attacked with knives, If I do run away, then people will know that the man they looked upon as a Mahatma was not indeed a Mahatma. It is also possible that I may still utter 'Rama, Rama' when I am shot at or otherwise attacked. Let the outcome be what it will; either way it will be for the good."

ಹತಾಶೆ, ವಿವಶತೆಯ ಈ ಕೊನೆಯ ದಿನಗಳಿಗೆ ಮೇಲಿನ ಸಾಲುಗಳಿಗಿಂತ ಹೆಚ್ಚಿನ ಸಾಕ್ಷಿಗಳು ಬೇಕಿಲ್ಲ. ಇವು ಗಾಂಧಿಯೊಳಗೂ ಇದ್ದ ಒಬ್ಬ ಸಾಮಾನ್ಯ ಹಾಗೂ ಇನ್ನೊಬ್ಬ ಮಹಾತ್ಮ ತನ್ನೊಳಗೇ ಪರದೇಶಿಯಾಗಿ ಪರದಾಡಿದ ರೀತಿಗೆ ಹಿಡಿದ ಕನ್ನಡಿ. ಈಗ ತಾನು ಯಾರಿಗೂ ಬೇಕಾಗಿಲ್ಲ. ತನ್ನಿಂದ ಪಾಕಿಸ್ಥಾನದ ಧೋರಣೆಯಲ್ಲಿ ಮೃದುತ್ವವನ್ನು ತರಲಾಗುತ್ತಿಲ್ಲ. ತನ್ನ ಸಾವಿಗೂ ಮುಂಚೆ ಈ ಪರಿಸ್ಥಿತಿಯಿಂದ ಓಡಿ ಹೋದರೆ ಲಕ್ಷಾಂತರ ಜನತೆ ತನ್ನನ್ನೊಬ್ಬ ಢೋಂಗಿ ಎಂದುಕೊಳ್ಳಬಹುದು. ಅನ್ಯದಾರಿಯಿಲ್ಲದ ತಾನು ಯಾ-ರಿಂದಲೋ ಆಕ್ರಮಣಕೊಳಗಾಗಿ, ಇನ್ನಾರದೋ ಗುಂಡಿನ ದಾಳಿಗೆ ಬಲಿಯಾಗಿ ರಾಮನಾಮ ಜಪಿಸುತ್ತಾ ಸಾಯುವುದು ಒಳಿತು ಎಂದು ಗಾಂಧಿ ಬರೆಯಬೇಕಾದರೆ ಆತ ಈಗ ಸಾಮಾನ್ಯರಿಗಿಂತಲೂ ಭಿನ್ನನಾಗಿರಲಿಲ್ಲ. ಇವು ಮಹಾತ್ಮನೊಬ್ಬನ ಸಂದಿಗ್ಧತೆಗಳಲ್ಲ. ಆದರೆ ತನಗಂಟಿಕೊಂಡ 'ಮಹಾತ್ಮ' ಎಂಬ ಅಭಿದಾನವನ್ನು ಕಳೆದುಕೊಳ್ಳುವುದರಲ್ಲಿರುವ ತೊಡಕನ್ನು ವಿವರಿಸಲು ಯತ್ನಿಸುತ್ತಿರುವ ಸಾಮಾನ್ಯ ವ್ಯಕ್ತಿಯ ಸಮಸ್ಯೆಗಳು. ಆತ ತನ್ನ ಸುತ್ತಲಿನದೆಲ್ಲವನ್ನೂ ಗಮನಿಸುತ್ತಿರುವ, ಜೀವಂತವಾಗಿರುವ ಸಾಮಾನ್ಯ. ಯಾರು ಜೀವಂತರೋ ಅವರಿಗೇ ದ್ವಂದ್ವ, ಸೀಳುದಾರಿಯ ಪ್ರಶ್ನೆಗಳು ಮತ್ತು ವ್ಯಥೆಗಳು.

26 ಸೆಪ್ಟಂಬರ್ 1947 ದೆಹಲಿಯಲ್ಲಿ ಧೋ ಎಂದು ಧಾರಾಕಾರ ಮಳೆ ಶುರುವಿಟ್ಟುಕೊಂಡಿತು. ದೆಹಲಿ ಸ್ವಚ್ಛವಾಯಿತು ಆದರೆ ನಿರಾಶ್ರಿತರ ಗಾಯದ ನೋವು ಹೆಚ್ಚಾಯಿತು.

ಸಾಮಾನ್ಯ ಅವಧಿಯಲ್ಲಿ ಒಂದೇ ಒಂದು ಮಾತನ್ನು ಗಾಂಧಿಯ ವಿರುದ್ಧ ಹೇಳಲು ಭಯಪಡುತ್ತಿದ್ದ ಎಂಥವನೂ ಎದುರು ನಿಂತು ಮಾತನಾಡುವ ಶಕ್ತಿಯನ್ನು ಪರಿಸ್ಥಿತಿಯೇ ಈಗ ಒದಗಿಸಿತ್ತು. ಕಂಗಾಲಾದವನು ಹಿಂದುವೋ – ಮುಸ್ಲಿಂನೋ ಆಪಾದನೆಗೆ ಗು-ರಿಯಾಗುತ್ತಿದ್ದವನು ಮಾತ್ರ ಈ ಗಾಂಧಿ ಎಂಬ 'Back number of history'. ಪಾಕಿಸ್ತಾನದಿಂದ ಜೀವ ಉಳಿಸಿಕೊಂಡು ಬಂದ ಹಿಂದು ಒಬ್ಬ ಗಾಂಧಿಯನ್ನು ನಿರಂತರವಾಗಿ ಮೂದಲಿಸಿದ. ತನ್ನ ಮಕ್ಕಳು, ಹೆಂಡತಿ ಹಾಗೂ ಅಲ್ಪಸಂಖ್ಯಾತರಾಗಿ ಲಾಹೋರಿನಲ್ಲಿ ಉಳಿದ ತನ್ನ ಬಂಧುಗಳನ್ನು ಕುರಿತು, ಅವರ ಮಾನ-ಪ್ರಾಣದ ರಕ್ಷಣೆಯನ್ನು ಕುರಿತು ಗಾಂಧಿಯನ್ನು ಏಕವಚನದಲ್ಲಿಯೆ ಹಿಗ್ಗಾ-ಮುಗ್ಗಾ ಪ್ರಶ್ನಿಸಿದ. "ನಮ್ಮ ಸ್ಥಿತಿ ನೋಡು ಗಾಂಧಿ. ನಮ್ಮ ಸಂಸಾರಗಳ ಗತಿ ನೋಡು. ಈಗ ನಮಗೊಂದು ಮನೆಗೂ ಗತಿ ಇಲ್ಲ. ನಮ್ಮ ಈ ಸ್ಥಿತಿಗೆ ಪಾಕಿಸ್ತಾನವೇ ಕಾರಣ. ಅದಕ್ಕೆ ತಕ್ಕ ಉತ್ತರವನ್ನೇ ನೀಡಬೇಕು. ನಿನ್ನಿಂದಾಗದಿದ್ದರೆ ಸರಿದುಕೊ ನಾವೀಗ ಉತ್ತರಿಸಲು ಸಮರ್ಥರಾಗಿದ್ದೇವೆ. ಪ್ರತಿಕಾರ ನಮಗೂ ಗೊತ್ತು. ರಾಜಕಾರಣವನ್ನು ನಾವು ಮಾಡಬಲ್ಲೆವು." ಎಂದು ಕೂಗಾಡಿದ.

ಪ್ರತ್ಯುತ್ತರವಾಗಿ ಗಾಂಧಿ ಹೇಳಿದ್ದಿಷ್ಟೆ. "ಮಾಡು ಇಲ್ಲವೆ ಮಡಿ. ಆದರೆ ಯಾರನ್ನೂ ನೀನು ಕೊಲ್ಲಲು ನಾನು ಆಸ್ಪದ ನೀಡಲಾರೆ, ನಾನು ಇದೇ ಮಾತುಗಳನ್ನು ಹೇಳುತ್ತಾ ಸಾಯುತ್ತೇನೆ."

ಇಷ್ಟರೊಳಗಾಗಿ ಪಾಕಿಸ್ತಾನದಿಂದ ಶಹಿದ್ ಸುಹರ್‌ವರ್ದಿ ದೆಹಲಿಗೆ ಬಂದ. ಮುಗುಳ್ನಗುತ್ತಾ ಆತನನ್ನು ಸ್ವಾಗತಿಸಿದ ಗಾಂಧಿ ಕೇಳಿದ. "ಅರಣ್ಯ ರಾಜನಾಗಿ ಮರಳಿದೆಯೋ ಅಥವಾ ನರಿಯಾಗಿಯೋ." ತಲೆ ತಗ್ಗಿಸಿ ಶಹೀದ್ ಹೇಳಿದ "ಇಲ್ಲ ಬಾಪು ಇಲಿಯಾಗಿ ಬಂದಿದ್ದೇನೆ."

ಅಂದಹಾಗೆ ಸುಹರ್‌ವರ್ದಿಗೆ ನಿರೀಕ್ಷಿತ ಜಯ ಪಾಕಿಸ್ತಾನದಲ್ಲಿ ಜಯಿಸಿರಲಿಲ್ಲ. ಆತ ಬರಿಗೈ ದಾಸನಾಗಿ ಬಂದಿದ್ದ. ಇತ್ತ ಸೇವಾಗ್ರಾಮದ ಆಶ್ರಮದಿಂದ ಗಾಂಧಿ ಎಂದು ಮರಳುತ್ತಾನೆ ಎನ್ನುವ ಕುತೂಹಲ ಹೆಚ್ಚಾಗುತ್ತಲೇ ಇತ್ತು. ಹಿಂದೆ ಕಲ್ಕತ್ತೆಯಲ್ಲಿ ಯಶಸ್ವಿಯಾಗಿದ್ದ ಗಾಂಧಿ My life is my message ಎಂದು ಸಂದೇಶ ನೀಡಿದ್ದ. ಅದೇ ರೀತಿಯಾಗಿ ದೆಹಲಿಯ ಈ ಪ್ರಯತ್ನದ ನಂತರ ಯಾವ ಸಂದೇಶ ಗಾಂಧಿ ಕೊಡುತ್ತಾನೆ ಎಂದು ಆಶ್ರಮವಾಸಿಗಳು ಕುತೂಹಲದಿಂದ ಕಾಯುತ್ತಿದ್ದರು. ಈಗ ಗಾಂಧಿ ಹೇಳಿದ, "My prayer to God is to take me away soon - from the bed of torture that life has become for me."

ಕೇವಲ ಎರಡು ತಿಂಗಳ ಅವಧಿಯಲ್ಲಿ ಎಷ್ಟೊಂದು ಬದಲಾವಣೆ! ನಾನು ಹಿಮಾಲಯದಂತೆ ಅಚಲ ಎಂದುಕೊಳ್ಳುತ್ತಿದ್ದ ಗಾಂಧಿಯ ಆತ್ಮ ವಿಶ್ವಾಸ ಸಣ್ಣಗೆ ಮಳಲಂತೆ ಜರಿಯುತ್ತಿದೆ. 'ಮಹಾತ್ಮ' ಮನುಷ್ಯರಿಗಿಂತಲೂ ಮನುಷ್ಯನಾಗಿ ಮಾತನಾಡುತ್ತಿದ್ದಾನೆ. 1947 ರ ಸೆ. 27 ರಂದು ಗಾಂಧಿಗೆ 102 ಡಿಗ್ರಿ ವಿಪರೀತ ಜ್ವರ. ಆದರೂ ಆತ ವಿಶ್ರಾಂತಿಗೆ ಸಿದ್ಧನಿಲ್ಲ. ಸಂದರ್ಶಿಸುವವರ ಸಂಖ್ಯೆ ಕಡಿಮೆಗೊಳಿಸಿಲ್ಲ. ನಿರಂತರವಾಗಿ ಬರೆಯುತ್ತಾನೆ, ಮಾತನಾಡುತ್ತಾನೆ, ನೂಲುತ್ತಾನೆ. ಬರೆಯಲು, ಕೂಡ್ರಲು ನಿಶ್ಶಕ್ತನೆನಿಸಿದಾಗ ಮಲಗಿಕೊಂಡೇ ಪತ್ರಗಳನ್ನು ಬರೆಯಿಸುತ್ತಾನೆ. ನಿರಂತರವಾಗಿ ಆತ ಬಡಬಡಿಸಿದ್ದೊಂದೆ, "What use is my life?"

ಈ ಪ್ರಶ್ನೆ ನಿಜಕ್ಕೂ ಗಂಭೀರವಾಗಿದೆ. ಎರಡು ದೇಶಗಳು ಕೋಮು ಆಧಾರದ ಮೇಲೆ ಹೊತ್ತುರಿಯುವಾಗ ನಿಜಕ್ಕೂ ತನ್ನಿಂದ ದುರ್ಬಲರ ಜೀವ ಉಳಿಸಲಾಗುತ್ತಿಲ್ಲ ಎನ್ನುವ ಹತಾಶೆಯಿಂದ ಈ ಮಾತುಗಳೋ? ಬದಲಾಗುತ್ತಿರುವ ರಾಜಕಾರಣದಲ್ಲಿ ಕವಡೆ ಕಿಮ್ಮತ್ತೂ ತನಗೆ ಸಿಗುತ್ತಿಲ್ಲ ಎನ್ನುವ ಅಸಮಾಧಾನವೋ? ತನ್ನ ಅನುಯಾಯಿಗಳೇ ಎಂದುಕೊಂಡು ತನ್ನ ಸತ್ಯ, ಅಹಿಂಸೆಗಳೆಂಬ ಸಿದ್ಧಾಂತಗಳನ್ನು ಗಾಳಿಗೆ ತೂರಿ ಜನ ಹೊರಟಿದ್ದಾರೆ ಎನ್ನುವ ಬೇಸರವೋ? ಅದು ಗಾಂಧಿಯೇ ಬಲ್ಲ.

ಈ ಕಡು ಜ್ವರದಲ್ಲಿಯೂ ಗಾಂಧಿಯ ದಿನಚರಿ ಬದಲಾಗುವುದಿಲ್ಲ. ಅದು ಕರಾರುವಕ್ಕಾಗಿ ನಸುಕಿನ 3.30ಕ್ಕೆ ಶುರುವಾಗುತ್ತದೆ. ಕೆಮ್ಮು ಆತನಿಗೆ ವಿಪರೀತವಾಗಿ ಕಾಡುತ್ತಿದೆ. ಯಾರೊಂದಿಗೂ ಮಾತನಾಡಲು ಬಿಡುತ್ತಿಲ್ಲ. ವೈದ್ಯರಿಗೆ ಗಾಂಧಿಯ ಕಟ್ಟಪ್ಪಣೆಯನ್ನು ಮೀರಿ ಹೋಗಲಾಗುತ್ತಿಲ್ಲ. ಆತ ಹೇಳಿಯಾಗಿದೆ, ಒಂದು ವೇಳೆ ತಾನು ಪ್ರಜ್ಞೆಯನ್ನು ಕಳೆದುಕೊಂಡರೂ ಮತ್ತೆ ಯಥಾಸ್ಥಿತಿಗೆ ತನ್ನನ್ನು ತರುವ ಸಲುವಾಗಿ ಯಾವುದೇ ಕಾರಣಕ್ಕೂ ಇಂಜೆಕ್ಷನ್ ಮತ್ತು ಮಾತ್ರೆಗಳನ್ನು ತನ್ನ ದೇಹದ ಮೇಲೆ

ಉಪಯೋಗಿಸುವಂತಿಲ್ಲ. ಹ್ಯಾಗೋ ಬದುಕಿಬಿಡಬಹುದು, ಆತನ ಪ್ರಶ್ನೆಯಲ್ಲ. ನೀವು ಇದನ್ನು ಆತನ ಸಾಲುಗಳಲ್ಲಿಯೇ ಓದಬೇಕು, "I do not wish to be kept alive anyhow and somehow. Believe me, it would please me to die with my faith intact." ಆತನ ನಂಬಿಕೆ ಇಷ್ಟೇ. ತನ್ನದು ಒಂದು ಉದ್ದೇಶರಹಿತ ಬಾಳಾಗಬಾರದು.

ಮತ್ತೆ ಮತ್ತೆ ಸಾವನ್ನು ಕನವರಿಸುವ, ಗಾಂಧಿಯ ಬದುಕಿನ ಈ ಸಂದರ್ಭವನ್ನು ನೋಡಿದರೆ ಸಾವು ಎಲ್ಲರಿಗೂ ಸಾಮಾನ್ಯವಾಗಿಯೇ ಬರುತ್ತದೆ ಎನ್ನುವುದಂತೂ ಸತ್ಯ.



ಚರ್ಚಿಲ್ ಎಂಬ ಮಾರಿ ಮತ್ತೆ ಗಾಂಧಿಯ ದಾರಿ

೨೯

ರಾಮನಾಮವನ್ನು ನಂಬಿದವನಿಗೆ ನಿಸರ್ಗ ಚಿಕಿತ್ಸೆಯ ಅವಶ್ಯಕತೆಯೂ ಇಲ್ಲ ಎಂದು ಗಾಂಧಿ ಹೇಳುತ್ತಿದ್ದ. ಈ ಕ್ಷಣದಲ್ಲಿ ವೈದ್ಯರಿಗೆ ಮತ್ತು ಚಿಕಿತ್ಸೆಗೆ ತನ್ನನ್ನು ಒಪ್ಪಿಸಿಕೊಳ್ಳುವುದೆಂದರೆ ತನ್ನ ಅಂತಿಮ ಹೋರಾಟದಲ್ಲಿ ಸೋತಂತೆಯೆ ಎನ್ನುವುದೇ ಅವನಿಗಿದ್ದ ಭಯ. ಹೀಗಾಗಿ, ಕ್ಷೀಣ ಧ್ವನಿಯಲ್ಲಿ ವೈದ್ಯರನ್ನು ಕೂಡ್ರಿಸಿಕೊಂಡು ಗಾಂಧಿ ಹೇಳುತ್ತಿದ್ದುದೇನು ಗೊತ್ತೆ, "ನಿಮ್ಮ ವೃತ್ತಿಯೊಂದಿಗಿನ ನನ್ನ ಜಗಳ ಸರ್ವೆ ಸಾಮಾನ್ಯವಾದುದು. ಆತ್ಮವನ್ನು ಮತ್ತು ಅದರ ಘನತೆಯನ್ನು ತಿದ್ದಿಕೊಳ್ಳಬೇಕೆನ್ನುವವರು ಶರೀರದ ಕ್ಷುಲ್ಲಕತನವನ್ನು ನಿರ್ಲಕ್ಷಿಸಬೇಕು. ಇಲ್ಲದೇ ಹೋದಲ್ಲಿ ಈ ಹಾಳು ಶರೀರವನ್ನು ರಿಪೇರಿ ಮಾಡುವುದರಲ್ಲಿ ಆತ್ಮ ಅಂದಗೆಟ್ಟುಹೋಗುತ್ತದೆ." ಅಂತೆಯೇ ಗಾಂಧಿ ನಿರಾಶ್ರಿತರಿಗೂ ಕೂಡ ಇಂತಹ ಒಂದು ವಿಶ್ವಾಸವನ್ನು ಬೆಳೆಸಿಕೊಳ್ಳಲು ಹೇಳುತ್ತಿದ್ದ.

ಇದ್ದಕ್ಕಿದ್ದಂತೆ ಏನೋ ನೆನಪಾಯಿತು. ಶನಿವಾರದ ಆ ಸಾಯಂಕಾಲ ಸಂದೇಶವೊಂದನ್ನು ಬರೆದಿಟ್ಟ. "ಭಾರತ ಖಾದಿಯಲ್ಲಿ ತನ್ನ ನೂರು ವರ್ಷವನ್ನು ಪೂರೈಸಿದೆ. ಈಗ ದೇಶ ಸ್ವತಂತ್ರವಾಗಿದೆ. ಅಹಿಂಸೆಯ ಸಂಕೇತವಾದ ಈ ಖಾದಿಯಿಂದಲೇ ಸ್ವಾವಲಂಬನೆಯನ್ನು ಈ ದೇಶದ ಜನತೆ ಕಂಡುಕೊಳ್ಳಬೇಕಿದೆ. ಈಗ ನಮ್ಮ ಮುಂದೆ ಇರುವ ಮಹತ್ವದ ಕೆಲಸವೇ ಅದು. ಉತ್ಸಾಹದಿಂದ ಅದರೆಡೆಗೆ ನಾವು ಮುನ್ನುಗ್ಗಬೇಕಿದೆ."

ಪ್ರಾರ್ಥನೆಯ ಸಮಯವಾಯಿತು. ಕಲ್ಕತ್ತೆಯಲ್ಲಿ ಅಷ್ಟು ಅಲ್ಲದಿದ್ದರೂ ಸರಿ, ಒಂದಿಷ್ಟು ಸಂಖ್ಯೆಯಲ್ಲಂತೂ ಜನ ಸೇರಿದರು. ಈಗ ಗಾಂಧಿ ಮತ್ತೆ ತನ್ನ ಸ್ವಗತವನ್ನು ಪ್ರಾರಂಭಿಸಿದ, "ನನ್ನ ಕೈಯಲ್ಲಿ ಮಂತ್ರದಂಡವೂ ಇಲ್ಲ, ಖಡ್ಗವೂ ಇಲ್ಲ. ದೇವನೊಬ್ಬನನ್ನು ಹೊರತು ಪಡಿಸಿದರೆ ಯಾರೂ ನನ್ನೊಂದಿಗಿಲ್ಲ. ಹಾಗಂತ ದೇವರು ನನ್ನೊಬ್ಬನೊಂದಿಗಷ್ಟೇ ಇಲ್ಲ, ನಿಮ್ಮಲ್ಲಿಯೂ, ಅಲ್ಲಿ ನಿಂತಿದ್ದಾಳಲ್ಲ ಆ ಪುಟ್ಟ ಹುಡುಗಿಯಲ್ಲಿಯೂ ದೇವರಿದ್ದಾನೆ. ಅಚ್ಚರಿಗಳೇನೇ ಇದ್ದರೂ ದೇವರೇ ಮಾಡಬಹುದು. ಅವನ ಆಶೀರ್ವಾದವಿಲ್ಲದೆ ನಾನೇನಾದರು ಮಾಡಲು ಸಾಧ್ಯವಿದೆ ಎಂದು ತಿಳಿಯುತ್ತೀರಾ? ಅರವತ್ತು ವರ್ಷಗಳಿಂದ ಬಡಿದಾಡುತ್ತಿದ್ದೇನೆ, ಖಡ್ಗಗಳಿಂದಲ್ಲ, ಸತ್ಯ ಮತ್ತು ಅಹಿಂಸೆಗಳಿಂದ. ಆದರೆ ಈ ಅಸ್ತ್ರಗಳು ನನಗೊಬ್ಬನಿಗಾಗಿ ಅಲ್ಲ, ನಿಮಗೂ ಕೂಡ. ಇವುಗಳನ್ನು ಮಾತ್ರ ನಂಬಿ ನಮ್ಮ ದೇಶದ ಸ್ವಾತಂತ್ರ್ಯವನ್ನು ರಕ್ಷಿಸಿಬಿಡಬೇಕಿದೆ.

ತಿಳಿದುಕೊಳ್ಳಿ, ಅಹಿಂಸೆ ನನ್ನ ಧರ್ಮ. ರಾಮ, ಈಶ್ವರ, ರಹೀಮ್ ನನ್ನ ವೈದ್ಯರು. ಎಲ್ಲ ರೋಗಗಳಿಗೆ ರಾಮನಾಮವೊಂದೇ ಮದ್ದು. ಹೃದಯ ಮತ್ತು ತುಟಿಯ ಮೇಲೆ ರಾಮನಾಮವನ್ನಿಟ್ಟುಕೊಂಡವನಿಗೆ ಯಾವ ಇಲಾಜಿನ ಅವಶ್ಯಕತೆಯೂ ಇಲ್ಲ. ಇದು ನನ್ನ ವಿಶ್ವಾಸ. ರಾಮನೇ ನಮ್ಮ ರಕ್ಷಕ, ಶರೀರ ತಾತ್ಕಾಲಿಕ. ಈ ಕ್ಷಣದಲ್ಲಿ ಬದುಕಿರುವ ಈ ದೇಹ ಇನ್ನೊಂದು ಕ್ಷಣದಲ್ಲಿ ಸಾಯುತ್ತದೆ. ಆದರೆ ಶ್ರೀರಾಮನ ಸ್ಮರಣೆಯನ್ನು ನಿರಂತರ ಮಾಡಿದವನ ಆತ್ಮ ಅಮರವಾಗಿರುತ್ತದೆ."

ಕೋಮು ಗಲಭೆಯಲ್ಲಿ ಜೀವ ಭಯದಿಂದ ಪ್ರಾರ್ಥನೆಗೆ ಸೇರಿದ ಜನ ಈಗ ಹುಚ್ಚನನ್ನೊಬ್ಬನನ್ನು ನೋಡಿದರು ಎಂದುಕೊಂಡರೇನೊ. ಆದರೆ ಆತ ಪ್ರಶ್ನಾತೀತ. ಮಹಾತ್ಮ, ರಾಷ್ಟ್ರಪಿತ, ಜನರ ಮೈಮೇಲೆ ಗಾಯಗಳಿವೆ. ಸೂರು ಕಳೆದುಕೊಂಡು ಅಕ್ಷರಶಃ ಅವರು ರಸ್ತೆಗೆ ಬಿದ್ದಿದ್ದಾರೆ. ಇಂದಿಗೂ ಮಾನಹರಣಗೊಂಡ ತಾಯಂದಿರ ಸಹೋದರಿಯರ ಸುಳಿವೂ ಇಲ್ಲ. ತಮ್ಮ ಭವಿಷ್ಯಕ್ಕೆ ಇವನಿಂದಲೇ ಪರಿಹಾರ ಎಂದು ತಿಳಿದುಕೊಂಡು ಬಂದ ಜನತೆಗೆ ಗಾಂಧಿ ಒಂದು ವ್ಯವಹಾರಿಕ ದಾರಿಯನ್ನು ತೋರಿಸದೆ ಲೋಕ ದೂರದ ಮಾತು ಅಥವಾ ಸಾಮೂಹಿಕ ಸಮರ್ಪಣೆಯ ಆಲೋಚನೆಗಳನ್ನಿರುತ್ತಿರುವದು ಒಂದಿಷ್ಟೂ ಇಷ್ಟವಾಗಲಿಲ್ಲ.

ಮತ್ತೊಂದೆಡೆ ಗಾಂಧಿಗೆ ಚರ್ಚಿಲ್‌ನ ಮಾತುಗಳದೇ ಚಿಂತೆ. ಏಷ್ಯಾದ ನೆಲವೇ ಸ್ವಾತಂತ್ರ್ಯಕ್ಕೆ ಅರ್ಹವಲ್ಲ. ಈ ಸ್ವಾತಂತ್ರ್ಯ ಅಲ್ಲಿಯ ಜನರಿಗೆ ಒಳಿತನ್ನೇನೂ ತರುವುದಿಲ್ಲ. ಬ್ರಿಟೀಷರ ಮಾರ್ಗದರ್ಶನವಿಲ್ಲದ ಭಾರತೀಯರ ಬದುಕು ಯಾತನಾಮಯವಾಗಿರುತ್ತದೆ,

ಎಂದು ಮಾತನಾಡಿ ಚರ್ಚಿಲ್ ಗಾಂಧಿಯ ನಿದ್ದೆಗೆಡಿಸಿದ್ದ. ಈ ಒಂದು ಆಪಾದನೆಯಿಂದ ದೇಶವನ್ನು ಮುಕ್ತಗೊಳಿಸುವ ಸಲುವಾಗಿ ಸ್ವತಃ ಜಿನ್ನಾ ಮತ್ತು ಆತನ ಮುಸ್ಲಿಂ ಲೀಗ್‌ಗೆ ಇಡೀ ಭಾರತವನ್ನು ಆಳುವ ಪ್ರಸ್ತಾವನೆಯನ್ನು ಗಾಂಧಿ ಇಟ್ಟು. ಕಾಂಗ್ರೆಸ್‌ಗೆ ಯಾವ ಅಧಿಕಾರವು ಬೇಡ, ಅದು ಆಡಳಿತದಲ್ಲಿ ಯಾವ ಕಾಲಕ್ಕೂ ಹಸ್ತಕ್ಷೇಪ ಮಾಡುವದಿಲ್ಲ ಎಂದು ಹೇಳಿದ ಮೇಲೂ ದೇಶ ವಿಭಜನೆಯನ್ನು ತಪ್ಪಿಸುವದು ಆಗಲಿಲ್ಲ. ಬೆಂಕಿ ಉಲ್ಬಣಗೊಳ್ಳುತ್ತಲೇ ಹೋಯಿತು. ಬಂಗಾಲ್, ಪಂಜಾಬ್, ದೆಹಲಿ, ಕರಾಚಿ, ಲಾಹೋರ ಶಬ್ದಶಃ ಹೊತ್ತಿ ಉರಿಯಲಾರಂಭಿಸಿದವು.

ಸುದ್ದಿ ಬ್ರಿಟನ್ನಿನ ಪಾರ್ಲಿಮೆಂಟನಲ್ಲೂ ಚರ್ಚೆಯಾಯಿತು. ಬ್ರಿಟಿಷ್ ಪ್ರಧಾನಿ ಹೇಳಿದ, "ಕೋಮುಗಳ ಹೆಸರಿನಲ್ಲಿ ಭಾರತದಲ್ಲಿ ನಡೆಯುತ್ತಿರುವ ನರಮೇಧದ ಸುದ್ದಿ ನನಗೇನು ಆಶ್ಚರ್ಯ ಉಂಟುಮಾಡಲಿಲ್ಲ. ಇವೆಲ್ಲವೂ ನಿರೀಕ್ಷಿತವೆ. ಹಾಗೆ ನೋಡಿದರೆ ನಾವು ಈ ರಕ್ತಸಿಕ್ತ ಇತಿಹಾಸದ ಆರಂಭದಲ್ಲಿದ್ದೇವಷ್ಟೆ. ಇನ್ನೂ ಆ ದೇಶದಲ್ಲಿ ನಡೆಯಲಿರುವದು ಭಯಾನಕವಾಗಿದೆ. ಹಾಗಂತಾ ಬ್ರಿಟಿಷ್ ಸಾಮ್ರಾಜ್ಯದೊಂದಿಗೆ ಜೊತೆ-ಜೊತೆಯಾಗಿ ಶಾಂತಿ ಮತ್ತು ಸಹನೆಯ ದಾರಿಯನ್ನು ಕ್ರಮಿಸಿಕೊಂಡು ಬಂದ ಭಾರತದ ಎಲ್ಲ ಸಕಾರಾತ್ಮಕ ಅಂಶಗಳನ್ನು ನಾನು ಅಲ್ಲಗಳೆಯುತ್ತಿಲ್ಲ. ಆದರೆ ಬರುವ ಅರವತ್ತು - ಎಪ್ಪತ್ತು ವರ್ಷಗಳಲ್ಲಿ ಇಡಿ ಏಷ್ಯಾದ ಸ್ಥಿತಿ ಏನಾಗಿರುತ್ತದೆ ಎನ್ನುವುದನ್ನು ನಾನು ವಿವರಿಸುತ್ತಿದ್ದೇನೆ ಅಷ್ಟೆ." ಬ್ರಿಟಿಷ ಪ್ರಧಾನಿಯ ಈ ಮಾತುಗಳು ಗಾಂಧಿ ಯಾವ ಹಂತದಲ್ಲೂ ಒಪ್ಪಿಕೊಳ್ಳಲು ಸಿದ್ಧನಿರಲಿಲ್ಲ. ಈ ಮಾತುಗಳೇ ಭವಿಷ್ಯದಲ್ಲಿ ಕರಿಯ ಮತ್ತು ಬಿಳಿಯ, ಪೂರ್ವ ಮತ್ತು ಪಶ್ಚಿಮ, ಅಭಿವೃದ್ಧಿಹೊಂದದ ಮತ್ತು ಅಭಿವೃದ್ಧಿ ಹೊಂದಿದ ಎನ್ನುವ ಬಹಳ ದೊಡ್ಡ ತಾರತಮ್ಯತೆಗೆ ಕಾರಣವಾಗಬಹುದೆಂದು ಗಾಂಧಿಯ ಗುಮಾನಿ.

ಇಲ್ಲಿ ಕವಿ ಹರ್ಬರ್ಟ ಸ್ಪೆನ್ಸರ್‌ನ ಮಾತುಗಳನ್ನು ಸ್ಮರಿಸಿಕೊಳ್ಳಬೇಕು. ಆತ ಹೇಳುವುದೂ ಗಾಂಧಿಯ ದಾರಿಯಲ್ಲಿಯೆ. "No one can be perfectly free till all are free; No one can be perfectly moral till all are moral; No one can be perfectly happy till all are happy." ಭಾರತದಲ್ಲಿ ವಿಭಜನೆಯ ಬೀಜ ಬಿತ್ತಿ ಜಾಗತೀಕ ರಾಜಕಾರಣದಲ್ಲಿ ಏನನ್ನೋ ಸಾಧಿಸಹೊರಟ ಚರ್ಚಿಲ್‌ನಂತವರು ಈ ಸಾಲುಗಳನ್ನು ಮತ್ತೆ ಮತ್ತೆ ಓದಬೇಕು. ಗಮಾರರ ರಾಷ್ಟ್ರ ಎಂದು ಕರೆಯಿಸಿಕೊಳ್ಳುತ್ತಿದ್ದ ಭಾರತದ ಗಾಂಧಿಗೆ ಮಾತ್ರ ಈ ಸಾಲುಗಳು ಚನ್ನಾಗಿ ಮನವರಿಕೆಯಾದಂತಿದ್ದವು.

ಚರ್ಚಿಲ್‌ನನ್ನು ಮುಜುಗರಕ್ಕೊಳಪಡಿಸದೆ ಗಾಂಧಿ ನೀಡಿದ ಉತ್ತರ ಮಾತ್ರ ಮಾನವ ಇತಿಹಾಸದ ವಿಶ್ಲೇಷಣೆಯಾಗಿತ್ತು. ತನ್ನ ಉತ್ತರದ ಮೂಲಕವೇ ಗಾಂಧಿ ಆತ್ಮಗೌರವನ್ನು ಕಾಯ್ದುಕೊಳ್ಳುವ ದಾರಿಯನ್ನು ಸೂಚಿಸುತ್ತಾನೆ. ಅವನ ಮೊದಲ ವಾಕ್ಯವೇ ಇದು - Churchil is a great Man. ಇಂಗ್ಲೆಂಡಿನ ಗೌರವಾನ್ವಿತ ಕುಟುಂಬದಿಂದ ಬಂದ ಚರ್ಚಿಲ್ ಇತಿಹಾಸ ಪ್ರಸಿದ್ಧರು. ಎರಡನೇ ಮಹಾಯುದ್ಧದಲ್ಲಿ ಇಂಗ್ಲೆಂಡ್ ಸಂಕಷ್ಟದಲ್ಲಿದ್ದಾಗ ಮುಂಚೂಣಿಯಲ್ಲಿ ನಿಂತು ಮಾರ್ಗದರ್ಶನ ಮಾಡಿದವರು. ಆದರೆ ಈ ಜಯ ಅನೇಕ

ರಾಷ್ಟ್ರಗಳ ಸಹಕಾರದಿಂದ ಅವರಿಗೆ ಸಾಧ್ಯವಾಗಿತ್ತು. ಆದರೆ ಬ್ರಿಟನ್‌ದ ಜನತೆ ಅನಂತರ ಆಯ್ದುಕೊಂಡದ್ದು ಮಿ. ಅಟ್ಲಿಯನ್ನು. ಭಾರತ ವಿಭಜನೆಯಾಯಿತು. ಭಾರತ ಪಾಕಿಸ್ತಾನಗಳೆರಡು ಬ್ರಿಟಿಷ್ ಕಾಮನ್‌ವೆಲ್ತ್‌ನ ಭಾಗವಾಗಿ ಉಳಿದುಕೊಳ್ಳುವ ಇಚ್ಛೆಯನ್ನು ವ್ಯಕ್ತಪಡಿಸಿದವು. ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡುವುದು ಎಲ್ಲ ರಾಜಕೀಯ ಪಕ್ಷಗಳ ಉದ್ದೇಶವಾಗಿತ್ತು. ಚರ್ಚಿಲ್‌ರೂ ಅದೇ ಸಾಲಿನಲ್ಲಿ ನಿಂತವರು. ಭಾರತಕ್ಕೆ ಸ್ವಾತಂತ್ರ್ಯ ಕೊಟ್ಟ ಬ್ರಿಟನ್ನಿನ ಈ ಹೆಜ್ಜೆ ಸರಿಯೋ, ತಪ್ಪೋ ಎಂದು ನಿರ್ಧರಿಸುವುದು ಭವಿಷ್ಯ. ಆದರೆ ಚರ್ಚಿಲ್‌ರ ಮಾತುಗಳು ನನಗೆ ನೋವು ತಂದಿವೆ. ತಮ್ಮ ಮಾತುಗಳ ಮೂಲಕ ಅವರು ಇಂಗ್ಲೆಂಡಿನ ಮತ್ತು ಭಾರತದ ಜನತೆಯನ್ನು ನೋಯಿಸಿದ್ದಾರೆ. ಭಾರತದಲ್ಲಿ ಹಿಂಸೆ ಮುಂದುವರೆಯುತ್ತದೆ. ಎಂದು ಹೇಳುವುದರ ಮೂಲಕ ಚರ್ಚಿಲ್‌ರು ತಾವು ನಂಬಿದ ಮೌಲ್ಯವನ್ನೇ ಕೈ ಬಿಡುತ್ತಿದ್ದಾರೆ. ಭಾರತ ಹೀಗೆ ದಾರುಣ ಸ್ಥಿತಿಯನ್ನು ತಲುಪುವ ಮೂಲಕ ಇಂಗ್ಲೆಂಡಿಗೆ ಯಾವ ಹಾನಿಯೂ ಆಗದು ಎಂದು ಅವರು ತಿಳಿದುಕೊಳ್ಳುವುದಾದರೂ ಹೇಗೆ? ನನ್ನ ಅಭಿಪ್ರಾಯದಲ್ಲಿ ಚರ್ಚಿಲ್‌ರು ಅವಸರದ ಹೇಳಿಕೆಯನ್ನು ನೀಡಿದ್ದಾರೆ.

ಕೆಲವು ಲಕ್ಷ ಭಾರತೀಯರು ಖಂಡಿತವಾಗಿಯೂ ಈ ಮತೀಯ ಗಲಭೆಗೆ ಬಲಿಯಾಗಿದ್ದಾರೆ. ಆದರೆ ಕೋಟ್ಯಂತರ ಭಾರತೀಯರು ಇನ್ನೂ ಬದುಕಿದ್ದಾರೆ. ನಾನು ಸಂಕಷ್ಟದ ಈ ಘಳಿಗೆಯಲ್ಲಿ ಚರ್ಚಿಲ್‌ರನ್ನು ಭಾರತಕ್ಕೆ ಸ್ವಾಗತಿಸುತ್ತೇನೆ. ಅವರು ಒಬ್ಬ ಪಕ್ಷಾತೀತ ಇಂಗ್ಲಿಷಿಗನಾಗಿ ಈ ಸಂದರ್ಭವನ್ನು ಅಭ್ಯಸಿಸಲಿ. ಸ್ವಾತಂತ್ರ್ಯ ಪಡೆಯುವ ಸಂದರ್ಭದಲ್ಲಿ ನಾನು ಹೇಳಿದ ಮಾತುಗಳನ್ನು ಕೇಳಿದ್ದರೆ ಈ ರಕ್ತಪಾತದ ಪ್ರಶ್ನೆಯೇ ಇರಲಿಲ್ಲ. ನಮ್ಮ ಅವಿವೇಕಗಳಿಂದಾಗಿ ಚರ್ಚಿಲ್‌ರಿಗೆ ಮಾತಾಡಲು ಅವಕಾಶ ಸಿಕ್ಕಿದೆ. "We must reform our age at once, and we must proove him worng."

ಈಗ ಎಷ್ಟೊಂದು ಅಭ್ಯಾಸ ಮತ್ತು ಚಳುವಳಿಗಳ ಮಧ್ಯೆ ಬದುಕಿದ್ದೇವೆ ನಾವು. ಅಳಿವಿನ ಅಂಚಿನಲ್ಲಿರುವ ಪಶು-ಪಕ್ಷಿ, ವನಸ್ಪತಿಯ ರಕ್ಷಣೆಗಾಗಿಯಂತು ದಿನಕ್ಕೊಂದು ಚಳುವಳಿ. ಹಾಗೆಯೇ ಎಣ್ಣೆ, ಮಣ್ಣು, ಅರಣ್ಯಕ್ಕಾಗಿ ಸರ್ಕಾರಗಳೇ ಉರುಳುತ್ತಿವೆ. ಆದರೆ ಯಾವುದನ್ನೂ ನಿರೀಕ್ಷಿಸಿದಂತೆ ರಕ್ಷಿಸಲಾಗುತ್ತಿಲ್ಲ ಎಂಬುದನ್ನು ಅತ್ಯಂತ ಖೇದದಿಂದಲೆ ಹೇಳಬೇಕು. ದೇಶ ಸ್ವಾತಂತ್ರ್ಯಕ್ಕಾಗಿ, ಹಿಂದೂ-ಮುಸ್ಲಿಂರ ಸಾಮರಸ್ಯಕ್ಕಾಗಿ, ಅಹಿಂಸೆಗಾಗಿ, ಮತ್ತೇನೇನೋ ಕಾರಣಕ್ಕಾಗಿ ಗಾಂಧಿ ನಮಗೆ ನೆನಪಾಗುತ್ತಾನೋ ಇಲ್ಲವೋ, ಆದರೆ ಹಣ, ಸಮಯ, ಮಾತು ಮತ್ತು ಭಾಷೆಯ ಅತ್ಯಂತ ಪ್ರಜ್ಞಾಪೂರ್ವಕ ವಿನಿಯೋಗಕ್ಕಾಗಿಯಾದರೂ ಈ ಗಾಂಧಿ ನಮ್ಮನ್ನು ಕಾಡಬೇಕು.

ಪ್ರಪಂಚದಲ್ಲಿ ಯಾವೊಬ್ಬ ವ್ಯಕ್ತಿಯ ಸಮಯವೂ ತನ್ನ ಮನಸಿಚ್ಛೆ ಬಳಕೆಗಾಗಿಯೇ ಇದೆಯೆಂದು ಗಾಂಧಿ ತಿಳಿದುಕೊಳ್ಳಲಿಲ್ಲ. ಅವಶ್ಯಕತೆಗೆ ಮೀರಿದ ಒಂದು ಪದವೂ ಆತ ಬಳಸಲಿಲ್ಲ. ಆತ ತನ್ನ ಹಾಸ್ಯದ ಮೂಲಕವೂ ಏನನ್ನು ರವಾನಿಸಬೇಕು ಎಂಬುದನ್ನು ಮರೆಯಲಿಲ್ಲ. ಈ ಅರ್ಥದಲ್ಲಿ ಅವನೊಬ್ಬ 'ಬನಿಯ'ನೇ ಸೈ.

1947ರ ಸೆಪ್ಟಂಬರ್ 29ರಂದು ಗಾಂಧಿ ಒಂದು ಮಾತು ಹೇಳುತ್ತಾನೆ– "ವಾರದಲ್ಲಿ ಒಂದು ದಿನ ಮೌನವಾಗಿ ಉಳಿಯುವ ನನ್ನ ಆಚರಣೆ, ನನ್ನ ಮಾತನ್ನು ಒಂದು ಶಿಸ್ತಿಗೆ ಒಳಪಡಿಸುವುದೇ ಆಗಿದೆ. ಇನ್ನೊಂದು ಅರ್ಥದಲ್ಲಿ ನನ್ನ ಆಲೋಚನೆಗಳಿಗೆ ಅವಕಾಶವನ್ನು ಒದಗಿಸಿಕೊಡುವುದು ಮತ್ತು ಒಳ್ಳೆಯ ಕೆಲಸವನ್ನು ಆದಷ್ಟು ಬೇಗ ಮಾಡುವುದು. ಆಲೋಚನೆ ಮಾತಿಗಿಂತಲೂ ಶಕ್ತಿಶಾಲಿ. ಸತ್ಯದ ಆಳದಲ್ಲಿ ಕೊನೆಯುಸಿರು ಎಳೆಯಬೇಕೆಂದಿರುವ ನನಗೆ ನಾನು ಸಾಧಿಸಬೇಕಾದ ಗುರಿಗಳು ಮುಖ್ಯ ಎಂದೆನಿಸುತ್ತವೆ. ನಿತ್ಯದ ವ್ಯಾವಹಾರಿಕ ಬದುಕಿನಲ್ಲಿ ನಾವು ಎಷ್ಟೊಂದು ಅಪವಿತ್ರವಾಗಿಲ್ಲ? ಅದನ್ನು ತೊಳೆದುಕೊಳ್ಳುವ ಒಂದೇ ಮಾರ್ಗ ಮೌನ."

ಸೋಮವಾರದ ಈ ಸಂಜೆ ಮತ್ತೆ ಖುರಾನ್‌ದ ಪದ್ಯಗಳಿಂದಲೇ ಅವನ ಪ್ರಾರ್ಥನೆ ಶುರುವಾಯಿತು. ಮತ್ತೆ ಕೇಳಿದ ತನ್ನ ಈ ಆಚರಣೆಯನ್ನು ತೀವ್ರವಾಗಿ ಖಂಡಿಸುವವರು ಯಾರಾದರೂ ಇದ್ದಾರೆಯೇ? ಮೆಲ್ಲಗೆ ಇಬ್ಬರು ವ್ಯಕ್ತಿಗಳು ಕೈ ಎತ್ತಿದರು. ಗಾಂಧಿ ಖುರಾನ್‌ದಿಂದ ಪದ್ಯಗಳನ್ನು ಹೇಳುವುದನ್ನು ವಿರೋಧಿಸುತ್ತೇವೆ ಎಂದು ಸೂಚಿಸಿದರು. ಗಾಂಧಿ ಹೇಳಿದ – "ನಾನು ನಿಮ್ಮ ವಿರೋಧವನ್ನು ಗೌರವಿಸುತ್ತೇನೆ. ನನಗೆ ಗೊತ್ತು ನಿಮ್ಮೊಂದಿಗೆ ಚರ್ಚೆಗೆ ಇಳಿದಿದ್ದಕ್ಕಾಗಿ ಪ್ರಾರ್ಥನೆ ನಿಂತಿತು ಎಂದು ಕೆಲವರು ಖಂಡಿತ ಬೇಸರಗೊಳ್ಳುತ್ತಾರೆ. ಆದರೆ ಅಹಿಂಸೆಯ ಆರಾಧಕನಾದ ನಾನು, ಯಾರೂ ನೋವಿನಿಂದಿರುವುದನ್ನು ಸಹಿಸಲಾರೆ. ಬಹುಮತಕ್ಕಾಗಿ ಎಂಥ ಅಲ್ಪನನ್ನೂ ಬಲಿಕೊಡುವವನಲ್ಲ ನಾನು. ಹಾಗಂಥ ನೀವು ಬಹುಸಂಖ್ಯಾತರನ್ನು ಅಗೌರವಿಸಬೇಕೆಂದು ಅಲ್ಲ. ಅವರ ದೃಷ್ಟಿಕೋನದಿಂದ ಇಂದು ನಿಮ್ಮ ವರ್ತನೆ ಅಸಮ್ಮತವಾದುದು." ಎಂದು ಹೇಳಿದ ಗಾಂಧಿ – "Barbaric behaviour of the races in India who under British rule had been peaceful and friendly towards each other" ಎನ್ನುವ ಚರ್ಚಿಲನ ಟೀಕೆಯನ್ನು ನೆನಪಿಸಿಕೊಂಡು, ತನ್ನ ಅನುಯಾಯಿಗಳೊಂದಿಗೆ ಬಿರ್ಲಾ ಮಂದಿರದ ಒಳಗೆ ಹೋಗಿ. ಅದೇ ಖುರಾನ್‌ದ ಮಂತ್ರಗಳಿಂದ ಪ್ರಾರ್ಥನೆ ಪ್ರಾರಂಭಿಸಿದ.

ಅಹಿಂಸೆಯ ಆರಾಧಕ, ಸತ್ಯದ ಪ್ರತಿಪಾದಕ ಹಿಂಸೆಯ ಜವಾಬ್ದಾರಿಯನ್ನು ತನ್ನ ಮೇಲೆ ತೆಗೆದುಕೊಳ್ಳಬೇಕು. ಯಾವುದೇ ಕಾರಣಕ್ಕಾಗಿ ಕಿಂಚಿತ್ ಹಿಂಸೆಯನ್ನು ಯಾರಿಗೂ ಮಾಡತಕ್ಕದ್ದಲ್ಲ. ಹೀಗಾಗಿ ತನ್ನ ಅನುಯಾಯಿಗಳೊಂದಿಗೆ ಸೇರಿಕೊಂಡು ಆ ಇಬ್ಬರು ಖುರಾನ್ ವಿರೋಧಿಗಳ ಜವಾಬ್ದಾರಿಯನ್ನು ಗಾಂಧಿ ತನ್ನ ಮೇಲೆ ತೆಗೆದುಕೊಂಡ. ಇಷ್ಟರಲ್ಲಿ ಡಾ॥ ಸೈಯದ್ ಹಸನ್‌ರ ಪತ್ರ ಬಂತು. ಬದಲಾದ ರಾಜಕೀಯ ಸ್ಥಿತಿಯಲ್ಲಿ ಒಜಟಭಜಡಿ ಠಜಿ ಅಚಿಭುಟಿಜಣ ಆಗಿದ್ದುಕೊಂಡು ತನ್ನಿಂದೇನೂ ಮಾಡಲಾಗುತ್ತಿಲ್ಲವೆನ್ನುವುದು ಅವರ ಅಸಮಾಧಾನ. ಆದರೆ ಈ ಸಾಲುಗಳಿಗಾಗಿ ಗಾಂಧಿಯಲ್ಲಿ ಸಮಾಧಾನವಿಲ್ಲ. ಅವನು ಬರೆಯುವುದಿಷ್ಟೆ– "Appeal only to God Almighty for justice and go on doing your duty. Carry out whatever duty is assigned to you. Blessings from Bapu."

ಇಷ್ಟರಲ್ಲಿ ಯಾರೋ ಪತ್ರಿಕೆಗಳಲ್ಲಿ ಗಾಂಧಿಯ ಮಾತನ್ನು ತಪ್ಪಾಗಿ ವರದಿ ಮಾಡಿದ್ದಾರೆ. 'ಪಾಕಿಸ್ತಾನ ಮತ್ತು ಭಾರತದ ಗಡಿಗಳಲ್ಲಿ ನಡೆಯುತ್ತಿರುವ ಚಟುವಟಿಕೆಗಳು, ಭಾರತ ಮತ್ತು ಪಾಕಿಸ್ತಾನಗಳ ಮಧ್ಯ ಯುದ್ಧಘೋಷಣೆಗೆ ಕಾರಣವಾಗಿವೆ,' ಎಂದು ಗಾಂಧಿ ಹೇಳಿದ, ಎನ್ನುವ ಗಾಳಿ ಮಾತಾಯಿತು. ಯೂರೋಪಿನಲ್ಲಿ ಕಾತರ ಹೆಚ್ಚಾಯಿತು. ಗಾಬರಿಗೊಂಡ ಗಾಂಧಿ, ಸೋಮವಾರದ ಸಾಯಂಕಾಲದ ಪ್ರಾರ್ಥನೆಯಲ್ಲಿ. ಈ ಗೊಂದಲವನ್ನು ತೊಡೆದುಹಾಕುವ ಎಲ್ಲ ಪ್ರಯತ್ನವನ್ನು ಮಾಡಿದ – "ನನ್ನ ಮಾತುಗಳನ್ನು ತಪ್ಪಾಗಿ ಗ್ರಹಿಸಲಾಗಿದೆ. ನಾನು ಭಾರತ, ಪಾಕಿಸ್ತಾನಗಳಿಗೆ ಯುದ್ಧ ಸನ್ನದ್ಧಿಯನ್ನು ಬೋಧಿಸುತ್ತಿಲ್ಲ. ಭಾರತ ಮತ್ತು ಪಾಕಿಸ್ತಾನಗಳೆರಡಕ್ಕೂ ನಾನು ನನ್ನ ಪ್ರಾಮಾಣಿಕ ಸೇವೆ ಸಲ್ಲಿಸಿರುತ್ತೇನೆ. ಯಾವ ಕಾರಣಕ್ಕಾಗಿ ಈ ಎರಡು ರಾಷ್ಟ್ರಗಳ ಮಧ್ಯ ಯುದ್ಧವಾಗಬಹುದು ಎಂಬುದು ನನಗೆ ಚೆನ್ನಾಗಿ ಗೊತ್ತು, ನಾನು ಯುದ್ಧದ ಪ್ರತಿಪಾದಕನಲ್ಲ. ಆದರೆ ಇಷ್ಟನ್ನು ಹೇಳಬಲ್ಲೆ, ಕೊಲೆ, ಸುಲಿಗೆ, ಮತಿಗೆಟ್ಟ ಜನಗಳು ಹೀಗೇ ಮುಂದುವರಿಯುವುದಾದರೆ ಈ ಎರಡು ರಾಷ್ಟ್ರಗಳ ಸರ್ಕಾರಗಳ ಅಸ್ತಿತ್ವವೇನು. ತತ್ಪರಿಣಾಮ ಯುದ್ಧಕ್ಕೆ ನಾಂದಿಯಾಗಬಹುದು ಎಂದು ಹೇಳುವುದು ತಪ್ಪೇ? ಭಾರತವಷ್ಟೇ ಅಲ್ಲ, ಇಡೀ ಪ್ರಪಂಚಕ್ಕೇ ಗೊತ್ತು, ನಾನು ಯುದ್ಧದ ಆರಾಧಕನಲ್ಲವೆನ್ನುವುದು. ನನ್ನ ಎಲ್ಲಾ ಪ್ರಯತ್ನಗಳನ್ನು ಮೀರಿಯೂ ಯುದ್ಧ ಘಟಿಸುವುದೇ ಆದರೆ ಅದನ್ನು ನೋಡುತ್ತಾ ಬದುಕಿರಲು ನಾನಿರುವುದಿಲ್ಲ."



ಯಾರಿಗೆ ಬೇಕಿದೆ ಯುದ್ಧ ? ಸೋತವನೇ ಗೆದ್ದ

೩೦

ಯಾರಿಗೆ ಬೇಕಾಗಿದೆ ಯುದ್ಧ? ಈಗಷ್ಟೇ ಕರಾಚಿಯಲ್ಲಿ ಜಿನ್ನಾರನ್ನು ದೆಹಲಿಯಲ್ಲಿ ಗಾಂಧಿಯನ್ನು ಕಂಡು ಶಹೀದ್ ಸುಹರವರ್ದಿ ಕಲ್ಕತ್ತೆಗೆ ಬಂದಿದ್ದಾರೆ. ಕರಾಚಿಯಲ್ಲಿ ಭಾರತದ ಹೈ-ಕಮೀಷನರ್ ಆದ ಶ್ರೀ ಪ್ರಕಾಶ್ ಸಾಮರಸ್ಯಕ್ಕಾಗಿಯೇ ಬಡಿದಾಡುತ್ತಿದ್ದಾರೆ. ಸಾಮರಸ್ಯಕ್ಕಾಗಿ ಪ್ರಧಾನಿ ನೆಹರು ಹಗಲಿರುಳು ಶ್ರಮಿಸುತ್ತಿದ್ದಾರೆ. ಲಂಡನ್ನಿನ ರೆಡ್‌ಕ್ರಾಸ್ ಸಂಸ್ಥೆ ಭಾರತ ಮತ್ತು ಪಾಕಿಸ್ತಾನಗಳೆರೆಡೂ ದೇಶದ ನಿರಾಶ್ರಿತರಿಗಾಗಿ ಏನನ್ನಾದರು ನೀಡಲು ಹಗಲಿರುಳು ಹೋರಾಡುತ್ತಿದೆ. ಆದರೆ ಜನರು ಮಾತ್ರ ಇದ್ಯಾವುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ ಸ್ವ-ಘೋಷಿತ ಯುದ್ಧದಲ್ಲಿ ತೊಡಗಿಕೊಂಡಿದ್ದಾರೆ. ಆದರ್ಶ ಈಗ ಅವರಿಗೆ ಬೇಸರದ ಬಟ್ಟೆ. ನೆತ್ತರಿನಷ್ಟು ನಿರೀಕ್ಷಿತ ಸಾಂತ್ವಾನ ಈಗ ಅವರಿಗೆ ಯಾವುದು ನೀಡುತ್ತಿಲ್ಲ. ಈ ಗಾಂಧಿಯಂತು ಲೆಕ್ಕಕ್ಕಿಲ್ಲ.

ಸಾಮಾನ್ಯರೊಂದಿಗೆ ಸೈನಿಕರೂ ಸೇರಿಕೊಂಡಿದ್ದಾರೆ. ಈ ಮೂರ್ಖರಿಗೆ ಗಾಂಧಿ ಹೇಳಿದ್ದಿಷ್ಟೇ– "ಇದೇ ಭಾರತವನ್ನಾಳಬೇಕೆಂದಿರುವ ನಾವು ಪಾಕಿಸ್ತಾನವನ್ನು ನಾಶಗೊಳಿಸಬಹುದು. ಆದರೆ ನಿಜಕ್ಕೂ ಇದು ಸಾಧ್ಯವೇ? ಖಂಡಿತ ನಾವು ಪಾಕಿಸ್ತಾನವನ್ನು ನಾಶಮಾಡಲು ಬಯಸಿದರೆ ಅದರೊಂದಿಗೆ ಭಾರತವೂ ಮುರಿದ ದೋಣಿಯಂತೆ ಮುಳುಗಿ ಹೋಗುತ್ತದೆ. ನಾವು ಹೋರಾಡುತ್ತೇವೆ ಮತ್ತು ಗೆಲ್ಲುತ್ತೇವೆ ಎನ್ನುವ ಭ್ರಮೆಯಲ್ಲಿ ನೀವಿರುವಿರಾದರೆ ನೆನಪಿಟ್ಟುಕೊಳ್ಳಿ, ಯಾವುದೋ ಹೊರಗಿನ ಶಕ್ತಿ ನಿಮ್ಮ ಗೆಲುವಿಗೂ ಮುನ್ನ ನಿಮ್ಮನ್ನು ನುಂಗಿ ಹಾಕುತ್ತದೆ. ಎರಡೂ ರಾಷ್ಟ್ರಗಳನ್ನು ಅದು ನುಂಗಿ ಹಾಕುತ್ತದೆ. ನನ್ನ ಸ್ನೇಹಿತರು, ಪ್ರಜ್ಞಾವಂತರು, ನನ್ನೊಂದಿಗೆ ಇರುವವರು, ನನ್ನ ಕಾರ್ಯದಲ್ಲಿ ತೊಡಗಿರುವವರು ಇಷ್ಟನ್ನು ತಿಳಿದುಕೊಂಡರೂ ಸಾಕು. ನಾವೆಲ್ಲರು ಸುರಕ್ಷಿತವಾಗಿರಲು ಸಾಧ್ಯವಿದೆ."

ಗಾಂಧಿಯ ಈ ಮಾತುಗಳಿಗೆ ಕಾತರಿಸಿದ್ದ ಪಂಡಿತ್ ನೆಹರು, ರಾಜಕುಮಾರಿ ಅಮೃತಾ ಕೌರ್, ಸುಚೇತ ಕೃಪಲಾನಿ ಮತ್ತು ಪಟೇಲ್ ಗಾಂಧಿಯ ಬಳಿ ಓಡೋಡಿ ಬಂದರು. ಇಷ್ಟರಲ್ಲಿ ಗಾಂಧಿಯ ಅಭಿಮಾನಿಯೊಬ್ಬ ಗಾಂಧಿ ತನ್ನ ಆರೋಗ್ಯದ ಬಗ್ಗೆ ಗಮನಿಸುತ್ತಿಲ್ಲ ಎಂದು ಸಿಟ್ಟಿಗೆದ್ದು ಸಂದೇಶ ರವಾನಿಸಿದ್ದ. ಉದ್ಧಾರವಾಗದ ಈ ದೇಶಕ್ಕಾಗಿ, ಈ ಜನರಿಗಾಗಿ ಗಾಂಧಿ ತಲೆ ಚಚ್ಚಿಕೊಳ್ಳುವುದು ಮೂರ್ಖತನವೆಂದು ವಾದಿಸಿದ್ದ. ಗಾಂಧಿಯ ಅಹಿಂಸೆ, ಸತ್ಯವಂತಿಕೆ, ಪ್ರಾರ್ಥನೆ, ಸಾಮರಸ್ಯದ ಕನಸು, ಐಕ್ಯತೆ ಎಲ್ಲವು ಹುಚ್ಚುತನಗಳೇ ಎಂದು ಬರೆದಿದ್ದ. ಒಟ್ಟಾರೆ ಗಾಂಧಿ ಆತನ ದೃಷ್ಟಿಯಲ್ಲಿ ಒಬ್ಬ ಪ್ರೀತಿಯ ಹುಚ್ಚ. ಅಭಿಮಾನಿಯ ಈ ಪತ್ರಕ್ಕೆ ಗಾಂಧಿ ಮುಗುಳ್ನಕ್ಕ ಅಷ್ಟೆ. ಇದು ಸೆಪ್ಟಂಬರ್ 30 ರ ಆತನ ಸ್ಥಿತಿ, ಆತನ ಸುತ್ತಲಿನ ವ್ಯವಹಾರ, ಪ್ರೀತಿ ಮತ್ತು ಧಿಕ್ಕಾರದ ಸಂಧಿಕಾಲ. ನಾಳೆ ಬೆಳಗಾದರೆ ಅಕ್ಟೋಬರ್ 1. ಆತನ 78ನೇ ಹುಟ್ಟುಹಬ್ಬ. ಈಗ ಗಾಂಧಿಗೆ 78 ರ ಯೌವ್ವನ. ದೇಶಕ್ಕೆ ಕೆಲವು ತಿಂಗಳುಗಳ ಮುಪ್ಪಷ್ಟೇ.

ಎಪ್ಪತ್ತೆಂಟರ ಈ ವಯಸ್ಸಿನಲ್ಲಿ ಗಾಂಧಿಯನ್ನು ಮತ್ತೆ ಮತ್ತೆ ಕಾಡಿದ್ದು, ಶಾರೀರಿಕವಾಗಿ ಬಾಧಿಸಿದ್ದು ಕೆಮ್ಮು. ಆಗ ವೈದ್ಯರು ಸಾಮಾನ್ಯವಾಗಿ ನಂಬಿರುವಂತೆ ಪೆನ್‌ಸಿಲಿನ್ ಎಲ್ಲದಕ್ಕೂ ರಾಮಬಾಣ. ಡಾ.ಸುಶೀಲಾ ತಮ್ಮ ವಾದದ ಮೂಲಕ ಅದೇಷ್ಟೋ ಬಾರಿ ಗಾಂಧಿಗೆ ಇದನ್ನು ಮನವರಿಕೆ ಮಾಡಿಸಲು ಪ್ರಯತ್ನಿಸಿದರು. ಆದರೆ ಗಾಂಧಿ ಕೊಡುತ್ತಿದ್ದ ಉತ್ತರ ಒಂದೇ, "Rama nama is my penicillin!" ಅನೇಕ ಬಾರಿ ಆತನಿಗೆ ವೈದ್ಯರ ವಾದವೆ ಮೂರ್ಖ ಮತ್ತು ಉದ್ಧಟತನ ಎನಿಸಿತ್ತು. ವಿಜ್ಞಾನವನ್ನು ಕುರಿತು ಅವನ ವಾದವೇ ಬೇರೆ. "ವಿಜ್ಞಾನವೇ ಅರಿತುಕೊಳ್ಳಬೇಕಾದುದು, ಕಲಿಯಬೇಕಾದುದು ಬಹಳಷ್ಟಿದೆ. ಸಮಸ್ಯೆಯ ಯಾವುದೋ ತುದಿ ಅಷ್ಟನ್ನೇ ವಿಜ್ಞಾನ ಮುಟ್ಟಿದೆ. ಅನಾರೋಗ್ಯ ಎಂದರೆ ಏನು? ಅದು ನಿಸರ್ಗದ ನಿಯಮಗಳ ಉಲ್ಲಂಘನೆ ಎಂದರ್ಥವಷ್ಟೆ? ಇನ್ನೊಂದರ್ಥದಲ್ಲಿ ತಪ್ಪಿಗೆ ಸಿಗುವ ಶಿಕ್ಷೆ. ದೇವರ ವಿರುದ್ಧದ ಹೆಜ್ಜೆಗೆ ಸಿಗುವ ಪರಿಣಾಮ. ದೇವರು ಮತ್ತು ಆತನ ನಿಯಮಗಳು ಎಲ್ಲ ಕಾಲಕ್ಕೂ ಒಂದೇ. ಅದಕ್ಕಾಗಿ ರಾಮ ನಾಮಸ್ಮರಣೆಯನ್ನು

ಸಂಪೂರ್ಣವಾಗಿಸಿಕೊಂಡರೆ ಎಲ್ಲ ರೋಗಗಳು ಮರೆಯಾಗುತ್ತವೆ. "ಸುಶೀಲಾ, ನಿನಗೆ ಗೊತ್ತಿಲ್ಲ ನಾಮಸ್ಮರಣೆಯ ಮಹಿಮೆ ಜನರಿಗೂ ಗೊತ್ತಿಲ್ಲ. ನನ್ನ ಇಡೀ ಬದುಕನ್ನು ಈ ಮೂಲಕವೆ ನಿರ್ಧರಿಸಿಕೊಂಡವನು ನಾನು. ಅವನ ಸೇವೆಗಾಗಿಯೆ ಮತ್ತು ಅವನ ಕರುಣೆಯಿಂದಲೇ ನಾನು ಬದುಕಬೇಕಿದೆ. ನೀವು ಯಾವುದೋ ಔಷಧಿಯ ಅಥವಾ ಶರೀರದ ಸೂತ್ರಗಳನ್ನು ಹುಡುಕಲು ಹೊರಟಂತೆ ನಾನು ಈ 'ರಾಮ ನಾಮ' ಎಂಬ ಸೂತ್ರದ ಹಿಂದಿನ ವಿಜ್ಞಾನವನ್ನು ಕಂಡುಹಿಡಿಯಲು ಈ ಭವ ಸಾಗರದಲ್ಲಿ ಬಿದ್ದಿದ್ದೇನೆ. ಈ ಪವಿತ್ರ ಸ್ಮರಣೆಯ ಹಿಂದಿನ ವಿಜ್ಞಾನ ನನಗೆ ಗೊತ್ತಾಗಲೇ ಬೇಕು ಇಲ್ಲ ನಾನು ಸಾಯಬೇಕು.

ನನ್ನ ಉಪವಾಸಗಳ ಹಿಂದಿನ ಉದ್ದೇಶ ಇದುವೆ. ಯಾವ ವ್ಯಕ್ತಿ ತನ್ನೊಳಗೂ ಮತ್ತು ಹೊರಗೂ ಪರಿಶುದ್ಧನಾಗಿರುವನೋ ಅಂಥವನ ಉಪವಾಸ, ಪ್ರಾರ್ಥನೆ ಸಂಚಲನವನ್ನುಂಟು ಮಾಡಬಹುದು. ನಿರ್ವಿವಾದ ವ್ಯಕ್ತಿ ಮಾತ್ರ ನನ್ನ ಉಪವಾಸದ ಮಹತ್ವವನ್ನು ತನ್ನ ಸಾವಿನ ನಂತರ ಪ್ರಪಂಚಕ್ಕೆ ತಿಳಿಸಿ ಹೇಳಬಹುದು."

ಆದರೆ ಆ ನಿರ್ವಿವಾದಿತ ವ್ಯಕ್ತಿ ಈಗ ಎಲ್ಲಿ ಸಿಗಬೇಕು? ದೇಶ ಹೊತ್ತಿ ಉರಿಯುತ್ತಿದೆ. ಮನುಷ್ಯರೆಲ್ಲ ಮೃಗಗಳಾಗಿದ್ದಾರೆ. ಹಿಂದೂಗಳು ಮುಸ್ಲಿಂರ ಹೆಣಗಳ, ಮುಸ್ಲಿಂರು ಹಿಂದೂಗಳ ಹೆಣಗಳ ಲೆಕ್ಕ ಇಡುವಲ್ಲಿ, ಆ ಮೂಲಕ ಪರಸ್ಪರ ಬಲಾಬಲಗಳನ್ನು ಪ್ರದರ್ಶಿಸುವಲ್ಲಿ ನಿರತರಾಗಿದ್ದಾರೆ. ಈ ಗಾಂಧಿ, ಈತನ ಪ್ರಯೋಗಗಳು ತಿಳಿದುಕೊಳ್ಳಬೇಕೆನ್ನುವ ಯಾವನಾದರು ಆತನ ಪಕ್ಕ ಇದ್ದಾನೆಯೆ? ಎನ್ನುವುದು ಬಹು ದೊಡ್ಡ ಪ್ರಶ್ನೆ.

ಅವನ ನಿಕಟವರ್ತಿಗಳು ಈಗ ರಾಜಕಾರಣಿಗಳಾಗಿದ್ದಾರೆ. ಗಾಂಧಿ ಅವರ ಪಾಲಿಗೆ ಒಂದು ಬೋರಿಡುವ ಗಾಳಿ ರಾಜಕಾರಣ, ಆಧ್ಯಾತ್ಮ, ಸಾರ್ವಜನಿಕ ಭಾಷಣಗಳು, ಪ್ರಯೋಗ ಮತ್ತು ಪಾಪಿಗಳ ಪವಿತ್ರೀಕರಣದಲ್ಲಿ ತೊಡಗಿಕೊಂಡ ಈ ಗಾಂಧಿ ಎಂಬ ಮನುಷ್ಯನ ಸಂಸಾರ ಎಲ್ಲಿತ್ತು? ಎನ್ನುವ ನಮ್ಮ ಸಣ್ಣ ಕುತೂಹಲಕ್ಕೆ ಅಕ್ಟೋಬರ್ 1 ರಂದು ಮಾತನಾಡಿದ ಗಾಂಧಿಯ ಮಾತುಗಳಲ್ಲಿ ಚಿತ್ರಣ ಸಿಗುತ್ತದೆ. ಮೃಗಗಳಾಗಿ ಹೋಗಿದ್ದ ಹಿಂದೂ–ಮುಸ್ಲಿಂರಿಗೆ ಗಾಂಧಿ ಶಿಸ್ತಿನ ಪಾಠವನ್ನು ಹೀಗೆ ಹೇಳುತ್ತಾನೆ "ಜನರು ಶಿಸ್ತಿನ ಮಹತ್ವವನ್ನು ತಿಳಿದುಕೊಳ್ಳಬೇಕು ಮತ್ತು ಅದನ್ನು ಬಾಳಿನಲ್ಲಿ ಅನುಸರಿಸಬೇಕು. ಇಲ್ಲದೇ ಹೋದರೆ ನಾವು ಅರ್ಥಹೀನರಾಗುತ್ತೇವೆ. ಮೃಗತ್ವ ಬಾಳಿನ ಗುರಿಯಾಗಬಾರದು. ಧರ್ಮ ವಿಶ್ವಾಸಾರ್ಹನ ಎದೆಯಲ್ಲಿ ಸ್ಥಾಪನೆಯಾಗಿರುತ್ತದೆ. ಆತನ ಬಾಹ್ಯ ಸಂಕೇತಗಳಲ್ಲಿ ಅಲ್ಲ. ನನ್ನ ಮಕ್ಕಳಿಗೂ ನಾನು ಇದನ್ನೇ ಕಲಿಸಿದ್ದೇನೆ. ಅವರು ತಮ್ಮ ತಮ್ಮ ಧರ್ಮಗಳನ್ನು ತಮ್ಮೆದೆಯಲ್ಲಿಯೇ ರಕ್ಷಿಸಿಕೊಳ್ಳಬೇಕಿದೆ. ನನ್ನ ಮಗ ಮಣಿಲಾಲ್ ಈಗ ಸೌಥ ಆಫ್ರಿಕಾದಲ್ಲಿ ಇದ್ದಾನೆ. ಇನ್ನೊಬ್ಬ ಹರಿಲಾಲ್ ಕುಡಿದು ಇಲ್ಲೇ ಎಲ್ಲೋ ಸುತ್ತಾಡುತ್ತಿರಬಹುದು. ಆತ ಈಗ ಎಲ್ಲಿದ್ದಾನೆ? ಯಾವ ಸ್ಥಿತಿಯಲ್ಲಿದ್ದಾನೆ ಎನ್ನುವದೂ ನನಗೆ ಗೊತ್ತಿಲ್ಲ. ಇನ್ನೊಬ್ಬ ಮಗ ರಾಮದಾಸ್ ನಾಗಪುರದಲ್ಲಿದ್ದಾನೆ. ಆತ ಬಹಳಷ್ಟು ಕಷ್ಟ ಪಡುವವ. ಆ ಮೂಲಕವೇ ತನ್ನ ಹೊಟ್ಟೆ ಹೊರೆದುಕೊಳ್ಳುತ್ತಿದ್ದಾನೆ. ನನ್ನ ಕೊನೆಯ ಮಗ ದೇವದಾಸ್ ಇಲ್ಲಿಯೆ

ದೆಹಲಿಯಲ್ಲಿದ್ದಾನೆ. ಆತ ಬದುಕಿಗಾಗಿ ಕಷ್ಟ ಪಡುತ್ತಿದ್ದಾನೆಂದು ನಾನು ಅಂದುಕೊಳ್ಳಲಾರೆ. ಈಗ ನೀವೆ ಹೇಳಿ ನಾನು ಅವರ ಧರ್ಮಗಳ ಬಗೆಗೆ ಚಿಂತಿತನಾಗಿದ್ದೇನೆಯೆ? ಅವರೂ ಈಗ ಬೆಳೆದು ದೊಡ್ಡವರಾಗಿಲ್ಲವೆ? ಅವರೀಗ ಬೆಳೆದಿದ್ದಾರೆ. ಅವರು ಚಿಕ್ಕವರಾಗಿದ್ದರೆ, ಅವರ ಧರ್ಮವನ್ನು ರಕ್ಷಿಸುವ ಜವಾಬ್ದಾರಿ ನನ್ನದಾಗಿತ್ತು. ಅದೂ ಯಾವ ರೀತಿಯಲ್ಲಿ? ಅವರು ನಿಜವಾದ ಹಿಂದುಗಳಾಗಿದ್ದರೆ ಅವರ ಧರ್ಮಗಳಿಗಾಗಿ ಅವರನ್ನು ಸಾಯಲು ಬೋಧಿಸುತ್ತಿದ್ದೇನೆ ವಿನಹಃ ಇನ್ನ್ಯಾರನ್ನೋ ಕೊಲ್ಲುವದಕ್ಕಾಗಿ ಅಲ್ಲ. ಅನ್ಯ ಧರ್ಮಿಯರನ್ನು ಅವಹೇಳಿಸಲೂ ಅಲ್ಲ. ನಾನು ಈಗಾಗಲೇ ಹೇಳಿದ್ದೇನೆ ನಮ್ಮ ಹುಚ್ಚುತನಗಳಿಂದ ನಾವು ಹೊರಬರಬೇಕಿದೆ. ನಾನೇನನ್ನು ಹೇಳುತ್ತಿರುವೆನೋ ಅದನ್ನು ನೀವು ಒಪ್ಪಬಹುದು ಒಪ್ಪದಿರಬಹುದು. ಆದರೆ ಈ ಎಲ್ಲ ಕುಕೃತ್ಯಗಳಿಗೆ ಸಾಕ್ಷಿಯಾಗಿ ಉಳಿಯಲು ನಾನು ಬಯಸುವುದಿಲ್ಲ. ಧರ್ಮ ಮತ್ತು ಮನುಷ್ಯತ್ವದ ಭಯಾನಕ ದುರಂತವನ್ನು ನೋಡುವದು ನನ್ನ ಬದುಕಿನ ಗುರಿ ಅಲ್ಲ."



ದೀರ್ಘಾಯುಷ್ಯ ಎಂಬ ಶಾಪ

೩೧

ಇಂದು ಅಕ್ಟೋಬರ್ 2. 125 ವರ್ಷ ಬದುಕಿಯೇ ತೀರುತ್ತೇನೆ ಎನ್ನುವ ಹಠಮಾರಿ ಮುದುಕ ತನ್ನ 78 ವರ್ಷಗಳನ್ನು ಪೂರೈಸಿ 79ನೇ ವಯಸ್ಸಿಗೆ ಪಾದಾರ್ಪಣೆ ಮಾಡುತ್ತಿದ್ದಾನೆ. ಬರೀ ಬದುಕಿ ಬಿಡುವದು ಆತನ ಗುರಿಯಲ್ಲ. ಮುಂದೆ ಬರುವ 46 ಅಥವಾ 47 ವರ್ಷಗಳಿಗಾಗಿ ತನ್ನ ದೇಶ ಮತ್ತು ಜನರಿಗಾಗಿ ಆತ ಏನೆಲ್ಲ ಆಲೋಚನೆಗಳನ್ನಿಟ್ಟುಕೊಂಡಿದ್ದಾನೆ. ಈ 78 ವರ್ಷಗಳಲ್ಲಿ ಅದೆಷ್ಟೋ ಬಾರಿ ಸೋತಿದ್ದಾನೆ, ಸತ್ತಿದ್ದಾನೆ.

ಬುಧವಾರ, ಅಕ್ಟೋಬರ್ 1 ನಿನ್ನೆಯ ಸಾಯಂಕಾಲವಷ್ಟೆ ಜನರಿಗೆ ತಾನು ಯಾತಕ್ಕಾಗಿ ಬದುಕಿದ್ದೇನೆ ಎನ್ನುವದನ್ನು ಸ್ಪಷ್ಟಪಡಿಸಿದ್ದಾನೆ. ಅಕ್ಟೋಬರ್ 2, ಇಂದು ಆತನ ಪಾಲಿಗೆ ಅತ್ಯಂತ ಲೆಕ್ಕಾಚಾರದ ದಿನ. ಹಾಸಿಗೆಯಿಂದೆದ್ದವನೇ ನಿತ್ಯ ಕರ್ಮಗಳನ್ನು ಮುಗಿಸಿ ನೂಲುತ್ತ ಕುಳಿತುಕೊಂಡ. ಗೀತೆಯ ಮಂತ್ರೋಚ್ಚಾರ ಒಂದು ಕಡೆ ನಡೆದಿದೆ.

ಮನಸ್ಸು 78 ವರ್ಷಗಳ ಹಿಂದಿನ ತನ್ನೂರು ಪೋರಬಂದರ, ತನ್ನ ತಾಯಿ ಪುತಳಿಬಾಯಿ, ರಾಜಕೋಟದಲ್ಲಿಯ ತನ್ನ ಶೈಕ್ಷಣಿಕ ದಿನಗಳು, ತಾನು ನೋಡಿದ ನಾಟಕ 'ರಾಜಾ ಹರಿಶ್ಚಂದ್ರ'. ಕಸ್ತೂರ ಬಾಳೊಂದಿಗೆ ತನ್ನ ಮದುವೆ, ಅದೇ ವರ್ಷ ಸಸ್ಯಾಹಾರಕ್ಕಾಗಿ ತನ್ನ ದೃಢ ನಿರ್ಧಾರ, ಇಂಗ್ಲೆಂಡಿನ ಪ್ರವಾಸ, ಭಗವದ್ಗೀತದೊಂದಿಗೆ ತನ್ನ ಮೋಹ, ಇಂಗ್ಲೆಂಡಿನಲ್ಲಿ ಓದು, ಸೌಥ ಆಫ್ರಿಕಾದಲ್ಲಿಯ ಸೇವೆ, ಪೀಟರ್ ಮಾರ್ಟಿಜ್‌ಬರ್ಗದಲ್ಲಿ ಆದ ಟ್ರೈನಿನೊಳಗಿನ ಅಪಮಾನ, ಜಾನ್ ರಸ್ಕಿನ್‌ನ ಪುಸ್ತಕದ ಪ್ರಭಾವ, 1915ರಲ್ಲಿ ಭಾರತದ ಪ್ರವೇಶ, ತನ್ನ 50ನೇ ಹುಟ್ಟುಹಬ್ಬದ ದಿನ ಸಾಬರಮತಿಯಲ್ಲಿ ತಾನಿನ್ನೂ ಸತ್ತೇ ಬಿಡುತ್ತೇನೆ ಎನ್ನುವ ಆತನ ಸ್ಥಿತಿ, ಆಗ ಸೇರಿದ ಜನಗಳು, ಮಗ ದೇವದಾಸ ತೆಗೆದುಕೊಂಡ ಕಾಳಜಿ, ಏನೆಲ್ಲ ನೆನಪಾಗಿರಬಹುದು ಗಾಂಧಿಗೆ.

ಇಂದು 79ನೇ ಆತನ ಹುಟ್ಟುಹಬ್ಬಕ್ಕೆ ಯಾರೆಲ್ಲ ಬಂದಿದ್ದಾರೆ. ಲೇಡಿ ಅಡ್ವಿನ್, ಸರ್ದಾರ ಪಟೇಲ, ಪಂಡಿತ್ ನೆಹರು, ಮಿ.ಜಿ.ಡಿ. ಬಿರ್ಲಾ, ರಾಜಕುಮಾರಿ ಅಮೃತಾ ಕೌರ್, ಮಿ.ಕೆ.ಎಮ್.ಮುನ್‌ಸಿ, ಸರೋಜಿನಿ ನಾಯ್ಡು ಎಲ್ಲ ಅವನೊಂದಿಗೆ ಮುಂಜಾನೆಯ ಪ್ರಾರ್ಥನೆಯಲ್ಲಿದ್ದಾರೆ. ಸರೋಜಿನಿ ನಾಯ್ಡು ಅವರು ಸುದೀರ್ಘವಾದ ಭಾಷಣವನ್ನು ಮಾಡಿ ಗಾಂಧಿಯನ್ನು ನಾಯಕ, ಗೆಳೆಯ, ತಂದೆ ಎಂದು ಕೊಂಡಾಡಿದ್ದಾರೆ. ವೆಸ್ಟ್ ಬೆಂಗಾಲದ ಗವರ್ನರ್ ರಾಜಾಜಿ ಬರೆಯುತ್ತಾನೆ. "In these days of terrible depression, there is only one lamp burning and that is the Mahatma. He is the pillar of peace in India." ತರಗೆಲೆಗಳಂತೆ ಹೊಗಳಿಕೆಯ ಸುರಿಮಳೆಯಾಯಿತು ಗಾಂಧಿಯ ಮೇಲೆ. ಯಾರೊಬ್ಬರೂ ಆತನನ್ನು ಒಬ್ಬ ಸಾಮಾನ್ಯ ಮನುಷ್ಯನಂತೆ ನೋಡುತ್ತಿಲ್ಲ. ಗಾಂಧಿಗೆ ಅದು ಬೇಕಾಗಿದೆ. ತನ್ನಲ್ಲಿರುವ ಮನುಷ್ಯ, ಮನುಷ್ಯರಿಗಾಗಿ ಹಸಿಯುವುದನ್ನು ಜನ ತಿಳಿದುಕೊಂಡರೆ ಸಾಕಾಗಿದೆ. ತನ್ನ ಸುತ್ತಲಿನ ಈ ಯಾರ ಮಾತುಗಳೂ, ಹೊಗಳಿಕೆಗಳೂ ಬಹುತೇಕ ಆತನಿಗೆ ಬೇಕಾಗಿಲ್ಲ ಎನ್ನುವದನ್ನು ಈ ಸಾಯಂಕಾಲದ ಪ್ರಾರ್ಥನೆಯಲ್ಲಿ ಗಾಂಧಿ ಮಾತನಾಡಿದ ರೀತಿಯಲ್ಲಿ ನಾವು ತಿಳಿದುಕೊಳ್ಳಬಹುದೇನೋ. "ನಾನು 1915ರಲ್ಲಿ ಭಾರತಕ್ಕೆ ಬಂದೆ, ಅಂದಿನಿಂದ ಇಂದಿನವರೆಗೆ ಕೋಮು ಸೌಹಾರ್ದವನ್ನೇ ನನ್ನ ಜೀವನದ ಗುರಿಯಾಗಿಸಿಕೊಂಡೆ. ನಮ್ಮ ನಮ್ಮ ಧರ್ಮಗಳು ಭಿನ್ನವಾಗಿರಬಹುದು ಆದಾಗ್ಯೂ ಸಹೋದರರಂತೆ ನಾವು ಬಾಳಬೇಕಾದುದು ನಮ್ಮ ಧರ್ಮವಾಗಬೇಕಿತ್ತು. ಆದರೆ ನಾವು ವಿರುದ್ಧವಾಗಿದ್ದೇವೆ ಮತ್ತು ವೈರಿಗಳಾಗಿದ್ದೇವೆ. ಇಂತಹ ಸಂದರ್ಭದಲ್ಲಿ ಭಾರತದಲ್ಲಿ ನನ್ನ ಸ್ಥಾನ–ಮಾನವೇನು? ನಾನು ಯಾತಕ್ಕಾಗಿ ಬದುಕಿದ್ದೇನೆ?

ನಾನೀಗ ಆ 125 ವರ್ಷಗಳ ದೀರ್ಘ ಬದುಕಿನ ಆಲೋಚನೆಯನ್ನು ಬಿಟ್ಟಿದ್ದೇನೆ. 100 ವರ್ಷಗಳೂ ಬೇಡ 90 ವರ್ಷವೂ ನಾನು ಬದುಕಲು ಆಶಿಸುವುದಿಲ್ಲ. 79ನೇ ಈ ವರ್ಷಕ್ಕೂ ಕೂಡ ಅತ್ಯಂತ ನೋವು ಮತ್ತು ಖೇದದಿಂದ ನಾನು ಪಾದಾರ್ಪಣೆ ಮಾಡುತ್ತಿದ್ದೇನೆ. ನನ್ನನ್ನು ತಿಳಿದುಕೊಂಡ ಕೆಲವರಿಗಾದರೂ ನಾನು ಹೇಳುವದಿಷ್ಟೆ ಮೃಗತ್ವವನ್ನು ಬಿಟ್ಟು ಬಿಡಿ, ಮನುಷ್ಯರಾಗಿ, ನೀವು ನಿಜಕ್ಕೂ ನನ್ನ ಹುಟ್ಟುಹಬ್ಬವನ್ನು

ಆಚರಿಸುತ್ತಿದ್ದೀರಿ ಎನ್ನುವದಾದರೆ ಯಾವಬ್ಬನೂ ಈ ಹುಚ್ಚು ಕಾರ್ಯದಲ್ಲಿ ತೊಡಗಿಕೊಳ್ಳಬಾರದು. ಎಲ್ಲಿಯವರೆಗೆ ನಿಮ್ಮ ಹೃದಯದಲ್ಲಿ ಇದು ಹೊತ್ತಿ ಉರಿಯುತ್ತಿರುತ್ತದೆಯೊ ಅಲ್ಲಿಯವರೆಗೂ ಈ ಯಾವ ಹುಟ್ಟುಹಬ್ಬಗಳಿಗೂ ಅರ್ಥವಿಲ್ಲ. ಮೊದಲು ಅದನ್ನು ತೆಗೆದು ಹಾಕಿ. ಇಷ್ಟನ್ನು ನೆನಪಿಟ್ಟುಕೊಂಡರೆ ಸಾಕು ಒಳಿತಾಗುತ್ತದೆ. ಇದನ್ನೇ ನಾನು ನಿಮಗೆ ಹೇಳಲಿಚ್ಛಿಸುವದು. ಸದಾ ದೇವರು ನಮ್ಮೊಂದಿಗಿರಲಿ."

ಶುಕ್ರವಾರ, ಅಕ್ಟೋಬರ್ 3, 1947 ಪತ್ರಿಕೆಗಳ ಎಲ್ಲ ಮುಖ ಪುಟಗಳಲ್ಲೂ ಗಾಂಧಿ ಎಂಬ ಮಹಾತ್ಮನ ಆರಾಧನೆ, ಹಾಗಲ್ಲ, ಮಹಾತ್ಮ ಎಂಬ ಗಾಂಧಿಯ ಆರಾಧನೆ. ಸ್ವತಂತ್ರ ಭಾರತದಲ್ಲಿ ಇದು ಗಾಂಧಿಯ ಮೊದಲ ಹುಟ್ಟುಹಬ್ಬ. ಇದು ಜಗತ್ತಿಗೆ ಗೊತ್ತು. ಆದರೆ ಇದೇ ಆತನ ಕೊನೆಯ ಹುಟ್ಟುಹಬ್ಬ ಆಗಲಿದೆ ಎನ್ನುವದು ಯಾರಿಗೆ ಗೊತ್ತು? ಬಹತೇಕ ಜಗತ್ತಿನ ಯಾವ ಗೂಢಾಚಾರ ವ್ಯವಸ್ಥೆಗೂ ಹೀಗನ್ನಿಸಿರಲಿಕ್ಕಿಲ್ಲ ಅಲ್ಲವೆ? ಇಂದು ಅಪಾರ ಸಂಖ್ಯೆಯಲ್ಲಿ ಮಹಿಳೆಯರು ಬಂದರು. ದೇಶಕ್ಕಾಗಿ ತಮ್ಮ ಅಮೂಲ್ಯವಾದ ಆಭರಣಗಳನ್ನು ಕೊಡುಗೆಯಾಗಿ ಗಾಂಧಿಯ ಕೈಗಿಟ್ಟರು. ಮದ್ರಾಸ್ ಪ್ರಾಂತ್ಯದ ರಾಜಾಜಿ ತಮ್ಮ ರಾಜ್ಯವನ್ನು ಪಾನಮುಕ್ತ ರಾಜ್ಯ ಎಂದು ಘೋಷಿಸಿದರು. ಯಾಕೆಂದರೆ ಅದು ಗಾಂಧಿಯ ಕನಸುಗಳಲ್ಲಿ ಒಂದು. ಅವರಿಗೆ ಖಂಡಿತವಾಗಿ ಗೊತ್ತು ಹೀಗೆ ಮಾಡುವದರಿಂದ ಅಪಾರವಾದ ತೆರಿಗೆ ಸಂದಾಯವಾಗುವುದಿಲ್ಲ. ದಾರಿದ್ರ್ಯದ ಈ ದಿನಗಳಲ್ಲಿ ಈ ಹೆಜ್ಜೆ ಸ್ವಾಗತನೀಯವೂ ಅಲ್ಲ ಎಂದು. ಆದರೆ ಗಾಂಧಿಯ ಮಹತ್ವದ ಕನಸುಗಳಲ್ಲಿ ಇದು ಒಂದು. ಪ್ರಪಂಚದ ಇನ್ನಾವುದೇ ದೇಶದಲ್ಲಿ, ಈ ದೇಶದಲ್ಲಿ ಪಾನ ನಿಷೇಧವನ್ನು ಘೋಷಿಸಿದಷ್ಟು ಸರಳವಾಗಿ, ಆ ದೇಶಗಳಲ್ಲಿ ಸಾಧ್ಯವಿಲ್ಲ. "With us it is only a minority which drinks. Indian Society considers drinking disrespectable. And there are millions who have never known what drink is." ಇದು ರಾಜಾಜಿಯ ವಾದಸರಣಿಯ ಸಾಲು.

70 ವರ್ಷಗಳ ಹಿಂದಿನ ಭಾರತಕ್ಕೂ, ವರ್ತಮಾನ ಭಾರತಕ್ಕೂ ಬಹಳ ಬದಲಾಗಿದೆ. ಕುಡಿತ ಬಾಲಕರನ್ನು ಹೊರತುಪಡಿಸಿ ಈಗ ಬಹುತೇಕ ಎಲ್ಲ ವಯೋಮಾನದ ಭಾರತೀಯರೊಂದಿಗಿದೆ. ತೆರಿಗೆ ವಿಷಯದಲ್ಲಿ ಅಷ್ಟೆ, ಇದು ಹೆಚ್ಚು ಕಡಿಮೆ ಎಲ್ಲಾ ಸರ್ಕಾರಗಳ ಮುಖ್ಯ ಆದಾಯ. ಆದರೆ 70 ವರ್ಷಗಳ ಹಿಂದೆ ಜನಪ್ರತಿನಿಧಿಯೊಬ್ಬ ಈ ತೆರಿಗೆಯನ್ನು ನೋಡುವ ರೀತಿ ಭಿನ್ನವಾಗಿತ್ತು – "Let it be remembered that revenue from drink and drugs is extremely degrading taxation. Any tax to be healthy must be returned tenfold to the taxpayer by way of benefits and services he needs. Excise on drink only makes people to pay for their own corruption moral, mental and physical. It falls like a dead weight on precisely those who will be least able to bear it. Loss of revenue caused by implementing prohibition is only apparent surrendering this degrading tax by having prohibition in force will enable the drinker who is saved better. This will be a substantial gain to the nation too."

ಈ ಹುಟ್ಟು ಹಬ್ಬದ ದಿನ ಪಂಡಿತ್ ನೆಹರು ಭಾವಪೂರ್ಣ ಭಾಷಣವನ್ನು ಮಾಡಿ ಬ್ರಿಟಿಷರಿಂದ ಭಾರತದ ಮುಕ್ತಿಗೆ ಗಾಂಧಿಯೇ ಕಾರಣ. ಇಂಥ ಶಾಂತಿದೂತನ ಮಾತುಗಳನ್ನ ಮೀರಿ ಯಾರು ದೇಶದ ನೆಮ್ಮದಿಯನ್ನು ಹಾಳು ಮಾಡಲು ಯತ್ನಿಸುತ್ತಿರುವರೋ ಅವರೇ ಭಾರತದ ಶತ್ರುಗಳು ಎಂದು ಹೇಳಿದರು. ಸರ್ದಾರ್ ಪಟೇಲ್ ಹೇಳಿದ್ದು ಇಷ್ಟೇ – "ಯಾವುದನ್ನೂ ಅನುಸರಿಸುವುದಾಗದಿದ್ದರೆ ಗಾಂಧಿಜಿಯವರ ಹುಟ್ಟುಹಬ್ಬಕ್ಕಾಗಲಿ, ಪ್ರಧಾನಿಯ ಭಾಷಣಕ್ಕಾಗಲಿ ಯಾವ ಅರ್ಥವಿದೆ? ಕಳೆದ ಅನೇಕ ವಾರಗಳಿಂದ ದೇಶದ ಮರ್ಯಾದೆ ಮಣ್ಣುಮುಕ್ಕುವಂಥ ಚಟುವಟಿಕೆಗಳೇ ಮುಂದುವರಿದಿವೆ. ಪಶ್ಚಿಮ ಪಂಜಾಬದಲ್ಲಿ ಅನ್ಯಾಯಕ್ಕೊಳಗಾದವರ ಬಗ್ಗೆ ನಮಗೆ ಖೇದವಿದೆ. ಅವರಿಗಾಗಿ ನಮ್ಮಿಂದೇನು ಸಾಧ್ಯವಿದೆಯೋ ಅದನ್ನು ಮಾಡುತ್ತೇವೆ. ಆದರೆ ಸೇಡಿಗೆ ಸೇಡಿನಂಥ ಹೆಜ್ಜೆಯನ್ನು ನಮ್ಮಿಂದಿಡಲಾಗುವುದಿಲ್ಲ."

ಗಾಂಧಿಯ ಸುತ್ತ ಎಲ್ಲಾ ಯಥಾವತ್ತಾಗಿತ್ತು. ನಿಗದಿತ ಸಮಯಕ್ಕೇ ಎಲ್ಲರ ಮಾತುಗಳು ಮುಗಿದವು. ಆದರೆ ಹಿಂಸೆ ನಿರಂತರವಾಗಿತ್ತು. ಪಶ್ಚಿಮ ಪಂಜಾಬನಿಂದ ಬರುತ್ತಿದ್ದ ಹಿಂದು ಮತ್ತು ಸಿಖ್‌ರ ಸಮೂಹದ ಮೇಲೆ ಗುಂಡಿನ ಸುರಿಮಳೆಯಾಯಿತು. ನೂರಾರು ಮುಗ್ಧರು ಅಮಾಯಕ ಹೆಣಗಳಾದರು. ಮಹಿಳೆಯರ ಮೇಲಿನ ಅತ್ಯಾಚಾರಗಳಂತೂ ಸರ್ವೇ ಸಾಮಾನ್ಯವಾಗಿದ್ದವು. ಈ ರಕ್ತದ ಕಾಲುವೆಗಳನ್ನು, ಅಮಾನವೀಯ ಅಡೆತಡೆಗಳನ್ನು, ದಾಟಿ–ಕೊಂಡು ಗಾಂಧಿ ತನ್ನ 79ರ ವಯಸ್ಸಿಗೆ ಕಾಲಿಡಬೇಕಿತ್ತು. ಅಕ್ಟೋಬರ್ 3 ರ ಶುಕ್ರವಾರದ ಸಾಯಂಕಾಲ ನಿಸ್ಸಹಾಯಕನಾದ ಗಾಂಧಿ ಪ್ರಾರ್ಥನೆಯ ಕೊನೆಯಲ್ಲಿ ಹೀಗೆ ಗೊಣಗಿಕೊಂಡ – "ನಮ್ಮ ನಮ್ಮ ಕೆಲಸಗಳನ್ನು ನಾವು ಮಾಡಿಕೊಂಡರೆ ಸಾಕು. ಎಷ್ಟೊಂದು ತೊಂದರೆಗಳು ಇನ್ನಿಲ್ಲವಾಗುತ್ತವೆ. ಕೆಲಸದಲ್ಲಿ ತೊಡಗಿಕೊಂಡರೆ ನಮ್ಮ ಸಿಟ್ಟು ಶಮನಗೊಳ್ಳುತ್ತದೆ, ಸೇಡಿನ ಮನೋಭಾವ ಸತ್ತು ಹೋಗುತ್ತದೆ. ಕೆಟ್ಟದ್ದನ್ನು ಕೆಟ್ಟದ್ದು ಎಂದು ತಿಳಿದುಕೊಳ್ಳುವುದೇ ಒಳ್ಳೆಯತನ. ಅದನ್ನ ಯಾವುದೇ ಕಳಂಕವಿಲ್ಲದೆ ನೋಡುವುದೇ ಒಳ್ಳೆಯತನ. ಈ ಒಳಿತಿನಲ್ಲಿ ದೇಶದ ಒಳಿತು ಅಡಗಿದೆ. ನಾವು ಕಷ್ಟಗಳನ್ನು ಎದುರಿಸುತ್ತ ಅನ್ಯರಿಗೆ ಒಳಿತನ್ನು ಮಾಡೋಣ, ಸುಖವಾಗಿರುವುದನ್ನು ನೋಡೋಣ. ಪ್ರಪಂಚ ಭಾರತವನ್ನು ಗಮನಿಸುತ್ತಿದೆ. ದೇಶ ಸ್ವತಂತ್ರವಾಗಿದೆ. ಇನ್ನು ಮುಂದೆ ನಾವು ಮಾಡುವುದಾದರು ಏನು? ಇದೇ ನಮ್ಮ ನಿಜವಾದ ಪರೀಕ್ಷಾ ಕಾಲ."



ಪರದೇಶಿಯಾಗಿ ಪರದಾಡಿದ ಫಕೀರ

೩೨

ಶನಿವಾರ ಮುಂಜಾನೆ ಅಕ್ಟೋಬರ್ 4 ರಂದು ಹುಟ್ಟು ಹಬ್ಬದ ಹಾರೈಕೆಗಳೊಂದಿಗೆ ಗೆಳೆಯರಿಬ್ಬರ ಪತ್ರಗಳು ಗಾಂಧಿಗೆ ಬರುತ್ತವೆ. ಪೋರಬಂದರಿನಿಂದ ಗೆಳೆಯ ರಾಂಚೋದಾಸ್ ಪಟವಾರಿ ಗಾಂಧಿಗೆ ದೀರ್ಘಾಯುಷ್ಯವನ್ನು ಕೋರಿದ್ದಾನೆ. ವಕೀಲಿ ಓದಲು ಮೋಹನ್‌ದಾಸ್ ಗಾಂಧಿ ಇಂಗ್ಲೆಂಡ್‌ಗೆ ಹೊರಟು ನಿಂತಾಗ ಎಲ್ಲಾ ರೀತಿಯ ಸಹಕಾರ ಕೊಟ್ಟವನೇ ಇವನು. ಆದರೆ ಗಾಂಧಿ ಪತ್ರದಲ್ಲಿ ರಾಂಚೋದಾಸನ ಆಸೆಗೆ ವಿರುದ್ಧವಾಗಿ ಉತ್ತರಿಸುತ್ತಾನೆ – "ರಾಂಚೋ, ನೀನು ಬೇಕಿದ್ದರೆ ದೀರ್ಘವಾಗಿ ಬಾಳು. ನಾನು ಮಾತ್ರ ಆ ಆಸೆಯನ್ನೀಗ ತ್ಯಜಿಸಿದ್ದೇನೆ. ಹಿಂದೂಗಳಿಂದಲೇ ಹಿಂದೂಧರ್ಮ ಹಾಳು ಆಗುತ್ತಿರುವುದನ್ನು ನೋಡಿ ನನಗೆ

ಬೇಸರವಾಗುತ್ತಿದೆ. ಅವರು ಗೌರವಿಸುವ ಈ 'ಮಹಾತ್ಮ' ಅವರಿಂದಲೇ ಈಗ ಅಲ್ಪಾತ್ಮನಾಗಿದ್ದಾನೆ. ಒಬ್ಬ ನಿಷ್ಠಾವಂತ ವೈಷ್ಣವ ಪಂಥೀಯನಾಗಿ, ಗೋ ರಕ್ಷಣೆಗಾಗಿ ಏನಾದರೂ ಮಾಡು ಎಂದು ನೀನು ಬರೆದಿದ್ದೀಯಾ. ಆದರೆ ಏನು ಮಾಡುವುದು? ಇದಕ್ಕೆ ಸರ್ಕಾರ ನಿಷೇಧ ಹಾಕಬೇಕು ಎನ್ನುವ ನಿನ್ನ ವಾದವನ್ನು ನಾನು ಒಪ್ಪುವುದಿಲ್ಲ. ಹಿಂದೂಗಳೆ ಮುಂದಾಗಿ ಗೋ ಹತ್ಯೆಗೆ ತೊಡಗಿಕೊಂಡರೆ ಯಾವ ಸರ್ಕಾರ ತಾನೇ ಇದನ್ನು ನಿಲ್ಲಿಸಲು ಸಾಧ್ಯ?" ಹಾಗೆ ಗಾಂಧಿಯ ಇನ್ನೊಬ್ಬ ಬಾಲ್ಯ ಸ್ನೇಹಿತ ಹುಟ್ಟು ಹಬ್ಬದ ಶುಭಾಷಯಗಳನ್ನು ಕೋರುತ್ತ ಜಾರ್ಜ್ ಮ್ಯಾಥೆಸನ್‌ನ ಈ ಸಾಲುಗಳನ್ನು ಬರೆದು ಕಳುಹಿಸಿದ್ದಾನೆ–

"It is by my fetters that I can fly;
It is by my sorrows that I can soar;
It is by my reverses that I can run;
It is by my tears that I can travel;
It is by my cross that I can climb in to the heart of humanity;
Let me magnify my cross, O God!"

ಗಾಂಧಿ ಈ ಪತ್ರವನ್ನು ಅಭಾಳ ಕೈಗೆ ನೀಡಿ ಕಡತಗಳಿಗೆ ಸೇರಿಸಲಿಲ್ಲ. ಬದಲಾಗಿ ಒಂದು ಪುಟ್ಟ ಹಸ್ತಾಕ್ಷರವನ್ನು ಹಾಕಿ ತನ್ನ ಟೇಬಲ್ ಮೇಲೆ ಇಟ್ಟುಕೊಂಡ. ಕಳೆದ ಒಂದು ವಾರದಿಂದ ಅಭಾ ಮತ್ತು ಮನುರಿಗೆ ಗಾಂಧಿಗೆ ಬರುತ್ತಿದ್ದ ಸಂದೇಶಗಳನ್ನು ಕೂಡಿಸಿಡುವುದು, ಓದುವುದು. ಬೇರ್ಪಡಿಸುವುದೇ ದೊಡ್ಡ ಖುಷಿಯ ಕೆಲಸ. ನಾಯಕರೆಲ್ಲಾ ಲೋಕಾರೂಢಿಯ ಒಂದು ನಗೆಬೀರಿ ಹೋದ ಮೇಲೆ ಗಾಂಧಿ ಮಾತನಾಡುವುದು ಈ ಎರಡು ಜೀವಗಳೊಂದಿಗೆ. ಅವರೊಂದಿಗೆ ಹಂಚಿಕೊಂಡಾಗ ಆತನಿಗೆ ಏನೋ ಒಂದು ರೀತಿಯ ಖುಷಿ. ಗಾಂಧಿ ಈಗ ಸಾಮಾನ್ಯನಲ್ಲ, ಭಾರತದಾಚೆಯೂ ಆತ ಭಯಂಕರವಾಗಿ ಹಬ್ಬಿಕೊಂಡಿದ್ದಾನೆ. ಬ್ರಿಟಿಷ್ ಲೇಖಕ ಪ್ರೊ॥ ಹೆರಾಲ್ಡ್ ಲಾಸ್ಕಿ ಗಾಂಧಿಯನ್ನು ನಾಗರೀಕತೆಯ ಉತ್ಕೃಷ್ಟ ಮಾದರಿ ಎಂದು ಕೊಂಡಾಡಿದ್ದಾನೆ. ಇಂಗ್ಲೆಂಡಿನ ಇಂಡಿಯಾ ಲೀಗ್‌ನ ಮಿಸ್ಟರ್ ರೇಗಿನಾಲ್ಡ್ ಸೋರೆನ್‌ಸನ್ ಗಾಂಧಿಯನ್ನು ತನ್ನ ಜೀವಿತ ಕಾಲದ ಬೆಲೆಕಟ್ಟಲಾಗದ ಅದ್ಭುತ ಕೊಡುಗೆ ಎಂದಿದ್ದಾನೆ. ಚೈನಾ ದೇಶದ ರಾಜಧೂತ ಗಾಂಧಿಯನ್ನು ಶ್ರೇಷ್ಠ ನೈತಿಕ ಮತ್ತು ಆಧ್ಯಾತ್ಮಿಕ ನಾಯಕ ಎಂದು ಕೊಂಡಾಡಿದ್ದಾನೆ. ಅಂತೆಯೇ ಭಾರತದ ಡಾ॥ ರಾಧಾಕೃಷ್ಣನ್ ಮತ್ತು ಇತರರು.

ಹಾಗೇ ಬಂದ ಅನೇಕ ಸಂದೇಶಗಳಲ್ಲಿ ಕೆಲವು ಸಂದೇಶಗಳು ಈ ಗಾಂಧಿ ಮುಸ್ಲಿಂರ ಓಲೈಕೆಗೆ ತಲೆದೂಗಬಾರದು ಎನ್ನುವ ಎಚ್ಚರಿಕೆಗಳನ್ನು ರವಾನಿಸಿವೆ. ಮತ್ತೆ ಕೆಲವು ಇದು ನಿಮ್ಮ ಕೊನೆಯ ಹುಟ್ಟು ಹಬ್ಬ ಎಂದುಕೊಳ್ಳಿ ಎಂದು ತಿಳಿಸಿವೆ. ಯಾವುದಕ್ಕೆ ಉತ್ತರಿಸಬೇಕು? ಏನಂಥ ಉತ್ತರಿಸಬೇಕು? ಏನನ್ನ ಸ್ವೀಕರಿಸಬೇಕು? ಮತ್ತಿನ್ನೇನು ಧಿಕ್ಕರಿಸಬೇಕು? ಯಾವುದೂ ಗಾಂಧಿಗೆ ಹೊಳೆಯುತ್ತಿಲ್ಲ. ಆದರೆ ಒಬ್ಬ ಜವಾಬ್ದಾರಿ ವ್ಯಕ್ತಿಯಾಗಿ ಗಾಂಧಿ ಯಾವುದರಿಂದಲೂ ಓಡಲಾಗುವುದಿಲ್ಲವಲ್ಲ. ಹೀಗಾಗಿ ಅಕ್ಟೋಬರ್ 5 ರಂದು 'ಹರಿಜನ'ದಲ್ಲಿ ಗಾಂಧಿ ಬರೆಯುತ್ತಾನೆ – "ದೇವರ ಉದ್ದೇಶ ನನ್ನೊಬ್ಬನಿಂದಲೇ ಪೂರೈಕೆಯಾಗುತ್ತದೆ ಎನ್ನುವ

ಭ್ರಮೆಯಲ್ಲಿಲ್ಲ ನಾನು. ನನಗಿಂತಲೂ ಶುದ್ಧ, ಸಶಕ್ತ ದೂರದೃಷ್ಟಿಯವರು, ಇದನ್ನ ಪೂರೈಸಬಹುದಲ್ಲಾ? ಇದೆಲ್ಲಾ ನಮ್ಮ ಆಲೋಚನೆ. ಆದರೆ ದೇವರ ಲೆಕ್ಕ ಯಾರಿಗೆ ಗೊತ್ತು? ಅವನ ಕರುಣೆಯ ಸಾಗರದ ಸಣ್ಣ ತೊಟ್ಟುಗಳು ನಾವು. ನಾನು 125 ವರ್ಷ ಬದುಕ ಬೇಕಾ? ಅಥವಾ ಈಗಲೇ ಸಾಯಬೇಕಾ? ಎಂದು ನಿರ್ಧರಿಸಲು ನಾನು ಯಾರು? ನಾನು ಆತನ ದಾಸ. ನಾನು ಇದುವರೆಗೂ ಮಾತನಾಡಿದ್ದೆಲ್ಲವು ನನ್ನ ಅಸಹಾಯಕತೆಯನ್ನ ಸೂಚಿಸಬಲ್ಲದಷ್ಟೆ ನನ್ನನ್ನು ಕರೆದುಕೋ ಎಂದು ನಾನು ಕೂಗುತ್ತೇನೆ. ಆದರೆ ಗೆಲ್ಲುವುದು ಅವನ ಇಚ್ಛೆಯೇ."

ನನ್ನ ಆರೋಗ್ಯದ ಬಗ್ಗೆ ನಿಮಗೆ ಗೊತ್ತಿರಲಿ. ಪತ್ರಕರ್ತರು ಬರುತ್ತಾರೆ, ನಾನು ಜ್ವರ ಮತ್ತು ಕೆಮ್ಮಿನಿಂದ ಬಳಲುವುದನ್ನು ನೋಡುತ್ತಾರೆ ಮತ್ತು ಬರೆಯುತ್ತಾರೆ. ಆದರೆ ಈ ಗಾಂಧಿ ಸಾಯುವುದರಿಂದ ಏನಾಗುತ್ತದೆ? ಎಲ್ಲರೂ ಸಾಯುವಂತೆ ಈತನೂ ಸಾಯಬೇಕಲ್ಲ, ರೋಗಗಳು ಎಲ್ಲರಿಗೂ ಸಾಮಾನ್ಯವಲ್ಲವೇ? ನನ್ನ ಅನಾರೋಗ್ಯಕ್ಕೆ ಪ್ರಚಾರ ಕೊಡುವುದರಲ್ಲಿ ಏನು ಅರ್ಥವಿದೆ?

ನನಗೆ ಛಳಿಯಾದರೆ ಅಭಾ ಮತ್ತು ಮನು ಶಾಲುಗಳ ಮೂಟೆಯನ್ನೇ ಹೊತ್ತು ತರುತ್ತಾರೆ. ಆದರೆ ಈ ಛಳಿಯಲ್ಲಿ ಆ ನಿರಾಶ್ರಿತರ ಗತಿಯೇನು? ಉತ್ತರದ ಈ ಚಳಿಗಾಳಿ ಏನು ಸಾಮಾನ್ಯವೆ? ಅನ್ನವಿಲ್ಲದ, ಆಸರೆಯಿಲ್ಲದ, ಹೊದಿಕೆಯಿಲ್ಲದ, ಈ ಮನುಷ್ಯರಿಗೆ ಬದುಕು ಈಗ ನರಕ. ನನ್ನ ಮೇಲಿನ ಪ್ರೀತಿಗೆ, ಕಾಳಜಿಗೆ ಕೋಟಿ ಕೋಟಿ ನಮನಗಳು. ಆದರೆ ಬಂಧುಗಳೇ – "If you are convinced by what I have told you, give me all that you can"

ಗಾಂಧಿಯ ಸಮಕಾಲೀನ ಭಾರತದ ತತ್ವಜ್ಞಾನಿ ರಾಧಾಕೃಷ್ಣನ್‌ರಿಂದ ಕೆಲವು ವರ್ಷಗಳಷ್ಟೆ ಹಿಂದೆ ಬಂದು ಹೋಗಿದ್ದ ಫ್ರೆಂಚ್ ತತ್ವಜ್ಞಾನಿ ರೋಮನ್ ರೋಲಾಂಡ್‌ರವರೆಗೆ ಎಲ್ಲರೂ ಈ ಗಾಂಧಿ ಎಂಬ ಸಾಮಾನ್ಯ ಮನುಷ್ಯನ ಪ್ರಭಾವಕ್ಕೆ ಒಳಗಾದವರೆ. ರೋಲಾಂಡ್‌ರಂತೂ ಈತನಲ್ಲಿ ಏನೇನೋ ಕಂಡುಕೊಂಡರು. 'The man one who become one with the universal being" ಎಂಬ ಪುಸ್ತಕ ಬರೆದರು. ಆದರೆ ತನ್ನ ಜನ್ಮದಿನದ ಈ ಸಮಯವನ್ನು ವ್ಯಕ್ತಿ ಪೂಜೆಯ ಹುಚ್ಚು ಹೊಳೆಯಲ್ಲಿ ಆತ ಕಳೆದುಕೊಳ್ಳಲು ಸಿದ್ಧನಿರಲಿಲ್ಲ. ಪತ್ರಗಳು, ತಂತಿ ಸಂದೇಶಗಳ ಮೂಲಕ ಹಿಂದೂಗಳು ಈಗ ಗಾಂಧಿಯ ಬೆನ್ನಟ್ಟಿದ್ದಾರೆ. ಈತನ ಹಿಡಿ ಸಂದೇಶ ಮತ್ತು ಉಪವಾಸದಂತಹ ಒತ್ತಡಗಳೇ ಪಶ್ಚಿಮ ಪಂಜಾಬ್‌ದಲ್ಲಿ ಅಪಾರ ಸಂಖ್ಯೆಯಲ್ಲಿ ಹಿಂದೂಗಳ ಕೊಲೆಗಳಿಗೆ ಕಾರಣವಾಯಿತು ಎನ್ನುತ್ತಿದ್ದಾರೆ. ರಾಜಾರೋಷವಾಗಿ ಹಿಂದೂಗಳ ಹತ್ಯೆಯಲ್ಲಿ ತೊಡಗಿರುವ ಮುಸ್ಲಿಂರನ್ನು ಗಾಂಧಿ ನಿಯಂತ್ರಿಸಲಿಲ್ಲ ಎಂದು ಆಪಾದಿಸುತ್ತಿದ್ದಾರೆ. ದಿನಾಂಕ 5ರ ಸಾಯಂಕಾಲದ ತನ್ನ ಪ್ರಾರ್ಥನೆಯಲ್ಲಿ ಗಾಂಧಿ ಈ ಕುರಿತು ಉತ್ತರಿಸಲೇಬೇಕಾಯಿತು. ಆತ ಹೇಳಿದ, "ನನಗೊಂದು ಸಂದೇಶ ಬಂದಿದೆ. ಹಿಂದೂಗಳು ತಮ್ಮ ರಕ್ಷಣೆಗಾಗಿ ಹೋರಾಡದೇ ಹೋಗಿದ್ದರೆ ಮಿ.ಗಾಂಧಿ ನೀನೂ ಕೂಡ ಬದುಕಿರುತ್ತಿರಲಿಲ್ಲ ಎಂದಿದ್ದಾರೆ. ಈಗಲೂ ಮುಸ್ಲಿಂರನ್ನು ನಂಬುವ ನಾನು ಒಬ್ಬ ಮೂರ್ಖ, ಮುಂದೊಂದು ದಿನ ಮುಸ್ಲಿಂರಿಂದ ಮೋಸಕ್ಕೊಳಗಾಗುತ್ತೇನೆ ಎಂದು ತಿಳಿಸಿದ್ದಾರೆ. ಆದರೆ ತಿಳಿದುಕೊಳ್ಳಿ ನಾನು

ಈ ಸಂದೇಶವನ್ನು ಒಪ್ಪುವುದಿಲ್ಲ. ಭಾರತದ ನಾಲ್ಕುವರೆ ಕೋಟಿ ಮುಸ್ಲಿಂರು, ಅತ್ಯಂತ ಆತ್ಮವಿಶ್ವಾಸದಿಂದ ಹಳ್ಳಿಗಳಲ್ಲಿ ಬದುಕಿದ್ದಾರೆ. ಅವರಿಗೆ ಯಾವ ಗಾಂಧಿಯ ರಕ್ಷಣೆಯೂ ಬೇಕಾಗಿಲ್ಲ. ಅವರೆಲ್ಲರೂ ವಿಶ್ವಾಸ ಘಾತುಕರಲ್ಲ. ಇದೊಂದು ಹೇಡಿತನದ ನಂಬಿಕೆ ಅಷ್ಟೆ. ಇಂತಹ ಸಂದೇಶಗಳಿಂದ ಪ್ರೇರಿತನಾಗಿ ನಾನು ಮುಸ್ಲಿಂರ ಮನೆ ಹೊಕ್ಕು ಕೊಲೆ ಮಾಡಲು ಸಾಧ್ಯವಿದೆಯೆ? ಅವರೆಲ್ಲರೂ ಈ ದೇಶದ ವೈರಿಗಳೆಂದು ಹೊರಹಾಕಲಾದಿತೆ? ಎರಡೂ ಗುಂಪುಗಳು ಹೋರಾಟವನ್ನೇ ನಂಬುವದಾದರೆ ಎರಡೂ ನಾಶವಾಗುತ್ತವೆ ಮತ್ತು ನಾವು ಗಳಿಸಿದ ಸ್ವಾತಂತ್ರ್ಯ ತಬ್ಬಲಿಯಾಗುತ್ತದೆ." ಗಾಂಧಿಯ ಈ ಮಾತಿನ ಹಿಂದೆ ಯಾವ ಸ್ವಾರ್ಥವೂ ಗೋಚರಿಸುವುದಿಲ್ಲ.

ಈಗ ಅವನಿಗೆ ಅವಸರವಿದೆ. ನೌಖಾಲಿಯ ಅಮ್ತು ಸಲಾಮ್ ಎನ್ನುವ ಮುಸ್ಲಿಂ ಹುಡುಗಿ ಪಟಿಯಾಲಾದಿಂದ ಪಾಕಿಸ್ತಾನಕ್ಕೆ ಹೊರಟ ತನ್ನ ಬಂಧುಗಳ ಗತಿಯೇನಾಯಿತು ಎಂದು ಕೇಳಿ ಪತ್ರ ಬರೆದಿದ್ದಾಳೆ. ಆಕೆಗೆ ಇಂದೇ ಉತ್ತರಿಸಬೇಕಾಗಿದೆ. ಬಹುತೇಕ ಮುಸ್ಲಿಂರು ಪಟಿಯಾಲಾ ನಗರವನ್ನು ತೊರೆದು ಹೋಗಿದ್ದಾರೆ. ಉಳಿದವರು ಕೊಲೆಯಾಗಿದ್ದಾರೆ. ಒಂದು ಕುಟುಂಬವನ್ನು ಉಳಿಸಿದ ಮಾತ್ರಕ್ಕೆ ತಾನೇನೂ ಮಾಡಿದಂತಾಗಲಿಲ್ಲ ಎನ್ನುವದೇ ಗಾಂಧಿಯ ಖೇದ. ನೌಖಾಲಿಯ ಆ ಹುಡುಗಿಯೂ ಇರುವಲ್ಲಿಯೆ ನೆಮ್ಮದಿಯನ್ನು ಕಂಡುಕೊಳ್ಳಬೇಕು ಎಂದು ಗಾಂಧಿ ತಿಳಿಸಬೇಕಿದೆ.

ಈ ಮಧ್ಯದಲ್ಲಿ ಒಂದು ಗುಲ್ಲಾಯಿತು. ಗಾಂಧಿ ತನ್ನ ಆತ್ಮವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದಾನೆ. ಈಗ ಆತನಿಗೆ ಬದುಕುವ ಆಸೆ ಇಲ್ಲ. ಜೀವನದಲ್ಲಿ ವಿಶ್ವಾಸ ಕಳೆದುಕೊಳ್ಳುತ್ತಿದ್ದಾನೆ. ಆತನ ಸ್ವರಾಜ್ಯದ ಕಲ್ಪನೆ ಆತನಿಗೇ ಮುಳುವಾಗಿದೆ ಎಂದೆಲ್ಲ ಮಾತನಾಡಿಕೊಳ್ಳುತ್ತಿದ್ದಾರೆ. ಆದರೆ ಇದು ಒಂದು ವೇಳೆ ಸತ್ಯವಾದರೂ ಕೂಡ ಖಂಡಿತವಾಗಿಯು ಗಾಂಧಿಯ ಆತ್ಮ ವಿಶ್ವಾಸವನ್ನು ಪುನಃ ಕಟ್ಟಿಕೊಟ್ಟವರು ಭಾರತೀಯರಂತೂ ಅಲ್ಲ. ಗಾಂಧಿಯ ಕೋಟ್ಯಾಂತರ ಅನುಯಾಯಿಗಳಲ್ಲಿ ಒಬ್ಬಳಾಗಿದ್ದ ಮಹಿಳೆಯೊಬ್ಬಳು ಈಗ ಗಾಂಧಿಗೆ ಪತ್ರ ಬರೆಯುತ್ತಾಳೆ. "ಬಾಪು, ಜೀಸಸ್‌ನ ಆತ್ಮದ ಕನವರಿಕೆಗಳನ್ನು ನಾನು ನಿಮ್ಮಲ್ಲಿ ಈಗ ಕಾಣುತ್ತಿದ್ದೇನೆ. ಸಂಕಷ್ಟದ ಯಾವ ಸ್ಥಿತಿಯಲ್ಲಿ ನೀವು ಇದ್ದೀರಿ ಎಂದು ನಾನು ಚನ್ನಾಗಿ ಬಲ್ಲೆ. ಆದರೆ ಬರುವದಿನ್ನೂ ತುಂಬಾ ಇದೆ. ನೀವು ನಮ್ಮೊಂದಿಗಿರಬೇಕು, ನಮ್ಮ ಕಷ್ಟಗಳ ನಿವಾರಕರಾಗಿರಬೇಕು ಎಂದು ಹೇಳುವ ಮೂಲಕ ನಾನು ಅತ್ಯಂತ ಸ್ವಾರ್ಥಿಯಾಗುತ್ತಿದ್ದೇನೆ ಎಂದು ನನಗೂ ಕೂಡ ಅನಿಸುತ್ತಿದೆ. ಆದರೆ ವೈರವನ್ನು ಪ್ರೀತಿಯಾಗಿ, ಹಿಂಸೆಯನ್ನು ಅಹಿಂಸೆಯಾಗಿ ಪರಿವರ್ತಿಸುತ್ತ ಬದುಕಿನ ಅತ್ಯಂತ ದೀರ್ಘಧಾರೆಯನ್ನು ನೀವು ಈಗಾಗಲೇ ಕ್ರಮಿಸಿಬಿಟ್ಟಿದ್ದೀರಿ. ನಿಮ್ಮ ಈ ಕ್ರಮವೇ ಮುಂದೊಂದು ದಿನ ಭಾರತ ಸಂಕಷ್ಟಕ್ಕೆ ಸಿಲುಕಿದಾಗ ಹೇಗೆ ಮೇಲೇಳಬೇಕು ಎನ್ನುವದನ್ನು ಅರಿಯುವಲ್ಲಿ ಮಾರ್ಗದರ್ಶನ ಮಾಡಬಹುದು." ಈಕೆ ಹೀಗೆ ಬರೆಯುವುದಕ್ಕೆ ಬಲವಾದ ಕಾರಣವಿದೆ. 1941ರ ಯುದ್ಧ ಸಂದರ್ಭದಲ್ಲಿ ಇಂಗ್ಲೆಂಡ್ ದೇಶ ಆತ್ಮಸ್ಥೈರ್ಯವನ್ನು ಕಳೆದುಕೊಂಡಾಗ ಅದಕ್ಕೆ ಸ್ಫೂರ್ತಿಯನ್ನು ತುಂಬಿದವನೇ ಗಾಂಧಿ.



ಕೋಗಿಲೆ ಹಾಡಿದೆ ಕೇಳಿದೆಯಾ?

೩೩

ಸ್ವಲ್ಪ ತಡವಾಗಿ ಆದರೂ ಭಾರತದ ಕೋಗಿಲೆ ಸರೋಜಿನಿ ನಾಯ್ಡು ಗಾಂಧಿಗೆ ಅಕ್ಟೋಬರ 7 ರಂದು ಹುಟ್ಟುಹಬ್ಬದ ಶುಭಾಷಯಗಳನ್ನು ತಿಳಿಸುತ್ತಾರೆ. ಇದೇ ಅಕ್ಟೋಬರ ತಿಂಗಳಿನಲ್ಲಿ ಭಾರತದ ಮೊದಲ ಲೇಡಿ ಗೌವರ್ನರ ಆಗಿ ಸರೋಜಿನಿ ನಾಯ್ಡು ಅವರ ಸೇವಾವಧಿ ಮುಕ್ತಾಯವಾಗುತ್ತದೆ. ಯಾರು, ಏನನ್ನು ಗಾಂಧಿಯೊಂದಿಗೆ ಮಾತನಾಡಲು ಹೆದರುವರೋ ಅದನ್ನು ಸರೋಜಿನಿ ನಿರ್ಭಿಡೆಯಾಗಿ ಚರ್ಚಿಸಬಲ್ಲಳು. ಅಂತಹದೊಂದು ಸಹಜ ಸಲುಗೆಯನ್ನು ಗಾಂಧಿ ಸರೋಜಿನಿಯೊಂದಿಗೆ ಇಟ್ಟುಕೊಂಡಿದ್ದಾನೆ. ಆತ ಆಕೆಗೆ ಪತ್ರ ಬರೆದಾಗ ಪತ್ರ ಮುಗಿಯುವದು `Yours Spinner' ಎನ್ನುವ ತೆಳು ಹಾಸ್ಯದ ನುಡಿಯಿಂದ.

ಮನು ಈಗ ಮೂಳೆ ಮುರಿದುಕೊಂಡಿದ್ದಾಳೆ. ವೈದ್ಯರು ಶಸ್ತ್ರ ಚಿಕಿತ್ಸೆಯನ್ನು ಸೂಚಿಸಿದ್ದಾರೆ. ಆದರೆ ಗಾಂಧಿ ಹೇಳುವದು ರಾಮನ ನಾಮಸ್ಮರಣೆ. ಅಷ್ಟೆ

ಸಾಕು, ಅದು ಮುರಿದ ಮೂಳೆಯನ್ನೂ ಸರಿಪಡಿಸುತ್ತದೆ. ಯಾರೋ ಪ್ರಶ್ನಿಸಿದರು, ರಾಮಸ್ಮರಣೆ ಎಂದಾದರೂ ಮೂಳೆ ಮುರಿತವನ್ನು ಸರಿಪಡಿಸಬಹುದೇ? ಆದರೆ ಗಾಂಧಿ ಹೇಳುವುದೇ ಹಾಗೆ, ಅವನ ಪ್ರಕಾರ ದೇವರಲ್ಲಿಯ ಅಚಲ ವಿಶ್ವಾಸ ಏನನ್ನೂ ಸರಿಪಡಿಸಬಹುದು. ಕಬೀರ ಹೇಳುವಂತೆ, ಕುರುಡನಿಗೆ ಕಣ್ಣು ಬರುವುದಾದರೆ, ಮೂಕ ಮಾತಾಡಬಲ್ಲವನಾದರೆ, ಹೇಳವ ಶಿಖರವನ್ನೇರಬಲ್ಲವನಾದರೆ ಇದ್ಯಾವ ದೊಡ್ಡ ಲೆಕ್ಕ.

ಅಕ್ಟೋಬರ್ 2 ರ ಸಾಯಂಕಾಲದ ಪ್ರಾರ್ಥನೆ ಬಹಳ ಪ್ರಮುಖವಾದುದು. ಕೆಲವು ಮುಸ್ಲಿಂ ನಾಯಕರು ಕಾಂಗ್ರೆಸ್ ನಾಯಕರ ವಿರುದ್ಧ, ಕಾಂಗ್ರೆಸ್ ನಾಯಕರು ಮುಸ್ಲಿಂ ನಾಯಕರ ವಿರುದ್ಧ ಹರಿಹಾಯ್ದಿದ್ದಾರೆ. ಕಾಂಗ್ರೆಸಿನ ಕೈಯಲ್ಲಿ ಮುಸ್ಲಿಂರ ಬದುಕು ಸುರಕ್ಷಿತವಾಗಿಲ್ಲ, ಎಂದು ಮುಸ್ಲಿಂರು ಆಪಾದನೆ ಮಾಡುತ್ತಲೇ, ಗಾಂಧಿ ಹೇಳೂದಿಷ್ಟೇ "If the congress is making a mistake now, it is the enemy of the country and should be removed from the sceen."

ಗಾಂಧಿ, ಗಾಂಧಿಯ ಮಾತು, ಆಲೋಚನೆಗಳು, ಅನುಯಾಯಿಗಳು, ಅತೃಪ್ತರು, ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ, ಆಂತರಿಕ ಗಲಭೆ ಎಷ್ಟೊಂದು ಗೊಂದಲದ ಸಂದರ್ಭವಿದು ಎನಿಸುತ್ತದೆ. ಯಾವುದೇ ಒಂದು ಅಗೋಚರ, ಸಾಮಾನ್ಯರ ಅನುಭೂತಿಗೆ ನಿಲುಕದ ಬಿಸಿಲುಗುದುರೆ ಹತ್ತಿ ಹೊರಟ ಈ ಗಾಂಧಿ ಒಬ್ಬ ಹುಚ್ಚನೆ ಸೈ ಅನ್ನಬೇಕು ಎನ್ನುವುದರಲ್ಲಿ ಇತಿಹಾಸದ ಕೆಲವು ದಾಖಲಾತಿಗಳು ಗಕ್ಕನೆ ನಮ್ಮನ್ನು ತಡೆದು ನಿಲ್ಲಿಸುತ್ತವೆ. ಬ್ರಿಟನ್ನಿನ ಲೇಬರ್ ಪಾರ್ಟಿಯ ಸರ್ ಸ್ಟ್ಯಾಫೋರ್ಡ್ ಕ್ರಿಪ್ಸ್‌ನ ಅಕ್ಟೋಬರ್ 8 ರ ಈ ಪತ್ರ ಅಂತಹ ದಾಖಲಾತಿಗಳಲ್ಲಿ ಒಂದು ಎನಿಸುತ್ತದೆ. ಈ ಪತ್ರವನ್ನು ಓದಿ, "I have purposely refrained from writing to you in the most anxious and perilous times through which you and your country - or rather, your two countries!- have been passing. All your friends here in England, and they are many, admire greatly the determined way in which you have set out to conquer evil by good. Your work has been a great inspiration to all of us who have the good of India at heart. We have been rendered so sad at all that has happened, and we are only too conscious of the part that past history has played in creating the present discontent. I pray that you may be given the strength to persevere and that, by your example, the evil spirit of communal faction will die down, so that India and Pakistan may resume their progress towards what I shall hope may one day will be the goal of unity."

ಇದು ಒಂದೆಡೆಯಾದರೆ ಮತ್ತೊಂದೆಡೆ ಗಾಂಧಿ ನೋಡುತ್ತಿರುವ ಭಾರತವೇ ಭಿನ್ನ. ಸೆಪ್ಟಂಬರ್ 6 ರ ರಾತ್ರಿಯಂದು ನಡೆದ ಘಟನೆಯೊಂದನ್ನು ಅನುಯಾಯಿ ಒಬ್ಬ ಬಂದು ಗಾಂಧಿಗೆ ತಿಳಿಸಿದ. ಡೆಹರಾಡೂನಿನಿಂದ ಮುಸ್ಲಿಂನೊಬ್ಬ ದೆಹಲಿಗೆ ಹೊರಟಿದ್ದನಂತೆ. ಅದೇ ಭೋಗಿಯಲ್ಲಿ ಕೆಲವು ಹಿಂದು ಯುವಕರು ಆಯುಧಗಳನ್ನು ಸಾಗಿಸುತ್ತಿದ್ದರಂತೆ. ಮಾತು

ಮಾತಿಗೆ ಬೆಳೆದು ಜಗಳವಾಗಿ, ಆ ಯುವಕರು ಮುಸ್ಲಿಂನನ್ನು ಭಯಾನಕವಾಗಿ ಕೊಂದು ಹೊಳೆಗೆ ಎಸೆದು ಬಿಟ್ಟರಂತೆ. ಈ ಘಟನೆಯನ್ನು ಕೇಳುತ್ತಲೇ ಗಾಂಧಿ ಕೇಳಿದ ಪ್ರಶ್ನೆ ಒಂದೇ, "ವ್ಯಕ್ತಿಯೊಬ್ಬ ಮುಸ್ಲಿಂನಾದ ಮಾತ್ರಕ್ಕೆ ಕೊಲೆ ಆಗಬೇಕೆ? ಇದೆಲ್ಲವುಗಳಿಗೆ ಮುಕ್ತಾಯ ಎಂದು? ಇಂದು ನಮ್ಮ ಮುಸ್ಲಿಂ ಬಂಧುಗಳು ರೈಲುಗಳಲ್ಲಿ ಸುರಕ್ಷಿತರಾಗಿಲ್ಲ. ಯಾರು ಯಾರನ್ನೂ ಕೊಂದು ನದಿಗೆಸೆಯಬಹುದಾಗಿದೆ. ಇದೇ ಸ್ಥಿತಿ ಪಾಕಿಸ್ತಾನದಲ್ಲಿಯೂ ಹಿಂದೂಗಳ ಪಾಲಿಗೆ ಮುಂದುವರೆದಿದೆ. ನಮ್ಮ ಧರ್ಮಗಳೆಂದರೇನು? ಅವು ನಮಗೆ ಕಲಿಸುವದೇನು? ನಮ್ಮ ಗುರಿ ಯಾವುದು? ಎಂಬುದನ್ನು ಅರಿತುಕೊಳ್ಳದಿರುವುದೇ ಈ ಎಲ್ಲ ಸಮಸ್ಯೆಗಳಿಗೆ ಕಾರಣ. ಪರಸ್ಪರ ಭಯ ನಮ್ಮನ್ನು ಮುತ್ತಿಕೊಂಡಿದೆ. ಮೃಗತ್ವವನ್ನು ತಡೆಯುವ ಬಗ್ಗೆ ನಾವು ಆಲೋಚಿಸುತ್ತಲೇ ಇಲ್ಲ. ಇದನ್ನು ತಡೆಯುವ ಯಾವುದೇ ವ್ಯಕ್ತಿಯನ್ನೂ ನಾನು ಗೌರವಿಸುತ್ತೇನೆ. ಅಹಿಂಸೆಯ ಅರ್ಥ ನಡೆಯುತ್ತಿರುವದೆಲ್ಲವನ್ನೂ ನೋಡುತ್ತ ನಿಲ್ಲುವದಲ್ಲ. ನಾನು ಬದುಕಿರುವವರೆಗೂ ಹೇಳುತ್ತೇನೆ, ನಾವು ಶುದ್ಧರಾಗಿರಬೇಕು, ಒಳ್ಳೆಯವರಾಗಿರಬೇಕು. ಇಲ್ಲದೇ ಹೋದಲ್ಲಿ ನಮ್ಮ ಸರಕಾರಗಳು ನಾಶವಾಗುತ್ತವೆ. ಪಾಕಿಸ್ತಾನದಲ್ಲಿ ಏನಾಗುತ್ತದೆ ಎಂದು ನಮ್ಮ ಪ್ರಶ್ನೆ ಅಲ್ಲ. ಅವರು ಹುಚ್ಚರಾಗಿದ್ದಕ್ಕಾಗಿ ನಾವು ಹುಚ್ಚರಾಗಬೇಕಿಲ್ಲ." ಈ ಗಾಂಧಿ ತಮಗೆ ತಿಳಿಯುತ್ತಿಲ್ಲ ಎಂಬುದು ಒಂದು ಸತ್ಯವಾದರೆ ಈ ಜನರೇಕೆ ಹೀಗಾದರು? ಎಂಬುದೂ ಗಾಂಧಿಗೆ ಹೊಳೆಯದ ವಿಚಾರ.

ವರುಷಗಳ ಹಿಂದೆ 1930ರಲ್ಲಿ ತಾನು ಇದೇ ನೆಲದಲ್ಲಿ ದಂಡಿಯಾತ್ರೆಯನ್ನು ಕೈಗೊಂಡಾಗ ಎಷ್ಟೊಂದು ಪ್ರೀತಿ, ಸೌಹಾರ್ದ ಮತ್ತು ಒಕ್ಕಟ್ಟು ಈ ಜನರಲ್ಲಿ! ಈಗ? ಈಗೇನಾಯಿತು? ಯಾವುದಕ್ಕೂ ಸ್ಪಷ್ಟ ಉತ್ತರಗಳಿಲ್ಲ. ಕಸಾಯಿಗಳ ಕೈಯಲ್ಲಿಯೇ ತನ್ನ ಕರುಣೆಯ ಕೂಸನ್ನು ಗಾಂಧಿ ಕಾಯ್ದುಕೊಳ್ಳಬೇಕಿದೆ. ಜಗತ್ತು ಏನೇ ಮಾತನಾಡಿದರೂ ಕೂಡಾ ಬಂಗಾಲದ ಆ ಯುವಕ ಶಹೀದ ಸುಹರವರ್ಧಿಯನ್ನೇ ಗಾಂಧಿ ಮತ್ತೆ ಮತ್ತೆ ನಂಬಬೇಕಿದೆ. ಆತ ಖಂಡಿತವಾಗಿಯೂ ಶಬ್ದಶಃ ಮುಸ್ಲಿಂಲೀಗ್‌ನ ಪ್ರತಿಪಾದಕನೆ. ಆದಾಗ್ಯೂ ಲೀಗ್‌ನ ಆಶಯಗಳನ್ನು ಒಂದು ಹಂತಕ್ಕೆ ಪ್ರಭಾವಿಸುವ ಒಂದು ವಿಫಲಯತ್ನ ಗಾಂಧಿ ಮಾಡುತ್ತಿದ್ದ ಎನ್ನಬೇಕೆ?

ಇಷ್ಟರಲ್ಲಿ ಅಂದರೆ ಅಕ್ಟೋಬರ 9 ರಂದು ಶಹೀದ ಸುಹರ್‌ವರ್ಧಿ ಪಾಕಿಸ್ತಾನದಿಂದ ಮರಳಿದ. ದೇಶ ವಿಭಜನೆಯ ಕರಾಳ ಮತ್ತು ಭಯಾನಕ ಹೊಡೆತಕ್ಕೆ, ಒತ್ತಡಕ್ಕೆ ಸಿಕ್ಕು ದೇಶಗಳನ್ನು ತೊರೆದು ಹೊರಟಿರುವ ನಾಗರಿಕರಾರಿಗೂ ಮಾರ್ಗ ಮಧ್ಯ ಮಾನ-ಪ್ರಾಣಗಳ ಹಾನಿಯಾಗಬಾರದು ಎಂಬ ಸಂದೇಶವನ್ನು ಭಾರತದಿಂದ ಹೊತ್ತು ಪಾಕಿಸ್ತಾನಕ್ಕೆ ಹೋಗಿದ್ದ ಆತ ಇಂದಷ್ಟೇ ಅಲ್ಲಿಂದ ಮರಳಿದ್ದ. ಆತ ಬಿರ್ಲಾ ಮಂದಿರಕ್ಕೆ ಗಾಂಧಿಯನ್ನು ಭೆಟ್ಟಿಯಾಗಲು ಬರುತ್ತಲೇ ಜನರು, ವರದಿಗಾರರು ಆತನನ್ನು ಮುತ್ತಿಕೊಂಡರು. ಶಹೀದ ಹೇಳಿದರು. "ನಾನು ಕೆಲವು ಕಟುಸತ್ಯಗಳನ್ನು ಹೇಳಲೇಬೇಕು. ಜಿನ್ನಾ ಸಾಹೇಬರು ನನ್ನನ್ನು ಈಗ ನಂಬುತ್ತಿಲ್ಲ ಬಾಪು. ನಾನು ಬಹಳಷ್ಟು ನಿಮ್ಮಿಂದ ಪ್ರಭಾವಿತನಾಗಿದ್ದೇನೆ ಎನ್ನುತ್ತಿದ್ದಾರೆ. ನೆಹರು ಅವರನ್ನು ಕುರಿತು ಅತ್ಯಂತ ಗೌರವದಿಂದ ಮಾತನಾಡುತ್ತಾರೆ."

ಗಾಂಧಿಗೆ ಇದೊಂದು ಜೋಕ್ ಅಷ್ಟೆ. ಆತ ನಕ್ಕು ಹೇಳಿದ. "ಶಹೀದ ಸಾಹೇಬ ನಾನು ಯಾರ ಕೆಡಕನ್ನೂ ಆಶಿಸುವವನಲ್ಲ. ನಿಮ್ಮ ಮುಂದೆ ನೆಹರು ಕುರಿತು ಅಷ್ಟೊಂದು ಗೌರವದಿಂದ ಮಾತನಾಡಿದ ಜಿನ್ನಾ ಈ ಕಾರ್ಯವನ್ನು ಭಾರತದಲ್ಲಿರುವಾಗ ಎಂದೂ ಮಾಡಲಿಲ್ಲ. ನಾನು ನಿಮಗೆ ಇಷ್ಟನ್ನು ಹೇಳಬಲ್ಲೆ ನೆಹರು ಆಗಲಿ, ಪಟೇಲರಾಗಲಿ ಜಿನ್ನಾರ ಹೊಗಳಿಕೆ ಅಥವಾ ಟೀಕೆ ಎರಡಕ್ಕೂ ತಲೆಕೆಡಿಸಿಕೊಂಡವರಲ್ಲ. ಹೀಗಾಗಿ ಎರಡೂ ರಾಷ್ಟ್ರಗಳಿಗೆ ಬೇಕಾಗಿರುವ ಸರಿಯಾದ ಕಾರ್ಯಗಳನ್ನು ಜಿನ್ನಾ ಸಾಹೇಬರಿಂದ ಈಗ ನೀವು ಮಾತ್ರ ಮಾಡಿಸಲು ಸಾಧ್ಯವಿದೆ. ಯಾಕೆ ನೀವು ಜಿನ್ನಾ ಮತ್ತು ಲಿಯಾಖತ್ ಅಲಿಗೆ ಸತ್ಯಗಳ ಕುರಿತು ಮಾತಾಡಬಾರದು? ನಿಮ್ಮ ಶಾಂತಿಪಡೆಗೆ ಸತ್ಯ ಮತ್ತು ಅಹಿಂಸೆಗೆ ಜಯವಾಗುವುದು ಇಷ್ಟವಿಲ್ಲವೆ? ನಿಮಗೆ ಗೊತ್ತಿಲ್ಲ ಕೋಟ್ಯಾಂತರ ಜನರು ಜಿನ್ನಾ ಹಾಗೂ ಲಿಯಾಖತ್ ಅಲಿಯರನ್ನು ಹೇಗೆ ಶಪಿಸುತ್ತಿದ್ದಾರೆ ನಿಮಗೆ ಗೊತ್ತಿಲ್ಲ. ಅಂದಹಾಗೆ ಈ ವಿಷಯ ನಮ್ಮಿಬ್ಬರ ಮಧ್ಯದ ಚರ್ಚೆಯಾಗಬಾರದು. ನಾನು ನಿಮ್ಮನ್ನು ಕರಾಚಿಗೆ ಕಳಿಸಿದ್ದು ಯಾರು ಯಾರನ್ನು ಎಷ್ಟು ಪ್ರಮಾಣದಲ್ಲಿ ಶಪಿಸುತ್ತಿದ್ದಾರೆ ಎನ್ನುವುದನ್ನು ದಾಖಲಿಸಲು ಅಲ್ಲ. ಬದಲಾಗಿ ಜಿನ್ನಾ ಸಾಹೇಬರಿಗೆ ಇರುವ ಸತ್ಯವನ್ನು ಮನವರಿಕೆ ಮಾಡಿಕೊಡುವುದು ಭೆಟ್ಟಿಯ ಮುಖ್ಯ ಉದ್ದೇಶವಾಗಿತ್ತು. ಯಾವ ರೀತಿಯಿಂದ ಭಾರತ-ಪಾಕಿಸ್ತಾನಗಳೆರಡು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯ ಎನ್ನುವುದನ್ನು ತಿಳಿಯುವುದಾಗಿತ್ತು. ಎರಡು ದೇಶಗಳ ಅಲ್ಪಸಂಖ್ಯಾತರು ತಮ್ಮ ತಮ್ಮ ದೇಶಗಳಿಗೆ ಮರಳಲಿ ಎನ್ನುವುದಾಗಿತ್ತು. ಅದು ಮುಖ್ಯ ಎಲ್ಲಕ್ಕೂ ಮುಖ್ಯ. ಯಾವ ವಿಚಾರಗಳನ್ನು ಪಾಕಿಸ್ತಾನ ಸರ್ಕಾರ ಘೋಷಿಸಿತ್ತೊ. ಅದನ್ನು ಅದು ಅನುಸರಿಸಬೇಕು ಎನ್ನುವುದನ್ನು ತಿಳಿಸುವುದು ಆಗಿತ್ತು. ಶಹೀದ್ ಯಾವುದೇ ಅಲ್ಪಸಂಖ್ಯಾತ ನೊಂದರೂ ನಾನು ನಿದ್ರಿಸಲಾರೆ."

ಇಷ್ಟರಲ್ಲಿ ಸರ್ದಾರ್ ಪಟೇಲ್, ಮೌಲಾನ ಅಬ್ದುಲ್ ಕಲಾಂ ಆಜಾದ್, ಮಿಸ್ಟರ್ ಆನಂದ ಪ್ರಸಾದ್ ಚೌದರಿ ಗಾಂಧಿಯ ಬಳಿ ಬಂದರು. ಪೂರ್ವ ಪಾಕಿಸ್ತಾನದಿಂದ ಅಪಾರ ಸಂಖ್ಯೆಯಲ್ಲಿ ಬರುತ್ತಿರುವ ಹಿಂದೂಗಳಿಗೆ ಹೇಗೆ ಆಶ್ರಯ ನೀಡಬೇಕು ಎನ್ನುವುದೇ ಅವರಿಗೀಗ ಸವಾಲಾಗಿದೆ. ಗಾಂಧಿಯೂ ಕೈ ಚೆಲ್ಲುತ್ತಿರುವ ಈ ಕ್ಷಣದಲ್ಲಿ ಯಾರ ಮೊರೆ ಹೋಗಬೇಕು ಎನ್ನುವುದು ತಿಳಿಯದಾಗಿದೆ. ಈಗಾಗಲೇ ಗಾಂಧಿ ಎರಡೂ ಸರ್ಕಾರಗಳು ಜನಗಳು ತಮ್ಮನ್ನೇ ತಾವು ರಕ್ಷಿಸಿಕೊಳ್ಳುವ, ಧೈರ್ಯ ತಂದುಕೊಳ್ಳುವ, ನೀತಿಯನ್ನು ಜನರಿಗೆ ಬೋಧಿಸಬೇಕು ಎಂದು ಹೇಳಿದ್ದಾನೆ. ಅವನ ಶಬ್ದಗಳಲ್ಲಿಯೇ ಹೇಳಬೇಕೆಂದರೆ – "The people had to be made to shed fear and become brave enough to die."

ಇದನ್ನು ಗಾಂಧಿ ಹೇಳಬೇಕಾಗಿತ್ತೇ, ಸಾವಿಗೆ ಯಾವ ಬೋಧನೆಯೂ ಬೇಕಿಲ್ಲ ಇದು ಜನರ ಆಕ್ರೋಶ. ಹಿಂದೂಗಳೋ-ಮುಸ್ಲಿಂರೋ ಒಟ್ಟಾರೆ ಅಲ್ಪಸಂಖ್ಯಾತರನ್ನು ರಕ್ಷಿಸುವಲ್ಲಿ ಆಡಳಿತ ಯಂತ್ರ ವಿಫಲವಾಗಿದೆ ಎನ್ನುವುದು ಮೌಲಾನ ಆಜಾದರ ವಿಚಾರವೂ ಆಗಿದೆ. ಪ್ರಧಾನಿ ನೆಹರು, ಉಪಪ್ರಧಾನಿ ಸರ್ದಾರ ಪಟೇಲರಿಗೆ ಆದೇಶಗಳನ್ನು ನೀಡುತ್ತಲೆ, ಈ ಎಲ್ಲಾ ಅನೈಕ್ಯತೆಗೆ ಕಾರಣಗಳೇನಿರಬಹುದು ಎನ್ನುವುದನ್ನು ಅರಿಯಲು ಗಾಂಧಿ ಸಾಕಷ್ಟು

ಹೆಣಗಾಡಿದ್ದಾನೆ, ಸೋತಿದ್ದಾನೆ, ತಾನು ಸೋತಿದ್ದೇನೆ ಎನ್ನುವುದು ಗೊತ್ತಾಗಬಾರದು ಎಂದು ಮತ್ತೆ ಸೆಟೆದು ನಿಲ್ಲುತ್ತಾನೆ. ಇದಕ್ಕೆ ಪರಿಹಾರವೇನು? ಬರುವ ನಿರಾಶ್ರಿತರಿಗೆ ಎಲ್ಲಿ ಸ್ಥಳ ಮಾಡಿಕೊಡಬೇಕು? ಉಪವಾಸವಿದ್ದವರಿಗೆ, ರೋಗದಿಂದ ನರಳುತ್ತಿರುವವರಿಗೆ, ಸಾಯುತ್ತಿರುವವರಿಗೆ ಯಾವ ದಾರಿ? ಬರುವ ನಿರಾಶ್ರಿತರು ಸಾವಿರ ಸಂಖ್ಯೆಯಲ್ಲಿದ್ದರೆ ಏನಾದರು ಮಾಡಬಹುದು, ಆದರೆ ಇದು ಲಕ್ಷಗಳ ಲೆಕ್ಕ.


ದೇಶವಿಭಜನೆಯೊಂದಿಗೆ ಅದರ ಎಲ್ಲಾ ಶಕ್ತಿ, ಸಹನೆ, ಆಡಳಿತ ವ್ಯವಸ್ಥೆಗಳಲ್ಲಿಯೂ ವಿಭಜನೆಯಾಗಿದೆ. ಅಂತಿಮವಾಗಿ ಮನುಷ್ಯರು ತಮ್ಮಷ್ಟಕ್ಕೇ ತಾವು ತಮ್ಮ ಜವಾಬ್ದಾರಿಗಳನ್ನು ಅರಿಯದ ಹೊರತು ಯಾವ ಸಾಧನೆಯೂ ಸಾಧ್ಯವಿಲ್ಲ ಎಂದು ಆತನಿಗೆ ಗೊತ್ತು. ನಿರಾಶ್ರಿತರ ಆಗಮನ ಎನ್ನುವುದು ಒಂದು ಸರಳ ವಾಕ್ಯವಲ್ಲ. ಬರುವವರೆಲ್ಲರೂ ಹಾಗೆ ಸುಮ್ಮನೆ ಬಂದು ಇದ್ದುಬಿಡುತ್ತಾರೆಯೇ? ಈಗಾಗಲೇ ಕೋಟ್ಯಾಂತರ ಭಾರತೀಯರು ನಿರುದ್ಯೋಗ ಮತ್ತು ಹಸಿವೆಯಿಂದ ನರಳುತ್ತಿರುವಾಗ ಹೊಸಬರಿಗಾಗಿ ಹೊಸ ನೌಕರಿಗಳನ್ನು ಎಲ್ಲಿಂದ ಸೃಷ್ಟಿಸುವುದು? ಅಂತೆಯೇ ಆತ ಡಾ॥ ಬಾಬುರಾಜೇಂದ್ರ ಪ್ರಸಾದ್‌ರಂಥ ಪ್ರಾಮಾಣಿಕರ ಕೈಯಲ್ಲಿ ಆಹಾರಧಾನ್ಯ ವಿತರಣೆಯಂಥ ಜವಾಬ್ದಾರಿ ಕೆಲಸವನ್ನು ವಹಿಸಿದ್ದಾನೆ. ಪುರುಷೋತ್ತಮ ಟಂಡನ್, ಹರಿಕೃಷ್ಣ ಮೆಹತಾಬ್, ಜಿ.ಡಿ.ಬಿರ್ಲಾ ಮತ್ತು ಲಾಲಾ ಶ್ರೀರಾಮರನ್ನು ರಾಜೇಂದ್ರ ಪ್ರಸಾದರೊಂದಿಗೆ ಕೈಗೂಡಿಸಲು ತಿಳಿಸಿದ್ದಾನೆ. ಈ ಎಲ್ಲಾ ಜವಾಬ್ದಾರಿ ಜನಗಳು ಇರದೇ ಹೋಗಿದ್ದರೆ ವಿಭಜನೆಯ ಈ ಸಂದರ್ಭ, ಆಹಾರ ಮತ್ತು ಆಶ್ರಯದ ಪ್ರಶ್ನೆ ಇನ್ನೂ ಎಷ್ಟು ಗಂಭೀರವಾಗಿರುತ್ತಿತ್ತು ಎನ್ನುವುದನ್ನು ಊಹಿಸುವುದು ಕೂಡ ಕಷ್ಟ. ಕಳೆದ 6 ತಿಂಗಳಲ್ಲಿ ಭಾರತಕ್ಕೆ ಆಹಾರ ಸಮಸ್ಯೆಯಂತೂ ಉಳಿದೆಲ್ಲಾ ಸಮಸ್ಯೆಗಳಿಗಿಂತಲೂ ಭಯಾನಕವಾಗಿ ಪರಿಣಮಿಸಿದೆ. ಅಂತೆಯೇ ಅಕ್ಟೋಬರ್ 10ರ ಸಾಯಂಕಾಲ ಗಾಂಧಿ ಒಂದು ಸಾಮಾನ್ಯ ತಿಳುವಳಿಕೆಯ ಮಾತನ್ನು ನಿರಾಶ್ರಿತರಿಗೆ ಹೇಳುತ್ತಾನೆ.

"The Government cannot provide everything to everybody even if it tries hard. It has its military and police forces and other departments. But these can work only with the help of the people. The people have to be the eyes and ears and the hands and feet of their governments. No government can do anything unless the people co-operate with it."

ಈ ಎಲ್ಲ ಸಂದರ್ಭದ ಜೊತೆಗೆ ಗಾಂಧಿಗೆ ಎದುರಾಗಲಿರುವ ಹಾಸಿಗೆ ಹೊದಿಕೆಯ ಸಮಸ್ಯೆ ಬಗ್ಗೆ ಅರಿವಿತ್ತು. ಕಳೆದ ಅನೇಕ ವರ್ಷಗಳಿಂದ ಖಾದಿಯನ್ನು ಒಂದ ಆಂದೋಲನವಾಗಿ ಈ ದೇಶದಲ್ಲಿ ಆತ ಮಾರ್ಪಡಿಸಲು ಯತ್ನಿಸಿದರೂ ಕೂಡ ನಿರೀಕ್ಷಿತ ಫಲಿತಾಂಶ ಸಿಕ್ಕಿಲ್ಲ. ಅದು ಆತನಿಗೆ ಚಿಂತೆಯೆ. ಯಾವ ದಿನವೂ ಕಾಳ ಸಂತೆ ಈ ದೇಶವನ್ನು ಎಂಥ ಕೆಟ್ಟ ಸ್ಥಿತಿಗೂ ತಂದು ನಿಲ್ಲಿಸಬಹುದು ಎನ್ನುವ ಅರಿವು ಆತನಿಗೆ ಇತ್ತು. ಜನರು ಸಿದ್ಧರಾಗಬೇಕು. ಎಲ್ಲದಕ್ಕೂ ಜನರೇ ಸಿದ್ಧರಾಗಬೇಕು. ಅಂತೆಯೆ ಹೇಳುತ್ತಿದ್ದ "God helps

those who help themselves." ಸಮಸ್ಯೆಗಳ ಈ ಘಟ್ಟದಲ್ಲಿ ಗಾಂಧಿ ಮಹಾತ್ಮನಾಗಿರಲಿಲ್ಲ, ದೇವರಾಗಿರಲಿಲ್ಲ, ಮನುಷ್ಯನಿಗೊಬ್ಬ ಮನುಷ್ಯನಾಗಿದ್ದನಷ್ಟೆ. ಸಮಸ್ಯೆಗಳಿಗೆ ಯಾವ ಮಾಂತ್ರಿಕ ಶಕ್ತಿಯಿಂದಲೂ ಪರಿಹಾರವಿಲ್ಲ ಎಂಬುದು ಆತನಿಗೆ ಗೊತ್ತು. ಅಂತೆಯೆ ಕ್ರಿಯೆ, ಶುದ್ಧ ಮನಸ್ಸಿನ ಕ್ರಿಯೆ ಒಂದೇ ಆತ ನಂಬಿದ ವಿಚಾರವಾಗಿತ್ತು.

ಅಕ್ಟೋಬರ್ 12 ರಂದು ಗಾಂಧಿಯ ಆರೋಗ್ಯದ ಸ್ಥಿತಿ ಇನ್ನೂ ಗಂಭೀರವಾಯಿತು. ರಾಮ ನಾಮ ಸ್ಮರಿಸುತ್ತಲೆ ಆತ ಹಾಸಿಗೆ ಹಿಡಿದ. ಆಗೊಮ್ಮೆ ಈಗೊಮ್ಮೆ ಈತನನ್ನು ನೋಡಿ ಮುಗುಳ್ನಗುತ್ತಿದ್ದ ಡಾ.ಸುಶೀಲಾ ನಯ್ಯರ್‌ಗೆ ಏನು ಮಾಡಬೇಕೆಂದು ತೋಚುತ್ತಿಲ್ಲ. ಮತ್ತೂ ಅದೇ ಮೊಂಡುತನ. ಪೆನ್‌ಸಿಲಿನ್ ಆತ ಯಾವುದೇ ಕಾಲಕ್ಕೂ ತೆಗೆದುಕೊಳ್ಳಲಾರ. ತನ್ನ ಈ ದೇಹ ಸ್ಥಿತಿಯೊಂದಿಗೆ ದೆಹಲಿಗೆ ಬಂದಿರುವ ಸಾವಿರಾರು ಜನರ ಆರೋಗ್ಯ ಸ್ಥಿತಿ ಹೇಗಿರಬಹುದು ಎನ್ನುವುದೇ ಗಾಂಧಿಯ ಚಿಂತೆ. ದುಬಾರಿಯಾದ ಈ ಪೆನ್‌ಸಿಲಿನ್ ಜನ ಸಾಮಾನ್ಯರಿಗೆ ಸಿಗಲಾರದು ಎನ್ನುವುದಾದರೆ ಅದು ತನಗೂ ಬೇಡ ಎನ್ನುವುದು ಆತನ ಹಟ. ತಾನು ಬದುಕಲಾರದ್ದನ್ನು ತಾನು ಯಾರ ಮೇಲೂ ಹೇರಲಾರ ಎಂದು ಆತನ ಪ್ರತಿಪಾದನೆ.



ನಿರಾಶೆಯ ಒಡಲಲ್ಲಿಯೇ ಆಶೆಯ ಮೊಳಕೆ

೩೪

ಗಾಂಧಿ ಬೋಧಿಸಿದ ಅತಿ ಮುಖ್ಯವಾದ ವಿಷಯಗಳಲ್ಲಿ ಸ್ವಅಧ್ಯಯನವೂ ಒಂದು. ಎಲ್ಲವೂ ಕೈ ಚೆಲ್ಲಿದಾಗ ಆತ ಮತ್ತೆ ಮತ್ತೆ ನಂಬುವುದು ಪ್ರಾರ್ಥನೆಯನ್ನು. ಅಕ್ಟೋಬರ್ 12ರ ರವಿವಾರ ಗಾಂಧೀ ಇದನ್ನೆ ಹೇಳಿದ. "ನಮಗೆ ಸಂಕಷ್ಟ ಬಂದೆರಗಿದೆ. ಯಾರು ಈ ಘಳಿಗೆಯಲ್ಲೂ ದೇವರನ್ನು ಕುರಿತು ಆಲೋಚಿಸಬಲ್ಲರೊ, ದೇವರನ್ನು ಸ್ಮರಿಸಬಲ್ಲರೊ ಅವರು ಪರಿಹಾರವನ್ನು ಕಾಣಬಲ್ಲರು. ಬದುಕಿನ ಯಾವುದೆ, ಸಂಕಷ್ಟವನ್ನು ಎರಡು ರೀತಿಯಿಂದ ಬಗೆಹರಿಸಿಕೊಳ್ಳಬಹುದು. ಒಂದು ಗಾಬರಿ ಆಗಬಹುದು ಅಥವಾ ಭಯ ಅಥವಾ ಸಿಟ್ಟುಗಳಿಂದ ಇರುವ ಪರಿಸ್ಥಿತಿಯನ್ನು ಇನ್ನೂ ಕೆಟ್ಟದಾಗಿಸಿಕೊಳ್ಳಬಹುದು ಅಥವಾ ಈ ಎರಡನೇ ಮಾರ್ಗವನ್ನು ನೀವು ಅನುಸರಿಸಬಹುದು. ಎಂಥ ಕಷ್ಟದಲ್ಲಿಯೂ ಬದುಕಿನ ಆನಂದದಲ್ಲಿ ವಿಶ್ವಾಸವನ್ನು ಕಳೆದುಕೊಳ್ಳದೆ, ದೇವಮತ್ತನಾಗಿರುವುದು ಮತ್ತು ಮುಕ್ತನಾಗಿರುವುದು. ಹೀಗಾದರೆ ಎಂಥ ನೋವಿನಲ್ಲಿಯೂ ಸಂತೋಷ ಸಾಧ್ಯವಾಗುತ್ತದೆ.

ನಿರಾಶ್ರಿತರಾಗಿ ಈಗ ಬಂದಿರುವ ನಿಮ್ಮಲ್ಲಿ ಈ ಹಿಂದೆ ಅನೇಕರು ದರಿದ್ರರಾಗಿದ್ದರು ಬಡವರಾಗಿದ್ದರು. ಈಗ ಮತ್ತೆ ಕೆಲವರು ಇರುವುದೆಲ್ಲವನ್ನೂ ಕಳೆದುಕೊಂಡು ಬಿಕಾರಿಗಳಾಗಿದ್ದೀರಿ... ನಿಮ್ಮ ಅರಮನೆಗಳು ಕಳೆದು ಹೋಗಿವೆ. ಹಣ ದೋಚಿಕೊಂಡಿದ್ದಾರೆ. ಮಾನಕ್ಕೆ ರಕ್ಷಣೆ ಇಲ್ಲ. ನಾನು ಇಷ್ಟನ್ನು ಮಾತ್ರ ಹೇಳಬಲ್ಲೆ. ಬಂದವರಲ್ಲಿ ಅನೇಕರು ವೈದ್ಯರಾಗಿದ್ದೀರಿ, ಓದಿದವರಾಗಿದ್ದೀರಿ, ವಕೀಲರಾಗಿದ್ದೀರಿ ಆದರೆ ಮನುಷ್ಯರಾಗಬೇಕಾದ ಅವಶ್ಯಕತೆ ಇದೆ. ನಿರಾಶ್ರಿತರಲ್ಲಿ 75 ಪ್ರತಿಶತ ವ್ಯಾಪಾರಿಗಳಿದ್ದೀರಿ. ಕಳೆದುಕೊಂಡಾಗ ಮತ್ತೆ ಹುಡುಕಿ ಪಡೆಯುವುದೇ ಧರ್ಮ. ಸುಮ್ಮನೆ ಕುಳಿತುಕೊಳ್ಳುವುದರ ಮೂಲಕ ಏನನ್ನೂ ಸಾಧಿಸಲಾಗದು. ಸೇರಿ ದುಡಿಯಬೇಕಿದೆ, ಕಷ್ಟಪಡಬೇಕಿದೆ. ದುರಂತದೊಳಗಿನಿಂದಲೇ ಬದುಕಿನ ಭರವಸೆಯನ್ನು ಹುಟ್ಟಿಸಿಕೊಳ್ಳಬಹುದು. ನರಕದಲ್ಲಿದ್ದೂ ಸ್ವರ್ಗವನ್ನು ಕಲ್ಪಿಸಿಕೊಳ್ಳಬಹುದು. ನೀವು ಈ ಭಜನೆಯನ್ನು ಕೇಳಿರಬಹುದು. ಅದು ಹೇಳುವುದು ಇಷ್ಟೆ - The best hope springs out of the deepest despair. ಇದು ಕವಿ ಕಲ್ಪನೆಯಲ್ಲ. ವಾಸ್ತವ.

ನಿರಾಶೆಯ ಈ ತಮಂಧದಲ್ಲಿ ಹಾಗಾದರೆ ಈ ಆಶಾಕಿರಣ ಕಾಣಲು ನಿರಾಶ್ರಿತರೆಲ್ಲ ಏನು ಮಾಡಬೇಕು? ಏಕಾಏಕಿ ಇಂದು ಬೀದಿಪಾಲಾದವರೆಲ್ಲ ಒಂದು ಮಾತು ತಿಳಿದುಕೊಳ್ಳಿ, ನೀವೀಗ ಪಂಜಾಬಿಗಳಲ್ಲ, ಸಿಂಧನವರಲ್ಲ, ಉತ್ತರ-ಪಶ್ಚಿಮದವರಲ್ಲ ನೀವೀಗ ಭಾರತೀಯರು. ಭಾರತೀಯರಾಗಿಯೇ ಇರುತ್ತೀರಿ. ಆದರೆ ಒಂದು ಕರಾರಿನ ಮೇರೆಗೆ, ನೀವೀಗ ಯಾರಿಗೂ ಹೊರೆಯಾಗುವುದಿಲ್ಲ. ಸಕ್ಕರೆ ಹಾಲಿನೊಳು ಬೆರೆತು ಇಡೀ ಹಾಲನ್ನೇ ಮಧುರಗೊಳಿಸುವಂತೆ, ಆಮೇಲೆ ಹಾಲಿನಿಂದ ಬೇರ್ಪಡಿಸಲಾಗದಷ್ಟು ಒಂದಾಗುವಂತೆ ಹಾಗೆ ನೀವೆಲ್ಲ ಬೆರೆತು ಹೋಗುತ್ತೀರಿ ಎಂದು ನಾನು ನಂಬಿದ್ದೇನೆ. ನಿರಂತರ ಪರಿಶ್ರಮಿಗಳು ಮತ್ತು ಸಹಾಯ ಮನೋವೃತ್ತಿಯವರು ಆಗುವ ಮೂಲಕ ನೀವೀಗ ಭಾರತದ ಭಾಗವಾಗಲು ಸಾಧ್ಯವಿದೆ. ಇಲ್ಲಿ ಸೇರಿದ ನಿರಾಶ್ರಿತರಲ್ಲಿ ಕೆಲವರಿಗಾದರೂ ನನ್ನ ಭಾಷೆ ತಿಳಿಯುತ್ತದೆ ಎಂದು ನಾನು ನಂಬಿದ್ದೇನೆ. ಅಂಥವರು ಸಮಯವನ್ನು ವ್ಯಯ ಮಾಡದೆ, ಯಾರಿಗೂ ಮೋಸ ಮಾಡದೆ ದೇವರ ಸೇವೆಯಲ್ಲಿ ನಿರತರಾಗಬೇಕು. ನಾವು ಸೇವೆಗಾ-ಗಿಯೇ ಹುಟ್ಟಿದ್ದೇವೆ. ಹಾಗಂತ ಒಮ್ಮೆ ನಮ್ಮ ತಲೆಯಲ್ಲಿ ಹೊಗಿಸಿಕೊಂಡರೆ ಸಾಕು ಎಲ್ಲಿ ಸಂಕಷ್ಟ-ನೋವುಗಳೂ ಮರೆಯಾಗುತ್ತವೆ. ಬನ್ನಿ ಬಂಧುಗಳೆ, ನಮ್ಮ ದೇಶ ಯಾವಾಗಲೂ ತಲೆ ಎತ್ತಿ ನಿಲ್ಲುವಂತ ಕೆಲಸ ಮಾಡೋಣ."

ಈಗ ಇಷ್ಟರಲ್ಲಿಯೇ ಅಮೇರಿಕೆಯ ಪತ್ರಕರ್ತ, ಧರ್ಮಾಧಿಕಾರಿ ಹಾಗೂ "American civil liberties Union" ನ ಸಂಸ್ಥಾಪಕ ಆಡಿ. John Hayness Holmes vÀ£Àß "Unity" ಪೇಪರ್ ತಂಡದೊಂದಿಗೆ ಗಾಂಧಿಯ ಭೇಟ್ಟಿಗೆ ಬರುವವನಿದ್ದ. ಈಗಾಗಲೇ ಆತ ಗಾಂಧಿಯನ್ನು ಕುರಿತು ಎರಡು ಪುಸ್ತಕಗಳನ್ನು ಬರೆದಿದ್ದ. ಅಮೇರಿಕಾ ಮತ್ತು ವಿಶ್ವದ ವಿವಿದೆಡೆ ಯುದ್ಧಗಳಿಂದ ನಿರಾಶ್ರಿತರಾಗಿರುವ ಜನರಿಗಾಗಿ ಗಾಂಧಿ ಒಂದಿಷ್ಟು ಏನಾದರೂ ಮಾಡಬೇಕು ಎಂಬುದು ಆತನ ಬಯಕೆಯಾಗಿತ್ತು. ಆದರೆ ಗಾಂಧಿ ಈ ಕೋರಿಕೆಯನ್ನು

ಒಪ್ಪುವ ಸ್ಥಿತಿಯಲ್ಲಿರಲಿಲ್ಲ. ಭಾರತ ಹಾಗೂ ಅದರ ಸುತ್ತುವರಿದ ಸಮಸ್ಯೆಗಳನ್ನು ಹೊರತುಪಡಿಸಿ ಗಾಂಧಿ ಏನನ್ನೂ ಚರ್ಚಿಸ ಬಯಸಲಿಲ್ಲ.

ಹಿಂದು ಕ್ಯಾಲೆಂಡರ ಪ್ರಕಾರ ಅಕ್ಟೋಬರ್ 11 ಗಾಂಧಿಯ ಹುಟ್ಟುಹಬ್ಬ. ಹೀಗಾಗಿ 10ನೇ ತಾರೀಖು ಸಾಯಂಕಾಲದಿಂದ 24 ಗಂಟೆಗಳ ಉಪವಾಸವನ್ನು ಗಾಂಧಿ ಪ್ರಾರಂಭಿಸಿಬಿಟ್ಟ. ದೇವಾಲಯ, ಗುರುದ್ವಾರ, ಮಠ–ಮಂದಿರಗಳಿಂದ ಅವನ ಅನುಯಾಯಿಗಳು ಪ್ರಸಾದ ತಂದರು. ಮುಸ್ಲಿಂರು ಮಸೀದೆಗಳಲ್ಲಿ ಪ್ರಾರ್ಥನೆ ಸಲ್ಲಿಸಿದರು. ಹಾಸಿಗೆ–ಹೊದಿಕೆಗಳು ಅಪಾರ ಪ್ರಮಾಣದಲ್ಲಿ ಕೊಡುಗೆಗಳಾಗಿ ಬಂದವು. ಗಾಂಧಿ ಅವನ್ನೆಲ್ಲ ಸೇರಿಸಿ ನಿರಾಶ್ರಿತರಿಗೆ ನೀಡಿದ.

ಹಿಂದು ಶಾಸ್ತ್ರಾಧಾರಿತ ಗಾಂಧಿಯ ಈ ಹುಟ್ಟು ಹಬ್ಬಕ್ಕೆ ಒಂದೇ ದಿನದಲ್ಲಿ ಎರಡು ಬಾರಿ ಬಂದು ಹೋದವರು ಭಾರತದ ಮೊದಲ ಶಿಕ್ಷಣ ಮಂತ್ರಿ ಮೌಲಾನಾ ಆಜಾದ್ ಮತ್ತು ಶ್ರೀ ಜಮುನಾ ಲಾಲ್ ದ್ವಾರಕಾ ದಾಸ್. ಇವರ ನಿರ್ಗಮನದ ಕೆಲವೇ ಕ್ಷಣಗಳ ನಂತರ ಬಂದವರು ದೆಹಲಿಯ ಗುಜರಾತಿ ಸಮಾಜದ ಅಧ್ಯಕ್ಷ ಸಿ.ನಂದಲಾಲ್ ಮೆಹತಾ. ಈ ದಿನ ಉಡುಗೊರೆಯಾಗಿ ಮೆಹತಾ ನಿರಾಶ್ರಿತರ ನಿಧಿಗೆ ಎಂದು 9,500 ರೂಗಳನ್ನು ದೇಣಿಗೆಯಾಗಿ ನೀಡಿದರು.

ಗಾಂಧಿಗಾಗಿ ಯಾವ ದುಡ್ಡೂ ಬೇಕಿರಲಿಲ್ಲವಾದರೂ ಮಂತ್ರಕ್ಕೆ ಮಾವಿನಕಾಯಿ ಉದುರೋದಿಲ್ಲ ಅದೂ ಅವನಿಗೆ ಗೊತ್ತು. ಈ ದಿನ ಗಾಂಧಿ ಗಂಭೀರವಾಗಿ ಕುಳಿತುಕೊಂಡು ಪಾಕಿಸ್ತಾನದ ಗವರ್ನರ್ ಜನರಲ್‌ರಾಗಿದ್ದ ಕೈದ–ಎ–ಆಜಮ್ ಜಿನ್ನಾರಿಗೆ ಒಂದು ಪತ್ರ ಬರೆದ. ಅದರಲ್ಲಿ ಇದುವರೆಗೂ ಹಿಂದು–ಮುಸ್ಲಿಂ ಐಕ್ಯತೆ ಕುರಿತು ತನಗಿರುವ ಕನಸುಗಳೇನು? ಅದನ್ನು ಯಾವ ರೀತಿ ತಾನು ಶಹೀದ್ ಸುಹರ್‌ವರ್ದಿಯೊಂದಿಗೆ ಹಂಚಿಕೊಂಡಿದ್ದೇನೆ ಎಂಬುದನ್ನೂ ವಿವರಿಸಿದ್ದ. ಭಾರತ ಮತ್ತು ಪಾಕಿಸ್ತಾನ ಸರಕಾರಗಳೆರಡೂ ಮತಿಯ ಈ ಗಲಭೆಗಳಿಗೆ ಯಾವ ದಾರಿಯನ್ನು ಕಂಡುಕೊಳ್ಳಬಹುದು ಎಂದು ಸೂಚಿಸಿದ್ದ. ಗಾಂಧಿಯ ಪ್ರಕಾರ ಭಾರತ–ಪಾಕಿಸ್ತಾನಗಳಿಗೆರಡಕ್ಕೂ ಬೇಕಾಗಿರುವುದು ಸಮಾನ ಮನಸ್ಸು, ಬುದ್ಧಿ ಮತ್ತು ಕ್ರಿಯೆಗಳಷ್ಟೇ. ಜೊತೆಗೆ ಎರಡೂ ರಾಷ್ಟ್ರಗಳು ಬಂದಿರುವ ನಿರಾಶ್ರಿತರಿಗೆ ಮರಳಿ ತಮ್ಮ ತಮ್ಮ ದೇಶಗಳಿಗೆ ಹೋಗುವಂತೆ ಪ್ರಾಮಾಣಿಕವಾಗಿ ಸೂಚಿಸಬೇಕು ಎಂದಿದ್ದ.

ಅಕ್ಟೋಬರ 13ರ ಸೋಮವಾರದ ಈ ದಿನ ತನ್ನ ಉಪವಾಸವನ್ನು ಪೂರ್ಣಗೊಳಿಸಿ ಸಾಯಂಕಾಲದ 5 ಗಂಟೆಗೆ ಗಾಂಧಿ ಪ್ರಾರ್ಥನೆಯಲ್ಲಿ ಹೇಳಿದ. "ಇದು ಭಾದ್ರಪದ 12ನೆ ದಿನ. ಕಚ್ ಮತ್ತು ಕಾಟೇವಾಡಗಳಲ್ಲಿ ಇದನ್ನು ರೆಂತಿಯಾಬರಸ್ ಎಂದು ಕರೆಯುತ್ತಾರೆ. ಈ ದಿನ ವಿಶೇಷವಾಗಿ ಜನರ ಲಕ್ಷವೆಲ್ಲವೂ ಚರಕ ಮತ್ತು ಅದರ ಸುತ್ತಲಿನ ಚಟುವಟಿಕೆಗಳತ್ತಲೇ ಇರುತ್ತದೆ. ಬಂಧುಗಳೇ ನಿಮಗೆಲ್ಲ ಗೊತ್ತಿರುವಂತೆ ನಾನು ನನ್ನ ಬದುಕಿನುದ್ದಕ್ಕೂ ಚರಕಕ್ಕೆ ಹೆಚ್ಚಿನ ಅರ್ಥವನ್ನು ಒದಗಿಸಲು ಯತ್ನಿಸಿದ್ದೇನೆ. ಅಕ್ಟೋಬರ 2 ಮತ್ತು ಈ ದಿನವನ್ನು ನಾನು ಅವರೊಂದಿಗೇ ಕಳೆಯುತ್ತೇನೆ. ಅಕ್ಟೋಬರ 2 ರಿಂದ ಇಂದಿನವರೆಗೆ ಮಧ್ಯದ ಎಲ್ಲ ದಿನಗಳನ್ನೂ ಚರಕವನ್ನೇ ಸಂಸಾರವಾಗಿಸಿಕೊಳ್ಳುತ್ತೇನೆ.

ಅಹಿಂಸೆಯ ಸಂಕೇತವಾಗಿ, ಆತ್ಮಜ್ಞಾನದ ಸಂಕೇತವಾಗಿ ಭಾರತದಲ್ಲಿ ಒಬ್ಬನೇ ಒಬ್ಬ ವ್ಯಕ್ತಿ ಚರಕದೊಂದಿಗೆ ಸಮಯ ಕಳೆದರೂ ಸಾಕು ಅದು ಈ ರಾಷ್ಟ್ರಕ್ಕೆ ಎಷ್ಟೆಲ್ಲ ಒಳಿತು ಮಾಡುತ್ತದೆ. ಇಂಥವರ ಸಂಖ್ಯೆ ಹೆಚ್ಚಾದಷ್ಟೂ ದೇಶದ ಆರೋಗ್ಯ ಸಮೃದ್ಧವಾಗುತ್ತದೆ.

ಧರ್ಮದ ಹೆಸರಿನಲ್ಲಿ ಹಿಂಸೆಯನ್ನು ಕೈಗೆತ್ತಿಕೊಂಡವರು ತಮ್ಮ ಆತ್ಮಕ್ಕೆ ಮತ್ತು ದೇಶದ ಗೌರವಕ್ಕೆ ಯಾವ ಹಾನಿ ಮಾಡುತ್ತಿದ್ದಾರೆಂದು ಬಹುತೇಕ ತಿಳಿದಿಲ್ಲ. ದೇಶವನ್ನು ಬಿಟ್ಟು ಹೋಗುವಾಗ ಬ್ರಿಟಿಷರು ಒಂದು ತಪ್ಪನ್ನು ಮಾಡಿದರು. ಅವರು ನಮ್ಮನ್ನು ವಿಭಜಿಸಿದರು. ಪರಿಣಾಮ ಎರಡು ಸರಕಾರಗಳ ನಿರ್ಮಾಣವಾಯಿತು. ಈಗ ಈ ಸರಕಾರಗಳು ವೈರಿಗಳಾಗಿವೆ. ಬಹುತೇಕ ಅವರೆಂದೂ ಬಡಿದಾಡುವದಿಲ್ಲ, ಇದು ನನ್ನ ಆಶಯ. ಆದರೆ ಪರಿಸ್ಥಿತಿ ವಿಕೋಪಕ್ಕೆ ಹೋದರೆ ಯುದ್ಧವೇ ಅನಿವಾರ್ಯವಾಗಬಹುದು. ಅದಕ್ಕಾಗಿ ಆಶಿಸೋಣ ನಮ್ಮ ಮಧ್ಯ ಶಾಂತಿ ಸಾಧ್ಯವಾಗಲಿ, ಸಹಬಾಳ್ವೆ ಸಾಧ್ಯವಾಗಲಿ, ಪ್ರೀತಿ ಸಾಧ್ಯವಾಗಲಿ ಇಲ್ಲದೇ ಹೋದರೆ ಗಳಿಸಿದ ಸ್ವಾತಂತ್ರ್ಯ ಮತ್ತೆ ಕಳೆದುಕೊಳ್ಳುತ್ತೇವೆ. ಅದಕ್ಕಾಗಿ ನನ್ನ ಪ್ರಾರ್ಥನೆ ದೇವರಲ್ಲಿ ಏನೆಂದರೆ 'ದೇವರೆ ಇವರೆಲ್ಲರಿಗೆ ಬುದ್ಧಿ ಕೊಡು ಮತ್ತು ಇವರನ್ನು ಶುದ್ಧರನ್ನಾಗಿಸು." ಗಾಂಧಿ ಇಂಥ ಒಂದು ಪ್ರಾರ್ಥನೆಯನ್ನು ಮುಗಿಸಿ ಸೋಮವಾರದ ಈ ರಾತ್ರಿಯನ್ನು ಕಳೆಯುವುದರೊಳಗಾಗಿ ಮಂಗಳವಾರ, ಅಂದರೆ 14 ಅಕ್ಟೋಬರ್ 1947 ರಂದು 21 ವರ್ಷದ ಮುಸ್ಲಿಂ ಯುವಕನೊಬ್ಬ ಗಾಂಧಿಗೊಂದು ಪತ್ರ ಬರೆದ –

"ಪ್ರಿಯ ಬಾಪು,

ನಾನೊಬ್ಬ ರಾಷ್ಟ್ರನಿಷ್ಠ ಮುಸ್ಲೀಂ, ಇದುವರೆಗಿನ ನನ್ನ ಜೀವನವನ್ನು ಒಬ್ಬ ಹಿಂದು ಅಥವಾ ಒಬ್ಬ ಮುಸ್ಲಿಂನಾಗಿ ನಾನೆಂದೂ ನೋಡಿಲ್ಲ. ನನ್ನ ಸಹೋದರ, ತಂದೆ ಮತ್ತು ಬಂಧುಗಳನೇಕರು ಈ ಪ್ರಶ್ನೆಗಳಿಂದ ಬಾಧಿತರಾದಷ್ಟು ನಾನೆಂದೂ ಬಾಧಿಸಲ್ಪಟ್ಟಿಲ್ಲ. ಈ ಚಿಂತನ ಶೈಲಿಯ ಕಾರಣ ನನಗೆ ಜಲಂಧರ ಇಸ್ಲಾಮಿಯಾ ಕಾಲೇಜಿನಲ್ಲಿ ಪ್ರವೇಶ ದೊರೆಯಲಿಲ್ಲ. ನಾನು ನನ್ನ ಸಮಾಜದಲ್ಲಿ ಹೊರಗಣವನಾಗಿ ಉಳಿದುಕೊಂಡೆ. ನನ್ನ ತಂದೆ ಹಾಗೂ ಬಂಧುಗಳೆಲ್ಲ ಏಪ್ರಿಲ್ ತಿಂಗಳಲ್ಲಿ ಜಲಂಧರ ಬಿಟ್ಟು ಹೊರಟುಹೋದರು. ನಾನು ಅವರೊಂದಿಗೆ ಹೋಗಲಿಲ್ಲ. ಈ ದೇಶ ಇಲ್ಲಿಯ ನನ್ನ ಹಲವಾರು ಹಿಂದು ಗೆಳೆಯರಿಗೆ ಸಂಬಂಧಪಟ್ಟಂತೆ ಇದು ನನ್ನದೂ ಕೂಡಾ. ಆದರೆ ಆಗಸ್ಟ ತಿಂಗಳಲ್ಲಿ ನಡೆದ ಘಟನೆಗಳು ನನ್ನನ್ನು ಘಾಸಿಗೊಳಿಸಿವೆ. ನೋಯಿಸಿವೆ. 1946ರಲ್ಲಿ ಯಾವ ನನ್ನ ಗೆಳೆಯರು ನನ್ನೊಂದಿಗೆ ಪ್ರೀತಿಯಿಂದಿದ್ದರೊ, ಈಗ ಅವರೇ ನನ್ನ ಪ್ರಾಣಕಂಟಕರಾಗಿದ್ದಾರೆ. ದೆಹಲಿ ನನ್ನ ಪಾಲಿನ ವಧ ಸ್ಥಾನವಾಗಿದೆ. ಅವರಿಗೆ ನಾನು ಈಗ ಕೇವಲ ಒಬ್ಬ ಮುಸ್ಲಿಂ ಮಾತ್ರ. ಈಗ ನಾನು ಈ ಜಲಂಧರ ಮತ್ತು ದೆಹಲಿಗಳಿಂದ ಓಡಿ ಹೋಗಬೇಕಿದೆ. ಬಾಪು ನನ್ನಂಥವರಿಗೆ ಈ ಸ್ಥಿತಿ ಬರಬೇಕೆ? ನನಗೀಗ ನಿಮ್ಮ ಮಾರ್ಗದರ್ಶನ ಬೇಕು. ನನ್ನ ಗೆಳೆಯರ ಕಣ್ಣೊಳಗಿನ ಈ ಜಾತಿಯ ನಂಜನ್ನು ಹೇಗೆ ಕಡಿಮೆ ಮಾಡಬೇಕು?

ಬಾಪು, ನನ್ನ ಪ್ರೀತಿಯ ಸ್ವಾತಂತ್ರ್ಯ ಮತ್ತು ಸಹನೆಯ ಮೂರ್ತಿಯೆ, ಈಗ ನಾನೇನು ಮಾಡಬೇಕು ಹೇಳಿ? ಓಡಿಹೋಗಿ ಸಧ್ಯ ಪಶ್ಚಿಮ ಪಾಕಿಸ್ತಾನದಲ್ಲಿರುವ ನನ್ನ ತಂದೆ ತಾಯಿಗಳೊಂದಿಗೆ ನನ್ನ ಮನಸ್ಸಿಗೆ ವಿರುದ್ಧವಾಗಿ ಬದುಕಬೇಕೆ? ಅಥವಾ ಪ್ರಾಣವನ್ನು ಕೈಯಲ್ಲಿರಿಸಿಕೊಂಡು ಈ ದೇಶದಲ್ಲಿ ಅತಿಥಿಯಾಗಿರಬೇಕೆ? ನಾನು ಏನು ಮಾಡಬೇಕು ಬಾಪು?"

ಇದೊಂದು ಅಪ್ರಬುದ್ಧ ಬರೀ ಭಾವನಾತ್ಮಕ, ರೋಚಕ ಬರಹವಾಗಿದ್ದರೆ ಗಾಂಧಿ ಇದನ್ನು ಗಂಭೀರವಾಗಿ ತೆಗೆದುಕೊಳ್ಳುವ ಪ್ರಮೇಯವೇ ಇರಲಿಲ್ಲ. ಆದರೆ ಇದು ಹಾಗಿರಲಿಲ್ಲವಲ್ಲ. ಎರಡು ದೇಶಗಳನ್ನೇ ಸೃಷ್ಟಿ ಮಾಡಿದ್ದ partition, ಈ ಯುವಕನಿಗೊಂದು ಸೂರು ಸೃಷ್ಟಿಸಿರಲಿಲ್ಲ. ಮಿಗಿಲಾಗಿ ಈತ ಕೇಳಿದ್ದ ಪ್ರಶ್ನೆ ಪ್ರಾಮಾಣಿಕವಾಗಿತ್ತು. ಮಿಗಿಲಾಗಿ ಇಂತಹ ಅನೇಕ ಬರಿಯದೇ ಇರುವ ಸಮಸ್ಯೆಗಳ ಪ್ರತಿನಿಧಿಯಾಗಿ ಈ ಓಲೆ ಗಾಂಧಿಯ ಕೈ ಸೇರಿತ್ತು.

ವ್ಯಕ್ತಿಗತವಾಗಿ ಒಂದು ಪತ್ರವನ್ನು ಗಾಂಧಿ ಆ ಯುವಕನಿಗೆ ಬರೆದು ಬಿಡಬಹುದಾಗಿತ್ತೇನೊ. ಆದರೆ ಇದನ್ನು ಬಹಿರಂಗವಾಗಿ ಚರ್ಚಿಸುವದು ಎಂದು ಗಾಂಧಿ ತಿಳಿದುಕೊಂಡ. ಹೀಗಾಗಿ ಉತ್ತರವನ್ನು ಗಾಂಧಿ ತನ್ನ 'ಹರಿಜನ'ದಲ್ಲಿ ಬರೆದ– "ಈ ಪತ್ರಕ್ಕೆ ನಾನು ಸಂಕ್ಷಿಪ್ತ ಉತ್ತರವನ್ನು ಬರೆಯುತ್ತಿದ್ದೇನೆ. ಯಾರನ್ನಾದರೂ ದೂಷಿಸಿ, ಯಾರದೋ ವಿರುದ್ಧ ಕಿಡಿಕಾರಿ ಬಂದ ಪತ್ರ ಇದಾಗಿದ್ದರೆ ನಾನು ಇದನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ. ಆದರೆ ಈ ಯುವಕನಿಗೆ ನಾನು ಹೇಳುವದಿಷ್ಟೆ, ಒಬ್ಬ ವ್ಯಕ್ತಿಯ ನಿಜವಾದ ಶಕ್ತಿ, ಸಾಮರ್ಥ್ಯ ಗೊತ್ತಾಗುವದು ಇಂತಹ ಸಂದಿಗ್ಧ ಸಂದರ್ಭದಲ್ಲಿಯೆ. ಸ್ನೇಹಕ್ಕಿರುವ ಗೆಳೆಯರು ಸಾವಿರಾರು. ಆದರೆ ಸಂಕಷ್ಟದಲ್ಲಿ ಕೆಲವರು ಮಾತ್ರ. ಅಂತೆಯೆ ಹೇಳಿದ್ದಾರೆ– A friend in need is a friend indeed. ಈ ಯುವಕ ನಿಜವಾದ ರಾಷ್ಟ್ರ ಪ್ರೇಮಿಯೆ ಆಗಿರುವುದಾದರೆ ಎಂಥಹ ಸಂದರ್ಭದಲ್ಲಿಯೂ ಆತ ತನ್ನ ರಾಷ್ಟ್ರೀಯತೆಯನ್ನು ಬಿಟ್ಟುಕೊಡಬಾರದು. ಆತ ಜುಡಾಸ್‌ನಾಗಬಾರದು. ಅವನ ಸ್ನೇಹಿತರೇ ಅವನನ್ನು ಕೊಚ್ಚಿಹಾಕಲು ಸಿದ್ಧರಾದರೂ ಆತ ಜಲಂಧರದ ತನ್ನ ಮನೆಗೆ ಹೋಗಬೇಕು. ಇವರುಗಳೇ ಇತಿಹಾಸದಲ್ಲಿ ಹಿಂದೂ–ಮುಸ್ಲಿಂ ಐಕ್ಯತೆಯ ಸಂಕೇತಗಳಾಗಿ ಉಳಿಯುತ್ತಾರೆ."

ಹಾಗೆಯೆ ಇದೇ ದಿನ ಬರೆದ ಇನ್ನೊಂದು ಪತ್ರದಲ್ಲಿ ಪಕ್ಕದಲ್ಲಿಯೆ ಹೊತ್ತಿ ಉರಿಯುತ್ತಿರುವ ಬೆಂಕಿಗೆ ಒಂದು ಬಕೆಟ್ ನೀರು ತಂದು ಸುರಿಯುವ ಯೋಗ್ಯತೆ ಇಲ್ಲದೇ ಹೋದರೆ 125 ವರ್ಷ ತಾನು ಯಾತಕ್ಕಾದರೂ ಬದುಕಿರಬೇಕು ಎಂದು ಗಾಂಧಿ ಕೇಳಿದ್ದ. ಈ ಮಧ್ಯದಲ್ಲಿ ಮಿ.ಹೋರೆಸ್ ಅಲಗ್ಸಾಂಡರ್ ಪಂಜಾಬ್‌ದಲ್ಲಿ ನಡೆಯುತ್ತಿರುವ ನರಮೇಧವನ್ನು ಕುರಿತು ಅಭ್ಯಸಿಸಬೇಕು. ಇಬ್ಭಾಗವಾಗಿರುವ ಪಂಜಾಬದ ಎರಡೂ ಪ್ರದೇಶಗಳಿಗೆ ಭೇಟಿ ಕೊಡಬೇಕು. ಗೌವರ್ನರ್ ಜನರಲ್ ಲಾರ್ಡ್ ಮೌಂಟಬ್ಯಾಟನ್ ಮತ್ತು ಲೇಡಿ ಎಡ್ವಿನ್‌ರಗೆ ತಮ್ಮ ನೈತಿಕ ಬೆಂಬಲವನ್ನು ಸೂಚಿಸಬೇಕು. ಈ ಎಲ್ಲ ಕಾರ್ಯದಲ್ಲಿ ಗಾಂಧಿ ತನ್ನೊಂದಿಗೆ ಇರಬೇಕು ಎಂದು ಕೇಳಿಕೊಂಡಿದ್ದ. ಆದರೆ ಗಾಂಧಿ 'ನನ್ನ ಆಶೀರ್ವಾದ ನಿಮ್ಮೊಂದಿಗೆ ಇದೆ. ಮುಂದುವರೆಯಲಿ' ಎಂದು ತಿಳಿಸಿದ್ದನಷ್ಟೆ.

ಹೀಗೆ ಹಲವು ಶಾಂತಿ ಪ್ರಕ್ರಿಯೆಗಳಲ್ಲಿ ತೊಡಗಿಕೊಂಡಿದ್ದ ಗಾಂಧಿಗೆ ಅಕ್ಟೋಬರ್ 14ರ ಸಾಯಂಕಾಲ ಪ್ರಾರ್ಥನಾ ಸಭೆಯಲ್ಲಿ ಮತ್ತೊಂದು ದುರದೃಷ್ಟಕರ ಸಂಗತಿ ಗೊತ್ತಾಯಿತು. ಅದು ಆತನ ಕೊಲೆಯ ಮುನ್ಸೂಚನೆಯಾಗಿತ್ತು.

ಕೊಲೆ, ಗಾಂಧಿ ಬದುಕಿನ ಅಂತಿಮ ಕ್ಷಣ ಎನ್ನುವುದಾದರೆ ಅದಿನ್ನು ಬಹಳ ದೀರ್ಘವಲ್ಲ. ಇನ್ನು ಕೆಲವೇ ಕೆಲವು ದಿನಗಳ ಮಾತಷ್ಟೆ. ಸಾವು ಸನ್ನಿಹಿತವಾದ ವ್ಯಕ್ತಿಯ ವೇಗವೇ ಬೇರೆಯಾಗಿರುತ್ತದೆ. ಅದನ್ನು ನೀವು ಈ ಗಾಂಧಿಯ ಅಂತ್ಯದಲ್ಲೂ ಗಮನಿಸುತ್ತಿರಬಹುದು. ಆದರೆ ನನ್ನ ಪ್ರಶ್ನೆಯೊಂದೆ ದಿನದ ಲೆಕ್ಕಾಚಾರದಲ್ಲಿ ಇಷ್ಟರಲ್ಲಿ ಮುಗಿದೇ ಹೋಗುವ ಗಾಂಧಿಯ ಈ ಬದುಕನ್ನು ಏನಂತ ಹೇಳುವುದು? ಇದು ಬರೆದು ತೀರಿಸಿದ ಬದುಕೆ? ಅಥವಾ ಬರೆದೂ ತೀರದ ಬದುಕೆ?

ಗಾಂಧಿ ಜೀವನದ ಪ್ರಮುಖ ಘಟ್ಟಗಳು

ಅಕ್ಟೋಬರ್ 2,

1869 : ಗುಜರಾತಿನ ಪೋರ್ ಬಂದರಿನಲ್ಲಿ ದಿವಾನ್ ಕರಮಚಂದ ಗಾಂಧಿ ಮತ್ತು ಪುತಲಿಬಾಯಿ ಅವರ ಮೂರನೆಯ ಪುತ್ರನಾಗಿ ಜನನ.

1881 : ಪ್ರೌಢಶಾಲೆಯ ವಿದ್ಯಾರ್ಥಿ.

1883 : ಹದಿನಾಲ್ಕು ವರ್ಷಕ್ಕೇ ಕಸ್ತೂರಿ ಬಾ ಅವರೊಡನೆ ವಿವಾಹವಾಗಿ ಸಾಂಸಾರಿಕ ಜೀವನದ ಆರಂಭ.

1885 : ತಂದೆಯ ವಿಯೋಗ

1888 : ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬ್ಯಾರಿಸ್ಟರ್ ಶಿಕ್ಷಣಕ್ಕಾಗಿ ಲಂಡನ್ನಿಗೆ ಪ್ರಯಾಣ. ಮೆಟ್ರಿಕ್ ತೇರ್ಗಡೆ.

1891 : ವಕೀಲರಾಗಲು ಸನ್ನದು ಪಡೆದು ಮರಳಿ ಭಾರತಕ್ಕೆ.

1892 : ರಾಜಕೋಟೆ ಮತ್ತು ಮುಂಬಯಿನಲ್ಲಿ ವಕೀಲಿ ವೃತ್ತಿ.

1893 : ದಕ್ಷಿಣ ಆಫ್ರಿಕಾಕ್ಕೆ ಸೇಠಾ ಅಬ್ದುಲ್ಲಾ ಕಂಪನಿಗೆ ವಕೀಲರಾಗಲು ಪ್ರಯಾಣ.

1894 : ವರ್ಣದ್ವೇಷದ ಅನನ್ಯ ಅನುಭವ. ರೈಲಿನಿಂದ ಹೊರದೂಡಿದ ಘಟನೆ. ನಟಾಲ್ ಇಂಡಿಯನ್ ಕಾಂಗ್ರೆಸ್ ಸ್ಥಾಪನೆ. ನಟಾಲಿನಲ್ಲಿ ವಕೀಲಿ ವೃತ್ತಿ ಮುಂದುವರಿಕೆ.

1896 : ಮರಳಿ ಭಾರತಕ್ಕೆ ಸ್ವಲ್ಪಕಾಲ, ದಕ್ಷಿಣ ಆಫ್ರಿಕಾದ ಬಗ್ಗೆ ಗೋಖಲೆ ಅವರ ಬೆಂಬಲ. ಮತ್ತೆ ಕಸ್ತೂರಿ ಬಾ ಮತ್ತು ಮಕ್ಕಳೊಡನೆ ದರ್ಬಾನಿಗೆ ಪ್ರಯಾಣ.

1899 : ಭಾರತದ ಸೆಕ್ರಟರಿ ಆಫ್ ಸ್ಟೇಟ್ ಚೇಂಬರ್ಲೆನ್ ಅವರಿಗೆ, ಭಾರತದ ಕಾಂಗ್ರೆಸ್ ಅಧ್ಯಕ್ಷ ದಾದಾಭಾಯಿ ನವರೋಜಿ ಅವರಿಗೆ ಪತ್ರಗಳು. ದಕ್ಷಿಣ ಆಫ್ರಿಕಾದ ತಾರತಮ್ಯದ ಕಾನೂನುಗಳ ಪ್ರತಿಭಟನೆ. ಬೋಯರ್ ಯುದ್ಧದಲ್ಲಿ ಸ್ವಯಂ ಸೇವಾ ಸೇನಾಪಡೆ

1902 : ಭಾರತಕ್ಕೆ ಹಿಂತಿರುಗಿ ಬೊಂಬಾಯಿಯಲ್ಲಿ ವಕೀಲಿ ವೃತ್ತಿ. ಅದೇ ವರ್ಷದ ಕೊನೆಯಲ್ಲಿ ದಕ್ಷಿಣ ಆಫ್ರಿಕಾದ ಭಾರತೀಯರ ಕರೆಯ ಮೇರೆಗೆ ಅಲ್ಲಿಗೇ ಆಗಮನ.

1903 : ಟ್ರಾನ್ಸ್‌ವಾಲಿನಲ್ಲಿ ನೆಲೆಸಿ ಸರ್ವೋನ್ನತ ನ್ಯಾಯಾಲಯದ ವಕೀಲರಾದರು. 'ಇಂಡಿಯನ್ ಒಪಿನಿಯನ್' ಪತ್ರಿಕೆ ಪ್ರಾರಂಭ.

1905 : ಫಿನಿಕ್ಸ್ ಆಶ್ರಮದ ಪ್ರಾರಂಭ. ಭಾರತೀಯರ ಹಕ್ಕುಗಳಿಗಾಗಿ ಚಳವಳಿ.

1906 : ಲಂಡನ್ನಿನಲ್ಲಿ ಬ್ರಿಟಿಷ್ ಸರ್ಕಾರದೊಡನೆ ಮಾತುಕತೆ, ಹಿಂತಿರುಗುವಾಗ ಭಾರತದ ದಾಸ್ಯವಿಮೋಚನೆ ಬಗ್ಗೆ ಚರ್ಚೆ. ಜೋಹಾನ್ಸ್‌ಬರ್ಗಿನ ಸಾರ್ವಜನಿಕ ಸಭೆ, ಅಹಿಂಸಾತ್ಮಕ ಪ್ರತಿಭಟನೆಯ ಪ್ರತಿಜ್ಞೆ.

1907 : ಏಷ್ಯನ್‌ರ ನೋಂದಣಿ ಕಾನೂನು ಟ್ರಾನ್ಸ್‌ವಾಲಿನಲ್ಲಿ ಜಾರಿ, ಪ್ರತಿಭಟನೆ.

1908 : ಸತ್ಯಾಗ್ರಹ ಸಮರದ ಆರಂಭ. ಮೊದಲ ಸೆರೆಮನೆ ಶಿಕ್ಷೆ. ತಾತ್ಕಾಲಿಕ ಒಪ್ಪಂದ. ಪಠಾಣ ಸತ್ಯಾಗ್ರಹಿಯ ಧಾಳಿಯಿಂದ ಆಘಾತ. ಎರಡನೇ ಬಾರಿ ಮೂರು ತಿಂಗಳ ಕಠಿಣ ಶಿಕ್ಷೆ.

1909 : ಸಂಧಾನಕ್ಕಾಗಿ ಇಂಗ್ಲೆಂಡ್‌ಗೆ ಪ್ರಯಾಣ. 'ಹಿಂದ್ ಸ್ವರಾಜ್' ದ ರಚನೆ. ಸತ್ಯಾಗ್ರಹ ಮಾರ್ಗ ಕುರಿತು ಟಾಲ್‌ಸ್ಟಾಯ್ ಅವರಿಗೆ ಪತ್ರ. ರೆವರೆಂಡ್ ಡೋಕ್ ಅವರು ಬರೆದ ಜೀವನ ಚರಿತ್ರೆ. ಟಾಲ್‌ಸ್ಟಾಯ್ ಅವರ ದೀರ್ಘ ಉತ್ತರ. ಲಾಹೋರಿನಲ್ಲಿ ಭಾರತೀಯ ಕಾಂಗ್ರೆಸ್‌ನಿಂದ ಸತ್ಯಾಗ್ರಹಕ್ಕೆ ಬೆಂಬಲ.

1910 : ಟಾಲ್‌ಸ್ಟಾಯ್ ಫಾರ್ಮ್ ಸ್ಥಾಪನೆ. ಟಾಲ್‌ಸ್ಟಾಯ್ ಶ್ರದ್ಧಾಂಜಲಿ.

1911 : ಜನರಲ್ ಸ್ಮಟ್ಸ್‌ರೊಡನೆ ಮಾತುಕತೆ. ಗೋಖಲೆ ಅವರಿಗೆ ಆಹ್ವಾನ, ಫಿನಿಕ್ಸ್ ಆಶ್ರಮದ ವಿಶ್ವಸ್ತ ಮಂಡಲಿ ಸ್ಥಾಪನೆ.

1912 : ಗೋಖಲೆ ಮತ್ತು ಗಾಂಧಿ ದಕ್ಷಿಣ ಆಫ್ರಿಕಾದ ಸ್ಥಿತಿಯನ್ನು ಅವಲೋಕಿಸಿದರು.

1913 : ಜೀವನ ಸರಳತೆ ಅಂಗೀಕರಿಸಿ ಭಾರತೀಯ ಉಡುಪು ಧರಿಸಿದರು. ಭಾರತೀಯರ ಬಗ್ಗೆ ಕಠಿಣ ಕಾನೂನುಗಳು. ವಿವಾಹವಿಧಿಗಳ ನಿಷೇಧ, ದಕ್ಷಿಣ ಆಫ್ರಿಕಾ ಸರ್ಕಾರದೊಂದಿಗಿನ ಒಪ್ಪಂದ ಮುರಿದು ಮತ್ತೆ ಸತ್ಯಾಗ್ರಹ ಆರಂಭ. ಕಸ್ತೂರಿ ಬಾ ಅವರೂ ಚಳವಳಿಗೆ ಧುಮುಕಿದರು. ಅವರ ಬಂಧನ. ನ್ಯೂಕಾಸಲ್ ಗಣಿ ಕಾರ್ಮಿಕರ ಮುಷ್ಕರ. ಟ್ರಾನ್ಸ್‌ವಾಲಿಗೆ ಮಹಾಯಾತ್ರೆ. 3 ಪೌಂಡ್ ತಲೆಗಂದಾಯ ರದ್ದು ಮಾಡಲು ಪ್ರತಿಭಟನೆ. ಬಂಧನ. ಒಂಭತ್ತು ತಿಂಗಳ ಕಠಿಣ ಶಿಕ್ಷೆ. ಡಿಸೆಂಬರ್ 18 ರಂದು ಬಿಡುಗಡೆ.

1914 : ಸ್ಮಟ್ಸ್‌ರೊಡನೆ ಸಂಧಾನ ಮಾತುಕತೆ. ಒಪ್ಪಂದದಿಂದಾಗಿ ಸತ್ಯಾಗ್ರಹ ಸ್ಥಗಿತ. ಗಾಂಧೀಜಿಯ 14 ದಿನಗಳ ಉಪವಾಸ. ಇತರರ ತಪ್ಪುಗಳಿಗಾಗಿ ಪ್ರಾಯಶ್ಚಿತ್ತ. ಭಾರತಕ್ಕೆ ಹೊರಡುವ ಮುನ್ನ ಲಂಡನ್ನಿಗೆ ಭೇಟಿ.

1915 : ಭಾರತ ತಲುಪಿ ಕೈಸರ್-ಇ-ಹಿಂದ ಪ್ರಶಸ್ತಿ.

1915 : ಅಹಮದಾಬಾದ್ ಸತ್ಯಾಗ್ರಹ ಆಶ್ರಮದ ಸ್ಥಾಪನೆ.

1917 : ಚಂಪಾರಣ್ಯ ಸತ್ಯಾಗ್ರಹ.

1918 : ಅಹಮದಾಬಾದ್ ಗಿರಣಿ ಕಾರ್ಮಿಕರ ಮುಷ್ಕರ. ಅದಕ್ಕೆ ಪರಿಹಾರ.

1919 : ಜಲಿಯನ್ ವಾಲಾಬಾಗ್ ದುರಂತ-ಸತ್ಯಾಗ್ರಹ, ಅಮೃತಸರ ಕಾಂಗ್ರೆಸ್ ಅಧಿವೇಶನ. ಕೈಸರ್-ಇ-ಹಿಂದ್ ಪದಕ ವಾಪಸ್ಸು. ಬಿರುದುಗಳ ತಿರಸ್ಕಾರ ಮಾಡಿ ನಾಗಪುರ ಕಾಂಗ್ರೆಸ್ ಸಮಾವೇಶ, ಸ್ವರಾಜ್ಯಕ್ಕಾಗಿ ಹೋರಾಟದ ಘೋಷಣೆ.

1921 : ಲೋಕಮಾನ್ಯ ತಿಲಕರ ಸ್ಮಾರಕ ನಿಧಿ ಒಂದು ಕೋಟಿ ಸದಸ್ಯರ ನೋಂದಣಿ. ವಿದೇಶಿ ವಸ್ತ್ರ ಬಹಿಷ್ಕಾರಕ್ಕೆ ಕರೆ.

1922 : ಬರ್ದೋಲಿ ಸತ್ಯಾಗ್ರಹ ಘೋಷಣೆ. ವೈಸ್‌ರಾಯರಿಗೆ ಪತ್ರ.

1922 : ಸಾಬರಮತಿ ಆಶ್ರಮದಲ್ಲಿ ದಸ್ತಗಿರಿ, ಯರವಾಡ ಸೆರೆಮನೆ ವಾಸ. ರಾಜದ್ರೋಹಕ್ಕಾಗಿ ಮಹಾ ವಿಚಾರಣೆ. ಆರು ವರ್ಷ ಕಠಿಣ ಶಿಕ್ಷೆ.

1924 : ಬ್ರಿಟಿಷ್‌ರ ಸೆರೆಯಾಳಾಗಿದ್ದಾಗ ಸೈನ್ಯದ ವೈದ್ಯರಿಂದಲೇ ಶಸ್ತ್ರಚಿಕಿತ್ಸೆ. ಹಿಂದೂ ಮುಸ್ಲಿಂ ಐಕ್ಯತೆಗಾಗಿ 21 ದಿನಗಳ ಉಪವಾಸ.

1924 : ಬೆಳಗಾವಿ ಕಾಂಗ್ರೆಸ್ಸಿನ ಅಧ್ಯಕ್ಷ.

1925 : ಅಖಿಲ ಭಾರತ ನೂಲುವವರ ಸಂಘದ ಸ್ಥಾಪನೆ.

1929 : ಲಾಹೋರ್ ಕಾಂಗ್ರೆಸ್. ಪೂರ್ಣ ಸ್ವರಾಜ್ಯ ಸಂಕಲ್ಪ. ಗಾಂಧೀಜಿ ಅಸಹಕಾರ ಮತ್ತು ಸವಿನಯ ಶಾಸನ ಭಂಗ ಚಳವಳಿಯ ಮಹಾನಾಯಕ.

1930 : ಉಪ್ಪಿನ ಸತ್ಯಾಗ್ರಹ ದಂಡಿಯಾತ್ರೆಯ ಆರಂಭ.

1930 : ದಸ್ತಗಿರಿ, ಶಿಕ್ಷೆ, ಸತ್ಯಾಗ್ರಹಿಗಳ ಬಂಧನ.

1931 : ಬಿಡುಗಡೆ, ಎರಡನೇ ದುಂಡುಮೇಜಿನ ಪರಿಷತ್ತು. ಲಂಡನ್ನಿಗೆ ಪ್ರಯಾಣ. ಮಾತುಕತೆ ವಿಫಲ; ಮರಳಿ ಭಾರತಕ್ಕೆ. ಮತ್ತೆ ಬಂಧನ.

1932 : ಪ್ರತ್ಯೇಕ ಚುನಾವಣಾ ಪದ್ಧತಿ ಪ್ರತಿಭಟಿಸಿ ಅಮರಣಾಂತ ಉಪವಾಸ. ಯರವಾಡಾ ಸೆರೆಮನೆಯಲ್ಲಿ. ಸರ್ಕಾರ ಮಣಿಯಿತು. ಆರನೇ ದಿನ ಉಪವಾಸ ಮುಕ್ತಾಯ.

1933	:	‘ಹರಿಜನ’ ಪತ್ರಿಕೆ ಪ್ರಾರಂಭ. ಮೇ 8 ರಿಂದ ಆತ್ಮಶುದ್ಧಿಗಾಗಿ 21 ದಿನಗಳ ಉಪವಾಸ. ಸತ್ಯಾಗ್ರಹದ ತಾತ್ಕಾಲಿಕ ನಿಲುಗಡೆ. ‘ಹರಿಜನ’ ಸೇವಾ ಯಾತ್ರೆ.
1934	:	ರಚನಾತ್ಮಕ ಕಾರ್ಯಗಳಿಗಾಗಿ ರಾಜಕೀಯದಿಂದ ದೂರವಾಗಿ ವಾರ್ಧಾದಲ್ಲಿ ವಾಸ.
1936	:	ಸೇವಾಗ್ರಾಮ ಆಶ್ರಮ ಸ್ಥಾಪನೆ
1937	:	ಬ್ರಿಟಿಷ್ ಪ್ರಾಂತ್ಯಗಳಲ್ಲಿ ಪ್ರಜಾಪ್ರತಿನಿಧಿ ಸರ್ಕಾರಗಳು ಕಾಂಗ್ರೆಸ್ ಮಂತ್ರಿ ಮಂಡಲಗಳು, ಸಮಗ್ರ ಗ್ರಾಮ ಸೇವಾ ಕಾರ್ಯಗಳಿಗಾಗಿ ಸಂಸ್ಥೆಗಳು.
1939	:	ರಾಜಕೋಟೆ ಸಂಸ್ಥಾನದ ಪ್ರಜೆಗಳ ಹೋರಾಟ. ಗಾಂಧಿಯ ಅಮರಣಾಂತ ಉಪವಾಸ ಆರಂಭ. ವೈಸ್‌ರಾಯರ ಮಧ್ಯಸ್ಥಿಕೆ ಒಪ್ಪಂದ.
1940	:	ಭಾರತವನ್ನು ಬಲವಂತವಾಗಿ ಯುದ್ಧೋದ್ಯಮದಲ್ಲಿ ತೊಡಗಿಸಿದ್ದರ ವಿರುದ್ಧ ವೈಯಕ್ತಿಕ ಸತ್ಯಾಗ್ರಹ ಪ್ರಾರಂಭ, ಸುಗ್ರೀವಾಜ್ಞೆಗಳನ್ನು ಪ್ರತಿಭಟಿಸಿ ಹರಿಜನ ಪತ್ರಿಕೆ ನಿಲ್ಲಿಸಿದರು.
1941	:	ಸ್ವಾತಂತ್ರ್ಯ ಬೇಡಿಕೆ ಬಗ್ಗೆ ಬ್ರಿಟಿಷ್ ಸರ್ಕಾರದೊಡನೆ ಪತ್ರ ವ್ಯವಹಾರ. ಕ್ರಿಪ್ಸ್ ಆಯೋಗದ ಆಗಮನ.
1942	:	ಬೊಂಬಾಯಿಯ ಬೃಹತ್ ಸಭೆಯಲ್ಲಿ ‘ಕ್ವಿಟ್ ಇಂಡಿಯಾ’ ನಿರ್ಣಯದ ಮಂಡನೆ, ಗಾಂಧಿಯ ಅಮೋಘ ಭಾಷಣ.
1942	:	ಗಾಂಧಿ ಮತ್ತು ಸ್ವಾತಂತ್ರ್ಯ ಸಂಗ್ರಾಮದ ಸಕಲ ನಾಯಕರ ಬಂಧನ. ಮಹಾದೇವ ದೇಸಾಯಿ, ಸರೋಜಿನಿ ನಾಯ್ಡು ಮತ್ತು ಕಸ್ತೂರಿ ಬಾರೊಡನೆ, ಆಗಾಖಾನ್ ಅರಮನೆಯಲ್ಲಿ ಬಂಧನ.
1942	:	ಮಹಾದೇವ ದೇಸಾಯಿ ಸೆರೆಮನೆಯಲ್ಲಿ ಹಠಾತ್ತನೆ ಮರಣ ಅಲ್ಲಿಯೇ ಸಮಾಧಿ.
1943	:	ನಾಡಿನ ಭವಣೆಯನ್ನು ಕಂಡು ಇಪ್ಪತ್ತೊಂದು ದಿನಗಳ ಉಪವಾಸ. ಮಾರ್ಚ್ ಮೂರರಂದು ಮುಕ್ತಾಯ.
1944	:	ಕಸ್ತೂರಿ ಬಾ ಗಾಂಧಿ ಪುಣೆಯ ಆಗಾಖಾನ್ ಸೆರೆಮನೆಯಲ್ಲಿ ಮರಣ. ಅಲ್ಲಿಯೇ ಸಮಾಧಿ. ಗಾಂಧಿ ಬಿಡುಗಡೆ. ಮೇ 6 ರಂದು ಕಸ್ತೂರಿ ಬಾ ಸ್ಮಾರಕ ನಿಧಿಗೆ ರೂ. 110 ಲಕ್ಷ ನಾಡಿನ ಕೊಡುಗೆ.
1945	:	ಅಂತರ್ರಾಷ್ಟ್ರೀಯ ಶಾಂತಿ ಸಮ್ಮೇಳನಕ್ಕೆ ಸಂದೇಶ. ಭಾರತಕ್ಕೆ ಸ್ವಾತಂತ್ರ್ಯವಿಲ್ಲದೆ ಜಗತ್ತಿಗೆ ಶಾಂತಿ ಇರಲಾರದು ಎಂಬ ಹೇಳಿಕೆ. ಯುದ್ಧ ಕೊನೆಗೊಂಡು ವಿಶ್ವಸಂಸ್ಥೆಯ ಪ್ರಾರಂಭ.

1946 : ಬ್ರಿಟಿಷ್ ಸರ್ಕಾರದ ಮಂತ್ರಿಮಂಡಲ ನಿಯೋಗದೊಡನೆ ಮಾತುಕತೆ, ತಾತ್ಕಾಲಿಕ ಕಾಂಗ್ರೆಸ್, ಲೀಗ್ ಸರ್ಕಾರ ಸ್ಥಾಪನೆ. ಮತೀಯ ದಂಗೆಗಳು. ಪಂಜಾಬ, ಬಿಹಾರ ಮತ್ತು ಕಲ್ಕತ್ತದಲ್ಲಿ ಭಯಂಕರ ಕೊಲೆಗಳು. ಪೂರ್ವ ಬಂಗಾಳದ ನವಖಾಲಿಯಲ್ಲಿ ಶಾಂತಿಯಾತ್ರೆ, ಏಕಾಂಗಿಯಾಗಿ ಬರಿಗಾಲಲ್ಲಿ ಹಿಂದೂ ಮುಸ್ಲಿಂ ಸೌಹಾರ್ದಕ್ಕಾಗಿ ಯಾತ್ರೆ.

1947 : ಏಷ್ಯಾ ಬಾಂಧವ್ಯಗಳ ಸಮ್ಮೇಳನ ನವದೆಹಲಿಯಲ್ಲಿ.

1947 : ದೇಶ ವಿಭಜನೆ. ಗಾಂಧಿಯ ಅಸಮ್ಮತಿ.

1947 : ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ 'ಭಾರತೀಯ ಸ್ವಾತಂತ್ರ್ಯ ನಿರ್ಣಯ'ದ ಅಂಗೀಕಾರ. ಪಾಕಿಸ್ತಾನ ಪ್ರತ್ಯೇಕ. ರಾಜಮಹಾರಾಜರುಗಳು ಪ್ರಜಾರಾಜ್ಯ ಒಪ್ಪಲು ಗಾಂಧಿ ಮನವಿ. ಕಲ್ಕತ್ತೆಯಲ್ಲಿ ಜೀವವನ್ನೇ ಪಣವಾಗಿಟ್ಟು ಶಾಂತಿ ಸಾಧನೆ. ಸೌಹಾರ್ದ ನೆಲೆಸಿತು. ಉಪವಾಸ ಸಂಕಲ್ಪ.

1947 : ಸ್ವಾತಂತ್ರ್ಯ ದಿನಾಚರಣೆಗೆ ದೆಹಲಿಗೆ ಬರಲು ಗಾಂಧೀಜಿ ನಿರಾಕರಣೆ.

1947 : ದೆಹಲಿಯಲ್ಲಿ ಉಲ್ಬಣಗೊಂಡ ಮತೀಯ ಗಲಭೆ. ನಿರಾಶ್ರಿತರ ಮಹಾಪೂರ. ಸಾಂತ್ವನಕ್ಕಾಗಿ ಬಂದ ಗಾಂಧಿ. ಕಾಶ್ಮೀರದ ಮೇಲೆ ಪಾಕಿಸ್ತಾನ ಸೈನ್ಯದ ದಾಳಿ, ಪ್ರತಿಭಟನೆ.

1948 : ದೆಹಲಿಯಲ್ಲಿ ಶಾಂತಿ ಸ್ಥಾಪನೆಗಾಗಿ ಆರು ದಿನಗಳ ಉಪವಾಸ. ಶಾಂತಿ ಸಮಿತಿಯ ವಾಗ್ದಾನ.

1948 : ಪ್ರಾರ್ಥನಾ ಸಭೆಯಲ್ಲಿ ಬಾಂಬ್ ಸ್ಫೋಟ. ಸರ್ಕಾರದ ರಕ್ಷಣಾ ದಳದ ಆಶ್ರಯ ನಿರಾಕರಿಸಿದ ಗಾಂಧಿ.

1948 : ಗೂಡ್ಸೆಯ ಗುಂಡಿಗೆ ತುತ್ತಾಗಿ ಬಿರ್ಲಾಭವನದ ಪ್ರಾರ್ಥನಾ ಸಭೆಗೆ ಬರುತ್ತಿದ್ದಾಗಲೇ ಪ್ರಾಣ ಪಕ್ಷಿ ಹಾರಿಹೋಯಿತು.

ಚಿತ್ರ ವಿವರ

24. ಅನಾಥ ಹೆಣಗಳ ಸಾಮೂಹಿಕ ಅಂತ್ಯ ಸಂಸ್ಕಾರ, 1947

25. ನಿರಾಶ್ರಿತರ ಶಿಬಿರದಲ್ಲಿ ನಿರೀಕ್ಷೆಯಲ್ಲಿರುವ ಜನಗಳು, 1947

26. ಸಾರ್ವಜನಿಕರೊಂದಿಗೆ ಗಾಂಧಿ

27. ಸದ್ಭಾವನಾ ಸಭೆಯಲ್ಲಿ ಗಾಂಧಿ

28. ಖೈದ-ಎ-ಅಜಮ್ ಮಹಮ್ಮದ ಅಲಿ ಜಿನ್ನಾ

29. ದೇಶದಿಂದ ದೇಶಕ್ಕೆ ಗುಳೆ ಹೊರಟ ನಿರಾಶ್ರಿತರು

30. ಗುರುದೇವ ಟ್ಯಾಗೋರ ಮತ್ತು ಮಹಾತ್ಮಗಾಂಧಿ

31. ಜಹಜಿನಲ್ಲಿ ಕ್ರಿಯಾಮಗ್ನ ಗಾಂಧಿ, 1931

32. ರೈಲು ನಿಲ್ದಾಣದಲ್ಲಿ ಗಾಂಧಿ.

33. ಮಾಳವಿಯ, ನಾಯ್ಡು, ಬಾ ಮತ್ತು ಗಾಂಧಿ, 1931

34. ಗಾಂಧಿ, ದುಂಡು ಮೇಜಿನ ಪರಿಷತ್ತಿನ ವೇಳೆ.

ಗ್ರಂಥಸೂಚಿ

1. The Argumentative Indian - Amartya Sen, Penguin Books
2. Truth is God - M.K.Gandhi, Navajivan Publishing House
3. Be Oceanic - Osho, Diamond Pocket Books
4. Mahatma Gandhi - V.Ramamurdhy, Kasturi & Sons Ltd
5. ಗಾಂಧಿ ಹಂತಕ ಗಾಂಧಿಯೆ – ಡಾ.ಕೆ.ವಿ.ಸೀತಾರಾಮಯ್ಯ, ಸಾಧನ ಪ್ರಕಾಶನ, ಬೆಂಗಳೂರು
6. Gandhi's outstanding Leadership - Paskel Alen Nazarath
7. ನಾನೇಕೆ ಗಾಂಧೀಜಿಯವರ ಹತ್ಯೆ ಮಾಡಿದೆ – ಗೋಪಾಲ ಗೋಡ್ಸೆ, ಅಮೃತಹಳ್ಳಿ, ಬೆಂಗಳೂರು
8. ಮಹಾತ್ಮ – ಡಾ.ಆರ್.ಎಲ್.ಅನಂತರಾಮಯ್ಯ – ಗಾಂಧಿ ಭವನ, ಮೈಸೂರು
9. ನಡುರಾತ್ರಿಯಲ್ಲಿ ಸ್ವಾತಂತ್ರ್ಯ – ಎಚ್.ಆರ್.ಚಂದ್ರವದನ ರಾವ್, ಸಂವಹನ, ಮೈಸೂರು
10. ಗಾಂಧೀಜಿ – ಎಸ್.ಸೇತೂರಾವ್ – ನವಜೀವನ ಟ್ರಸ್ಟ್, ಅಹಮದಾಬಾದ
11. ವಿಮೋಚನೆಯ ಸಮರದಲ್ಲಿ – ಮೇಜರ್ ಜಯಪಾಲ್‌ಸಿಂಗ್ – ಕ್ರಿಯಾ ಪ್ರಕಾಶನ, ಬೆಂಗಳೂರು
12. Rabindranath Tagore - Krishna Kripalani - UBS, Bangalore
13. Adolf Hitler's Main Camp, Vasan Publications, Bangalore
14. The Constitution of India - Dr.M.V.Pylee, KLJP, Bangalore
15. Quotations in History - Palmer - Roopa Publications, New Delhi
16. Rabindranath Tagore - Maple Press - Noida
17. Women who inspired the world - Murali Krishna.Environmental Protection Society, Kakinada
18. ಕಸ್ತೂರ ಬಾ, ಡಿ.ಎಸ್. ಚೌಗಲೆ

ರಾಗಂ ಸಾಹಿತ್ಯ

ಕಾವ್ಯ : ಅರ್ಪಣೆ (1991), ಎರಡು ದಡಗಳ ನಡುವೆ (2000), ಶಿವಬಸವಾಂಜಲಿ (1995), ಒಂದಿಷ್ಟು ಕರುಣೆ ಮತ್ತಷ್ಟು ನೀರು (2005) ಸಂತನ ಸ್ವಗತಗಳು (2008) ಖಂಟಿಧಿ ಂಜಿ ಚಿ ಖಚಿಟಿಣ (2005) ನಿಶಾಗಾನ (2009)

ಕತೆ : ಅಳಲು (1993)

ವಿಬಂಧ : ನನ್ನೊಳಗಿನ ನಾನು (2007) ಶಬ್ಧ ಸೂತಕದಿಂದ (2009) ವಿಬಂಧ (2009) ಬೇಷರತ್ (2009) ಪ್ರಚಲಿತ ಕನ್ನಡ ಕಾವ್ಯ (2001) ಶತಮಾನ ಕಂಡ ಸಾಹಿತಿ–ಜಿ.ಬಿ.ಜೋಶಿ (2010) ಓಶೋ ಎಂಬ ವಿದ್ರೋಹಿಯ ಕಥೆ (2010) ಕನ್ನಡಕ್ಕೊಂದು ಕನ್ನಡಿ (2011)

ಅಂಕಣ : ಓಶೋಃ ನ ಭೂತೋ ನ ಭವಿಷ್ಯತಿ (2006) ಫಕೀರನ ಫಿಲ್ಮೀ ದುನಿಯಾ (2008) ಗಾಂಧಿಯ ಅಂತಿಮ ದಿನಗಳು (2011) ಪರ್ದೇಸಿಯ ಫಿಲ್ಮಿ ಪಯಣ (2011)

ನಾಟಕ : ಗಾಂಧೀ ಮತ್ತು ಗೂಂಡಾ (2002) ಚಲ್ಲಾಟದ ಚದುರೆಯರು ಮತ್ತು ಇತರ ನಾಟಕಗಳು (2008)

ಸಂಪಾದನೆ : ಹೆಜ್ಜೇನು (2002) ಚಂಪಾಯಣ (2010) ಭಾಷೆ ಪರಿಭಾಷೆ (2009) ಕನ್ನಡ ಶಾಸನಗಳು ಮತ್ತು ಶಾಸ್ತ್ರೀಯತೆ (2009) ಸ್ಮೃತಿಸೌರಭ (2010) ಜಿ.ಬಿ.ಸಜ್ಜನರ ಕನ್ನಡ ಲೇಖನಗಳು (2011) ಬಿ.ಎಸ್.ನವಾತಿ ಅವರ 'ಗಂಡನ ಗೆದ್ದ ಗರತಿ' (2011) ಕನ್ನಡ ಕರ್ನಾಟಕ ಅಂದು ಇಂದು (2011)

ಭಾಷಾಂತರ : ಜಗತ್ಪ್ರಸಿದ್ಧ ಭಾಷಣಗಳು (2010) ಲೋಕವಿಖ್ಯಾತರ ನುಡಿಮುತ್ತುಗಳು (2009), ನೊಬೆಲ್ ಪ್ರಶಸ್ತಿ ವಿಜೇತರ ಭಾಷಣಗಳು (2010), ವಿಶ್ವಶ್ರೇಷ್ಠ ಮಹಿಳೆಯರ ಭಾಷಣಗಳು(2010), ಪ್ರಪಂಚದ ಶ್ರೇಷ್ಠ ತತ್ವಜ್ಞಾನಿಗಳ ಭಾಷಣಗಳು (2010), ವಿಶ್ವವಿಖ್ಯಾತ ರಾಜಕಾರಣಿಗಳ ಭಾಷಣಗಳು (2010), ವಿಶ್ವಮಾನ್ಯ ಸಾಹಿತಿಗಳ ಭಾಷಣಗಳು (2010), ಜಗತ್ತಿನ ಆಯ್ದ ಮಹಾತ್ಮರ ಭಾಷಣಗಳು (2010), ಮಹಾನ್ ಯೋಧರ ಮಹಾನ್ ಭಾಷಣಗಳು (2010) ಬದುಕು ಬದಲಿಸುವ ಮಾತುಗಳು (2012) ನಿಮ್ಮ ಬದುಕಿಗೆ ಗಾಂಧಿಸೂತ್ರಗಳು (2012)

ಸಂಶೋಧನೆ : Abbas an Island (2006) Translation theories of East and West (2008) AKKA (2004)

ಗಾಂಧಿ
ಅಂತಿಮ ದಿನಗಳು





ನಮ್ಮ ಗಾಂಧಿಯನ್ನು ನಮ್ಮವನ್ನಾಗಿಸುವುದು, ಹೃದಯವೇ ಮುಖ್ಯವಾದ ಬರವಣಿಗೆ. ಅಂತಹ ಬರವಣಿಗೆ ಡಾ.ರಾಜಶೇಖರ ಮಠಪತಿ(ರಾಗಂ) ಯವರದು. ಆದುದರಿಂದ ಇದು ಮಹತ್ವದ ಕೃತಿಯಾಗಿದೆ. ಇಂದಿನ ಚಿಂತನಶೀಲ ಲೇಖಕ ಗಾಂಧಿಯನ್ನು ಹೇಗೆ ನೋಡುತ್ತಾನೆ ಎನ್ನುವುದರ ದೃಷ್ಟಾಂತವಾಗಿಯೂ ಈ ಕೃತಿ ಗಮನಾರ್ಹ ವಾದುದು. ಹಲವು ಆಕರಗಳ ನೆರವಿನಿಂದ ಗಾಂಧಿಯ ಅಂತಿಮ ದಿನಗಳನ್ನು ವಿವರವಾಗಿ ಆಕರ್ಷಕವಾಗಿ ಕಟ್ಟಿಕೊಡುವ ಮಠಪತಿಯವರು ತೋರಿಕೆಯ ಗಾಂಧಿವಾದಿಗಳಂತೆ ಗಾಂಧಿಯನ್ನು ಸುಮ್ಮನೆ ಒಪ್ಪಿಕೊಳ್ಳುವುದಿಲ್ಲ. ಪ್ರಸಿದ್ಧವಾದ 'ಭಾನುವಾರ'ದಲ್ಲಿ ಧಾರಾವಾಹಿಯಾಗಿ, ಪತ್ರಿಕೆಯ ಓದುಗರನ್ನೇ ಮೂಲ ಗುರಿಯಾಗಿಸಿಕೊಂಡು ಬರೆದಿದ್ದರೂ ತಮ್ಮ ವಿಮರ್ಶಕ ಮನೋಧರ್ಮಕ್ಕೆ ಚ್ಯುತಿ ಬರದಂತೆ ಎಚ್ಚರ ವಹಿಸಿದ್ದಾರೆ. ಎಲ್ಲರನ್ನು ಮುಟ್ಟುವ ಉಮೇದಿನಲ್ಲಿ ಬರೆಹ ಸರಳ ಮತ್ತು ನೇರ ಭಾಷೆಯಲ್ಲಿ ಮಾಡಿದ್ದರೂ ಮಠಪತಿಯವರ ಅಪಾರ ಸಾಹಿತ್ಯಾಧ್ಯಯನ ತನ್ನ ಕುರುಹುಗಳನ್ನು ಸ್ಪಷ್ಟವಾಗಿ ಹೊರ ಹೊಮ್ಮಿಸಿದೆ. ಹಾಗಾಗಿಯೇ ಮಠಪತಿ ಚಿತ್ರಿಸುವ ಗಾಂಧಿ ನನಗೆ ಆಪ್ತವಾಗುತ್ತಾರೆ, ಆತ್ಮಿಯರಾಗುತ್ತಾರೆ.

- ಎಚ್.ಎಸ್.ಉಮೇಶ್

ಕಣ್ವ ಪ್ರಕಾಶನ
ಬೆಂಗಳೂರು

ISBN 93-81065-24-1
9 789381 065242